# ಅಧ್ಯಾಯ 11

# ನಂಬಿಕೆಯ ವಿಜಯಗಳು

"ನಂಬಿಕೆಯಿಂದಲೇ" ಎಂಬುದು ಇಬ್ರಿಯ 11ನೇ ಅಧ್ಯಾಯದಲ್ಲಿ ಹದಿನೆಂಟು ಹೇಳಿಕೆಗಳನ್ನು ಆರಂಭಿಸುತ್ತದೆ. ಇವುಗಳು ಶೋಧನೆಯನ್ನು, ಹಿಂಸೆ, ಮತ್ತು ಹೃದಯವೇದನೆಯನ್ನು ಎದುರಿಸಿ ನಿಂತು ಅದೇ ವೇಳೆಯಲ್ಲಿ ದೇವರಲ್ಲಿನ ತಮ್ಮ ವಿಶ್ವಾಸವನ್ನು ಉಳಿಸಿಕೊಂಡವರ ಕುರಿತು ಹೇಳುತ್ತವೆ. ನಂಬಿಕೆಯ ಮೂಲಕ "ಒಳ್ಳೇ ಹೆಸರನ್ನು ಸಂಪಾದಿಸಿಕೊಂಡವರ" ಮೇಲೆ ಮುಖ್ಯ ಗಮನವಿರುತ್ತದೆ (ವ. 39). ಹಳೆಯ ಒಡಂಬಡಿಕೆಯು ದೇವರ ವಾಗ್ದಾನಗಳಿಗೆ ತಕ್ಕಂತೆ ತಮ್ಮ ಇಡೀ ಜೀವಿತಗಳನ್ನು ಹೊಂದಿಸಿಕೊಂಡ ಪುರುಷರು ಮತ್ತು ಸ್ತ್ರೀಯರ ಕಥೆಗಳಿಗೆ ಸಂಬಂಧಿಸಿರುತ್ತದೆ. ಆತನು ಅವರಿಗೆ ಏನು ಹೇಳಿದನೋ ಅದನ್ನು ಅವರು ನಂಬಿದರು, ಆತನು ನುಡಿದ ಕೆಲವು ಆಶೀರ್ವಾದಗಳು ಭವಿಷ್ಯದಲ್ಲಿ ಬಳಹ ದೂರದಲ್ಲಿ ಸಂಭವಿಸುವವುಗಳಾಗಿದ್ದರೂ ಅವರು ನಂಬಿದರು. ಅನೇಕ ಸಾರಿ ಆತನ ವಾಗ್ದಾನಗಳು ಅವರು ಕನಸು ಕಾಣುವದಕ್ಕೇ ಆಗದಂತಹ ಸಂಗತಿಗಳಾಗಿದ್ದವು, ತಾವು ನೋಡುವದಕ್ಕೆ ಜೀವಂತವಾಗಿರದಂಥ ಸಂಗತಿಗಳಾಗಿದ್ದವು, ಆದಾಗ್ಯೂ ಅವರು ಅವುಗಳನ್ನು ನಿಜವೆಂದು ಅಂಗೀಕರಿಸಿಕೊಂಡರು. ಅವರ ನಂಬಿಕೆಯು "ನೋಟ" ಎಂದು ಎಣಿಸಲ್ಪಟ್ಟಿತು.

## ನಂಬಿಕೆಯ ಬಣ್ಣನೆ (11:1)

**[1]ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ.**

**ವಚನ 1.** ಈ ಅಧ್ಯಾಯದಲ್ಲಿ **ನಂಬಿಕೆಯ** ತಿರುಳು ದೇವರ ಮಾತಿನ ಮೇಲೆ ಭರವಸವನ್ನಿಡುವದಷ್ಟೇ ಆಗಿರುತ್ತದೆ. ಈ ವಚನವು ನಂಬಿಕೆಯ ಒಂದು ವ್ಯಾಖ್ಯಾನಕ್ಕಿಂತಲೂ ಅದರ ಒಂದು ಬಣ್ಣನೆಯನ್ನು ಹೊಂದಿದೆ; ಬಹುಶಃ ಈ ವಚನವು ನಂಬಿಕೆಯ ಎರಡು ಗುಣಸ್ವಭಾವಗಳನ್ನು ಹೊಂದಿದೆ ಎಂದು ಹೇಳಿದರೆ ಉತ್ತಮವಾಗಿರುತ್ತದೆ.[1] ನಂಬಿಕೆಯು **ಭರವಸದಿಂದಿರುವ** ಮತ್ತು **ನಿಜವೆಂದು ತಿಳುಕೊಳ್ಳುವ** (ಮನವರಿಕೆ) ವಿಷಯವಾಗಿರುತ್ತದೆ.

ನಂಬಿಕೆಯು ದೇವರ ಕುರಿತಾದ ನಮ್ಮ ಯೋಚನೆಗೆ "ಭರವಸೆಯನ್ನು," ಅಥವಾ "ನಿಜ ಲಕ್ಷಣವನ್ನು" (KJV) ಕೊಡುತ್ತದೆ. ಇಲ್ಲಿ ಬಳಸಲಾಗಿರುವ ಗ್ರೀಕ್ ಪದವು ὑπόστασις (*hupostasis*), ಇದು ಇಬ್ರಿಯರಿಗೆ ಪತ್ರಿಕೆಯೊಳಗೆ ಬೇರೊಂದು ಕಡೆ 1:3ರಲ್ಲಿ ಕಾಣಿಸಿಕೊಳ್ಳುವದಾಗಿದ್ದು ಅಲ್ಲಿ ಅದು "ಸ್ವಭಾವ" ("ವ್ಯಕ್ತಿ"; KJV) ಎಂದು ಅನುವಾದಿಸಲ್ಪಟ್ಟಿದೆ, ಮತ್ತು 3:14ರಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಅಲ್ಲಿ ಅದು ಪುನಃ "ಭರವಸ" ("ದೃಢವಿಶ್ವಾಸ"; KJV) ಎಂದು ಅನುವಾದಿಸಲ್ಪಟ್ಟಿದೆ. ಈ ಪದವು ಹೊಸ ಒಡಂಬಡಿಕೆಯೊಳಗೆ ಇನ್ನು ಎರಡು ಸಾರಿ

ಮಾತ್ರ 2 ಕೊರಿಂಥ 9:4 ಮತ್ತು 11:17ರಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಅಲ್ಲಿ NASBಯು ಅದನ್ನು "ದೃಢವಿಶ್ವಾಸ" ಎಂದು ಅನುವಾದಿಸಿರುತ್ತದೆ.

ನಂಬಿಕೆಯ ಅದೇ ರೀತಿಯ ಎರಡನೆಯ ಗುಣವೆಂದರೆ "ಮನವರಿಕೆ" (ἔλεγχος, *elegchos*), ಅಥವಾ "ಪುರಾವೆ" (KJV) ಎಂದಾಗಿದೆ. ನಮ್ಮ ಈಗಿನ ವಾಕ್ಯಭಾಗದಲ್ಲಿ, NIVಯು "ಖಚಿತತೆಯಿಂದಿರುವದು" (*hupostasis* ಎಂಬುದಕ್ಕಾಗಿ) ಮತ್ತು "ನಿಜವೆಂದು ತಿಳುಕೊಳ್ಳುವದು" (*elegchos* ಎಂಬುದಕ್ಕಾಗಿ): "ನಂಬಿಕೆಯು ನಾವು ನಿರೀಕ್ಷಿಸುವದರ ವಿಷಯದಲ್ಲಿ ಖಚಿತವಾಗಿರುವದು ಮತ್ತು ನಾವು ನೋಡದವುಗಳನ್ನು ನಿಜವೆಂದು ತಿಳಿದುಕೊಂಡಿರುವದು." ಈ ಹೇಳಿಕೆಯು ಅಧಿಕತನವಾಗಿ ಕಾಣುತ್ತದೆ, ಯಾಕೆಂದರೆ ಅದು ಒಂದೇ ಪ್ರಾಮುಖ್ಯವಾದ ಸತ್ಯವನ್ನು ಎರಡು ವಿಧದಲ್ಲಿ ಒತ್ತಿ ಹೇಳುತ್ತದೆ.

NIVಯು ಸಂಪೂರ್ಣ ಖಚಿತವಾದ ಕಾರ್ಯವೊಂದನ್ನು ನಂಬಿಕೆಯಾಗಿ ಮಾಡುವದಕ್ಕೆ ಅತಿ ದೂರ ಸಾಗುತ್ತದೆ. ಅದು ನಂಬಿಕೆಯ ನಿಜವಾದ ಸ್ವಭಾವಕ್ಕೆ ಯಾವ ಅವಕಾಶವನ್ನೂ ಉಳಿಸುವದಿಲ್ಲ. ಅದು ವಸ್ತುತಃ ಕಾಣದಿರುವದ್ದಕ್ಕಾಗಿ ನಿರೀಕ್ಷಿಸುವದರ ಅಂಶವನ್ನು ನಿರ್ಮೂಲ ಮಾಡುತ್ತದೆ. "ವಿವರಣೆಯನ್ನು ಪರೀಕ್ಷಿಸಬಲ್ಲಂತಹ ಇಂದ್ರಿಯಗ್ರಾಹ್ಯ ವಿಷಯಕ್ಕೆ ಸಿಮೀತಗೊಳಿಸುವದಾದಲ್ಲಿ, ಯಾವ ನಂಬಿಕೆಯೂ ಅಗತ್ಯವಿರುವದಿಲ್ಲ."[2]

1:3ರಲ್ಲಿ *hupostasis* ಎಂಬುದು ಯೇಸು ದೇವರ "ತತ್ವದ ಮೂರ್ತಿ" (ಸ್ವಭಾವ), ಆತನ ವ್ಯಕ್ತಿತ್ವವೇ ಆಗಿರುತ್ತಾನೆಂಬುದನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ. "ಬೇರೆ ಮಾತುಗಳಲ್ಲಿ ಹೇಳುವದಾದರೆ, ನಂಬಿಕೆಯು ದೇವರ ವಾಗ್ದಾನಗಳ ಸ್ವತಃ 'ವ್ಯಕ್ತಿತ್ವವೇ' [ತತ್ವದ ಮೂರ್ತಿಯೇ] ಆಗಿರುತ್ತದೆ."[3] NEBಯಲ್ಲಿ "ನಂಬಿಕೆಯು ನಮ್ಮ ನಿರೀಕ್ಷೆಗಳಿಗೆ ನಿಜಸ್ವರೂಪವನ್ನು ಒದಗಿಸುತ್ತದೆ" ಎಂದಿರುತ್ತದೆ. McCordನ ಅನುವಾದವು ಹೀಗೆ ಹೇಳುತ್ತದೆ, "ನಂಬಿಕೆಯು ನಾವು ನಿರೀಕ್ಷಿಸುವ ಸಂಗತಿಗಳನ್ನು ನಿಜವಾಗಿಸುತ್ತದೆ, ಮತ್ತು ಅದು ಕಾಣದಿರುವ ಸಂಗತಿಗಳಿಗೆ ಪುರಾವೆಯಾಗಿದೆ." ಒಂದು ಭಾವಾನುವಾದವು ಸಹಾಯವನ್ನು ಒದಗಿಸಬಹುದು: "ನಂಬಿಕೆಯು ತನ್ನ ಸಕ್ರಿಯವಾದ ಗುಣಸ್ವಭಾವದ ಮೂಲಕ ನಿಜಸ್ವರೂಪವನ್ನು ಒದಗಿಸುತ್ತದೆ, ಅಂದರೆ, ನಿರೀಕ್ಷಿಸಿದ ಸಂಗತಿಗಳ ನಿಜಸ್ಥಿತಿಯನ್ನು ವ್ಯಕ್ತಪಡಿಸುತ್ತದೆ; ಅದು ಇನ್ನೂ ನೋಡದಿರುವ ಕಾರ್ಯಗಳ ಸತ್ಯವನ್ನು ತೋರ್ಪಡಿಸುತ್ತದೆ."[4]

ಇದೆಲ್ಲದರ ಅರ್ಥವು ನಂಬಿಕೆ ಬೈಬಲ್ ಅರ್ಥದಲ್ಲಿ ಎಷ್ಟೊಂದು ಆಶ್ಚರ್ಯಕರವಾದದ್ದೆಂದರೆ, "ಅದು ಯಾವದನ್ನು ದೇವರು ಭವಿಷ್ಯದಲ್ಲಿ ವಾಗ್ದಾನ ಮಾಡಿದ್ದಾನೋ ಅದನ್ನು ಈಗಾಗಲೇ ಹೊಂದಿಕೊಂಡಿರುತ್ತದೆ."[5] ವಾಸ್ತವದಲ್ಲಿ, ನಂಬಿಕೆಯು ಭವಿಷ್ಯದ ಕಾರ್ಯಗಳಿಗೆ ಸಂಬಂಧ ಹೊಂದಿರುತ್ತದೆ. "'ನಂಬಿಕೆಯೋ ನಿರೀಕ್ಷಿಸುವವುಗಳ ನಿಜಸ್ವರೂಪ' ಎಂದು ಹೇಳುವದೆಂದರೆ ವ್ಯಾಪಕವಾಗಿ ಭವಿಷ್ಯಕ್ಕಾಗಿ ಇರುವಂಥ ಒಂದನ್ನು ಈಗ ವರ್ತಮಾನದಲ್ಲಿ ಆನಂದಿಸುವದಕ್ಕೆ ಶಕ್ತವಾಗುವದೇ ಆಗಿದೆ."[6] ನಂಬಿಕೆಯು ಭವಿಷ್ಯಕ್ಕಾಗಿ ದೇವರು ವಾಗ್ದಾನ ಮಾಡಿರುವದರಲ್ಲಿ ನಾವು ವಿಶ್ವಾಸವಿಡುವದಕ್ಕೆ ಭರವಸ ಮತ್ತು ನಿಜಸ್ವರೂಪವನ್ನು ಒದಗಿಸುತ್ತದೆ.

"ನಂಬಿಕೆ" ಎಂಬ ಪದದ ವಿವಿಧ ಅಭಿಪ್ರಾಯಗಳನ್ನು ಮುಂದಿಡುತ್ತಾ, Philip Edgcumbe Hughesನು "ಭರವಸವುಳ್ಳ ನಿಶ್ಚಯತ್ವ" ಎಂಬುದು ಅತಿ ಹೆಚ್ಚು ತೃಪ್ತಿದಾಯಕ ಅನುವಾದವೆಂಬದಾಗಿ ಅಂಗೀಕರಿಸಿಕೊಳ್ಳುತ್ತಾನೆ.[7] ಮತ್ತೊಬ್ಬ ವ್ಯಾಖ್ಯಾನಕಾರನು ಆಕ್ಷೇಪಣೆ ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾನೆ, "ಇಲ್ಲಿ ದೃಶ್ಯದಲ್ಲಿ ಇಲ್ಲದಿರುವದೇನೆಂದರೆ ನಾವು ಅನುಭವ ಮಾಡುತ್ತೇವೆ ಅಥವಾ ಹೊಂದಿಕೊಂಡಿರುತ್ತೇವೆ ಎಂಬುದಲ್ಲ – ಭರವಸ, ದೃಢವಿಶ್ವಾಸ – ಆದರೆ ಬದಲಾಗಿ, ನಂಬಿಕೆಯು ವಾಗ್ದಾನ ಮಾಡಲ್ಪಟ್ಟಿರುವದಕ್ಕೆ ಹೇಗೆ

ರುಜುವಾತುಗೊಳಿಸುತ್ತದೆ, ಅಥವಾ ಅದಕ್ಕೆ 'ತಿರುಳು' ಒದಗಿಸುತ್ತದೆ, ಕಾಣದಿರುವದನ್ನು ನಂಬಿರುವದಕ್ಕೆ ಮತ್ತು ನಿರೀಕ್ಷಿಸಿದ ವಾಸ್ತವಿಕತೆಗಳಿಗೆ ಹೇಗೆ ಪುರಾವೆಯನ್ನು ಒದಗಿಸುತ್ತದೆ ಎಂಬುದೇ."[8]

ನಂಬಿಕೆಯಿಲ್ಲದೆ ನಿಜವಾದ ನಿರೀಕ್ಷೆ ಎಂಬುದು ಇರಲು ಸಾಧ್ಯವೇ ಇಲ್ಲ, ಮತ್ತು ನಿರೀಕ್ಷೆಯಿಲ್ಲದೆ ನಿಜವಾದ ನಂಬಿಕೆಯು ಇರಲು ಸಾಧ್ಯವಿಲ್ಲ. **ಕಣ್ಣಿಗೆ ಕಾಣದವುಗಳನ್ನು ನೋಡುವದೆಂದರೆ** ಉತ್ತಮವಾದದ್ದೊಂದನ್ನು ಎದುರುನೋಡುವದಾಗಿರುತ್ತದೆ. ಇದು ನಂಬಿಕೆಯ ಒಂದು ಅಗ್ರಗಣ್ಯ ಅಭಿಮುಖ ಆಗಿದೆ. ಖಂಡಿತವಾಗಿಯೂ, "[ದೇವರ ವಾಗ್ದಾನಗಳನ್ನು] ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ" (ವ. 13) ದವರಾಗಿ, ಮೂಲಪಿತೃಗಳು ತಾವು "ನಂಬಿಕೆಯಿಂದ" ಏನನ್ನು ಹುಡುಕಿದರೋ ಅದರ ವಾಸ್ತವಿಕತೆಯನ್ನು ಬಲ್ಲವರಾಗಿದ್ದರು. "ನಂಬಿಕೆಯ ಮೂಲಕ ಮಾತ್ರವೇ ನಾವು 'ಅದೃಶ್ಯವಾದದ್ದು ದೃಶ್ಯವಾದದ್ದರಿಂದ ಬಂದಿತು' ಎಂಬ ಅತ್ಯಾಶ್ಚರ್ಯವುಂಟು ಮಾಡುವ ಹೇಳಿಕೆಯನ್ನು ಅಂಗೀಕರಿಸಿಕೊಳ್ಳಬಲ್ಲೆವು (NEB)."[9] ಹೇಗೂ, ನಮಗೆ ದೇವರ ವಾಕ್ಯದ ಸತ್ಯದಿಂದ ಒದಗಿಸಲ್ಪಟ್ಟಿರುವ ನಮ್ಮ ನಂಬಿಕೆಗಾಗಿ ಪುರಾವೆಯನ್ನು ಹೊಂದಿದ್ದೇವೆ (ರೋಮಾ 10:17). ನಾವು ನಂಬಿಕೆಯನ್ನು ಹೊಂದಿದ್ದೇವೆ ಯಾಕೆಂದರೆ ದೇವರು ಮತ್ತೇ ಮತ್ತೇ ವಿಶ್ವಾಸರ್ಹನೆಂಬುದನ್ನು ಸಾಭಿತುಪಡಿಸಿದ್ದಾನೆ. "ಶಾರೀರಿಕವಾದ ಕಣ್ಣು ದೃಷ್ಟಿಯು ಗೋಚರವಾಗುವ ಕಾರ್ಯಗಳ ಮನವರಿಕೆ ಅಥವಾ ಪುರಾವೆಯನ್ನು ಉತ್ಪಾದಿಸುತ್ತದೆ; ನಂಬಿಕೆಯು ಒಂದು ಅಂಗವಾಗಿದ್ದು (27ನೇ ವಚನದಲ್ಲಿ ಮೋಶೆಯಂತಹ) ಜನರಿಗೆ ಅಗೋಚರವಾದ ಕ್ರಮವನ್ನು ಕಾಣುವಂತೆ ಶಕ್ತಗೊಳಿಸುತ್ತದೆ."[10]

ನಂಬಿಕೆಯು ನಮಗೆ "ದೃಷ್ಟಿಯನ್ನು" ತರುತ್ತದೆ. ಅದು ನಿಶ್ಚಯವಾಗಿಯೂ ಕತ್ತಲೆಯಲ್ಲಿನ ಒಂದು ಜಿಗಿತವಲ್ಲ. "ನಂಬಿಕೆಯು ಇಂದ್ರಿಯಗಳಿಗೆ ಪ್ರಕಟಗೊಳ್ಳದ್ದನ್ನು ಒಂದು ನಿಜವಾದ ವಾಸ್ತವಾಂಶವೆಂದು ಗ್ರಹಿಸುತ್ತದೆ . . . ನಂಬಿಕೆಯು ವಾಸ್ತವಿಕವಾ ಜೀವಿಯೆಂದು ಹೇಳುವದಕ್ಕೆ ಸಾಧ್ಯವಿಲ್ಲ. ಅದು ವಾಸ್ತವಿಕತೆಯನ್ನು ಗ್ರಹಿಸುತ್ತದೆ: ನಿರೀಕ್ಷೆಯ ಅಗೋಚರವಾದ ಸಂಗತಿಯು ಅದಕ್ಕೆ ನಿಜ ಹಾಗೂ ವಾಸ್ತವಿಕತೆಯಾಗುತ್ತದೆ."[11] ನಮ್ಮ ಹೃದಯಗಳಲ್ಲಿ ನಾವು ನಿರೀಕ್ಷಿಸಿದ ಸಂಗತಿಗಳ "ಪುರಾವೆ"ಯು ನಮ್ಮ ನಂಬಿಕೆಯೇ ಆಗಿದೆ.

"ನಂಬಿಕೆಯಿಂದಲೇ ನಾವು ತಿಳಿದುಕೊಂಡು" (ವ. 3) ಎಂಬುದು ಜ್ಞಾನ ಮತ್ತು ನಂಬಿಕೆಗಳು ಸಂಪೂರ್ಣವಾಗಿ ಬೇರ್ಪಟ್ಟವುಗಳಲ್ಲ ಎಂಬುದನ್ನು ಒತ್ತಿ ಹೇಳುತ್ತದೆ. ನಾವು ಆತ್ಮೀಕ ವಾಸ್ತವಿಕತೆಗಳನ್ನು ನೋಡುವದಕ್ಕಾಗುವದಿಲ್ಲ, ಆದರೆ ಪ್ರಕಟಗೊಂಡಿರುವಂಥದ್ದು ಆ ವಾಸ್ತವಿಕತೆಗಳಲ್ಲಿ ಭರವಸೆಯನ್ನು ಉಂಟು ಮಾಡುತ್ತದೆ. "ನಿರೀಕ್ಷಿಸುವಂಥದ್ದು ಸಂಭವಿಸುತ್ತದೆ ಎಂಬ ಭರವಸವೇ ಇದಾಗಿದೆ."[12]

ನಿರ್ದಿಷ್ಟವಾಗಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಬಳಸಲ್ಪಟ್ಟಿರುವ ಪ್ರಕಾರ, ನಂಬಿಕೆಯ ಅರ್ಥನಿರೂಪಣೆಯನ್ನು ಮಾಡಬೇಕಾದರೆ ನಾವು ಅದನ್ನು "ವಿಶ್ವಾಸ," ಅಥವಾ "ವಾಸ್ತವಿಕವಾದ ವಿಶ್ವಾಸ" ಎಂದು ಕರೆಯಬಹುದು. ಅಕ್ಷರಶಃ, πιστις (*pistis*) ಎಂಬುದರ ಅರ್ಥವು ಕೇವಲ "ನಂಬಿಕೆ" ಅಥವಾ "ನೆಚ್ಚಿಕೆ" ಎಂದಾಗಿರುತ್ತದೆ. ಸಾಮಾನ್ಯವಾಗಿ, ಇಬ್ರಿಯರಿಗೆ ಪತ್ರಿಕೆಯಲ್ಲಿ, ಹೇಗೂ, ಅದು ದೇವರ ವಾಕ್ಯದಲ್ಲಿ ವಿಶ್ವಾಸವನ್ನು ತೋರ್ಪಡಿಸುವಂತಹ ಯಾವದೋ ಒಂದು ಕ್ರಿಯೆಯಲ್ಲಿ ನಂಬಿಕೆಯನ್ನು ಜಾರಿಗೆ ತರುವದು ಎಂದಾಗಿರುತ್ತದೆ. 11ನೇ ಅಧ್ಯಾಯವು "ನಂಬಿಕೆಯಿಂದ" ಕ್ರಿಯೆ ಮಾಡಿದ ಅನೇಕರ ಕುರಿತು ಹೇಳುತ್ತದೆ. ದೇವರಲ್ಲಿ ಮತ್ತು ಆತನ ವಾಗ್ದಾನಗಳಲ್ಲಿ ವಿಶ್ವಾಸವಿಟ್ಟಿರುವದರ ಫಲಿತವಾಗಿ ವಿಧೇಯತೆಯುಳ್ಳ ಕ್ರಿಯೆಯು

ಉಂಟಾಯಿತು. "ದೇವರು ಅದನ್ನು ಹೇಳಿದ್ದಾನೆ, ನಾನು ಅದನ್ನು ನಂಬಿದೆನು, ಮತ್ತು ಅದಕ್ಕೆ ಮೇಲೆ ಇನ್ನೇನೂ ಇಲ್ಲ!" ಎಂಬುದು ಸರಳಾತ್ಮಕವಾದದ್ದು, ಆದರೆ ಈ ಹೇಳಿಕೆಯು "ನಂಬಿಕೆ" ಯ ಸತ್ವವನ್ನು ಹೊಂದಿರುತ್ತದೆ. ಇಂದು ಒಬ್ಬನು ದೇವರ ವಾಕ್ಯವನ್ನು ಅನುಸರಿಸುವದಕ್ಕಾಗಿ ತನ್ನ ಇಡೀ ಜೀವನವನ್ನು ಅರ್ಪಿಸಿಕೊಳ್ಳುವಾಗ, ಆತನು ಇಬ್ರಿಯರಿಗೆ ಪತ್ರಿಕೆಯಲ್ಲಿನ "ನಂಬಿಕೆ"ಯ ನಿಜವಾದ ಅರ್ಥವನ್ನು ಗ್ರಹಿಸಿಕೊಳ್ಳುವನು: "ನಂಬಿಕೆಯೋ ದೇವರು ಹೇಳುವದನ್ನು ಮಾಡುವದೇ ಆಗಿರುತ್ತದೆ!"[13] ಅದು ಕೇವಲ ಮೂಢನಂಬಿಕೆ ಅಥವಾ ಅವಿಚಾರಿತ ಶ್ರದ್ಧೆ ಮಾತ್ರವೇ ಆಗಿರುವದಿಲ್ಲ. ಅದು ಒದಗಿಸಲ್ಪಟ್ಟ ಪುರಾವೆಯ ಮೇಲೆ ಆಧಾರಿತವಾದದ್ದು, ಅದನ್ನು ಇಬ್ರಿಯ 11ನೇ ಅಧ್ಯಾಯದಲ್ಲಿ ನಾವು ನೋಡಲಿದ್ದೇವೆ.

ನಂಬಿಕೆಯು ನಮ್ಮ "ನಿರೀಕ್ಷೆ"ಗೆ ಸಂಬಂಧಿಸಿದಂತೆ ನಮ್ಮ "ನಿಶ್ಚಯತ್ವ" ಆಗಿರುತ್ತದೆ. ನಿರೀಕ್ಷೆಯಿಲ್ಲದೆ ನಮ್ಮ ಲೌಕಿಕ ಸಮಸ್ಯೆಗಳ ವಿಷಯವಾಗಿ ನಾವು ದುರ್ಗತಿಗೊಳಗಾಗುತ್ತೇವೆ. ಸುಧಾರಣೆಯ ನಾಯಕನಾದ John Calvin (1509-1564) ಹೀಗೆ ಕೇಳಿದನು, "ನಾವು ನಮ್ಮ ನಿರೀಕ್ಷೆಯ ಮೇಲೆ ಅವಲಂಭಿತರಾಗದಿದ್ದರೆ ನಮಗೆ ಏನು ಸಂಭವಿಸುವದು, ಮತ್ತು ನಮ್ಮ ಮನಸ್ಸುಗಳು ದೇವರ ಮತ್ತು ಆತನ ಆತ್ಮನ ಪ್ರಕಾಶಿಸುವ ವಾಕ್ಯದ ಮೂಲಕ ಕತ್ತಲೆಯೊಳಗಿಂದ ಲೋಕವನ್ನು ಮೀರಿ ಹೊರ ಬರದಿದ್ದರೆ ಏನಾಗುವದು?"[14] ಇದು ಕೇವಲ ಹಾರೈಕೆಯ ಮೇಲೆ ಮಾತ್ರವೇ ಆಧಾರಗೊಂಡಿರುವದಲ್ಲ, ಆದರೆ ದೇವರ ವಾಗ್ದಾನಗಳ ಮೇಲೆ ಆಧಾರವಾಗಿರುವಂಥಹ ಭರವಸ ಆಗಿದೆ. ಅದು ಅಬ್ರಹಾಮನಿಗೆ ಪರಲೋಕವನ್ನು ವಾಸ್ತವವಾಗಿಸಿದ ನಂಬಿಕೆ ಆಗಿರುತ್ತದೆ (ವ. 10).

ಇದು ಪುರಾವೆಯಿಲ್ಲದ ಒಂದು ಭರವಸವಲ್ಲ; ಇದು ಒಂದು ಸ್ಥಿರವಾದ ಅಸ್ತಿವಾರದ ಮೇಲೆ ನಿಂತಿರುವ ದೃಢವಾದ ಭರವಸವಾಗಿದೆ. ಇದು ಒಬ್ಬನು ಬಂಡೆಯೊಂದನ್ನು ಮುಟ್ಟುವದರಿಂದ ಹೊಂದಿಕೊಳ್ಳುವ ಪುರಾವೆಯಂತಲ್ಲ; ಹಾಗಿದ್ದರೂ, ಅದು ನಿಜವಾದ "ತಿರುಳು" ಹೊಂದಿದೆ. ಒಂದು ಕಲ್ಲು ಹೇಗೆ ಅಸ್ತಿತ್ವದಲ್ಲಿದೆ ಎಂದು ಸಾಭಿತುಪಡಿಸುತ್ತೇವೋ ಅದೇ ರೀತಿಯಲ್ಲಿ ದೇವರನ್ನು ಸಾಭಿತುಪಡಿಸಲಾರೆವು, ಆದರೆ ನಮ್ಮ ನಂಬಿಕೆಗೆ ನ್ಯಾಯಸಮ್ಮತವಾದ ಕಾರಣಗಳನ್ನಂತು ಹೊಂದಿದ್ದೇವೆ. ಉದಾಹರಣೆಗೆ, ಕ್ರಿಸ್ತನ ಪುನರುತ್ಥಾನದಲ್ಲಿ ನಂಬಿಕೆಯಿಡುವದಕ್ಕೆ ನಮಗೆ ನೆಚ್ಚಬಹುದಾದ ಕಾರಣಗಳಿರುತ್ತವೆ, ಮತ್ತು ತಾನು ಎಬ್ಬಿಸಲ್ಪಡುವನೆಂದು ಆತನು ಹೇಳಿದನು (ಯೋಹಾನ 5:28, 29). ನಾವು ಏಕೆ ಅದನ್ನು ಅಂಗೀಕರಿಸಿಕೊಳ್ಳುತ್ತೇವೆ? ಏಕೆಂದರೆ ತಾನು ಎಬ್ಬಿಸಲ್ಪಡುವೆನೆಂದು ಕ್ರಿಸ್ತನು ಹೇಳಿದನು, ಮತ್ತು ತನ್ನ ಪುನರುತ್ಥಾನದ ಮೂಲಕವಾಗಿ ನಮಗೂ ಪುನರುತ್ಥಾನವಿರುವದೆಂಬ ಸಂಭಾವ್ಯತೆಯನ್ನು ತೋರ್ಪಡಿಸಿದನು. ನಮ್ಮ ನಂಬಿಕೆಯ ಮೂಲಕ ಕಾಣಿಸುವಂತದ್ದೆಲ್ಲಾ ನಮ್ಮ ಅದೃಶ್ಯನಾದ ದೇವರ ಒಂದು ಆಜ್ಞೆಯ ಫಲಿತವಾಗಿರುತ್ತದೆಂಬುದನ್ನು ಗ್ರಹಿಸಿಕೊಳ್ಳುತ್ತೇವೆ.

ನಂಬಿಕೆಯು "ಕಾಣದಿರುವವುಗಳ ಬಗ್ಗೆ ಮನವರಿಕೆಯಿಂದ [*elegchos*] ಇರುವದು" ಆಗಿರುತ್ತದೆ. ಯಾವದೋ ಒಂದು ಕಾರ್ಯವು ಸಂಭವಿಸುವದೆಂಬದನ್ನು ಯಾವ ತರ್ಕವೂ ಸಾಭಿತುಗೊಳಿಸಲಾರದು, ಆದರೆ ದೈವಿಕ ಪ್ರಕಟನೆ (ಶಾಸ್ತ್ರಗಳು) ಮೂಲಕ ಉಂಟು ಮಾಡಲ್ಪಟ್ಟ ನಂಬಿಕೆಯ ಪುರಾವೆಯು ಒಬ್ಬ ವಿಶ್ವಾಸಿಗೆ ಅದನ್ನು ಸಂಶಯಕ್ಕೆ ಅವಕಾಶವಿಲ್ಲದಂತೆ ರುಜುವಾತು ಪಡಿಸಬಲ್ಲದು. ಉದಾಹರಣೆಗೆ, 1 ಕೊರಿಂಥ 15:35-41ರಲ್ಲಿ ಪೌಲನು ಬಳಸಿದ ಸಾದೃಶ್ಯಗಳು ಒಂದು ಪುನರುತ್ಥಾನವಿರುತ್ತದೆಂಬ ಸಾಧ್ಯತೆಯನ್ನು ಸೂಚಿಸುತ್ತವೆ. ಸಾದೃಶ್ಯಗಳು ಏನನ್ನು ಸಾಭಿತುಪಡಿಸುವದಿಲ್ಲ, ಆದರೆ ಅವುಗಳು ಸತ್ತವರಿಗೆ ಪುನರುತ್ಥಾನವಾಗುವ ಸಂಭಾವ್ಯತೆಯಲ್ಲಿ ನಂಬುವಂತೆ ಮಾಡುತ್ತವೆ. ಕನಿಷ್ಠ, ಸಾಧೃಶ್ಯಗಳು

ಪುನರುತ್ಥಾನ ಸಂಭವಿಸುವದಕ್ಕೆ ಸಾಧ್ಯವಿಲ್ಲ ಎಂದು ವಾದಿಸುವದು ಮೂರ್ಖತನ ಎಂಬುದನ್ನಾದರೂ ತೋರಿಸಿ ಕೊಡುತ್ತವೆ. ಪೌಲನು ಶಾರೀರಿಕ ಪುನರುತ್ಥಾನವು ಒಂದು ಸ್ವಾಭಾವಿಕವಾದ ಅಸಾಧ್ಯತೆಯೆಂದು ಅಭಿಪ್ರಾಯ ಪಡುವದರ ಮೂರ್ಖತನವನ್ನು ತೋರಿಸುವದಕ್ಕಾಗಿ ಒಂದು ಬೀಜಕ್ಕೆ ಏನಾಗುತ್ತದೆ (ಒಂದು ಹೊಸ ಗಿಡ ಜೀವಿಸುವಂತಾಗಲು ಮರಣಿಸುವದು) ಎಂಬ ಉದಾಹರಣೆಯನ್ನು ಬಳಸುತ್ತಾನೆ. ಒಂದು ಹೊಸ ಮತ್ತು ವ್ಯತ್ಯಾಸವಾದ ದೇಹವು ಇರಬಲ್ಲದು ಮತ್ತು ಅದು ಆಗಲೂ ಒಂದು "ದೇಹ" ಆಗಿರಬಲ್ಲದೆಂದು ತೋರಿಸಿ ಕೊಡುತ್ತಾನೆ. ಆತನು ಪ್ರಕೃತಿಯಲ್ಲಿ ಸರ್ವಸಾಧಾರಣವಾಗಿರುವ ಉದಾಹರಣೆಗಳನ್ನು ಬಳಸಿದನು. ಸತ್ತ ದೇಹಗಳು ಪುನಃ ಜೀವಕ್ಕಾಗಿ ಎಬ್ಬಿಸಲ್ಪಡುವದನ್ನು ನಿರಾಕರಿಸುವವನು ಒಬ್ಬ "ಮೂಢನು" (1 ಕೊರಿಂಥ 15:36). ಆದುದರಿಂದ, ದೇವರ ಪ್ರಕಟನೆಯ ಮೇಲೆ ಆಧಾರವಾಗಿರುವ ನಮ್ಮ ಮನವರಿಕೆಯು ತಾರ್ಕಿಕವಾದದ್ದೆಂದು ಅಂತಹ ಸಾದೃಶ್ಯಗಳ ಮೂಲಕ ತೋರಿಸಲ್ಪಡುತ್ತವೆ.

ಇದು ಒಂದು ರೀತಿಯಲ್ಲಿ ಬಯಕೆಯು ಮಾತ್ರವೇ ನಂಬಿಕೆಯನ್ನು ಹುಟ್ಟಿಸುತ್ತದೋ ಎಂಬಂತೆ "ನಾನು ಬಯಸುವದರಿಂದ ನಂಬುತ್ತೇನೆ" ಎಂದಾಗಿರುವದಿಲ್ಲ, ಯಾಕೆಂದರೆ ಕ್ರೈಸ್ತ ನಂಬಿಕೆಯ ತಿರುಳು ಅದಾಗಿರುವದಿಲ್ಲ. ಹೇಗೂ, ಒಬ್ಬನು ಪ್ರಾಮಾಣಿಕವಾಗಿ ಹುಡುಕುವವನಲ್ಲವಾದರೆ ಆತನು ನಂಬುವವನಲ್ಲ (ವ. 6). ಒಬ್ಬ ವ್ಯಕ್ತಿಯು ಸತ್ಯದ ಅರ್ಥವನ್ನು ಹೊಂದಬೇಕಾದರೆ ಆತನು ಅದನ್ನು ಅರ್ಥಮಾಡಿಕೊಳ್ಳಲು ಮತ್ತು ಅಂಗೀಕರಿಸಿಕೊಳ್ಳಲು ಮನಸ್ಸುಳ್ಳವನಾಗಿರಬೇಕು (ಯೋಹಾನ 7:17); ಅಂಥ ಗ್ರಹಿಕೆಯು ದೇವರಿಗೆ ವಿಧೇಯರಾಗಬೇಕೆಂಬ ಬಯಕೆಯಿಲ್ಲದವರಿಗೆ ವಾಗ್ದಾನ ಮಾಡಲ್ಪಟ್ಟಿರುವದಿಲ್ಲ. ಸತ್ಯವನ್ನು ಗ್ರಹಿಸದಂತೆ ಅವರ ಮನಸ್ಸುಗಳನ್ನು ಮಂಕು ಮಾಡುವದಕ್ಕೆ ಸೈತಾನನಿಗೆ ಅನುಮತಿ ಕೊಡಲಾಗಿರುತ್ತದೆ (2 ಕೊರಿಂಥ 4:3-5). ಇಬ್ರಿಯ 11ನೇ ಅಧ್ಯಾಯದಲ್ಲಿ ನಾವು ನಮ್ಮ ಶಾರೀರಿಕ ಕಣ್ಣುಗಳಿಂದ ಅವುಗಳನ್ನು ನೋಡದಿದ್ದಾಗ್ಯೂ ಕೆಲವೊಂದು ವಾಸ್ತವಿಕತೆಗಳು ಅಸ್ತಿತ್ವದಲ್ಲಿರುತ್ತವೆ ಎಂಬುದರ ಕುರಿತು ನಮ್ಮೊಳಗಿರುವ ನಿಶ್ಚಯತ್ವ ಮತ್ತು ಒಂದು ಖಚಿತತೆ ಎಂಬ ಅರ್ಥದಲ್ಲಿ ನಂಬಿಕೆಯನ್ನು ತಿಳಿಯಪಡಿಸಲಾಗಿರುತ್ತದೆ.

"ನಂಬಿಕೆ" ಮತ್ತು "ನಿರೀಕ್ಷೆ" ಗಳು ಇಬ್ರಿಯರಿಗೆ ಪತ್ರಿಕೆಯಲ್ಲಿ ವಸ್ತುತಃ ಪರಸ್ಪರ ವಿನಿಮಯ ಮಾಡಬಹುದಾದ ಪದಗಳಾಗಿರುತ್ತವೆ.[15] ಒಂದು ನಿಜವಾದ ನಂಬಿಕೆಯು ಭವಿಷ್ಯದಲ್ಲಿ ಒಂದು ಸ್ವತ್ತಿಗೆ ಕೊಡಲ್ಪಟ್ಟಿರುವ ಒಂದು "ಹಕ್ಕುಪತ್ರ" ("ನಿಶ್ಚಯತ್ವ" ಕ್ಕಾಗಿ) ರೀತಿಯಲ್ಲಿ ಇರುತ್ತದೆ.[16] ನಂಬಿಕೆಯ ಮೇಲೆ ಆಧಾರವಾಗಿರುವ ಮತ್ತು ಪುರಾವೆಯಿಂದ ಸೃಷ್ಟಿಸಲ್ಪಟ್ಟಿರುವ ನಮ್ಮ ನಿರೀಕ್ಷೆಯು ನಮ್ಮನ್ನು ರಕ್ಷಣೆಗೆ ಕರೆ ತರುತ್ತದೆ (ರೋಮಾ 8:24, 25). ತನ್ನ ಬೈಬಲ್‌ನ್ನು ಎಂದಿಗೂ ಓದದವನು ಮತ್ತು ಅಧ್ಯಯನ ಮಾಡದವನು ಅಥವಾ ಸುವಾರ್ತೆಯ ಸಾರುವಿಕೆಯನ್ನು ಆಲಿಸದವನು ಈ ವಿಧವಾದ ನಂಬಿಕೆಗೆ ಬರುವದಿಲ್ಲ.

## ನಂಬಿಕೆಯ ಒಂದು ತೋರ್ಪಡಿಸುವಿಕೆ (11:2, 3)

**2ನಮ್ಮ ಪೂರ್ವಿಕರು ನಂಬಿಕೆಯುಳ್ಳವರಾಗಿದ್ದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು. 3ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.**

**ವಚನ 2.** ಕೆಲವೊಬ್ಬ ನಂಬಿಗಸ್ತರಾದ ಪೂರ್ವಿಕರ ಹೆಸರುಗಳನ್ನು ಹೇಳುವದಕ್ಕೆ ಮುಂಚೆ,

ಅವರು **ಒಳ್ಳೆ ಹೆಸರನ್ನು ಹೊಂದಿದರು** (μαρτυρέω, *martureō*) ಎಂದು ಹೇಳುವ ಮೂಲಕ ಲೇಖಕನು ಅವರನ್ನು ಪ್ರಶಂಸಿಸುತ್ತಾನೆ. **ಪೂರ್ವಿಕರು** ಎಂಬುದು πρεσβύτερος (*presbuteros*, ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ "ಹಿರಿಯ" ಎಂದು ಅನುವಾದಿಸಲ್ಪಟ್ಟಿರುತ್ತದೆ) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. ಈ ಮೂಲಪಿತೃಗಳೊಳಗೆ ಹೇಬೆಲ, ಹನೋಕ, ನೋಹ, ಮತ್ತು ಅಬ್ರಹಾಮ ಸೇರಿದ್ದರು. ಅಂಥ "ಪೂರ್ವಿಕರು" ಅವರ ನಂಬಿಕೆಗಾಗಿ ಶ್ಲಾಘಿಸಲ್ಪಟ್ಟಿದ್ದರೇ ಹೊರತು ಅವರ ಪ್ರತಿಭೆಗಳು, ಐಶ್ವರ್ಯ, ಕಲಿಕೆ, ಅಥವಾ ಲೌಕಿಕ ಸಾಧನೆಗಳಿಗಾಗಿ ಶ್ಲಾಘಿಸಲ್ಪಟ್ಟಿರಲಿಲ್ಲ. ಅವರು ದೇವರಲ್ಲಿ ವಿಶ್ವಾಸವಿಟ್ಟರು, ಆ ಮೂಲಕ ಒಳ್ಳೇ ಹೆಸರನ್ನು ಹೊಂದಿದರು. ಈ ವಚನವು ಹೀಗೆ ಅರ್ಥವನ್ನು ಕೊಡಬಹುದಾಗಿದೆ, "ಮತ್ತು ಇದಕ್ಕಾಗಿ ಪೂರ್ವಿಕರಿಗೆ ದೇವರು ಸಾಕ್ಷಿಯಾಗಿದ್ದನು."[17] ಇಲ್ಲಿ "ಅವರು ಶಾಸ್ತ್ರಗಳಲ್ಲಿ ಚಿರಸ್ಮರಣೀಯಗೊಳಿಸಲ್ಪಟ್ಟರು" ಎಂಬ ಯೋಚನೆಯು ಇರುವ ಸಾಧ್ಯತೆಯಿದೆ.[18]

ಹೇಬೆಲನು ಒಂದು "ಸಾಕ್ಷ್ಯ" ಅಥವಾ "ಸಾಕ್ಷಿ" ಹೊಂದಿದನು (ವ. 4) ಮತ್ತು ಬಹುಶಃ ಬೇರೆಯವರು ಹೊಂದಿದರು, ಆದರೆ ಬೈಬಲಿನಲ್ಲಿ ಮೊಟ್ಟ ಮೊದಲಿಗೆ "ನೀತಿವಂತನು" ಎಂದು ಕರೆಯಲ್ಪಟ್ಟವನು ನೋಹ ಆಗಿದ್ದಾನೆ (ಆದಿಕಾಂಡ 6:9). ಆತನು ದೇವರ ಸಂಗಡ ತನಗಿರುವ ವಿಶೇಷ ಸಂಬಂಧದ ಬಗ್ಗೆ ಅರಿವು ಹೊಂದಿದ್ದನು, ಯಾಕೆಂದರೆ ಬರಲಿರುವ ಕಾರ್ಯದ ಬಗ್ಗೆ ಆತನೊಬ್ಬನಿಗೆ ಮಾತ್ರವೇ ಎಚ್ಚರಿಸಲ್ಪಟ್ಟಿತು (ವ. 7). ಆತನ "ನೀತಿಯ" ವಿಷಯದಲ್ಲಿ ದೇವರು ಆತನನ್ನು ಪ್ರಶಂಸಿರಬಹುದಾಗಿದೆ. ಈ "ಪೂರ್ವಿಕರು" ದೇವರಿಂದ ನೇರವಾದ ಸಂವಹನವನ್ನು ಪಡೆದುಕೊಂಡರು ಆದರೆ ನಾವು ಹಾಗೆ ಪಡೆದುಕೊಳ್ಳುವದಿಲ್ಲ. ನಮ್ಮ ಜ್ಞಾನವು ಶಾಸ್ತ್ರಗಳಲ್ಲಿ ಸಿಕ್ಕುವ ಅಂತಿಮವಾದ ಪ್ರಕಟನೆಯ ಮೂಲಕ ಬರುತ್ತದೆ. ನಾವು ಆತನ ಪ್ರಕಟಗೊಂಡ ಚಿತ್ತದ ಮೂಲಕವಾಗಿ, ನಮ್ಮ ನಂಬಿಕೆಗೋಸ್ಕರ, ದೇವರದೊಂದಿಗೆ ಸಹ ಒಳ್ಳೇ ಹೆಸರನ್ನು ಹೊಂದಿಕೊಳ್ಳಬಲ್ಲೆವು ಮತ್ತು ಆತನು ಅಂಗೀಕರಿಸುತ್ತಾನೆಂಬ ಭರವಸವುಳ್ಳವರಾಗಿರಬಲ್ಲೆವು. 11ನೇ ಅಧ್ಯಾಯದಲ್ಲಿ ಮೂಲಪಿತೃಗಳಿಗಾಗಿ ದೈವಿಕ ಪ್ರಶಂಸೆಯು ನಮಗೋಸ್ಕರ ಒಂದು ಮಾದರಿಯಾಗಿರುವಂತೆ "ಶಾಶ್ವತವಾದ ದಾಖಲೆಯಲ್ಲಿ ಇಡಲ್ಪಟ್ಟಿತು."[19] ಅವರ ನಂಬಿಕೆಯು ಅವರನ್ನು ಬೇರೆಯವರಿಗಿಂತ ಭಿನ್ನವಾಗಿಸಿತ್ತು ಮತ್ತು ದೇವರ ಮನ್ನಣೆಯನ್ನು ಗೆದ್ದುಕೊಂಡಿತ್ತು.

**ವಚನ 3. ನಂಬಿಕೆಯಿಂದಲೇ ನಾವು ತಿಳಿದುಕೊಂಡೆವು.** ಕ್ರೈಸ್ತರು ನಂಬಿಕೆಯ ಮೂಲಕ, ನಮ್ಮ ಲೋಕವನ್ನು ಒಂದು ದೈವಿಕ ಮನಸ್ಸು ಮತ್ತು ಶಕ್ತಿಯು ಸೃಷ್ಟಿ ಮಾಡಿತೆಂಬುದನ್ನು ಗ್ರಹಿಸುತ್ತೇವೆ. ಈ ವಚನವು ಕಾಣದಿರುವ ಸಂಗತಿಗಳ ಬಗ್ಗೆ ಒಳ್ಳೇ ಉದಾಹರಣೆಯನ್ನು ಕೊಡುತ್ತದೆ, ಯಾಕೆಂದರೆ ಸೃಷ್ಟಿಯು ಸಂಭವಿಸುವದನ್ನು ಯಾವನೂ ಕಾಣಲಿಲ್ಲ. ಅದು ಹೇಗೆ ಸಂಭವಿಸಿತು ಎಂಬ ವಿಷಯದಲ್ಲಿ ಇಂಥಿಂಥ ಊಹೆಯ ಬಗ್ಗೆ ಹೆಚ್ಚಳ ಪಟ್ಟುಕೊಳ್ಳುವ ಅಗತ್ಯವಿಲ್ಲ; ಹೇಗೂ, ನಂಬಿಕೆಯುಳ್ಳ ಹೃದಯಕ್ಕಾದರೋ "ಆದಿಯಲ್ಲಿ ದೇವರು ಸೃಷ್ಟಿ ಮಾಡಿದನು" ಎಂಬುದು "ಸೂರ್ಯನು ಪೂರ್ವ ದಿಕ್ಕಿನಲ್ಲಿ ಉದಯವಾಗುತ್ತಾನೆ" ಎಂಬಷ್ಟೆ ಖಚಿತ ಹಾಗೂ ಸ್ಪಷ್ಟ ಆಗಿರುತ್ತದೆಂದು ಲೇಖಕನು ಹೇಳುತ್ತಾನೆ.

ದೈವಿಕ ಸೃಷ್ಟಿಯು ವಿಜ್ಞಾನಕ್ಕೆ ತದ್ವಿರುದ್ಧವಾಗಿರುತ್ತದೆಂದು ಅನೇಕರು ನಂಬುತ್ತಾರೆ. ವಿಜ್ಞಾನವು ಒಂದು ವಸ್ತುವು ಯಾವ ಗುಣವಿಶೇಷಗಳನ್ನು ಹೊಂದಿದೆ ಎಂಬುದರ ಆಧಾರದಲ್ಲಿ ಒಂದು ಘಟಕ ಏನೆಂಬುದನ್ನು ಮತ್ತು ಇತರ ಘಟಕಗಳೊಂದಿಗೆ ರಸಾಯನಿಕವಾಗಿ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ನಮಗೆ ಹೇಳಬಲ್ಲದು — ಆದರೆ ಅದು ಅದರ ಮೂಲದ ಬಗ್ಗೆ ಏನನ್ನೂ ನಮಗೆ ಹೇಳಲಾಗುವದಿಲ್ಲ. ಬಹುಶಃ ಆ ಕಾರಣಕ್ಕಾಗಿಯೇ ಬಹಳಷ್ಟು ಮಂದಿ ನಮ್ಮ ಲೋಕವು ಹೇಗೆ ಉತ್ಪತ್ತಿಯಾಯಿತೆಂಬ ಬಗ್ಗೆ ಊಹಾಪೋಹಗಳನ್ನು ಮಾಡುವದಕ್ಕೆ ಇಷ್ಟ

ಪಡುತ್ತಾರೆ. ಮೂಲ ಉತ್ಪತ್ತಿಯ ಸಮಯದಲ್ಲಿ ಗಮನಿಸುವದಕ್ಕೆ ಏನೂ ಇರಲಿಲ್ಲ.[20] ಹೊಸ ಹೊಸ ಅನ್ವೇಷಣೆಗಳಾದಂತೆ ವೈಜ್ಞಾನಿಕ ಊಹೆಗಳು ಬದಲಾಗುತ್ತಿರುತ್ತವೆ. ಕೆಲವು ಸಾರಿ ಒಂದು ಅನ್ವೇಷಣೆಯು ಶಾಸ್ತ್ರಗಳ ಕುರಿತಾದ ನಮ್ಮ ತಿಳುವಳಿಕೆಯನ್ನು ಮರುಪರೀಕ್ಷೆ ಮಾಡಿಕೊಳ್ಳುವಂತೆ ಮಾಡುತ್ತದೆ ಯಾಕೆಂದರೆ ನಾವು ಅದನ್ನು ಸರಿಯಾಗಿ ವ್ಯಾಖ್ಯಾನ ಮಾಡಲಿಲ್ಲ. ಹೇಗೂ, ಅದು ನಂಬಿಕೆಯನ್ನು ನಾಶ ಮಾಡಲಾರದು ಯಾಕೆಂದರೆ ನಂಬಿಕೆಯು ವಿಜ್ಞಾನವನ್ನು ಮೀರಿದ್ದಾಗಿದೆ.

ವಿಕಾಸವಾದವು ವಿಜ್ಞಾನಕ್ಕೆ ಸಂಬಂಧಿಸಿದ ಊಹೆಯಾಗಿದೆ ಮತ್ತು ಅದು ಸ್ವತಃ ವಿಜ್ಞಾನವಲ್ಲ; ಯಾಕೆಂದರೆ ಸರಿಯಾಗಿ ಬಳಸುವದಾದರೆ "ವಿಜ್ಞಾನ" ಎಂಬ ಪದದ ಅರ್ಥವು "ಜ್ಞಾನ" ಎಂದಾಗುತ್ತದೆ. ತತ್ವಜ್ಞಾನವು "ಶೂನ್ಯದಿಂದ ಏನನ್ನೂ ಮಾಡಲಾಗುವದಿಲ್ಲ" ಎಂದು ಹೇಳುವಷ್ಟು ದೂರಕ್ಕೆ ಮಾತ್ರವೇ ಹೋಗಬಲ್ಲದು. ನಂಬಿಕೆಯು ಅದನ್ನು ದಾಟಿ ಹೋಗುವದಾಗಿದ್ದು, "ದೇವರ ವಾಕ್ಯದ ಕಾರಣದಿಂದ ಲೋಕವು ಶೂನ್ಯದಿಂದ, ದೇವರ ನುಡಿದ ವಾಕ್ಯದಿಂದ ಸೃಷ್ಟಿಸಲ್ಪಟ್ಟಿತೆಂದು ಭರವಸೆಯೊಂದಿಗೆ ದೃಢವಾಗಿ ಹೇಳಬಲ್ಲೆವು" ಎಂದು ಘೋಷಿಸುತ್ತದೆ. ಬೈಬಲಾಧಾರಿತ ನಂಬಿಕೆಯು **ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವು** ಎಂಬುದನ್ನು ಪುನರ್ದೃಢೀಕರಿಸುತ್ತದೆ. ಹೆಚ್ಚು ಅಕ್ಷರಶಃ, ವಿಶ್ವವು "ದೇವರ ವಾಕ್ಯದಿಂದ ಉಂಟು ಮಾಡಲ್ಪಟ್ಟಿತು." ಇಲ್ಲಿ "ಮಾತಿನಿಂದ" (ῥῆμα, *rhēma*) ಎಂಬುದು ಯೋಹಾನ 1ರಲ್ಲಿ λόγος (*logos*) ಎಂಬ ಪದದ ಕ್ರಿಸ್ತಶಾಸ್ತ್ರೀಕ ಅರ್ಥದ ಬದಲಾಗಿ ದೇವರ ಮೌಖಿಕ ವಾಕ್ಯವನ್ನು ಸೂಚಿಸುತ್ತದೆ.

ದೇವರು ಈ ಶಕ್ತಿಯನ್ನು ಹೊಂದಿದ್ದಾನೆ ಮತ್ತು ಸೃಷ್ಟಿಯ ಕ್ರಿಯೆಯನ್ನು ಮಾಡಿದನು ಎಂಬುದನ್ನು ಸಾಭಿತುಪಡಿಸುವ ಯಾವ ಪ್ರಯತ್ನವನ್ನೂ ಇಬ್ರಿಯರಿಗೆ ಪತ್ರಿಕೆಯು ಮಾಡುವದಿಲ್ಲ. ಬದಲಾಗಿ, ಅದು ಮೋಶೆ (ಆದಿಕಾಂಡ 1:1) ಮತ್ತು ಕೀರ್ತನೆಗಾರನು (ಕೀರ್ತನೆ 33:6, 9) ಮಾಡಿದ ಪ್ರಕಾರವೇ ಪವಿತ್ರಾತ್ಮನ ಅಧಿಕಾರದಿಂದ ಮಾತಾಡುತ್ತದೆ. ವಿಶ್ವವು ಈ ವಿಧದಲ್ಲಿ ಸೃಷ್ಟಿಸಲ್ಪಟ್ಟಿತು ಎಂಬುದಕ್ಕೆ ನಮಗೆ ಕೆಲವೊಂದು ಅನುಭವಾತ್ಮಕ ಪುರಾವೆಗಳು ಇರುತ್ತವೆ, ಆದರೆ ನಮ್ಮ ಅಂತಿಮ ಸಾಕ್ಷ್ಯವು ದೇವರ ವಾಕ್ಯವೇ ಆಗಿದೆ. "ತಿಳಿದುಕೊಂಡು" (νοέω, *noeō* ಎಂಬದರಿಂದ ಬಂದದ್ದು) ಎಂಬುದನ್ನು ಅನುವಾದಿಸಿರುವ ಪದದ ಒಂದು ರೂಪವನ್ನು ಪೌಲನು ರೋಮಾ 1:20ರಲ್ಲಿ ದೇವರು ಮಾಡಿದ ಕಾರ್ಯಗಳಿಂದ ಆತನ ಗುಣಸ್ವಭಾವದ ಸತ್ಯಗಳನ್ನು ತಿಳಿದುಕೊಳ್ಳುವದಕ್ಕೆ ಮನುಷ್ಯನಿಗಿರುವ ಸ್ವಾಭಾವಿಕವಾದ ಸಾಮರ್ಥ್ಯವಿದೆ ಎಂಬುದನ್ನು ಸೂಚಿಸುವದಕ್ಕೆ ಬಳಸಿದನು.

ದೇವರು ಮಾಡಿರುವ ಕಾರ್ಯಗಳಲ್ಲಿ "ಲೋಕಗಳು" (αἰῶνας, *aiōnas*, ಇದು αἰών, *aiōn* ಎಂಬುದರಿಂದ ಬಂದದ್ದು), ಅಥವಾ "ಯುಗಗಳು" ಸೇರಿರುತ್ತವೆ. ಈ ಪದವು "ಕ್ರಿಸ್ತನಲ್ಲಿ ಸಮಸ್ತವನ್ನೂ ಒಂದುಗೂಡಿಸುವ ಕಾಲದ ತನಕ . . . ಲೋಕದ ಅನುಕ್ರಮದ ಮತ್ತು ಮುಂದುವರೆಯುವ ಜೀವನದ ಹಂತಗಳು" ಎಂದರ್ಥವನ್ನು ಕೊಡುತ್ತದೆ.[21] ಇದರೊಳಗೆ "ಸಮಯ ಮತ್ತು ಅವಧಿಯೊಳಗೆ ಅಸ್ತಿತ್ವದಲ್ಲಿರುವ ಎಲ್ಲವೂ" ಸೇರಿರುತ್ತದೆ.[22]

**ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲ** ಎಂಬುದರ ಅರ್ಥವು "ಶೂನ್ಯದಿಂದ ನಿರ್ಮಿಸಲ್ಪಟ್ಟಿತು" ಎಂದಾಗಿರುವಂತೆ ಕಾಣಿಸುತ್ತದೆ. ಲೋಕವು ಮುಂಚೆಯೇ ಅಸ್ತಿತ್ವದಲ್ಲಿದ್ದ ವಸ್ತುವಿನಿಂದ ಸೃಷ್ಟಿಸಲ್ಪಡಲಿಲ್ಲ; ಬದಲಾಗಿ, ಇದೊಂದು *creatio ex nihilo* ಆಗಿತ್ತು, ಇದು "ಶೂನ್ಯದಿಂದ ನಿರ್ಮಿಸಲ್ಪಟ್ಟಿತು" ಎಂಬುದಕ್ಕೆ ಲ್ಯಾಟಿನ್ ಪದವಾಗಿರುತ್ತದೆ. ಇದು ಗ್ರೀಕ್ ವಿಚಾರದೊಂದಿಗೆ ಅಸಮಂಜಸವಾಗಿದೆ. *Ex nihilo* ಎಂಬುದು ಇಬ್ರಿಯರಿಗೆ ಪತ್ರಿಕೆಯ ಲೇಖಕನಿಂದ ಬಳಸಲ್ಪಟ್ಟ

ಪದವಾಗಿರುವದಿಲ್ಲ, ಆದರೆ "ವಿಶ್ವವು ಇಂದ್ರಿಯಗ್ರಾಹ್ಯ [ಇಂದ್ರಿಯಗಳಿಂದ ಗ್ರಹಿಸಬಲ್ಲ] ಸಂಗತಿಗಳಿಂದ ಸೃಷ್ಟಿಸಲ್ಪಟ್ಟಿತು ಎಂಬುದನ್ನು ಆತನು ನಿರಾಕರಿಸುವದರಲ್ಲಿ ಕಾರ್ಯರೂಪದಲ್ಲಿ ಪರೋಕ್ಷವಾಗಿ ಅದೇ ಸೂಚಿಸಲ್ಪಟ್ಟಿರುತ್ತದೆ."[23] ಸೃಷ್ಟಿಯು ದೇವರ ವಾಕ್ಯದಿಂದ ಸಾಧಿಸಲ್ಪಟ್ಟಿತು: "ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು. . . . ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು" (ಕೀರ್ತನೆ 33:6–9).

## ನೀತಿವಂತ ವ್ಯಕ್ತಿಗಳ ಒಂದು ಚಿತ್ರಣ (11:4-7)

**4ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು ನೀತಿವಂತನೆಂದು ಸಾಕ್ಷಿಹೊಂದಿದನು; ದೇವರು ಅವನ ಕಾಣಿಕೆಯನ್ನು ಅಂಗೀಕಾರ ಮಾಡಿದ್ದೇ ಆ ಸಾಕ್ಷಿ. ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ.**

**5ಹನೋಕನು ಮರಣವನ್ನು ಅನುಭವಿಸದೆ ಒಯ್ಯಲ್ಪಟ್ಟದ್ದು ನಂಬಿಕೆಯಿಂದಲೇ; ಅವನನ್ನು ದೇವರು ತೆಗೆದುಕೊಂಡು ಹೋದದರಿಂದ ಅವನು ಯಾರಿಗೂ ಸಿಕ್ಕಲಿಲ್ಲ; ಅವನು ಒಯ್ಯಲ್ಪಡುವದಕ್ಕಿಂತ ಮೊದಲು ದೇವರಿಗೆ ಮೆಚ್ಚಿಕೆಯಾದವನಾಗಿದ್ದನೆಂದು ಸಾಕ್ಷಿ ಉಂಟು.**
**6ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ.**

**7ನಂಬಿಕೆಯಿಂದಲೇ ನೋಹನು ಅದು ವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು.**

ನಂಬಿಕೆಯ ಕುರಿತ ತನ್ನ ಕಥನದಲ್ಲಿ, ಲೇಖಕನು ಹಳೆಯ ಒಡಂಬಡಿಕೆಯಲ್ಲಿನ ನೀತಿವಂತರ ಕುರಿತ ಒಂದು ವಿಭಾಗವನ್ನು ಸೇರ್ಪಡೆಗೊಳಿಸಿದನು. ಆತನು ಹೇಬೆಲ, ಹನೋಕ, ಮತ್ತು ನೋಹನರಿಂದ ಆರಂಭಿಸುತ್ತಾನೆ (ವಚನಗಳು 4, 5, 7). ಬಳಿಕ ಆತನು ನಂಬಿಕೆಯೊಂದಿಗೆ ವಿಧೇಯತೆಯಿಂದ ಪ್ರಯಾಣವನ್ನು ಮಾಡಿದವರ ಪಟ್ಟಿಯನ್ನು ಕೊಡುತ್ತಾನೆ: ಅಬ್ರಹಾಮ, ಇಸಾಕ, ಯಾಕೋಬ, ಮತ್ತು ಸಾರಳು (ವಚನಗಳು 8–16). ಒಂದು ಮೂರನೆಯ ಗುಂಪು ಅಬ್ರಹಾಮ, ಇಸಾಕ, ಯಾಕೋಬ, ಯೋಸೇಫ, ಮತ್ತು ಮೋಶೆ ಇವರು ಸೇರಿದಂತೆ ಕಷ್ಟಾನುಭವ ಹೊಂದಿದವರನ್ನು ಒಳಗೊಂಡಿರುತ್ತದೆ (ವಚನಗಳು 17–28).[24]

**ವಚನ 4. ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ಸಮರ್ಪಿಸಿದನು** (ನೋಡಿರಿ ಆದಿಕಾಂಡ 4:1–16). "ಶ್ರೇಷ್ಠವಾದ" (πλείονα, *pleiona,* ಇದು πολύς, *polus* ಎಂಬದರಿಂದ ಬಂದದ್ದು) ಎಂಬುದರ ಅರ್ಥವು "ಉತ್ಕಟವಾದ" ಅಥವಾ "ಹೆಚ್ಚು ಪ್ರಾಮುಖ್ಯವಾದ" ಎಂದಾಗಿರಬಲ್ಲದು.[25] ಕೆಲವರು ಆದಿಕಾಂಡ 4:4ರಲ್ಲಿ ಆತನು "ಹಾಗೆಯೇ . . . ತಂದು" ಮತ್ತು "ಚೊಚ್ಚಲ ಕುರಿಗಳನ್ನು" ಎಂಬ ಬಹುವಚನವು ಆತನು ಕಾಯಿನನಿಗಿಂತಲೂ ಹೆಚ್ಚು ಸಮೃದ್ಧಿಯಾಗಿ ಕೊಟ್ಟನೆಂದು ಸೂಚಿಸುತ್ತದೆಂಬದಾಗಿ ಯೋಚಿಸುತ್ತಾರೆ. ಅಕ್ಷರಶಃ, ಅದು ಹೇಬೆಲನು "ಹೆಚ್ಚು" ಕೊಟ್ಟನು ಎಂದಾಗಬಹುದು, ಮೌಲ್ಯ ಅಥವಾ ಪ್ರಮಾಣದಲ್ಲಿ

ಹೆಚ್ಚಿನದ್ದಾಗಿತ್ತೆಂಬ ಅರ್ಥವನ್ನು ಕೊಡುತ್ತದೆ.[26]

ಹೇಬೆಲನು **ನಂಬಿಕೆಯಿಂದಲೇ** ಕಾರ್ಯ ಮಾಡಿದನು, ಆದರೆ ಕಾಯಿನನು ತನ್ನ ತರ್ಕವನ್ನು ಅನುಸರಿಸಿರಬಹುದು. ಆತನು ಹೀಗೆ ಯೋಚಿಸಿದಂತೆ ತೋರುತ್ತದೆ, "ಈ ಕಾಣಿಕೆಯು ನನಗೆ ಸಾಕಷ್ಟು ಒಳ್ಳೇದಾಗಿದ್ದರೆ, ಅದು ದೇವರಿಗೂ ಸಾಕಷ್ಟು ಒಳ್ಳೇದಾಗಿರುತ್ತದೆ." ಈ ಮನೋಭಾವವು ನಂಬಿಕೆಯದ್ದಾಗಿರಲಿಲ್ಲ; ಅದರ ಫಲಿತವಾಗಿ, ಆತನ ಯಜ್ಞವು ಹೇಬೆಲ ಯಜ್ಞಕ್ಕಿಂತ ಬಹುವಾಗಿ ಕಡಿಮೆಯಾದದ್ದಾಗಿ ಎಣಿಸಲ್ಪಟ್ಟಿತು. ಆತನಿಗೆ ಪಾಪದ ಕುರಿತ ಯಾವದೇ ನಿಜವಾದ ಪ್ರಜ್ಞೆಯು ಇರಲಿಲ್ಲ ಎಂಬುದು ಅತನ ಯಜ್ಞದಿಂದ ಸೂಚಿತವಾಗುತ್ತದೆ.[27] ದೇವರು ಆದಾಮನ ಇಬ್ಬರೂ ಪುತ್ರರ ಹೃದಯಗಳನ್ನು ಬಲ್ಲವನಾಗಿದ್ದನು, ಮತ್ತು ಕಾಯಿನನ ಕುರಿತಾದ ಆತನ ತೀರ್ಪು ಕಾಯಿನನು ತನ್ನ ಸಹೋದರನ ವಿಷಯದಲ್ಲಿ ನಡೆದುಕೊಂಡ ಕೃತ್ಯದಿಂದ ಸಾಭಿತಾಗುತ್ತದೆ. ಹೇಬೆಲನು ತನ್ನ ಯಜ್ಞವನ್ನು "ನಂಬಿಕೆಯಿಂದಲೇ" ಸಮರ್ಪಿಸಿದನು ಮತ್ತು ಆತನು **ನೀತಿವಂತಬನಾ**ಗಿದ್ದನು; ಆದದರಿಂದ, ಹೇಬೆಲನ ಹೃದಯದಲ್ಲಿನ ಸಂಕಲ್ಪವೇ ದೇವರ ಮುಂದೆ ಆತನನ್ನು ನೀತಿವಂತನೆಂಬ ಸ್ಥಾನವನ್ನು ತಂದಿತು ಮತ್ತು ಆತನ ಹಾಗೂ ಆತನ ಸಹೋದರ ನಡುವೆ ಒಂದು ಪ್ರಾಥಮಿಕ ವ್ಯತ್ಯಾಸವನ್ನು ಮಾಡಿತು.

ಹೇಬೆಲನು **ಸಾಕ್ಷಿಹೊಂದಿದನು** (μαρτυρέω, *martureō*). ಇದು ಹೇಗೆ ಮಾಡಲ್ಪಟ್ಟಿತು ಎಂಬುದು ನಮಗೆ ತಿಳಿಸಲ್ಪಟ್ಟಿರುವದಿಲ್ಲ. ಒಂದು ಸಾಧ್ಯತೆಯು ಏನೆಂದರೆ ದೇವರು ಬೆಂಕಿಯು ಯಜ್ಞವನ್ನು ನುಂಗುವಂತೆ ಮಾಡಿದನು; 1 ಅರಸು 18:38ರಲ್ಲಿ ಎಲೀಯನ ಸಮರ್ಪಣೆಗಳ ವಿಷಯದಲ್ಲಿ ಆತನು ಅದನ್ನೇ ಮಾಡಿದನು.[28] ಖಂಡಿತವಾಗಿಯೂ, ಕಾಯಿನನ ಕಾಣಿಕೆಗೆ ಯಾವದ ಅನುಮೋದನೆಯ ಪುರಾವೆಯು ಕೊಡಲ್ಪಡಲಿಲ್ಲ. ದೇವರು ಆದಿಕಾಂಡ 4:6, 7ರಲ್ಲಿ ಕಾಯಿನನ ಸಂಗಡ ಮಾತಾಡಿದನು. ಬಹುಶಃ ಆತನು ತನ್ನ ಅನುಮೋದನೆಯನ್ನು ಘೋಷಿಸುವವನಾಗಿ ಹೇಬೆಲನ ಸಂಗಡ ಸಹ ಮಾತಾಡಿನು. ಒಬ್ಬನು ನೀತಿವಂತನು ಮತ್ತು ಮತ್ತೊಬ್ಬನು ಕೆಟ್ಟವನು ಎಂಬುದನ್ನು ಆತನು ಸ್ಪುಟವಾಗಿ ಹೇಳಿರಬಹುದಾಗಿದೆ (1 ಯೋಹಾನ 3:12). ಕೆಟ್ಟದ್ದು ಯಾವಾಗಲೂ ಒಳ್ಳೇದನ್ನು ದ್ವೇಷಿಸುತ್ತದೆ.

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈ ಕೆಲವು ವಚನಗಳಲ್ಲಿ ತಾನು ಆದಿಕಾಂಡವನ್ನು ಪೂರ್ತಿಯಾಗಿ ನಂಬುತ್ತಾನೆಂಬುದನ್ನು ಪುನರ್ದೃಢೀಕರಿಸಿದನು. ಒಬ್ಬನು "ನಾನು ಹೊಸ ಒಡಂಬಡಿಕೆಯನ್ನು ಅಂಗೀಕರಿಸಿಕೊಳ್ಳುತ್ತೇನೆ ಆದರೆ ಹಳೆಯ ಒಡಂಬಡಿಕೆಯನ್ನಲ್ಲ" ಎಂದು ಹೇಳಿದರೆ ಅಸಮಂಜಸವಾಗಿರುತ್ತದೆ. ಹೇಬೆಲನು ಶಾಶ್ವತವಾಗಿ ದಾಖಲಿಸಲ್ಪಟ್ಟಿರುವ ಶಾಸ್ತ್ರಗಳ ಮೂಲಕವಾಗಿ **ಇನ್ನೂ ಮಾತಾಡುತ್ತಾನೆ**.[29] ಆತನ ಕೆಲಸಗಳು ಆತನು ಮರಣಿಸಿ ದೀರ್ಘಕಾಲವಾದ ಬಳಿಕವೂ ಮುಂದುವರೆದಿರುತ್ತವೆ (ಪ್ರಕಟನೆ 14:13). ಅವುಗಳು ಹೀಗೆ ಹೇಳುತ್ತವೆ, "ನಾನು ನಂಬಿಕೆಯಿಂದ ರಕ್ಷಿಸಲ್ಪಟ್ಟೆನು. ಇಬ್ರಿಯರೇ, ನೀವು ರಕ್ಷಿಸಲ್ಪಡಬೇಕೆಂದು ಬಯಸಿದರೆ, ನೀವು ನನ್ನಂತೆಯೇ ನಂಬಿಕೆಯಿಂದ ನಡೆದುಕೊಳ್ಳಬೇಕಾಗುವದು." ವಾಸ್ತವದಲ್ಲಿ, ಒಬ್ಬ ವ್ಯಕ್ತಿಯು ತಾನು ಜೀವಂತವಾಗಿದ್ದ ಕಾಲಕ್ಕಿಂತಲೂ ತಾನು ಮರಣಿಸಿದ ಬಳಿಕ ಹೆಚ್ಚಾಗಿ "ಮಾತಾಡಬಹುದಾಗಿದೆ," ಯಾಕೆಂದರೆ ಆತನು ಬದುಕಿದ್ದ ಮುಂಚೆಗಿಂತಲೂ ಆತನು ಸತ್ತ ಬಳಿಕವಷ್ಟೇ ಆತನ ಜೀವನ ಹಾಗೂ ಗುಣಸ್ವಭಾವಗಳ ಬಗ್ಗೆ ಇತರರು ಹೆಚ್ಚು ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಆತನ ಮಾದರಿಯುಳ್ಳ ನಂಬಿಕೆಯ ಮೂಲಕ, ಹೇಬೆಲನು ಶಾಸ್ತ್ರಗಳಲ್ಲಿ ಪ್ರಕಟನೆಯ ಮೂಲಕ ಈಗಲೂ ಇಪ್ಪತ್ತೊಂದನೆಯ ಶತಮಾನದ ಜನರೊಂದಿಗೆ ಮಾತಾಡುತ್ತದೆ, ತಾನು ಮಾಡಿದಂತೆಯೇ ತಂದೆಯ ಚಿತ್ತಕ್ಕೆ ವಿಧೇಯರಾಗುವಂತೆ ನಮಗೆ

ಬುದ್ಧಿವಾದ ಹಾಗೂ ಪ್ರೋತ್ಸಾಹವನ್ನು ನೀಡುತ್ತಾನೆ. ಮರಣದಲ್ಲಿ ಸಹ ಸತ್ಯತೆಯು ಸ್ಥಾಪಿಸಲ್ಪಡುವದು ಮತ್ತು ನ್ಯಾಯವು ಸಿಕ್ಕುವದು ಎಂಬ ಭರವಸೆಯನ್ನು ಆತನು ಕೊಡುತ್ತಾನೆ, ಹೀಗೆ ದೇವರು ಎಲ್ಲಾ ಕಾರ್ಯಗಳನ್ನು ಹಿತಕ್ಕಾಗಿ ಅನುಕೂಲ ಮಾಡುತ್ತಾನೆಂಬುದು ಸ್ಪಷ್ಟವಾಗುತ್ತದೆ (ನೋಡಿ ರೋಮಾ 8:28). ಹೇಬೆಲನ ರಕ್ತವು ಈಗಲೂ ಭೂಮಿಯಿಂದ ಕೂಗುತ್ತದೆ (ನೋಡಿರಿ ಆದಿಕಾಂಡ 4:10). ಆ ಕೂಗುಗಳಿಗೆ ನ್ಯಾಯತೀರ್ಪಿನ ದಿನದಂದು ಪೂರ್ಣವಾಗಿ ಉತ್ತರ ಸಿಕ್ಕುವದು.

ಯೇಸುವಿನ ರಕ್ತವು "ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುತ್ತದೆ" (ಇಬ್ರಿಯ 12:24), ಯಾಕೆಂದರೆ ಆತನು ರಕ್ತವು "ಈಗ ಕ್ಷಮಾಪಣೆಯು ಸಾಧ್ಯವಾಗಿದೆ" ಎಂದು ಕೂಗುತ್ತದೆ. ನ್ಯಾಯಕ್ಕಾಗಿ ಮೊರೆಯಿಡುವ ಹೊಸ ಒಡಂಬಡಿಕೆಯ ರಕ್ತಸಾಕ್ಷಿಗಳೊಂದಿಗೆ ಹೇಬೆಲನು ಕೂಡಿಕೊಳ್ಳುತ್ತಾನೆ, ಅದು ರಕ್ತಸಾಕ್ಷಿಗಳ ಪಾತ್ರವು ಸಂಪೂರ್ಣವಾದಾಗಷ್ಟೇ ಬರುವದೆಂದು ಮಾತ್ರವೇ ತಿಳುಕೊಳ್ಳುತ್ತಾನೆ (ಪ್ರಕಟನೆ 6:9-11).

**ವಚನ 5. ಹನೋಕ**ನ ಕುರಿತಾದ ಕ್ಲುಪ್ತವಾದ ವಿವರವು ಆದಿಕಾಂಡ 5:21-24ರಲ್ಲಿ ಸಿಕ್ಕುತ್ತದೆ; 24ನೇ ವಚನವು ನಮ್ಮ ವಾಕ್ಯಭಾಗದಲ್ಲಿ ಉಲ್ಲೇಖಿಸಲ್ಪಟ್ಟಿದೆ: **ಅವನನ್ನು ದೇವರು ತೆಗೆದುಕೊಂಡು ಹೋದದದರಿಂದ ಅವನು ಯಾರಿಗೂ ಸಿಕ್ಕಲಿಲ್ಲ.** ಹನೋಕನು ಒಬ್ಬ ಪ್ರವಾದಿಯಾಗಿದ್ದನೆಂದು ಯೂದನು 14ನೇ ವಚನವು ನಮಗೆ ಹೇಳುತ್ತದೆ. ಆತನು ನೋಹನ ರೀತಿಯಲ್ಲಿ ಒಬ್ಬ ನೀತಿಯ ಬೋಧಕನಾಗಿದ್ದಿರಬಹುದು (2 ಪೇತ್ರ 2:5). ಆತನು ತನ್ನ ಮಗನಾದ ಮೆತೂಷೆಲಹನ ಜನನದ ನಂತರ ದೇವರೊಂದಿಗೆ ನಡೆದನು ಎಂದು ಆದಿಕಾಂಡವು ತಿಳಿಯಪಡಿಸುತ್ತದೆ. ಅನೇಕ ವ್ಯಕ್ತಿಗಳು ಒಂದು ಮಗುವಿನ ಜನನದ ನಂತರವಷ್ಟೆ ದೇವರ ಸಂಗಡ ನಡೆಯುವದಕ್ಕೆ ಆರಿಸಿಕೊಂಡರು; ಆ ಅಮೂಲ್ಯವಾದ ವರವು ದೇವರ ಕಡೆಗೆ ತನಗಿರುವ ಪೂರ್ಣ ಕರ್ತವ್ಯ ಮತ್ತು ಜವಾಬ್ದಾರಿಕೆಯನ್ನು ಗ್ರಹಿಸಿಕೊಳ್ಳುವಂತೆ ಮಾಡುತ್ತದೆ. ತನ್ನ ಮಗುವನ್ನು ಹೋಗತಕ್ಕ ಮಾರ್ಗದಲ್ಲಿ ಬೆಳೆಸುವದಕ್ಕೆ ತನ್ನ ಸಾಮರ್ಥ್ಯವನ್ನು ಮೀರಿ ಸಹಾಯದ ಅಗತ್ಯವಿದೆ ಎಂಬುದನ್ನು ಅರಿತುಕೊಳ್ಳಲಾರಂಭಿಸುವನು (ಜ್ಞಾನೋಕ್ತಿ 22:6).

ದೇವರ ಸಂಗಡ ತಾನು ನೀತಿವಂತಿಕೆಯಿಂದ ನಡೆದದ್ದರ ಕಾರಣದಿಂದ, ಹನೋಕನು **ಮರಣ**ವನ್ನು ಅನುಭವಿಸದ ರೀತಿಯಲ್ಲಿ ಭೂಮಿಯಿಂದ ಪರಲೋಕಕ್ಕೆ ಒಯ್ಯಲ್ಪಟ್ಟನು. (ಇದು ಆತನ ಹಾಗೂ ಎಲೀಯನ ವಿಷಯದಲ್ಲಿ ಮಾತ್ರವೇ ಸಂಭವಿಸಿತು; 2 ಅರಸು 2:1, 11.) ಇದು ನಿಜವಾದ "ಎತ್ತಿಕೊಳ್ಳಲ್ಪಡುವಿಕೆ" ಆಗಿತ್ತು, ಯಾಕೆಂದರೆ ಆತನು **ಒಯ್ಯಲ್ಪಟ್ಟನು** (μετατίθημι, *metatithēmi*). ("ಒಯ್ಯಲ್ಪಟ್ಟನು" ಎಂಬುದು ಲ್ಯಾಟಿನ್ ಪದದ ಅರ್ಥವಾಗಿದ್ದು ಅದರಿಂದಲೇ "ಎತ್ತಲ್ಪಡುವಿಕೆ" ಎಂಬುದು ಬಂದಿರುತ್ತದೆ.) ಇಬ್ರಿಯರಿಗೆ ಪತ್ರಿಕೆಯ ಲೇಖಕನು ಆಗಾಗ ಉಲ್ಲೇಖನ ಮಾಡುವ LXX ಇದನ್ನು ಆದಿಕಾಂಡ 5:24ರಲ್ಲಿ "ತಕ್ಕೊಂಡದ್ದರಿಂದ" ಎಂದು ಸೂಚಿಸುತ್ತದೆ. ಹನೋಕನು ಕೇವಲ "ಬದಿಗಳನ್ನು ಬದಲಿಸಿದನು," ಶಾರೀರಿಕದಿಂದ ಆತ್ಮೀಕಕ್ಕೆ ಸಾಗಿದನು, ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ, ಅಥವಾ ಐಹಿಕದಿಂದ ಪರಲೋಕಕ್ಕೆ ಸಾಗಿದನು.

ಅಪೊಸ್ತಲರ ಕೃತ್ಯಗಳು 7:16ರಲ್ಲಿ ಯಾಕೋಬನ ಮೃತದೇಹವನ್ನು ಶೇಕೆಮಿಗೆ ಒಯ್ಯಲ್ಪಡುವದನ್ನು ಸೂಚಿಸುವದಕ್ಕೆ "ತೆಗೆದುಕೊಂಡು ಹೋದರು" ಎಂಬ ಅದೇ ಪದವು ಬಳಸಲ್ಪಟ್ಟಿದೆ. ಗಲಾತ್ಯ 1:6ರಲ್ಲಿ ಪೌಲನು ಗಲಾತ್ಯದವರು ಸಿದ್ಧಾಂತಿಕ ನಂಬಿಕೆಗಳನ್ನು ಏಕಾಏಕಿ ಬದಲಿಸಿಕೊಂಡದ್ದನ್ನು ಸೂಚಿಸುವದಕ್ಕೆ ಈ ಪದವನ್ನು ಬಳಸುತ್ತಾನೆ (ಅವರು ಒಮ್ಮೆಲೇ ದೋಷಪೂರಿತ ಬೋಧನೆಯಲ್ಲಿ ಎತ್ತಿಕೊಳ್ಳಲ್ಪಟ್ಟರೋ ಅಥವಾ ಒಯ್ಯಲ್ಪಟ್ಟರೋ ಎಂಬಂತೆ). ಈ

ಪದವು ಇಬ್ರಿಯ 7:12ರಲ್ಲಿ ಧರ್ಮಶಾಸ್ತ್ರದ ಬದಲಾವಣೆಯ ವಿಷಯವಾಗಿ ಸಹ ಬಳಸಲ್ಪಟ್ಟಿದೆ.

ಎಲೀಯನು ಹೊರಟು ಹೋಗುವದನ್ನು ನೋಡುವಂತೆ ಎಲೀಷನಿಗೆ ಅನುಮತಿ ಕೊಡಲ್ಪಟ್ಟಿದ್ದ ಪ್ರಕಾರವೇ, ಹನೋಕನು ಹೋಗುವದನ್ನು ನೋಡುವದಕ್ಕೆ ಅವನ ಮಿತ್ರನೊಬ್ಬನು ನೋಡಿದನೋ ಎಂದು ನಾವು ಚಕಿತಗೊಳ್ಳುತ್ತೇವೆ (2 ಅರಸು 2:1-14). ಬೇರೆಯವರು ಅನಂತರದಲ್ಲಿ ಎಲೀಯನ ದೇಹಕ್ಕಾಗಿ ಹುಡುಕಾಡಿದಂತೆಯೇ (2 ಅರಸು 2:17), ಕೆಲವರು ಹನೋಕನ ದೇಹಕ್ಕಾಗಿ ಶೋಧ ಮಾಡಿದರೋ? "ಯಾರಿಗೂ ಸಿಗಲಿಲ್ಲ" ಎಂಬ ಮಾತಿನಿಂದ ಅದು ಸೂಚಿಸಲ್ಪಡಬಹುದಾಗಿದೆ. ಹನೋಕನು ಜೀವನದ ಮತ್ತೊಂದು ಬದಿಗೆ ಕರೆದೊಯ್ಯಲ್ಪಟ್ಟಿದ್ದನು (ಅದನ್ನು *metatithēmi* ಎಂಬ ಪದವು ಸೂಚಿಸುತ್ತದೆ) ಮತ್ತು ಸಂಭಾವ್ಯವಾಗಿ ಆತನು ಯಾರಿಗೂ ಸಿಕ್ಕಲಿಲ್ಲ. TEVಯು "ಯಾರೂ ಆತನನ್ನು ಕಂಡು ಹಿಡಿಯುವದಕ್ಕಾಗಲಿಲ್ಲ" ಎಂದು ಭಾವಾನುವಾದಗೊಳಿಸುವ ಮೂಲಕ ಕೆಲವರು ಆತನ ದೇಹವನ್ನು ಹುಡುಕಾಡಿದರು ಎಂಬದನ್ನು ಸೂಚಿಸುತ್ತದೆ. ಆತನು ಎಲ್ಲಿಗೆ ಹೋದನೆಂಬುದನ್ನು ಕಂಡು ಹಿಡಿಯುವದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ, ಆದರೆ ಆತನು ಕಣ್ಮರೆಯಾಗುವ ಮುನ್ನ ಅನುದಿನವೂ ಯಾರೊಂದಿಗೆ ನಡೆದಾಡುತ್ತಿದ್ದನೆಂಬುದನ್ನು ಅವರು ಅರಿತಿದ್ದಲ್ಲಿ ಆತನು ಯಾವ ಸ್ಥಳಕ್ಕೆ ಹೋಗಿರುತ್ತಾನೆಂಬುದನ್ನು ತಿಳಿದುಕೊಳ್ಳುತ್ತಿದ್ದರು. ತಾನು ದೇವರೊಂದಿಗೆ ನಡೆದಾಡುತ್ತಾನೆ ಮತ್ತು ದೇವರು ತನ್ನೊಂದಿಗೆ ನಡೆದಾಡುತ್ತಾನೆ ಎಂಬುದನ್ನು ನಿಶ್ಚಯವಾಗಿಯೂ ಯಾರಾದರೊಬ್ಬರಿಗೆ ಹೇಳಿರುತ್ತಾನೆ.

5ನೇ ವಚನವು ಆತನ "ನಂಬಿಕೆಯು ಆತನನ್ನು ಕರೆದೊಯ್ಯಿತು" ಎಂದು ಹೇಳುವದಿಲ್ಲ. ಬದಲಾಗಿ, ಆಗ ಭೂಮಿಯ ಮೇಲಿದ್ದ ಎಲ್ಲರಲ್ಲಿಯೂ, ಈ ಮನುಷ್ಯನು ಮರಣದ ಕಣಿವೆಯನ್ನು ದಾಟದೆಯೇ ಪರಲೋಕಕ್ಕೆ ಪ್ರವೇಶಿಸುವ ಭಾಗ್ಯ ಹೊಂದುವನೆಂದು ದೇವರು ಪ್ರೀತಿಯ ಕೃಪಾಕಟಾಕ್ಷದಿಂದ ನಿರ್ಧರಿಸಿದ್ದನು.

ಹನೋಕನು ದೇವರೊಂದಿಗೆ ಇರುವದಕ್ಕೆ ಒಯ್ಯಲ್ಪಡುವ ಮುನ್ನ ಆತನ ಆತ್ಮೀಕ ನಡೆಯ ವಿಷಯದಲ್ಲಿ ಒಂದು ಶ್ಲಾಘನೀಯ ಪ್ರಕಟನೆಯನ್ನು ಪಡೆದುಕೊಂಡನು. ನಮಗೆ ಇದು ಆತನ ನಂಬಿಕೆಯುಳ್ಳ ನೀತಿಯ ಜೀವಿತಕ್ಕೆ ಪುರಾವೆಯಾಗಿ ಇರುತ್ತದೆ.[30] ಆತನ ಮಗನಾದ ಮೆತೂಷೆಲಹನಿಗೆ ಆ ಪ್ರಕಟನೆಯ ಕುರಿತು ಹೇಳಲ್ಪಟ್ಟಿತೋ, ಅದರ ಕಾರಣದಿಂದ ಆತನು ತನ್ನ ಇಡೀ ಜೀವಿತವನ್ನು ಒಂದು ನೀತಿಯ ರೀತಿಯಲ್ಲಿ ಜೀವಿಸುವಂತೆ ಮಾಡಿತ್ತೋ? ಆತನು ಅಂಥ ಜ್ಞಾನಕ್ಕನುಗುಣವಾಗಿ ಜೀವಿಸಿದ್ದರೆ, ಆತನು ಶಾಸ್ತ್ರದಲ್ಲಿ ವಯಸ್ಸು ದಾಖಲಿಸಲ್ಪಟ್ಟಿರುವ ಬೇರೆ ಯಾವದೇ ವ್ಯಕ್ತಿಗಿಂತಲೂ ದೀರ್ಘಾಯುಷಿಯಾಗಿ (969 ವರ್ಷಗಳು; ಆದಿಕಾಂಡ 5:27) ಬದುಕುವಂತೆ ದೇವರು ಆತನನ್ನು ಅನುಮತಿಸಿದಕ್ಕೆ ಅದು ಕಾರಣವಾಗಿರಬಹುದಾಗಿದೆ. ಹನೋಕನು ತನ್ನ ಮಗನಿಗೆ ಪ್ರಟಕಗೊಳಿಸಿದ ಕಾರ್ಯವು ಆತನು ಎಲ್ಲಿಗೆ ಹೋಗತಕ್ಕದ್ದು ಮತ್ತು ತಾನು ಎಲ್ಲಿಗೆ ಹೋದನೆಂಬುದನ್ನು ಸೂಚಿಸಿರಬಹುದಾಗಿದೆ. ಕ್ರಿಸ್ತನ ಎರಡನೆಯ ಬರೋಣದಲ್ಲಿ, ಬದುಕಿರುವ ನೀತಿವಂತರು ಅದೇ ವಿಧದಲ್ಲಿಯೇ ಒಯ್ಯಲ್ಪಡುವರು (1 ಕೊರಿಂಥ 15:51, 52; 1 ಥೆಸಲೋನಿಕ 4:13-18).

ಹನೋಕನು ತಾನು ಒಯ್ಯಲ್ಪಡುವ ಮುನ್ನ ದೇವರ ಸಂಗಡ ಅನ್ಯೋನ್ಯತೆಯಲ್ಲಿದ್ದನೆಂದು ಶಾಸ್ತ್ರವು ಹೇಳುತ್ತದೆ. ಒಬ್ಬನು ನಂಬಿಕೆಯ ಮೂಲಕ, ಬೆಳಕಿನಲ್ಲಿ ನಡೆಯುವ ಮೂಲಕವಾಗಿ ಈ ವಿಧವಾದ ಅನ್ಯೋನ್ಯತೆಯನ್ನು ಹೊಂದಿರಬೇಕು, ಇಲ್ಲವಾದರೆ ಆತನು ಮಹಿಮೆಯಲ್ಲಿ ಕ್ರಿಸ್ತನನ್ನು ಸಂಧಿಸುವದಕ್ಕೆ ಮಾರ್ಪಡಿಸಲ್ಪಡಲಾರನು (1 ಯೋಹಾನ 1:6, 7; 3:2-6).

ಹನೋಕನು ಆಶ್ಚರ್ಯಕರವಾಗಿ ಮರಣದಿಂದ ತಪ್ಪಿಸಲ್ಪಟ್ಟಿದ್ದಕ್ಕೆ ಕಾರಣವು ಆತನ

ನಂಬಿಕೆಯೇ ಆಗಿತ್ತು. ಇಬ್ರಿಯ 11:6ನೇ ವಚನವು ಆ ನಂಬಿಕೆಯು ಅವಶ್ಯಕವೆಂಬುದನ್ನು ವಿವರಿಸುತ್ತದೆ. ಆತನ ನಂಬಿಕೆ ಮತ್ತು ವಿಧೇಯತೆಯು **ದೇವರಿಗೆ ಮೆಚ್ಚಿಕೆ** ಆಗಿದ್ದವು.

**ವಚನ 6.** ನಂತರ, ಲೇಖಕನು ಹನೋಕನ ನಂಬಿಕೆಯು ಏಕೆ ಆತನನ್ನು ದೇವರ ಸಂಗಡ ಅನ್ಯೋನ್ಯತೆಗೆ ಮತ್ತು ಪರಲೋಕಕ್ಕೆ ಒಯ್ಯಲ್ಪಡುವ ಸ್ಥಿತಿಗೆ ತಂದಿತು ಎಂಬುದನ್ನು ವಿವರಿಸುತ್ತಾನೆ: **ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ.** ದೇವರಲ್ಲಿ ನಂಬಿಕೆಯನ್ನಿಡದೆ ಯಾವನೂ ಎಂದೂ ಆತನನ್ನು ಮೆಚ್ಚಿಸಿರುವದಿಲ್ಲ. ಹನೋಕನು ಅತ್ಯಧಿಕವಾಗಿ ದೇವರನ್ನು ಮೆಚ್ಚಿಸಿದನು, ಯಾಕೆಂದರೆ ಆತನ ನಂಬಿಕೆಯು ಕೇವಲ ಮಾನಸಿಕ ಸಮ್ಮತಿಯನ್ನೂ ದಾಟಿ ಒಂದು ಪೂರ್ಣ ಹಾಗೂ ವಿಶ್ವಾಸವಿಡುವ ವಿಧೇಯತೆಯನ್ನು ಹೊಂದಿತ್ತು. ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಸಿಕ್ಕುವ "ನಂಬಿಕೆ" ಯಲ್ಲಿ ಸೂಚಿಸಲ್ಪಟ್ಟಿರುವ ಸಾರಭೂತ ಅಂಶವಾಗಿದೆ. ನಂಬಿಕೆಯಿಲ್ಲದೆ, ಆತನನ್ನು ಮೆಚ್ಚಿಸುವದು "ಅಸಾಧ್ಯ" – ಅದು ಕಠಿಣವೆಂದು ಎಂಬುದು ಇಲ್ಲಿ ಅರ್ಥವಲ್ಲ, ಆದರೆ ಅದಕ್ಕೆ ವಿನಾಯಿತಿಗಳೇ ಇರುವದಿಲ್ಲ ಎಂದಾಗಿದೆ. ಇದೊಂದು ರೀತಿಯಾದ ಒಬ್ಬ "ದೇವರ"ಲ್ಲಿ, "ಮೇಲಿರುವ ಮನುಷ್ಯನೊಬ್ಬನು" ಅಥವಾ ಒಬ್ಬ "ಮಹಾನ್ ಆತ್ಮ" ನಲ್ಲಿ ನಂಬಿಕೆಯಂದಲ್ಲ. ಇದು ಒಬ್ಬನೇ ಸತ್ಯ ದೇವರಲ್ಲಿ ಇಡುವ ನಂಬಿಕೆಯಾಗಿದೆ! ಅದು ಪ್ರವಾದಿಗಳ ಮೂಲಕ ಮಾತಾಡಿದ ಮತ್ತು ಈಗ ನಮ್ಮೊಂದಿಗೆ ಕ್ರಿಸ್ತನ ಮೂಲಕ ಮಾತಾಡುವ ದೇವರಲ್ಲಿ ಇಡುವ ನಂಬಿಕೆಯಾಗಿದೆ (1:1, 2).

ದೇವರನ್ನು ಮೆಚ್ಚಿಸಬೇಕಾದರೆ, ಒಬ್ಬನು ಎರಡು ಸತ್ಯಗಳನ್ನು **ನಂಬುವದು** ಅವಶ್ಯ: (1) **ದೇವರು ಇದ್ದಾನೆ** ಮತ್ತು (2) ಆತನು **ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ.** ಈ ಎರಡನೆಯ ಯೋಚನೆಯಲ್ಲಿ ದೇವರ ಸಾರಭೂತವಾದ ಒಳ್ಳೇತನದಲ್ಲಿ ನಂಬಿಕೆಯನ್ನು ಒಳಗೊಂಡಿರಬೇಕು, ಅದು ಅನೇಕರಿಂದ ಸಂಶಯಿಸಲ್ಪಡುತ್ತದೆ, ಮತ್ತು ಸಂದೇಹವಾದಕ್ಕೆ ಕೊಡಲ್ಪಡುವ ಕಾರಣವಾಗಿರುತ್ತದೆ. ನಾವು ಒಂದು ಅಂತಿಮವಾದ ಪ್ರತಿಫಲದಲ್ಲಿ ನಂಬಿಕೆಯಿಡುವದಾದರೆ ಮಾತ್ರವೇ ನಾವು ದೇವರನ್ನು "ಅತ್ಯಾಸಕ್ತಿಯಿಂದ ಹುಡುಕುವೆವು" (NIV). "ಹುಡುಕುವ" (ἐκζητέω, *ekzēteō*) ಎಂಬುದರ ಅರ್ಥವು "ಹುಡುಕಿ ಕಂಡುಕೋ, ಶೋಧ ಮಾಡು" ಎಂದಾಗಿರುತ್ತದೆ.[31] ಪ್ರತಿಫಲವು ಖಂಡಿತವಾಗಿಯೂ ವಾಹನಗಳನ್ನಾಗಲಿ, ಮನೆಗಳನ್ನು ಮತ್ತು ಇತರ ಸ್ವತ್ತುಗಳನ್ನಾಗಲಿ ಪಡೆದುಕೊಳ್ಳುವದರಿಂದ ಸಿಕ್ಕುವದಿಲ್ಲ. ದೇವರನ್ನು ಕಂಡುಕೊಳ್ಳುವ ನಮ್ಮ ಪ್ರತಿಫಲವು ಪೂರ್ಣವಾಗಿ ನಿತ್ಯತ್ವದಲ್ಲಿಯೇ ಸಾಧಿಸಿಕೊಳ್ಳಲ್ಪಡತಕ್ಕದ್ದು. ಅಲ್ಲಿಯ ತನಕ, ಪರಿಸ್ಥಿತಿಗಳು ಏನೇ ಆಗಿದ್ದರೂ ಆತನು ಒದಗಿಸುತ್ತಾನೆಂಬ ಭರವಸದೊಂದಿಗೆ ಸಾಗಿ ಇರಬಲ್ಲೆವು (ರೋಮಾ 8:28). ಇದು ಆತನನ್ನು ಶ್ರದ್ಧೆಯಿಂದ ಹುಡುಕುವವನಿಗೆ ವಾಗ್ದಾನ ಮಾಡಲ್ಪಟ್ಟಿದೆ, ಯಾಕೆಂದರೆ ಆ ವಿಧವಾಗ ವ್ಯಕ್ತಿಯೇ ಅದನ್ನು ಕಂಡುಕೊಳ್ಳುವನು.

ಇಬ್ರಿಯರಿಗೆ ಪತ್ರಿಕೆಯಲ್ಲಿ "ನಂಬಿಕೆ" ಎಂದರೆ ದೇವರನ್ನು ಕಂಡುಕೊಳ್ಳಬೇಕೆಂಬ ಉತ್ಸುಕವಾದ ಹಂಬಲವನ್ನು ಹೊಂದುವಂತೆ ಮಾಡುವಂತಹ ವಿಶ್ವಾಸ ಎಂದಾಗಿದೆ. "ದೇವರ ಬಳಿಗೆ *ಬರುವ*" ವ್ಯಕ್ತಿಯು ಆತನ ಚಿತ್ತದ ಮೇರೆಗೆ ಜೀವಿಸುವವನು ಮತ್ತು "ಶಾರೀರಭಾವ"ದ ಪ್ರಕಾರ ಜೀವಿಸುವವನಲ್ಲ, ಯಾಕೆಂದರೆ ಇಂತಹ ವ್ಯಕ್ತಿಯು "ದೇವರನ್ನು ಮೆಚ್ಚಿಸುವವನಲ್ಲ" (ರೋಮಾ 8:8). ಈ ವಿಧವಾದ ನಂಬಿಕೆಯು ದಾವೀದನು ಅಪೇಕ್ಷಿಸಿದಂತಹ ನಂಬಿಕೆಯಾಗಿದೆ: "ನಾನು ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳಲು [ಹುಡುಕಿದೆನು] ಆತನು ಸದುತ್ತರವನ್ನು ಕೊಟ್ಟು ಎಲ್ಲಾ ಭೀತಿಯಿಂದ ನನ್ನನ್ನು ತಪ್ಪಿಸಿದನು" (ಕೀರ್ತನೆ 34:4).

ಕೆಲವರು ನಂಬಿಕೆಯಿಂದ ತಪ್ಪಿಹೋಗಿರುವವರ ಕುರಿತು ಮಾತಾಡುತ್ತಾ ಹೀಗೆ

ಹೇಳುತ್ತಾರೆ, "ಅವರು ನಂಬಿದರು ಆದರೆ ಅವರನ್ನು ವಿಶ್ವಾಸವೇ ಇರಲಿಲ್ಲ," ಅಂಥ ಯೋಚನೆಯು 6ನೇ ವಚನದಲ್ಲಿ ತಿರಸ್ಕರಿಸಲ್ಪಟ್ಟಿದೆ. "ನಂಬಿಕೆ" ಎಂಬುದಕ್ಕೆ ಗ್ರೀಕ್ ಪದವು (πίστις, *pistis*) ಆಂಗ್ಲದಲ್ಲಿ "ನಂಬಿಕೆ" ಮತ್ತು "ವಿಶ್ವಾಸ" ಎರಡೂ ರೀತಿಯಲ್ಲಿ ಅನುವಾದಿಸಲ್ಪಟ್ಟಿದೆ. ಆಂಗ್ಲದಲ್ಲಿ ಎರಡು ಪದಗಳಿದ್ದರೆ ಗ್ರೀಕ್ ಭಾಷೆಯಲ್ಲಿ ಒಂದೇ ಪದವಿರುತ್ತದೆ. ಈ ವಚನವು "ನಂಬಿಕೆಯಿಲ್ಲದೆ" ದೇವರನ್ನು ಮೆಚ್ಚಿಸುವದಕ್ಕೆ ಸಾಧ್ಯವಿಲ್ಲ ಎಂದು ಸುವ್ಯಕ್ತವಾಗಿ ಹೇಳುತ್ತದೆ, ಯಾಕೆಂದರೆ ಒಬ್ಬನು ವಿಶ್ವಾಸಿಸತಕ್ಕದ್ದು. ಆಂಗ್ಲ ಅನುವಾದಗಳು ವೈವಿಧ್ಯತೆಯಿರಲಿ ಎಂಬದಕ್ಕಾಗಿ ಮಾತ್ರವೇ ಎರಡು ಬೇರೆ ಬೇರೆ ಪದಗಳನ್ನು ಬಳಸುತ್ತವೆ. ವಿಶ್ವಾಸಿಸುವವನಲ್ಲಿ ನಂಬಿಕೆಯಿರುತ್ತದೆ. ಹೊಸ ಒಡಂಬಡಿಕೆಯಲ್ಲಿ "ವಿಶ್ವಾಸಿಗಳು" ಎಂದು ಓದುವದು "ನಂಬಿಕೆ" ಹೊಂದಿದವರೊಂದಿಗೆ ಗುರುತಿಸುವದು ಆಗಿರುತ್ತದೆ.[32] ಮೋಶೆಯ ನಂಬಿಕೆಯು ಆತನಿಗೆ "ಅದೃಶ್ಯವಾಗಿರುವಾತನನ್ನು" ನೋಡುವಂತೆ ಶಕ್ತಗೊಳಿಸಿತು (ವ. 27).

ಏಕೆ ಒಬ್ಬನು ದೇವರಲ್ಲಿ ನಂಬಿಕೆಯಿಡತಕ್ಕದ್ದು? ಕಾರಣಗಳಲ್ಲಿ ಇವುಗಳು ಇರುತ್ತವೆ: (1) ಆತನು ಸಮಸ್ತ ಕಾರ್ಯಗಳ ಸೃಷ್ಟಿಕರ್ತನಾಗಿದ್ದಾನೆ (ಆದಿಕಾಂಡ 1:1; ಯೋಹಾನ 1:3), ಮತ್ತು (2) ಆತನು ಸಮಸ್ತವನ್ನೂ ಉಂಟು ಮಾಡಿದನು ಮತ್ತು ಸಮಸ್ತವನ್ನೂ ತನ್ನ ಚಿತ್ತದೊಂದಿಗೆ ಸಾಮರಸ್ಯದಿಂದ ನಿರ್ವಹಿಸುತ್ತಾನೆ (ಎಫೆಸ 1:11). ಆತನ ಚಿತ್ತದೊಂದಿಗೆ ಸಾಮರಸ್ಯದಿಂದಿರುವ ಯಾವದೇ ಆಗಲಿ ಸರಿಯಾದದ್ದು, ಮತ್ತು ಆ ಚಿತ್ತವನ್ನು ಉಲ್ಲಂಘಿಸುವ ಯಾವದೇ ಆಗಲಿ ತಪ್ಪು ಆಗಿರುತ್ತದೆ. ದೇವರ ಚಿತ್ತಕ್ಕೆ ವಿರುದ್ಧವಾಗಿ ನಡೆಯುವ ಪ್ರತಿಯೊಬ್ಬ ವ್ಯಕ್ತಿಯು ವಿಶ್ವದಲ್ಲಿ ಅಂತಿಮ ಅಧಿಕಾರದ ಮೂಲನಾಗಿರುವಾತನಿಗೆ ವಿರುದ್ಧ ಒಬ್ಬ ಬಂಡಾಯಗಾರ ಆಗುತ್ತಾನೆ. ದೇವರಲ್ಲಿ ಮತ್ತು ಮನುಷ್ಯನಿಗೆ ನೀಡಿರುವ ಆತನ ಪ್ರಕಟನೆಯಲ್ಲಿ ನಂಬಿಕೆಯನ್ನು ಇಡುವ ಹೊರತು ಯಾವನೂ ದೇವರ ಚಿತ್ತಕ್ಕೆ ಸಾಮರಸ್ಯದಿಂದ ನಡೆದುಕೊಳ್ಳಬಲ್ಲನು? ನಂಬಿಕೆಯಲ್ಲಿ ದೇವರ ಬಳಿಗೆ ಬರಬೇಕಾದರೆ, ಒಬ್ಬನು ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು ಎಂಬ ಆಜ್ಞೆಗಳು ಸೇರಿದಂತೆ ಆತನ ಎಲ್ಲಾ ಆಜ್ಞೆಗಳಿಗೆ ಅಧೀನನಾಗತಕ್ಕದ್ದು (ಅಪೊಸ್ತಲರ ಕೃತ್ಯಗಳು 2:38; 3:19; ಮಾರ್ಕ 16:16). ಇಬ್ರಿಯರಿಗೆ ಪತ್ರಿಕೆಯಲ್ಲಿರುವ ನಿಜವಾದ ನಂಬಿಕೆಯು ತನ್ನ ವಿಧೇಯತೆಯ ಮೂಲಕ ತನ್ನ ನಂಬಿಕೆಯನ್ನು ತೋರ್ಪಡಿಸುವವನಿಗೆ ಸಂಬಂಧಿಸಿರುತ್ತದೆ, ಯಾಕೆಂದರೆ ವಿಧೇಯತೆಯಿಲ್ಲದೆ ಅದು ಕೇವಲ "ಜೀವವಿಲ್ಲದ" ನಂಬಿಕೆ ಮಾತ್ರವೇ ಆಗಿರುತ್ತದೆ (ಯಾಕೋಬ 2:17). ಈ ಆಜ್ಞೆಗಳು ನಂಬಿಕೆಯಿಲ್ಲದ ಯಾವದೇ ದೀಕ್ಷಾಸ್ನಾನವನ್ನು ಅನುರ್ಜಿತಗೊಳಿಸುತ್ತವೆ; ನಂಬಿಕೆಯಿಲ್ಲದೆ ವಿಧೇಯತೆಯನ್ನು ತೋರಬಹುದೆಂದು ಭಾವಿಸುವವರು ಸುಳ್ಳು ಹೇಳುವವರು, ನಿಷ್ಠೆಯಿಲ್ಲದವರು, ಮತ್ತು ಕೂಸುಗಳು ಆಗಿದ್ದಾರೆ.

"ಯಾವ ಧರ್ಮಪಿತ/ಧರ್ಮಮಾತೆಯಾಗಲಿ" ಒಂದು ಮಗುವಿನ ಪರವಾಗಿ ನಂಬಿಕೆಯಿಡುವದಕ್ಕಾಗಲಿ, ಮತ್ತೊಬ್ಬನ ಪರವಾಗಿ ಇನ್ನೊಬ್ಬನು ನಂಬಿಕೆಯಿಡುವದ ಕ್ಕಾಗಲಿ ಸಾಧ್ಯವಿಲ್ಲ. ವಿಧೇಯತೆಯ ಆರಂಭಿಕ ಹಂತದಲ್ಲಿ ಒಬ್ಬನ ನಂಬಿಕೆಯು ಎಷ್ಟು ಬಲವಾಗಿರಬೇಕು ಎಂಬುದನ್ನು ಹೇಳುವದು ದೇವರಿಗೆ ಸೇರಿದ್ದು, ಆದರೆ ಅದು ಖಂಡಿತವಾಗಿಯೂ ಒಬ್ಬನು "ಕಲಿಸಲ್ಪಟ್ಟ ಬೋಧನೆಗೆ" ಅಗತ್ಯವಾದ "ಹೃದಯದಿಂದ [ವಿಧೇಯನಾಗುವದಕ್ಕೆ]" ಬೇಕಾದಷ್ಟು ಬಲವಾಗಿರತಕ್ಕದ್ದು. ಬೈಬಲಾಧಾರಿತ ಸಿದ್ಧಾಂತಗಳನ್ನು ಅನುಸರಿಸುವದಕ್ಕೆ ಬೇಕಾಗುವಷ್ಟು ನಂಬಿಕೆಯುಳ್ಳವನೇ ನಿಜವಾದ ವಿಶ್ವಾಸಿಯಾಗಿದ್ದಾನೆ (ರೋಮಾ 6:17).

**ವಚನ 7. ನೋಹನ ನಂಬಿಕೆ**[ಯ] ಉದಾಹರಣೆಯು ತೋರಿಸುವದೇನೆಂದರೆ ದೇವರಲ್ಲಿ ನಂಬಿಕೆಯಿಟ್ಟಿರುವವನು ಆತನು ತಾನು ವಾಗ್ದಾನ ಮಾಡಿರುವದನ್ನು ನಡಿಸುತ್ತಾನೆಂದು, ಅದು

ಸಂಭವಿಸುತ್ತದೆಂಬುದಕ್ಕೆ ಸ್ವಲ್ಪವಾದ ಅಥವಾ ಯಾವದೇ ಪುರಾವೆ ಇಲ್ಲವಾದಾಗ್ಯೂ, ಅದನ್ನು ತಿಳಿದವನಾಗಿರುತ್ತಾನೆ ಎಂಬದೆ (ಆದಿಕಾಂಡ 6-9; ಯೆಹೆಜ್ಕೇಲ 14:12-14). ನೋಹನ ನಂಬಿಕೆಯು ನಿಜವಾಗಿಯೂ "ಕಣ್ಣಿಗೆ ಕಾಣದವುಗಳನ್ನು ನಿಜವೆಂದು" ತಿಳುಕೊಂಡ ನಂಬಿಕೆಯಾಗಿತ್ತು (ವ. 1). ಮೊದಲ ಎಚ್ಚರಿಕೆಯಿಂದ ಪ್ರಳಯವು ಬರುವ ತನಕ ನೂರ ಇಪ್ಪತ್ತು ವರ್ಷಗಳಾಗಿರಬಹುದಾಗಿದೆ (ಆದಿಕಾಂಡ 6:3). ಮನುಷ್ಯ ದೃಷ್ಟಿಕೋನದಿಂದ ಯೋಚಿಸುವದಾದರೆ, ನೀರಿನಿಂದ ದೂರದಲ್ಲಿ (ಹಾಗೆಯೇ ಇತ್ತೆಂದು ನಾವು ಊಹಿಸಿಕೊಳ್ಳುವ ಪ್ರಕಾರ) ಅಂತಹ ಬೃಹತ್ ನಾವೆಯನ್ನು, **ತನ್ನ ಮನೆಯವರ ಸಂರಕ್ಷಣೆಗಾಗಿ ನಾವೆಯನ್ನು** ಸಿದ್ಧಮಾಡುವವನಿಗೆ ಅದು ಮೂರ್ಖತನವೆಂದು ತೋರಿರಬಹುದು. ಆತನು ಜನಪ್ರಿಯ ಹಾಸ್ಯದ ವಸ್ತುವಾಗಿದ್ದನು, ಮತ್ತು ಆತನ ಕೆಲಸವು "ನೋಹನ ಹುಚ್ಚುಮಹಲು" ಎಂದು ಕರೆದಿರುವ ಸಾಧ್ಯತೆಯಿದೆ. ಹೇಗೂ, ದೇವರು ತನಗೆ ನೀಡಿದ್ದ ಪ್ರಕಟನೆಯಲ್ಲಿ ತನ್ನ ನಂಬಿಕೆಯನ್ನಿಟ್ಟಿದ್ದನು ಮತ್ತು ಪೂರ್ತಿಗೊಳ್ಳುವ ತನಕ ಆತನು ನಾವೆ ನಿರ್ಮಿಸುವದನ್ನು ಮುಂದುವರೆಸಿದನು.

ಪ್ರಳಯವು ನಮಗೊಂದು ಉದಾಹರಣೆಯಾಯಿತು. ಎಚ್ಚರಿಕೆಗಳನ್ನು ನೀಡಿದ್ದಾಗ್ಯೂ, ಅದು ಆಕಸ್ಮಿಕವಾಗಿತ್ತು ಮತ್ತು ಅನಿರೀಕ್ಷಿತವಾದ ಘಟನೆಯಾಗಿತ್ತು, ಅದೇ ರೀತಿಯಲ್ಲಿಯೇ ನ್ಯಾಯತೀರ್ಪಿಗಾಗಿ ಬರುವ ಯೇಸುವಿನ ಎರಡನೆಯ ಬರೋಣ ಸಹ ಆಗಿರಲಿದೆ (ಮತ್ತಾಯ 24:37-39; ಲೂಕ 17:26, 27). ನೋಹನನಿಗೆ **ಕಾಣದಿದ್ದ ಸಂಗತಿಗಳ ವಿಷಯವಾಗಿ** ಎಚ್ಚರಿಕೆಯನ್ನು ನೀಡಲಾಗಿತ್ತು, ಯಾಕೆಂದರೆ ಅಲ್ಲಿ ಬರಲಿದ್ದ ಪ್ರಳಯದ ಬಗ್ಗೆ ಯಾವದೇ ಶಾರೀರಿಕ ಪುರಾವೆಗಳಿರಲಿಲ್ಲ, ಮತ್ತು ಅದಕ್ಕೆ ಮುಂಚೆ ಯಾವದೇ ಪ್ರಮಾಣದಲ್ಲಿ ಪ್ರಳಯ ಅಥವಾ ಪ್ರವಾಹ ಸಂಭವಿಸಿರುವ ಸಾಧ್ಯತೆಯು ಇರಲಿಲ್ಲ. ನೋಹನು ತಾನು ಹೊಂದಿದ್ದ "ಪೂಜ್ಯಭಾವನೆಯ," ಅಥವಾ "ಭಕ್ತಿಯುಳ್ಳ," ಭಯದ ನಿಮಿತ್ತವಾಗಿ ದೇವರಿಗೆ ವಿಧೇಯನಾದನು. ದೈವಿಕ ಕೋಪದ ಬಗ್ಗೆ ಭಯ ಹೊಂದಿರುವದು ಖಂಡಿತವಾಗಿಯೂ ಒಂದು ಭಕ್ತಿಯ ಅಂಶವಾಗಿರುತ್ತದೆ.[33] ನೋಹನು ದೇವರ ಕಡೆಗೆ ಮತ್ತು ಆತನ ವಾಕ್ಯದ ಕಡೆಗೆ ಗಹನವಾದ ಗೌರವವನ್ನು ಹೊಂದಿದ್ದನು. **ಭಯಭಕ್ತಿ**, ಅಥವಾ "ಭಯವು" (KJV) ಎಂಬುದಕ್ಕಿರುವ ಪದವು εὐλαβέομαι (*eulabeomai*) ಎಂದಾಗಿದೆ. ಇದು ವಾಸ್ತವವಾದ ಭಯವೆಂಬ ಅರ್ಥವನ್ನು ಕೊಡಬಲ್ಲದು, ಅದು ಬರಲಿರುವ ಪ್ರಳಯದ ಬಗ್ಗೆ ಒಂದು ಸಹಜವಾದ ಪ್ರತಿಕ್ರಿಯೆ ಆಗಿರಬಲ್ಲದಾಗಿತ್ತು. ಅದರಲ್ಲಿ ಹೆದರಿಕೆಯು ಸೇರಿತ್ತೋ ಅಥವಾ ಇಲ್ಲವೋ, ನೋಹನ ಹೃದಯದಲ್ಲಿ ದೇವರ ಕಡೆಗೆ ಒಂದು ಪೂಜ್ಯಭಾವನೆಯ ಭಯವಿತ್ತು ಎಂಬದು ಸ್ಪಷ್ಟವಾಗಿರುತ್ತದೆ.

ನೋಹನು ತನ್ನ ನೀತಿಯಿಂದ **ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡ** ಪ್ರಕಾರವೇ, ನಿನವೆಯ ಜನರು ಯೋನನ ಮನವಿಗಳಿಗೆ ಸ್ಪಂದಿಸಿದಾಗ ಆ ಪಟ್ಟಣವು ಅದನ್ನೇ ಮಾಡಿತು. ಅವರ ವಿಧೇಯತೆಯು, ತಕ್ಕ ಕಾಲದಲ್ಲಿ ಯೇಸುವಿನ ಮಾತುಗಳನ್ನು ಕೇಳಿಸಿಕೊಂಡ ಅವಿಶ್ವಾಸಿಗಳಿಗೆ ಅಪರಾಧಿಗಳೆಂದು ತೀರ್ಪು ಮಾಡುವರು (ಮತ್ತಾಯ 12:41, 42). ವಾಸ್ತವದಲ್ಲಿ, ಪ್ರತಿಯೊಬ್ಬ ನಂಬಿಗಸ್ತನಾದ ವಿಶ್ವಾಸಿಯು ನಂಬಿಕೆಯಲ್ಲಿ ವಿಧೇಯರಾಗದವರನ್ನು ಅಪರಾಧಿಗಳೆಂದು ನಿರ್ಣಯಿಸುವವರಾಗಿದ್ದಾರೆ, ಅವರು ಸಹ "ಇಕ್ಕಟ್ಟಾದ ಬಾಗಲ" ಮೂಲಕ ಪ್ರವೇಶಿಸುವ ಬಯಕೆಯನ್ನು ಹೊಂದಿದ್ದರೆ ಅವರು ಸಹ ನಂಬಿಕೆಯಿಟ್ಟು ವಿಧೇಯರಾಗಬಹುದಿತ್ತೆಂಬುದನ್ನು ಸಾಭಿತುಗೊಳಿಸುವವ ರಾಗಿದ್ದಾರೆ. ನಾವು ಆ ದಾರಿಯಲ್ಲಿ ಪ್ರವೇಶಿಸುವದಕ್ಕೆ "ಸಕಲ ಪ್ರಯತ್ನವನ್ನೂ ಮಾಡಬೇಕು" (ನೋಡಿರಿ ಲೂಕ 13:23, 24; NIV).

**ದೈವೋಕ್ತಿಯನ್ನು ಹೊಂದಿ** (ದೇವರಿಂದ ಎಚ್ಚರಿಸಲ್ಪಟ್ಟು) ಎಂಬುದು χρηματίζω

(*chrēmatizō*) ಎಂಬ ಪದವನ್ನು ಬಳಸುವ ಇನ್ನೊಂದು ಪದಗುಚ್ಛವಾಗಿದೆ, ಅದು ಈ ವಾಕ್ಯಭಾಗದಲ್ಲಿ "ದೈವಿಕವಾಗಿ ಕರೆಯಲ್ಪಟ್ಟ" ಎಂಬ ಸ್ಪಷ್ಟವಾದ ಅರ್ಥವನ್ನು ಕೊಡುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 11:26) ಅಥವಾ "ದೈವಿಕವಾಗಿ ಎಚ್ಚರಿಸಲ್ಪಟ್ಟು" ಎಂದಾಗಿರುತ್ತದೆ (ನೋಡಿರಿ ಇಬ್ರಿಯ 8:6). ಸ್ವತಃ ಈ ಎಚ್ಚರಿಕೆಯೇ ನೋಹನ ನೀತಿವಂತಿಕೆಗೆ "ಸಾಕ್ಷಿ" ಅಥವಾ ಸಾಕ್ಷ್ಯ ಆಗಿತ್ತು. ಇಲ್ಲಿ ಆಗಲಿ, ಮತ್ತು ಬಹುಶಃ ಬೇರೆ ಸ್ಥಳಗಳಲ್ಲಾಗಲಿ, *chrēmatizō* ಎಂಬ ಪದವು ದೇವರಿಂದ ಯಾವದೋ ಒಂದು ಕಾರ್ಯದ ಬಗ್ಗೆ ಸಂದೇಶವೊಂದನ್ನು ಪಡಕೊಳ್ಳುವದು ಎಂದರ್ಥವಾಗಿದೆ ಎಂಬುದರಲ್ಲಿ ಅಷ್ಟೇನೂ ಸಂಶಯವೂ ಇರಲಾರದು. ಇದು ಸ್ಪಷ್ಟವಾದ ಬಳಿಕ, ಎಲ್ಲರೂ "ಕ್ರೈಸ್ತರು" ಎಂದಷ್ಟೆ "ಕರೆಯಲ್ಪಡ" ಬೇಕು ಯಾಕೆಂದರೆ ಇದು "ದೈವಿಕವಾಗಿ ಕೊಡಲ್ಪಟ್ಟ" ಬಿರುದು ಆಗಿತ್ತು. ನೋಹನು "ಪೂಜ್ಯಭಾವನೆಯಿಲ್ಲಿ" ಅಥವಾ "ಭಯಭಕ್ತಿಯಿಂದ" ಪೂರ್ಣ ಹಾಗೂ ಸಂಪೂರ್ಣ ವಿಧೇಯತೆಯಲ್ಲಿ ಪ್ರತಿಕ್ರಿಯಿಸಿದನು. ಆದಿಕಾಂಡ 6:22 ಹೀಗೆ ಹೇಳುತ್ತದೆ, "ದೇವರು ಅಪ್ಪಣೆ ಕೊಟ್ಟ ಪ್ರಕಾರವೇ ನೋಹನು ಮಾಡಿದನು." ಈತನ ವಿಧೇಯತೆಯು ಆತನ ನಂಬಿಕೆಯನ್ನು ತೋರ್ಪಡಿಸುವಿಕೆ ಆಗಿತ್ತು, ಮತ್ತೊಂದು ಸಾರಿ ಇಬ್ರಿಯರಿಗೆ ಪತ್ರಿಕೆಯಲ್ಲಿ ನಂಬಿಕೆಯು ವಿಧೇಯತೆಯನ್ನು ಒಳಗೊಂಡಿರುತ್ತದೆಂಬುದನ್ನು ತೋರಿಸಲ್ಪಡುತ್ತದೆ.

ಆತನ ವಿಧೇಯತೆಯ ಮೂಲಕ ಆತನು "ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿದನು," ವಿಶ್ವಾಸರ್ಹ ದೇವರಲ್ಲಿ ನಂಬಿಕೆಯಿಂದ ಜೀವಿಸುವದಕ್ಕೆ ಸಾಧ್ಯವೆಂಬುದನ್ನು ದೃಷ್ಟಾಂತ ಪಡಿಸುತ್ತಾನೆ. ಆತನು ಅದನ್ನು ಮಾಡುವದಕ್ಕೆ ಶಕ್ತನಾಗಿರುವದಾದರೆ, ಆತನು ಯಾರಿಗೆ ಬೋಧಿಸಿದನೋ ಅವರಿಗೆ ಸಾಧ್ಯವಾಗಿರಬಹುದಿತ್ತು (2 ಪೇತ್ರ 2:5). ನೋಹನು ಅದು ಪಾಪಮಯ ಮತ್ತು ಕೆಟ್ಟದ್ದು ಆಗಿತ್ತೆಂದು ಆದರೆ ಆ ರೀತಿಯಲ್ಲಿ ಜೀವಿಸಬೇಕಾಗಿಲ್ಲ ಎಂಬುದನ್ನು ತೋರಿಸುವ ಮೂಲಕ ಅಪರಾಧಿಯೆಂದು ನಿರ್ಣಯಿಸಿದನು. ದೇವರಿಂದ ಎಚ್ಚರಿಸಲ್ಪಟ್ಟವನು ಮತ್ತು ನೀತಿವಂತನಾಗಿದ್ದು, ಆತನು ತನ್ನ ಸಮುದಾಯದಲ್ಲಿರುವವನನ್ನು, ಮಿತ್ರನಿದ್ದರೂ ಸರಿಯೇ, ಶತ್ರುವಾಗಿದ್ದರೂ ಸರಿಯೇ, ಎಲ್ಲರನ್ನೂ ಎಚ್ಚರಿಸಿದನು. ಆತನು ಅವರಿಗೆ ತಿಳಿಸಿದ ಕಾರ್ಯಕ್ಕೆ ವಿಧೇಯರಾಗದವರಿಗೆ ಆತನ ಬೋಧನೆಯು ಅಪರಾಧಿಯೆಂದು ತೀರ್ಪು ಮಾಡುವದಾಯಿತು. ಆತನು ಅವರಿಗೆ ಈ ವಿಧವಾಗಿ ಸಂದೇಶವನ್ನು ಕೊಟ್ಟಿರಬಹುದಾಗಿದೆ: "ದೇವರು ಮಹಾ ಪ್ರಳಯದ ಮೂಲಕ ಲೋಕವನ್ನು ನಾಶಗೊಳಿಸುವನೆಂದು ನನ್ನ ಸಂಗಡ ಮಾತಾಡಿದನು. ನಾನು ಸಿದ್ಧನಾಗುತ್ತಿರುವ ಪ್ರಕಾರವೇ ನೀವು ಸಿದ್ಧರಾಗುವ ಅಗತ್ಯವಿದೆ."

ವಿಶ್ವಾಸಿಗಳು "ಆದುಕೊಂಡವರ" ಮಧ್ಯದೊಳಗೆ ಇರುವದಕ್ಕಾಗಿ ಒಬ್ಬೊಬ್ಬರಾಗಿ ಮತ್ತು ವೈಯಕ್ತಿಕವಾಗಿ ಆರಿಸಿಕೊಳ್ಳಲ್ಪಟ್ಟವರಲ್ಲ. ನಾವು ಸತ್ಯವನ್ನು ನಂಬಿ ಅದಕ್ಕೆ ವಿಧೇಯರಾಗುವಾಗ ನಮ್ಮನ್ನು ಆ ಸಂಖ್ಯೆಯಲ್ಲಿ ಸೇರಿಸಿಕೊಳ್ಳುವವರಾಗಿದ್ದೇವೆ. 2 ಥೆಸಲೋನಿಕ 2:13, 14ರಲ್ಲಿ ಒಂದು ಉತ್ತಮವಾದ ವಿವರಣೆಯು ಕೊಡಲ್ಪಟ್ಟಿದೆ. 14ನೇ ವಚನವು ನಾವು ಹೇಗೆ 13ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಆಶೀರ್ವಾದಗಳನ್ನು ಹೊಂದಿಕೊಳ್ಳುವದಕ್ಕೆ "ನಮ್ಮ ಸುವಾರ್ತೆಯ ಮೂಲಕ . . . ಕರೆಯಲ್ಪಟ್ಟಿದ್ದೇವೆ" ಎಂದು ತಿಳಿಸುತ್ತದೆ. ನೀತಿಯ ವರ್ಗದ ಭಾಗವಾಗಿ, ಸುವಾರ್ತೆಗೆ ವಿಧೇಯರಾಗುವವರಾದ ನಾವು ಆದುಕೊಂಡವರಾಗುತ್ತೇವೆ ಮತ್ತು ಆ ಮೂಲಕ ನಿತ್ಯಜೀವಕ್ಕೆ ಮುಂದಾಗಿ ನೇಮಿಸಲ್ಪಟ್ಟ ಗುಂಪಿನೊಳಗೆ ಪ್ರವೇಶಿಸುತ್ತೇವೆ. ನೋಹನ ನಂಬಿಕೆಯು ಆತನನ್ನು ವಿಧೇಯತೆಗೆ ನಡಿಸಿದ ರೀತಿಯಲ್ಲಿಯೇ, ನಮ್ಮ ನಂಬಿಕೆಗೆ ಕ್ರಿಯೆಯನ್ನು ಸೇರ್ಪಡೆಗೊಳಿಸಿಕೊಳ್ಳುವದಾದರೆ ಅದು ನಮ್ಮನ್ನು ರಕ್ಷಿಸುವದು. ನೋಹನ ನಂಬಿಕೆಯ ಕಾರಣದಿಂದ, ದೇವರು ಅಬ್ರಹಾಮನ ವಿಷಯದಲ್ಲಿ ಮಾಡಿದಂತೆಯೇ, ಈತನನ್ನು

ನೀತಿವಂತನೆಂದು ಘೋಷಿಸಿದನು (ಆದಿಕಾಂಡ 15:6).

ಹೇಬೆಲ, ಹನೋಕ, ನೋಹ ಇವರು ದೇವರ ಸಂಗಡ ನಡೆದಾಡಿದ ನೀತಿವಂತ ವ್ಯಕ್ತಿಗಳಾಗಿದ್ದರು. ನಂಬಿಕೆಯ ಮೂಲಕ ಅವರು ದೇವರ ಚಿತ್ತಕ್ಕನುಗುಣವಾಗಿ ಆರಾಧಿಸಿದರು. ಹನೋಕನು **ನಂಬಿಕೆಯ ಫಲವಾದ ನೀತಿಗೆ ಬಾಧ್ಯನು** ಎಂದು ಕರೆಯಲ್ಪಡಬಹುದು. ಈ ಮೂಲಪಿತೃಗಳು ತಮ್ಮ ನಂಬಿಕೆಯ ಕಾರಣದಿಂದ ರಕ್ಷಿಸಲ್ಪಟ್ಟರು, ಅದು ಅವರಿಗೆ ನೀತಿಯನ್ನು ಒದಗಿಸಿತು. ಅವರು ದೇವರ ಕೃಪೆಯ ಮೂಲಕ ಕೃಪಾಕಟಾಕ್ಷವನ್ನು ಕಂಡುಕೊಂಡರು.

## ನಂಬಿಗಸ್ತರ ತಂದೆ (ಮತ್ತು ತಾಯಿ) (11:8-12)

**[8]ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು. [9]ನಂಬಿಕೆಯಿಂದಲೇ ಅವನು ವಾಗ್ದಾತ್ತದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು. ಅದೇ ವಾಗ್ದಾನಕ್ಕೆ ಸಹಬಾಧ್ಯರಾಗಿದ್ದ ಇಸಾಕನೂ ಯಾಕೋಬನೂ ಅವನಂತೆಯೇ ಡೇರೆಗಳಲ್ಲಿ ವಾಸಿಸಿದರು. [10]ಯಾಕೆಂದರೆ ಅವನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರುನೋಡುತ್ತಿದ್ದನು.**

**[11]ಇದಲ್ಲದೆ ಸಾರಳು ವಾಗ್ದಾನಮಾಡಿದಾತನನ್ನು ನಂಬತಕ್ಕವನೆಂದೆಣಿಸಿ ತಾನು ಪ್ರಾಯಮೀರಿದವಳಾಗಿದ್ದರೂ ನಂಬಿಕೆಯಿಂದಲೇ ಗರ್ಭವತಿಯಾಗುವದಕ್ಕೆ ಶಕ್ತಿಯನ್ನು ಹೊಂದಿದಳು. [12]ಆದದರಿಂದ ಮೃತಪ್ರಾಯನಾಗಿದ್ದ ಒಬ್ಬನಿಂದ ಆಕಾಶದ ನಕ್ಷತ್ರಗಳಂತೆಯೂ ಸಮುದ್ರತೀರದ ಉಸುಬಿನಂತೆಯೂ ಅಸಂಖ್ಯವಾಗಿ ಮಕ್ಕಳು ಹುಟ್ಟಿದರು.**

ನಂಬಿಕೆಯು ಕಾರ್ಯಪ್ರವೃತ್ತವಾಗುತ್ತದೆ. 11:4-7ರಲ್ಲಿ ಕೊಡಲ್ಪಟ್ಟಿರುವ ಉದಾಹರಣೆಗಳಲ್ಲಿ, ನಂಬಿಕೆಯು ದೇವರನ್ನು ಆರಾಧಿಸುವದರಲ್ಲಿ, ದೇವರೊಂದಿಗೆ ನಡೆದಾಡುವದರಲ್ಲಿ, ಮತ್ತು ಬರಲಿರುವ ಮಹಾ ಪ್ರಳಯವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವೆ ಕಟ್ಟುವದಕ್ಕೆ ಕೆಲಸ ಮಾಡುವದರಲ್ಲಿ ವ್ಯಕ್ತಪಡಿಸಲ್ಪಟ್ಟಿರುತ್ತದೆ. ಈಗ, ಅಬ್ರಹಾಮ ಮತ್ತು ಸಾರಳಿಗೆ ಸಂಬಂಧಿಸಿದಂತೆ, ನಂಬಿಕೆಯು ದೇವರನ್ನು ವಿಶ್ವಾಸಿಡುವದಾಗಿದೆ ಎಂಬುದನ್ನು ನೋಡಲಿದ್ದೇವೆ. ಖಂಡಿತವಾಗಿಯೂ, ಅಸಹಜವಾದ ಪರಿಸ್ಥಿತಿಗಳ ಮಧ್ಯದಲ್ಲಿ, ತನ್ನ ವಾಗ್ದಾನಗಳನ್ನು ನೆರವೇರಿಸುವಂತೆ ನಂಬಿಕೆಯು ದೇವರ ಕಡೆಗೆ ನೋಡುವದಾಗಿದೆ.

**ವಚನ 8.** ಹಳೆಯ ಒಡಂಬಡಿಕೆಯಲ್ಲಿ **ನಂಬಿಕೆಯನ್ನು** ಹೊಂದಿದವನೆಂದು ಪ್ರಸ್ತಾಪಿಸಲ್ಪಟ್ಟವರಲ್ಲಿ **ಅಬ್ರಹಾಮನು** ಮೊದಲಿಗನಾಗಿದ್ದಾನೆ (ಆದಿಕಾಂಡ 15:6; ಆತನ ಕಥೆಯು ಆದಿಕಾಂಡ 12:1-25:11 ರಲ್ಲಿ ಹೇಳಲ್ಪಟ್ಟಿದೆ). ಆತನ ನಂಬಿಕೆಯು ನೀತಿವಂತಿಕೆಯನ್ನು ತಂದಿತು, ಅಂದರೆ ಆತನು ನೀತಿವಂತನೆಂದು ಎಣಿಸಲ್ಪಟ್ಟನೆಂದರ್ಥವಾಗಿದೆ.

ಅಬ್ರಹಾಮನ ನಂಬಿಕೆಯು ಎಷ್ಟೊಂದು ಮಹತ್ವಪೂರ್ಣವಾಗಿತ್ತೆಂದರೆ ಹೊಸ ಒಡಂಬಡಿಕೆಯಲ್ಲಿ ಆ ವಿಷಯದ ಚರ್ಚೆಯಲ್ಲಿ ಪದೇ ಪದೇ ಪ್ರಸ್ತಾಪಿಸಲ್ಪಟ್ಟಿರುತ್ತಾನೆ (ನೋಡಿರಿ ರೋಮಾ 4:9-25; ಗಲಾತ್ಯ 3:7-14; ಯಾಕೋಬ 2:21-23). ಆತನು ಪಾಪರಹಿತವಾಗಿ ಪರಿಪೂರ್ಣನಾಗಿರಲಿಲ್ಲ, ಆದರೆ ಆತನು ನಂಬಿಕೆಯಲ್ಲಿ ಜೀವಿಸಿದನು. "ಹೊರಟು ಹೋಗುವದಕ್ಕೆ" **ಆತನು ಕರೆಯಲ್ಪಟ್ಟನು**, ಅದೇ ರೀತಿಯಲ್ಲಿಯೇ ಇಬ್ರಿಯರಿಗೆ ಪತ್ರಿಕೆಯ ಈ ವಾಚಕರು ಯೆಹೂದಿಮತದಿಂದ ಹೊರಟು ಹೋಗಿದ್ದರು ಮತ್ತು ನಂತರದಲ್ಲಿ ಯೆಹೂದಿಮತದ "ಪಾಳೆಯ"

ವನ್ನು ಬಿಟ್ಟು ಹೊರಡುವಂತೆ ಬುದ್ಧಿವಾದ ಹೇಳಲ್ಪಟ್ಟರು (13:13). **ಹೊರಟನು** (ἐξέρχομαι, *exerchomai*) ಎಂಬುದನ್ನು ಅನುವಾದಿಸಿರುವ ಕ್ರಿಯಾಪದದ ವರ್ತಮಾನಕಾಲ ಕೃದಂತವು ಆತನು ಕರೆಯಲ್ಪಟ್ಟ ತಕ್ಷಣವೇ ಹೊರಟನು ಎಂಬುದನ್ನು ಸೂಚಿಸುತ್ತದೆ. B. F. Westcottನು ಇದನ್ನು ಗಮನಕ್ಕೆ ತರುತ್ತಾನೆ, "ಕರೆಯುವಿಕೆಯು ಇನ್ನೂ ತನ್ನ ಕಿವಿಯಲ್ಲಿ ಸದ್ದು ಮಾಡುತ್ತಿರುವಾಗಲೇ . . . ಆತನು ಕರೆಗೆ ವಿಧೇಯನಾದನು."[34] ಈ ವಚನದಲ್ಲಿನ ಪ್ರಮುಖ ಕ್ರಿಯಾಪದವು "ಮಾತನ್ನು ಕೇಳಿ" ಎಂಬುದು. ಇತರ ಎಲ್ಲಾ ಕ್ರಿಯೆಗಳು ಈ ಪ್ರಮುಖ ಕ್ರಿಯಾಪದಕ್ಕೆ ಅಧೀನದಲ್ಲಿರುತ್ತವೆ; ಆತನ ವಿಧೇಯತೆಯು ಪ್ರಾಥಮಿಕ ಅಂಶವಾಗಿದೆ.

ಮೂಲಪಿತೃವು **ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ** ಹೊರಟನು, ಅದು ಕೆಲವು ಸಮಯಗಳಲ್ಲಿ ಬೇಸರವುಂಟು ಮಾಡುವಂಥದ್ದು ಅಥವಾ ಹೆದರಿಕೆಯುಂಟು ಮಾಡುವಂಥದ್ದು ಆಗಿರಬಹುದಾಗಿದೆ. ಆತನು ಹಾರಾನಿನಲ್ಲಿ ದೇವರಿಂದ ಕರೆಯಲ್ಪಟ್ಟಾಗ, ಆತನಿಗೆ ಅವನ ಭವಿಷ್ಯದ **ಬಾಧ್ಯತೆ**ಯ ಬಗ್ಗೆ ಸ್ಪಷ್ಟವಾದ ವಿವರಣೆಯನ್ನು ಕೊಡಲಾಗಿರಲಿಲ್ಲ. ಆತನ ನಂಬಿಕೆಯೇ ಅವನ ಜೀವಿತದಲ್ಲಿ ಪ್ರಾಬಲ್ಯ ಹೊಂದಿತ್ತು. ಆತನು ನೋಹನಿಗೆ ಕೊಡಲ್ಪಟ್ಟಂತಹ ನಿರ್ದಿಷ್ಟವಾದ ನಿರ್ದೇಶನಗಳಿಲ್ಲದೆಯೇ ಆತನು ವಿಧೇಯನಾದನು. ಬಹುಶಃ ಆ ಕಾರಣದಿಂದಲೇ, ನೋಹನ ಬದಲಾಗಿ ಆತನೇ "ನಂಬಿಗಸ್ತರ ಪಿತ" ಎಂದು ಪರಿಚಿತನಾಗಿದ್ದಾನೆ.

**ವಚನಗಳು 9, 10.** ಅಬ್ರಹಾಮನು ಯಾವದೇ ಸ್ಥಿರವಾದ ಮನೆಯು ಇಲ್ಲದೆ ಒಬ್ಬ ಯಾತ್ರಿಯಾಗಿ, ಒಬ್ಬ ಧಾರ್ಮಿಕ ಅಲೆಮಾರಿಯಾಗಿ ಜೀವಿಸಿದನು. ಆತನು ತನ್ನ ಉಳಿದ ಜೀವಿತಕಾಲವೆಲ್ಲಾ **ವಾಗ್ದಾತ್ತದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶ**ವನಂತೆ ಇದ್ದನು[35] (ಅಪೊಸ್ತಲರ ಕೃತ್ಯಗಳು 7:2–5). "ಅನ್ಯದೇಶದವನು" ಎಂಬುದಕ್ಕಿರುವ ಪದದ (παροικέω, *paroikeō* ಎಂಬದರಿಂದ ಬಂದದ್ದು) ಅರ್ಥವು "ಪಕ್ಕದಲ್ಲಿ ಜೀವಿಸು," "ನಿವಾಸಿಸುವ ಪರದೇಶಸ್ತನು" ಎಂಬ ಯೋಚನೆಯನ್ನು ವ್ಯಕ್ತಪಡಿಸುತ್ತದೆ.[36] ಅಂಥ ಜನರು ಅನೇಕ ಸಾರಿ ಹಾಸ್ಯಕ್ಕೆ ಗುರಿಪಡಿಸಲ್ಪಡುತ್ತಿದ್ದರು ಮತ್ತು ಸ್ಥಳೀಯ ದೊರೆಗಳ ಇಷ್ಟಾನುಸಾರವಾಗಿ ಹೊರ ಹಾಕಲ್ಪಡುತ್ತಿದ್ದರು. ಪ್ರಥಮ ಶತಮಾನದಲ್ಲಿ, ಜಗತ್ತಿನಲ್ಲಿಯೇ ಅತ್ಯಂಥ ಹೆಚ್ಚು ಸುಂದರವಾದ ಪಟ್ಟಣವೆಂದು ಪರಿಗಣಿಸಲ್ಪಟ್ಟಿದ್ದ ರೋಮಾಪುರಕ್ಕೆ ಉತ್ತಮ ಜೀವಿತವನ್ನು ಕಟ್ಟಿಕೊಳ್ಳಬೇಕೆಂದು ಹೋಗುವವರು ಪರದೇಶಸ್ಥರಾಗುತ್ತಿದ್ದರು. ಅಬ್ರಹಾಮ ಮತ್ತು ಇಬ್ರಿಯರಿಗೆ ಪತ್ರಿಕೆಯ ಲೇಖಕನು ಒಂದು ಉತ್ತಮವಾದ ಜಗತ್ತನ್ನು ಬಲ್ಲವರಾಗಿದ್ದರು.

ಅಪೊಸ್ತಲರ ಕೃತ್ಯಗಳು 7:2 ಅದನ್ನು ಉಲ್ಲೇಖ ಮಾಡುತ್ತದಾದರೂ, ಅಬ್ರಹಾಮನಿಗೆ ನೀಡಲಾದ ಮೂಲ ಕರೆಯ ಬಗ್ಗೆ ಆದಿಕಾಂಡದಲ್ಲಿ ದಾಖಲಿಸಲಾಗಿರುವದಿಲ್ಲ. ಅದು 12:1–3ರಲ್ಲಿ ಕಾಣುವಂಥದ್ದು ಎರಡನೆಯ ಕರೆಯಾಗಿರುತ್ತದೆ.[37] ಆತನ ಕರೆಯಲ್ಲಿ **ಇಸಾಕನೂ ಯಾಕೋಬನೂ** ಹೊಂದಿಕೊಂಡ ವಾಗ್ದಾನವನ್ನು ಒಳಗೊಂಡಿತ್ತು (ವ. 9).

ವಾಗ್ದಾನವು ಒಂದು ದೇಶದ ಕುರಿತು ಮಾತ್ರವೇ ಆಗಿರಲಿಲ್ಲ, ಆದರೆ ವಾಗ್ದಾನ ಮಾಡಲ್ಪಟ್ಟ ಸಂತಾನವಾದ ಯೇಸು ಕ್ರಿಸ್ತನ, ಮತ್ತು ಆತನು ನಮಗೋಸ್ಕರ ಸಂಪಾದಿಸಿಕೊಂಡ ಎಲ್ಲಾ ಆಶೀರ್ವಾದಗಳ ಕುರಿತು ಆಗಿತ್ತು (ಗಲಾತ್ಯ 3:16). ಅಬ್ರಹಾಮನು **ಡೇರೆಗಳಲ್ಲಿ** (ಅಥವಾ "ಗುಡಾರಗಳಲ್ಲಿ"; ವ. 9) ಜೀವಿಸುವದಕ್ಕೆ ಮನಸ್ಸುಳ್ಳವನಾಗಿದ್ದನು ಯಾಕೆಂದರೆ ಆತನು ಒಂದು ಪರಲೋಕದ **ಪಟ್ಟಣವನ್ನು ಎದುರುನೋಡುತ್ತಿದ್ದನು** (ἐκδέχομαι, *ekdechomai*), ಅದು ವಾಗ್ದಾನದ ಭಾಗವಾಗಿತ್ತು (ವ. 10). ಗ್ರೀಕ್ ಪದದ ಅರ್ಥವು ಆತನು ಎದುರು ನೋಡುತ್ತಲೇ ಇದ್ದನು ಎಂದಾಗಿರುತ್ತದೆ. ಆತನ ನಂಬಿಕೆಯ ನಿಶ್ಚಂಚಲತೆಯು ಎದ್ದು ಕಾಣುತ್ತದೆ. ಆತನ

ಜೀವಿತವು "ಕಣ್ಣಿಗೆ ಕಾಣದವುಗಳಲ್ಲಿ" (ವ. 1) ವಿಶ್ವಾಸಿಸುವಂತಹ ನಂಬಿಕೆಯ ಸ್ವಭಾವವನ್ನು ದೃಷ್ಟಾಂತ ಪಡಿಸುತ್ತದೆ. ಆತನ ನಂಬಿಕೆಯು ಅಸಾಧಾರಣವಾಗಿತ್ತು. ತಿಳಿಯದ ಸ್ಥಳದ ಕಡೆಗೆ ಸಾಗುವದಕ್ಕಾಗಿ ಮನೆಯನ್ನೂ ಭದ್ರತೆಯನ್ನು ತ್ಯಜಿಸಿ ಬಿಡುವದು ಎಷ್ಟು ಕಷ್ಟಕರವಾಗಿರುತ್ತದೆ! ದೇವರು ಮೂಲಪಿತೃಗಳಿಗೆ ಪರಲೋಕದ ಸ್ವಲ್ಪ ತಿಳುವಳಿಕೆಯನ್ನು ನೀಡಿರಬಹುದಾಗಿದೆ, ಆದಾಗ್ಯೂ ಅದರ ಕುರಿತು ನಮಗೆ ಯಾವದೇ ಲಿಖಿತ ದಾಖಲೆಯು ಇರುವದಿಲ್ಲ. "ಅಸ್ತಿವಾರಗಳುಳ್ಳ" ಎಂಬ ಯೋಚನೆಯು ಸೂಚಿಸುವದೇನೆಂದರೆ ಅದು ಪ್ರಳಯದಿಂದ ಹೊಡೆದುಕೊಂಡು ಹೋಗುವದಕ್ಕಾಗಲಿ ಅಥವಾ ಮನುಷ್ಯರ ಪ್ರಹಾರ ನಡಿಸುವ ದಿಮ್ಮಿಗಳಿಂದಾಗಲಿ ಬೀಳುವದಕ್ಕಾಗಲಿ ಸಾಧ್ಯವಿಲ್ಲದಿರುವ ಸ್ಥಿರವಾದ ಪಟ್ಟಣವಾಗಿರುತ್ತದೆ ಎಂಬದೆ.

ದೇವರಲ್ಲಿ ವಿಶ್ವಾಸವಿಟ್ಟ ಆದಿಯ ಜನರು ತಮಗಾಗಿ ಪರಲೋಕದಲ್ಲಿ ಒಂದು ಉತ್ತಮವಾದ ಜೀವಿತವು ಕಾದಿದೆ ಎಂಬುದನ್ನು ಹನೋಕನು ಒಯ್ಯಲ್ಪಡುವದರ ಮೂಲಕವಾಗಿ ಅರಿತುಕೊಂಡಿರಬಹುದಾಗಿದೆ. ಅವರು ತಮಗಿಂತ ಮುಂಚೆ ಹೋದವರಿಂದ ಕಲಿತುಕೊಳ್ಳಲು ಶಕ್ತರಾಗಿದ್ದರು, ಅದೇ ರೀತಿಯಲ್ಲಿಯೇ ನಾವು ಶಕ್ತರಾಗಬಲ್ಲೆವು. "ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು" (ರೋಮಾ 15:4). ಅವರು ಬಹಳಷ್ಟನ್ನು ಮೌಖಿಕವಾದ ಉಪದೇಶದ ಮೂಲಕ ಕಲಿತುಕೊಂಡಿರಬಹುದಾಗಿದೆ. ಹಳೆಯ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅನೇಕ ಆಚಾರಗಳು ಸ್ವಲ್ಪವಾಗಿ ಅಥವಾ ಏನನ್ನೂ ಹೇಳಲ್ಪಟ್ಟಿರದ ಮೂಲಗಳನ್ನು ಹೊಂದಿವೆ (ಉದಾಹರಣೆಗೆ ಯಜ್ಞಗಳ ಸಮರ್ಪಣೆ, ದಶಮಾಂಶ ಕೊಡುವಿಕೆ, ಮತ್ತು ಮೂಲಪಿತೃಗಳ ಯಾಜಕತ್ವ).

ಯಾವದೋ ರೀತಿಯಲ್ಲಿ, **ದೇವರ** ಹಿಂಬಾಲಕರು ಆತನನ್ನು ಒಂದು ಮಹಾನ್, ಶಾಶ್ವತವಾದ ಪಟ್ಟಣವನ್ನು **ಸಂಕಲ್ಪಿಸಿ ನಿರ್ಮಿಸಿದ**ವನು ಎಂದು ಬಲ್ಲವರಾಗಿದ್ದರು. ಅಬ್ರಹಾಮನು ಎದುರುನೋಡಿದ ಪಟ್ಟಣವು ಇದೇ ಆಗಿತ್ತು. ಆತನು ಭೂಲೋಕದ ಯಾವದೇ ಪಟ್ಟಣಕ್ಕೆ ಸೇರಿದವನಾಗಿರಲಿಲ್ಲ. ಅಬ್ರಹಾಮನು ಹೆಬ್ರೋನಿನ ಬಳಿಯಲ್ಲಿ ಮಕ್ಪೇಲದ ಹೊಲವನ್ನು ಖರೀದಿಸುವ ತನಕ, ಆತನಿಗೆ ಸ್ವಂತವಾಗಿ ಯಾವ ಭೂಮಿಯೂ ಇರಲಿಲ್ಲ, ಯಾಕೆಂದರೆ ಸಮಾಧಿಯ ನಿವೇಶನವನ್ನು ಆಸ್ತಿಯನ್ನು ಹೊಂದಿರುವದೆಂದು ಪರಿಗಣಿಸಲಾಗುತ್ತಿರಲಿಲ್ಲ (ನೋಡಿರಿ ಆದಿಕಾಂಡ 23:6). ಅಬ್ರಹಾಮನು "ಕಾಲಿಡುವಷ್ಟು ಭೂಮಿಯನ್ನು" ಸಹ ಸ್ವಂತವಾಗಿ ಹೊಂದಿರಲಿಲ್ಲ ಎಂದು ಸ್ತೇಫನನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 7:5).

ಅಬ್ರಹಾಮನಂತೆಯೇ, ನಮ್ಮ ನಂಬಿಕೆಯು ನಂಬಿಗಸ್ತರಿಗೋಸ್ಕರ ಪರಲೋಕವನ್ನು ಸಂಕಲ್ಪಿಸಿ ನಿರ್ಮಿಸಿರುವ ದೇವರಲ್ಲಿ ಇರುತ್ತದೆ (ವ. 10). ದೈವಿಕ "ನಿರ್ಮಾಣಿಕ" (*τεχνίτης, technitēs*), ಅಥವಾ "ಕಟ್ಟುವಾತನು," ಜಗತ್ತಿನ ಮೂಲ "ತಂತ್ರಜ್ಞನು" ಆಗಿದ್ದಾನೆ; ನಮ್ಮ ದೇವರು ಎಲ್ಲಾ ಪರಿಣಿತರಿಗಿಂತಲೂ ಮೇಲಾಗಿ ಪರಿಣಿತನಾಗಿದ್ದಾನೆ. ನಮ್ಮ ನಿತ್ಯವಾದ ಮನೆಯು ಜಗದುತ್ಪತ್ತಿಗೆ ಮುಂಚಿನಿಂದಲೂ ದೃಶ್ಯದಲ್ಲಿ ಇರುವದಾಗಿದೆ (ಮತ್ತಾಯ 25:34). ಯೇಸು ಈಗ ಸಿದ್ಧಗೊಂಡ ಜನರಿಗೋಸ್ಕರ ಸಿದ್ಧಗೊಂಡಿರುವ ಸ್ಥಳಕ್ಕೆ ಅಂತಿಮ ಸ್ಪರ್ಶಗಳನ್ನು ನೀಡುತ್ತಿದ್ದಾನೆ (ಯೋಹಾನ 14:1-3).

ದೇವರಲ್ಲಿ ನಂಬಿಕೆಯಿಡುವದು ಮತ್ತು ಪರಲೋಕದ ಪಟ್ಟಣದ ಬಗ್ಗೆ ತಿಳಿದುಕೊಳ್ಳುವದು ಅಬ್ರಹಾಮನಿಗೆ ಮುಂದೆ ಸಾಗುವದಕ್ಕೆ ತಾಳ್ಮೆಯನ್ನು ಒದಗಿಸಿತು (ವ. 10). ಆತನ ಅಪೇಕ್ಷೆಗಳು ಏನೇ ಆಗಿದ್ದರೂ, "ಆತನು ಉನ್ನತದಲ್ಲಿರುವ ಪರಲೋಕ ಪಟ್ಟಣವನ್ನು ಪ್ರವೇಶಿಸುವ ತನಕ ಆತನ ಹಂಬಲಗಳು ಮತ್ತು ನಿರೀಕ್ಷೆಗಳು ಸಂತೃಪ್ತಿಯನ್ನು ಹೊಂದಲಾರವುಗಳಾಗಿದ್ದವು."[38]

ನಿತ್ಯವಾದ ಪಟ್ಟಣವು ಆತನ ಗುರಿಯಾಗಿತ್ತು, ಅದು ನಮ್ಮದು ಸಹ ಆಗಿರತಕ್ಕದ್ದು. ಆತನು ವಾಗ್ದಾನ ದೇಶದಲ್ಲಿ ಸುಮಾರು ನೂರು ವರ್ಷಗಳ ವರೆಗೆ ಜೀವಿಸುವದಕ್ಕೆ ಶಕ್ತನಾಗಿದ್ದಾಗ್ಯೂ – ಯಾವ ಭೂಮಿಯನ್ನೂ ಸ್ವಂತವಾಗಿ ಹೊಂದಿರದೆ – ಪರಲೋಕದ ದೇಶದ ಮೇಲೆ ಮುಖ್ಯ ಗಮನವನ್ನು ಇಟ್ಟಿದ್ದರಿಂದ, ತನ್ನ ಜೀವಿತವೆಲ್ಲಾ ತಾಳ್ಮೆಯಿಂದ ಮುನ್ನಡೆಯುವಂತೆ ಮಾಡಿತ್ತು.[39]

ಲೇಖಕನು ಈ ಅಧ್ಯಾಯದಲ್ಲಿ ಅಬ್ರಹಾಮ ಮತ್ತು ಇತರ ಎಲ್ಲರನ್ನು ದೀರ್ಘಕಾಲದ ಹಿಂದೆ ಜೀವಿಸಿದ್ದ ನಿಜವಾದ ಜನರು ಎಂಬದಾಗಿ ಗುರುತಿಸುತ್ತಾನೆ. F. F. Bruceನು ಹೀಗೆ ವ್ಯಾಖ್ಯೆ ನೀಡುತ್ತಾನೆ, ". . . ನಮ್ಮ ಲೇಖಕನು ಅಬ್ರಹಾಮ ಹಾಗೂ ಈ ವಿವರಣಾಪಟ್ಟಿಯಲ್ಲಿ ತಿಳಿಸಲಾಗಿರುವ ಮಿಕ್ಕ ಎಲ್ಲರನ್ನು ಐತಿಹಾಸಿಕ ವ್ಯಕ್ತಿಗಳಾಗಿದ್ದು ಅವರ ಅನುಭವಗಳ ಮೂಲಕ ನಂತರದ ಪೀಳಿಗೆಯವರು ಕಲಿಯಬಹುದಾಗಿದೆ ಎಂದು ಹೇಳುವದರಲ್ಲಿ ತೃಪ್ತನಾಗಿರುತ್ತಾನೆ."[40] ಈ ಎಲ್ಲಾ ಆತ್ಮಗಳು ಈಗಲೂ ಜೀವಂತವಾಗಿವೆ ಮತ್ತು "[ದೇವರಿಗೆ] ಜೀವಿಸುತ್ತಾರೆ" (ಲೂಕ 20:38; ನೋಡಿರಿ ಮತ್ತಾಯ 22:32; ಮಾರ್ಕ 12:27). ಪುರಾತತ್ವಜ್ಞರು ಮತ್ತು ಇತಿಹಾಸಕಾರರು ಆದಿಕಾಂಡದಲ್ಲಿನ ಮೂಲಪಿತೃಗಳ ಯುಗವನ್ನು "ಕಟ್ಟುಕಥೆ" ಅಥವಾ ಕಲ್ಪಿತವಾದವುಗಳೆಂದು ಅಭಿಪ್ರಾಯ ಪಡುವದು ಯೇಸುವಿನಲ್ಲಿ ಮತ್ತು ಹೊಸ ಒಡಂಬಡಿಕೆಯಲ್ಲಿನ ನಂಬಿಕೆಯನ್ನು ನಾಶಮಾಡುವದಕ್ಕೆ ಪ್ರಯತ್ನಿಸುವವರಾಗಿದ್ದಾರೆ.

**ವಚನಗಳು 11, 12.** ಆರಂಭದಲ್ಲಿ, **ಸಾರಳು** ಒಂದು ಮಗುವು ಹುಟ್ಟುವದೆಂದು ದೇವದೂತನು ಹೇಳಿದ ಮಾತುಗಳಲ್ಲಿ ಸಂದೇಹದಿಂದ ಇದ್ದಳು (ಆದಿಕಾಂಡ 18:9-15). ಅನುವಾದದಲ್ಲಿನ ಸಮಸ್ಯೆಗಳು ಸಾರಾಳ ನಂಬಿಕೆಯ ವಿಷಯದಲ್ಲಾಗಿರುತ್ತವೆ, ಯಾಕೆಂದರೆ ಆಕೆಯ ನಂಬಿಕೆಯ ಬಗ್ಗೆ ಹಳೆಯ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿರುವದಿಲ್ಲ. ಒಂದು ಪರಿಹಾರವೆಂದರೆ ಈ ವಚನವನ್ನು ಈ ವಿಧದಲ್ಲಿ ಅನುವಾದಿಸುವದೇ: "ನಂಬಿಕೆಯಿಂದಲೇ ಆತನು ಸಹ [ಅಬ್ರಹಾಮನು], ಸಾರಳ ಜೊತೆಯಾಗಿ, ತಾನು ಪ್ರಾಯಮೀರಿದ್ದಾಗ್ಯೂ ಒಂದು ಮಗುವನ್ನು ಪಡೆಯುವದಕ್ಕೆ ಶಕ್ತಿಯನ್ನು ಹೊಂದಿದನು, ಯಾಕೆಂದರೆ ಆತನು ವಾಗ್ದಾನ ಮಾಡಿದಾತನನ್ನು ನಂಬಿಗಸ್ತನೆಂದು ಎಣಿಸಿದನು."[41] ಸಾರಳು ತನ್ನೊಳಗೆ ನಕ್ಕಳು ಮತ್ತು ಬಳಿಕ ತಾನು ನಕ್ಕದ್ದನ್ನು ನಿರಾಕರಿಸಿದಳು. ಆಕೆಯು ನಕ್ಕದ್ದಕ್ಕಾಗಿ ಗದರಿಸಲ್ಪಟ್ಟಳು, ಆದಾಗ್ಯೂ ಅಬ್ರಹಾಮನು ನಕ್ಕದ್ದಕ್ಕಾಗಿ ಗದರಿಸಲ್ಪಡಲಿಲ್ಲ (ಆದಿಕಾಂಡ 17:17; 18:12-15). ಅಬ್ರಹಾಮನ ನಗುವಿಕೆಯು ನಂಬಿಕೆಯ ಒಂದು ಮುಸಿನಗೆ ಆಗಿರಬಹುದಾಗಿದೆ. ವರ್ಷಗಳು ಗತಿಸಿದ ಹಾಗೆ ಅಬ್ರಹಾಮನ ನಂಬಿಕೆಯು ಸಾರಳ ನಂಬಿಕೆಯಾಗಿರುವ ಸಾಧ್ಯತೆಯಿದೆ, ಮತ್ತು ಆಕೆಯು ಆ ಮೂಲಕ **ಗರ್ಭವತಿಯಾಗುವದಕ್ಕೆ ಶಕ್ತಿಯನ್ನು ಹೊಂದಿದಳು**. ಮಗುವಾದ ಇಸಾಕನು ಹುಟ್ಟಿದಾಗ, ದೇವರು ತನ್ನನ್ನು ನಗುವಂತೆ ಮಾಡಿದ್ದಾನೆಂದು ಆಕೆಯು ಘೋಷಿಸಿದಳು (ಆದಿಕಾಂಡ 21:6). ಆಕೆಗೆ ಆತನಲ್ಲಿ ಪೂರ್ಣ ನಂಬಿಕೆಯಿತ್ತೆಂಬುದನ್ನು ಆಕೆಯ ಹೇಳಿಕೆಯು ಒಪ್ಪುತ್ತದೆ, ಅದು ಆಕೆಯ ಮಗುವಿನ ಜನನದಿಂದ ಬಲಗೊಂಡಿದ್ದಾಗಿತ್ತು.

ಆಶ್ಚರ್ಯಕರವಾದ ವಾಸ್ತವಾಂಶವೆಂದರೆ ಇಸಾಕನು ಹುಟ್ಟಿದಾಗ ಸಾರಳು ತೊಂಭತ್ತು ವಯಸ್ಸಿನವಳಾಗಿದ್ದಳು (ಆದಿಕಾಂಡ 17:17). ಪೌಲನು ಈ ಘಟನೆಯ ಕುರಿತು ರೋಮಾ 4:18-21ರಲ್ಲಿ ಮಾತಾಡುತ್ತಾನೆ. ಒಂದು ಮಗುವಿಗೆ ತಂದೆಯಾಗುವ ವಿಷಯದಕ್ಕೆ ಸಂಬಂಧಿಸಿದಂತೆ ಅಬ್ರಹಾಮನ ದೇಹವು **ಮೃತಪ್ರಾಯ**ದಂತೆಯೇ ಆಗಿತ್ತು (ವ. 12; ರೋಮಾ 4:19). ಮಾನವ ದೃಷ್ಟಿಕೋನದಿಂದ, "ಒಬ್ಬ ಮೃತ ಮನುಷ್ಯನಿಗೆ ತಂದೆಯಾಗುವ ಸಾಧ್ಯತೆಯು ಎಷ್ಟಿರುತ್ತಿತ್ತೋ ಅಬ್ರಹಾಮನು ತಂದೆಯಾಗುವ ಸಾಧ್ಯತೆಯು ಅಷ್ಟೇ ಇತ್ತು."[42] ಹಾಗಿದ್ದರೂ, ದೇವರು ಅಬ್ರಹಾಮನನ್ನು **ಆಕಾಶದ ನಕ್ಷತ್ರಗಳಂತೆ** ಅಸಂಖ್ಯಾತ **ಮಕ್ಕಳು** ಹುಟ್ಟುವಂತೆ ಮಾಡುವ

ವಾಗ್ದಾನವನ್ನು ಕಾಪಾಡಿಕೊಂಡನು (ಆದಿಕಾಂಡ 22:17).

ಪ್ರಸಿದ್ಧ ಹುಬ್ಬಲ್ ಟೆಲಿಸ್ಕೋಪ್ ಮತ್ತು ಇತರ ವಿಧಾನಗಳ ಮೂಲಕವಾಗಿ ನಾವು ಬಾಹ್ಯಾಕಾಶದ ಬಗ್ಗೆ ಬಹಳಷ್ಟನ್ನು ಕಲಿತುಕೊಂಡಿದ್ದೇವೆ, ಮತ್ತು ನಕ್ಷತ್ರಗಳು ಅಸಂಖ್ಯಾತವಾಗಿವೆ ಎಂಬುದನ್ನು ನಾವು ಹಿಂದೆಂದಿಗಿಂತಲೂ ಈಗ ಚೆನ್ನಾಗಿ ಅರಿತುಕೊಂಡಿದ್ದೇವೆ (ವ. 12). ನಮಗಿರುವ ಪುರಾವೆಗಳು ಎಷ್ಟೋ ಕೋಟ್ಯಾಂತರ ನಕ್ಷತ್ರಗಳಿರುವದಾಗಿ ತಿಳಿಸುತ್ತವೆ. ಪ್ರಾಚೀನ ಗ್ರೀಕರು ಅವುಗಳ ಸಂಖ್ಯೆಯು ಮೂರು ಸಾವಿರದಷ್ಟಿರುತ್ತದೆಂದು ನಂಬಿದ್ದರು. "ಅಬ್ರಹಾಮನ ಸಂತಾನವಾಗಿ" ಎಷ್ಟೋಂದು ಜನರು ಹುಟ್ಟಿರಬಹುದು? ಬಹುಸಂಖ್ಯೆಯಲ್ಲಿ ಅರಬ್ಬರು ಹಾಗೂ ಇಸ್ರಾಯೇಲ್ಯರು ಈಗಲೂ ಹುಟ್ಟುತ್ತಲೇ ಇದ್ದಾರೆ, ಈ ಮೂಲಕ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುತ್ತಿದ್ದಾರೆ. ಖಂಡಿತವಾಗಿಯೂ, ಆ ವಾಗ್ದಾನವು ಕ್ರೈಸ್ತರೆಲ್ಲರೂ ಸೇರಿದಂತೆ ಆತ್ಮೀಕ ಸಂತಾನಗಳ ಬೃಹತ್ ದೇಹದಲ್ಲಿ ಸಹ ನೆರವೇರಿತು (ಗಲಾತ್ಯ 3:26-29).

## ಇವರು ದೇವರ ವಾಗ್ದಾನದ ಫಲವನ್ನು ಹೊಂದಿಕೊಳ್ಳದಿದ್ದಾಗ್ಯೂ ನಂಬಿಗಸ್ತರಾಗಿದ್ದರು (11:13-16)

**[13]ಇವರೆಲ್ಲರು ವಾಗ್ದಾನದ ಫಲಗಳನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು. ತಾವು ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿಕೊಂಡರು. [14]ಇಂಥ ಮಾತುಗಳನ್ನಾಡುವವರು ತಾವು ಸ್ವದೇಶವನ್ನು ಹುಡುಕುವವರೆಂಬರ್ಥವನ್ನು ವ್ಯಕ್ತಪಡಿಸುತ್ತಾರೆ. [15]ತಾವು ಹೊರಟುಬಂದಿದ್ದ ದೇಶದ ಮೇಲೆ ಮನಸ್ಸಿಟ್ಟವರಾಗಿದ್ದರೆ ತಿರಿಗಿ ಅಲ್ಲಿಗೆ ಹೋಗುವದಕ್ಕೆ ಅವರಿಗೆ ಯಾವಾಗಲೂ ಅವಕಾಶವಿತ್ತು. [16]ಆದರೆ ಅವರು ಪರಲೋಕವೆಂಬ ಉತ್ತಮದೇಶವನ್ನು ಹಾರೈಸುವವರು. ಆದದರಿಂದ ದೇವರು ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೊಳ್ಳದೆ ಅವರಿಗೋಸ್ಕರ ಪಟ್ಟಣವನ್ನು ಸಿದ್ಧಮಾಡಿದ್ದಾನೆ.**

13ರಿಂದ 16 ವಚನಗಳಲ್ಲಿ, ನಂಬಿಕೆಯಲ್ಲಿ ನಿಜವಾಗಿಯೂ ನಡೆಯುವ ವ್ಯಕ್ತಿಯ ಗುಣಗಳನ್ನು ಬಣ್ಣಿಸುವಂತಹ ಒಂದು ಚಿತ್ರಣವು ಕೊಡಲ್ಪಟ್ಟಿದೆ. ಈ ನಡೆಯು ಒಂದು ಜೀವನಶೈಲಿಗೆ ಸಮರ್ಪಿತನಾಗಿರುವದನ್ನು ದಾಟಿ ಹೋಗುತ್ತದೆ; ಇದು ಜೀವನದ ಅಂತ್ಯದ ತನಕವೂ ನಂಬಿಕೆಯಿಂದ ಪ್ರಯಾಣಿಸುವದರಲ್ಲಿ ಫಲಿತಗೊಳ್ಳುವಂತಹ ಜೀವನದ ರೀತಿಯಾಗಿರುತ್ತದೆ.

**ವಚನ 13.** ಈ ಸನ್ನಿವೇಶದಲ್ಲಿ ಹೆಸರಿಸಲಾಗಿರುವ ವ್ಯಕ್ತಿಗಳು **ವಾಗ್ದಾನದ ಫಲಗಳನ್ನು ಹೊಂದದೆ ಮೃತರಾದರು.** ಈ ವಚನಗಳು ಅವರು "[κατά, *kata*, ಅಂದರೆ 'ಯೊಂದಿಗೆ ಅನುಗುಣವಾಗಿ'] ನಂಬಿಕೆಯಲ್ಲಿ" ಮೃತರಾದರು ಎಂಬುದನ್ನು ಸೂಚಿಸುತ್ತದೆ, ಅದು "ನಂಬಿಕೆಯಿಂದ" ಎಂಬುದಕ್ಕಿಂತಲೂ ವ್ಯತ್ಯಾಸವಾದ ಮಾತಾಗಿರುತ್ತದೆ. ಅವರು ದೇವರ ವಾಗ್ದಾನದ ಫಲಗಳನ್ನು ಹೊಂದಿಕೊಂಡಿರಲಿಲ್ಲ, ಆದರೆ ಅವರೆಲ್ಲರೂ "ನಂಬಿಕೆಯಿಂದ" ಜೀವಿಸುತ್ತಿದ್ದರು, ಆಗ ಅವರು "ನಂಬಿಕೆಯಲ್ಲಿ" ಮರಣಿಸಿದರು.[43]

4ರಿಂದ 11 ವಚನಗಳಲ್ಲಿ ಹೆಸರಿಸಲಾಗಿರುವ ಭಕ್ತಿಯುಳ್ಳ ವ್ಯಕ್ತಿಗಳು – **ಅವುಗಳನ್ನು** [ವಾಗ್ದಾನಗಳು] **ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ** – ಅಂತ್ಯದ ವರೆಗೂ ತಮ್ಮ ನಂಬಿಕೆಯನ್ನು ಕಾಪಾಡಿಕೊಂಡ ಇತರರ ವರ್ಗಕ್ಕೆ ಸೇರುತ್ತಾರೆ. ಇದು ಶಾರೀರಿಕ ನೋಡುವಿಕೆಯಾಗಿರಲಾರದು; ಬದಲಾಗಿ, ಈ ಹೇಳಿಕೆಯ ಅರ್ಥವು ಏನೆಂದರೆ ಅವರ

ನಂಬಿಕೆಯು ಅತ್ಯಂಥ ಬಲವಾಗಿದ್ದು ಪರಲೋಕವು ಅವರಿಗೆ ವಾಸ್ತವಿಕವಾಗಿತ್ತು. ಯೋಹಾನ 8:56ರಲ್ಲಿ ಯೇಸು ಏನು ಹೇಳಿದನೆಂಬುದನ್ನು ಯೋಚಿಸಿರಿ: "ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು." ಓ, ನಮಗೆ ಅಂಥ ನಂಬಿಕೆಯು ಇದ್ದರೆ ಎಷ್ಟು ಚೆಂದ!

**ಇವರೆಲ್ಲರು** ಎಂಬುದು ಅಬ್ರಹಾಮ, ಸಾರಳು, ಇಸಾಕ, ಮತ್ತು ಯಾಕೋಬರನ್ನು, ಮಾತ್ರವಲ್ಲದೆ ನೋಹ ಹಾಗೂ ಹೇಬೆಲ ಇವರನ್ನು ಸೂಚಿಸುತ್ತದೆ – ಆದರೆ ಹನೋಕನನ್ನು ಅಲ್ಲ, ಯಾಕೆಂದರೆ ಆತನು ಮರಣಿಸಲಿಲ್ಲ. ಇವರಲ್ಲಿ ಪ್ರತಿಯೊಬ್ಬರು ದೇವರ ವಾಗ್ದಾನಗಳನ್ನು ನೆರವೇರಿದ ರೂಪದಲ್ಲಿ ಹೊಂದದೆಯೇ ಮರಣಿಸಿದರು. ಹಾಗಿದ್ದರೂ, ನಂಬಿಕೆಯಲ್ಲಿ ಜೀವಿಸುವದು ಹಾಗೂ ಮರಣಿಸುವರು ಒಬ್ಬನು ಹೊಂದಿಕೊಳ್ಳಲು ಸಾಧ್ಯವಿರುವಂತಹ ಅತ್ಯಂಥ ಅದ್ಭುತವಾದ ಆತ್ಮೀಕ ಆಶೀರ್ವಾದವನ್ನುಂಟು ಮಾಡುತ್ತದೆ.

ನಂಬಿಕೆಯಿಂದ ಅವರು ವಾಗ್ದಾನಗಳನ್ನು ದೂರದಿಂದ ಕಂಡರು. Alexander Nairneನು ಮೂಲಪಿತೃಗಳನ್ನು "ಮರುಭೂಮಿಯ ಆಚೆಯಲ್ಲಿರುವ ತಮ್ಮ ಪಟ್ಟಣಕ್ಕೆ ಪ್ರಯಾಣಿಸುತ್ತಿರುವ ಅಲೆಮಾರಿಗಳಂತಿದ್ದಾರೆ, ಅವರು ದೂರದಲ್ಲಿ ಅದರ ಗೋಪುರಗಳು ಕಾಣಿಸುವದನ್ನು ನೋಡಬಹುದಿತ್ತು ಆದರೆ ಆ ದಿನದಲ್ಲಿ ನಡೆಯುವದರ ಮೂಲಕ ಅದನ್ನು ತಲುಪುವದಕ್ಕೆ ಸಾಧ್ಯವಿರುತ್ತಿರಲಿಲ್ಲ; ಅವರು ಆ ನೋಟವನ್ನು ವಂದಿಸುತ್ತಿದ್ದರು, ಆದರೆ ಮತ್ತೊಂದಾವರ್ತಿ ದೂರದಲ್ಲಿ ಬಿಡಾರ ಹಾಕಿಕೊಳ್ಳುತ್ತಿದ್ದರು" ಎಂಬುದಕ್ಕೆ ಹೋಲಿಸುತ್ತಾನೆ.[44] ಅಬ್ರಹಾಮ ಮತ್ತು ಯಾಕೋಬರು ತಾವು ಈ "ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ" ಆಗಿದ್ದೇವೆಂದು ಹೇಳಿದರು (ಆದಿಕಾಂಡ 23:4; 47:9). "ಇಂಥ ಮಾತುಗಳನ್ನಾಡುವವರು" (ಈ ಲೋಕವು ತಮ್ಮ ಮನೆಯಲ್ಲ ಎಂಬುದನ್ನು ಒಪ್ಪಿಕೊಳ್ಳುವವರು; ವ. 14) ಯಾರೆಂದರೆ ಪರಲೋಕದಲ್ಲಿರುವ ತಮ್ಮ ನಿತ್ಯವಾದ ಮನೆಯ ಬಗ್ಗೆ ನಿರಂತರವಾಗಿ ಮಾತಾಡುವವರೇ ಆಗಿದ್ದಾರೆ.

ಈ ಅಲೆಮಾರಿಗಳಿಗೆ ದೇವರು ಮಾಡಿದ ವಾಗ್ದಾನಗಳಲ್ಲಿ ಮಕ್ಕಳು, ಭೂಮಿಗಳಂತಹ ತಾತ್ಕಾಲಿಕ ಆಶೀರ್ವಾದಗಳಿಗಿಂತ ಹೆಚ್ಚಿನದನ್ನು ಒಳಗೊಂಡಿದ್ದವು, ಅಥವಾ ಸ್ವತಃ ಆತನು ಸಹ ಅವರ ದೇವರಾಗಿರುವನು. ಅದರಲ್ಲಿ ಹೆಚ್ಚುವರಿ ಆತ್ಮೀಕ ಆಶೀರ್ವಾದಗಳು ಸೇರಿದ್ದವು. ಅಬ್ರಹಾಮನ ಸಂತಾನದ ಮೂಲಕವಾಗಿ ಎಲ್ಲಾ ಜನಾಂಗಗಳು ಆಶೀರ್ವಾದ ಹೊಂದಲಿದ್ದವು (ಆದಿಕಾಂಡ 12:3; 22:18). ಈ "ಸಂತಾನ" ಕ್ರಿಸ್ತನೇ ಎಂಬುದಾಗಿ ಗಲಾತ್ಯ 3:16 ವಿವರಿಸುತ್ತದೆ. ಆದದರಿಂದ ಅಬ್ರಹಾಮನು ಎರಡು ಕುಟುಂಬಗಳಿಗೆ ತಂದೆಯಾಗಿದ್ದಾನೆ – ಒಂದು ಶರೀರ ಸಂಬಂಧದ ಮತ್ತು ಮತ್ತೊಂದು ನಂಬಿಕೆಯ ಸಂಬಂಧದಲ್ಲಿ. ಕ್ರಿಸ್ತನಲ್ಲಿ ದೇವರ ಪ್ರತಿಯೊಂದು ಮಗುವು ಈಗ ನಂಬಿಕೆಯ ಆತ್ಮದಲ್ಲಿ ಅಬ್ರಹಾಮನ ಒಂದು ಮಗುವಾಗಿದ್ದಾನೆ (ಆದಿಕಾಂಡ 3:26–29).

ಮೂಲಪಿತೃವು ತನ್ನ ದಿನವನ್ನು ನೋಡಿ ಆ ವಾಸ್ತವಾಂಶದಲ್ಲಿ ಸಂತೋಷಗೊಂಡನೆಂಬದಾಗಿ ಯೇಸುವು ಅಬ್ರಹಾಮನ ಕುರಿತು ಮಾತಾಡುತ್ತಾ ಹೇಳಿದನು (ಯೋಹಾನ 8:56–58). ಈ ಲೋಕದ ಕಡೆಗೆ ನಾವು ಅಬ್ರಹಾಮನು ಹೊಂದಿದ್ದ ಮನೋಭಾವವನ್ನು ಹೊಂದಿದ್ದರೆ, ಅದರ ಆಮೀಷಗಳು ಅನೇಕ ಸಾರಿ ಚಂಚಲಗೊಳಿಸುವ ರೀತಿಯಲ್ಲಿ ನಮ್ಮನ್ನು ಚಂಚಲಗೊಳಿಸಲು ಆಗುವದಿಲ್ಲ.

ಅಬ್ರಹಾಮನು ಮತ್ತು ಇತರರು ತಾವು **ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿಕೊಂಡರು**. ಅಬ್ರಹಾಮನು ತನ್ನ ಜೀವನದ ಅಂತ್ಯದ ಸಮೀಪದಲ್ಲಿ ಇದನ್ನು ಒಪ್ಪಿಕೊಂಡನು (ಆದಿಕಾಂಡ 23:4). ಆತನು ಕಾನಾನಿನಲ್ಲಿ ಎಂದಿಗೂ ನೆಮ್ಮದಿಯಿಂದಿರಲಿಲ್ಲ. ಯಾಕೋಬನು

ಹೆಚ್ಚುಕಡಿಮೆ ಅದೇ ಮಾತುಗಳನ್ನು ಆದಿಕಾಂಡ 47:9ರಲ್ಲಿ ಫರೋಹನ ಮುಂದೆ ಹೇಳಿದನು. ಅವರು ಒಂದೇ ರೀತಿಯ ಮಾತುಗಳನ್ನು ಬಳಸಿದ್ದು ಅದು ಮೂಲಪಿತೃಗಳ ಅನುದಿನದ ಸಂಭಾಷಣೆಯಲ್ಲಿ ಭಾಗವಾಗಿರುತ್ತಿದ್ದ ಸಾಮಾನ್ಯ ಮಾತು ಆಗಿರುತ್ತಿತ್ತೆಂಬುದನ್ನು ತೋರಿಸುತ್ತದೆ.

ಒಬ್ಬ ಪರದೇಶವನಾಗಿದ್ದು ಯಾವದೇ ಹಕ್ಕುಗಳನ್ನು ಹೊಂದದೆ ಇರುವದು ಅಬ್ರಹಾಮನಂತಹ ಮರುಭೂಮಿಯ ಷೇಖ್‌ನಿಗೆ (ಅರಬ್ ಮುಖಂಡನಿಗೆ) ಕಷ್ಟಕರವಾಗಿರಬಹುದು, ಆದಾಗ್ಯೂ ಆತನು ಕ್ರಮೇಣದಲ್ಲಿ ಅರಸನಾದ ಅಬೀಮೆಲೆಕನ ಸಂಗಡ ಉತ್ತಮ ಬಾಂಧವ್ಯವನ್ನು ಹೊಂದಿದನು (ಆದಿಕಾಂಡ 20; 21). ಆತನ ನಂಬಿಕೆಯು ಅವನನ್ನು ಪರಲೋಕದಲ್ಲಿ ದೇವರ ಸನ್ನಿಧಿಯಲ್ಲಿ ಹೋಗುವದಕ್ಕೆ ಹಂಬಲದಿಂದಿರುವಂತೆ ಮಾಡಿರಬಹುದು.

**ವಚನಗಳು 14-16.** ಮೂಲಪಿತೃಗಳು **ಸ್ವದೇಶವನ್ನು** (*πατρίς, patris*) "ತಾಯ್ನಾಡನ್ನು" **ಹುಡುಕಿದರು** (ವ. 14). ತತ್ಪರಿಣಾಮವಾಗಿ, ಅವರು ತಮ್ಮನ್ನು ದೇವರು ಎಲ್ಲಿಗೆ ನಡಿಸುತ್ತಾನೋ ಅಲ್ಲಿಗೆ ಆತನನ್ನು ಹಿಂಬಾಲಿಸಿದರು. ಅವರೆಲ್ಲರೂ **ಉತ್ತಮವಾದ ದೇಶವನ್ನು ಹಾರೈಸಿದರು** (ವ. 16), ಅದು ಅವರ ಸ್ವಂತವಾಗಿರುತ್ತಿದ್ದ **ಪರಲೋಕದ** ದೇಶವಾಗಿತ್ತು (ವ. 14). ಅವರಿಗೆ ಭೂಮಿಯ ಯಾವ ಸ್ವದೇಶವೂ ಇರಲಿಲ್ಲ, ಊರ್ ಪಟ್ಟಣವನ್ನು ಶಾಶ್ವತವಾಗಿ ತೊರೆದು ಬಂದಿದ್ದರು. ಅವರು ನಿತ್ಯವಾದ ಮೌಲ್ಯಗಳನ್ನು ಯಾವಾಗಲೂ ತಮ್ಮ ಮನಸ್ಸುಗಳಲ್ಲಿಟ್ಟುಕೊಂಡಿದ್ದರು.

ಈ ಮೂಲಪಿತೃಗಳು ಮೊದಲು ಆತ್ಮೀಕ ಸಂಗತಿಗಳನ್ನು ಹುಡುಕಿದರಾದ್ದರಿಂದ **ದೇವರು** ಈ ನಂಬಿಗಸ್ತರಾದ ಮೂಲಪಿತೃಗಳ ಬಗ್ಗೆ ಹೆಮ್ಮೆ ಪಟ್ಟನು, ಮತ್ತು ಆತನು **ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೊಳ್ಳ**ಲಿಲ್ಲ (ವ. 16; ನೋಡಿರಿ ವಿಮೋಚನಕಾಂಡ 3:6). 16ನೇ ವಚನದ ಮಾತುಗಳು 2:11, 12ನೇ ವಚನಗಳನ್ನು ಮತ್ತು ಕೀರ್ತನೆ 22:22ರ ಉಲ್ಲೇಖನವನ್ನು ಜ್ಞಾಪಿಸುತ್ತವೆ, ಅದು ಯೇಸು ತನ್ನ ಶಿಷ್ಯರನ್ನು ತನ್ನ "ಸಹೋದರರು" ಎಂದು ಕರೆಯುವದಕ್ಕೆ ಅನ್ವಯಿಸಲ್ಪಟ್ಟಿದೆ. ಶತಮಾನಗಳ ಬಳಿಕ ಮೂಲ ಪಿತೃವಾದ ಪೌಲನಂತಹ ಮೂಲಪಿತೃಗಳು ಪರಲೋಕದ ಒಂದು ಪ್ರತಿಫಲವನ್ನು ಸಂಪಾದಿಸಿಕೊಳ್ಳುವದಕ್ಕೆ ಎಲ್ಲವನ್ನೂ ನಷ್ಟ ಪಡಿಸಿಕೊಳ್ಳುವದಕ್ಕೆ ಮನಸ್ಸುಳ್ಳವರಾಗಿದ್ದರು (ನೋಡಿರಿ ಫಿಲಿಪ್ಪಿ 3:8). ಕ್ರಿಸ್ತನು ಅವರಿಗೆ ಪರಿಪೂರ್ಣವಾದ ರಕ್ಷಣೆಯನ್ನುಂಟು ಮಾಡುವದಕ್ಕೆ ಹೇಗೆ ಮರಣಿಸಲಿದ್ದಾನೆಂಬುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ, ಆದರೆ ಅವರು ದೇವರ ವಾಗ್ದಾನಗಳನ್ನು ನಂಬಿದರು.

ವಾಗ್ದಾನ ಮಾಡಲ್ಪಟ್ಟಿದ್ದ ಈ ದೇಶದಲ್ಲಿ, ಅವರು "ಕೈಯಿಂದ ಕಟ್ಟಿರದ ಮನೆಯನ್ನು" ಕಂಡುಕೊಳ್ಳುವದಕ್ಕೆ ಸಾಧ್ಯವಿಲ್ಲವೆಂದು ನಂಬಿದ್ದರು (2 ಕೊರಿಂಥ 5:1). ಅವರು ದೇವರ ಮೇಲೆ ಮುಖ್ಯ ಮಗನವನ್ನು ಇಟ್ಟಿದ್ದರು, ಆತನ ಕರೆಯನ್ನು ಅನುಸರಿಸುವವರಾಗಿದ್ದರು, ಮತ್ತು ಅವರು ಹಿಂದೆ ಬಿಟ್ಟು ಬಂದಿದ್ದ ದೇಶದ ಬಗ್ಗೆ ಅಷ್ಟಾಗಿ ಯೋಚನೆಯನ್ನು ಮಾಡಲಿಲ್ಲ (ವ. 15). ನಾವು ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳುವದಾದರೆ ಭೂಲೋಕದ ಸಂಗತಿಗಳಲ್ಲಿ ಮಗ್ನರಾಗಿರದೆ ಪರಲೋಕದ ಬಗ್ಗೆ ಎಷ್ಟೊಂದು ಹಂಬಲಿಸುವೆವು!

16ನೇ ವಚನವು ಪರಲೋಕದ ದೇಶದ ಕುರಿತ ಸಂಭಾಷಣೆಯನ್ನು ಮುಕ್ತಾಯಗೊಳಿಸುತ್ತದೆ, ಅದು ಅಬ್ರಹಾಮ ಮತ್ತು ಆತನ ಕುಟುಂಬದವರು ನಿಜವಾಗಿಯೂ ಸೇರಿದ್ದ ದೇಶವಾಗಿತ್ತು. ಅವರು ಊರ್ ಅಥವಾ ಕಾನಾನ್ ದೇಶವನ್ನು ತಮ್ಮ ಸ್ವಂತ ಮನೆಯೆಂದು ಪರಿಗಣಿಸಲಿಲ್ಲ. ಅವರು ನಿರೀಕ್ಷಿಸಿದ್ದ ಪಟ್ಟಣದ ನೆರವೇರಿಕೆಯು ಅವರ ಜೀವಿತಕಾಲದಲ್ಲಿ ಸಂಭವಿಸುವದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡಾಗ ಅವರಿಗಿದ್ದ ಪರಲೋಕ ಪಟ್ಟಣದ ನಿರೀಕ್ಷೆಯು ಅವರನ್ನು ನಿರಾಶೆಗೊಳ್ಳುವದರಿಂದ ತಡೆಯಿತು. "ಈ

ಪರಲೋಕದ ನಿರೀಕ್ಷೆಯು ಈ ಭೂಲೋಕದ ಜೀವಿತದಲ್ಲಿ ನಿರ್ಲಕ್ಷ್ಯಗೊಳ್ಳುವದಕ್ಕಿಂತಲೂ ದೃಢನಿಷ್ಠೆಯಿಂದ ಮುಂದುವರೆಯುವದಕ್ಕೆ ತಳಹದಿಯಾಗಿದೆ ಎಂದು ಲೇಖಕನು ದೃಢಪಡಿಸುತ್ತಾನೆ."[45]

## ಕಷ್ಟಾನುಭವದ ಮೂಲಕ ಪರೀಕ್ಷಿಸಲ್ಪಟ್ಟ ನಂಬಿಗಸ್ತರಾದ ವ್ಯಕ್ತಿಗಳು (11:17-29)

**11:17-22**

**[17-18]ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು. ಇಸಾಕನು ಅವನ ಏಕಪುತ್ರನಾಗಿದ್ದರೂ ಮತ್ತು ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರೆಂದು ದೇವರು ಅವನಿಗೆ ಹೇಳಿದ್ದರೂ ಆ ವಾಗ್ದಾನಗಳನ್ನು ಹೊಂದಿದ ಅವನು ಆ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕಿದ್ದನು. [19]ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥನಾಗಿದ್ದಾ ನೆಂದು ತಿಳುಕೊಂಡನು. ಮತ್ತು ಸತ್ತವರೊಳಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು.**

**[20]ನಂಬಿಕೆಯಿಂದಲೇ ಇಸಾಕನು ಯಾಕೋಬನನ್ನೂ ಏಸಾವನನ್ನೂ ಆಶೀರ್ವದಿಸಿದಾಗ ಮುಂದೆ ಸಂಭವಿಸಬೇಕಾದ ಸಂಗತಿಗಳನ್ನು ಸೂಚಿಸಿದನು. [21]ಯಾಕೋಬನು ತಾನು ಸಾಯುತ್ತಿರುವಾಗ ನಂಬಿಕೆಯಿಂದಲೇ ಯೋಸೇಫನ ಮಕ್ಕಳಿಬ್ಬರನ್ನು ಆಶೀರ್ವದಿಸಿದನು; ತನ್ನ ಕೋಲಿನ ಮೇಲೆ ಬಾಗಿಕೊಂಡು ದೇವರಿಗೆ ನಮಸ್ಕಾರಮಾಡಿದನು. [22]ಯೋಸೇಫನು ತೀರಿ ಹೋಗುವಾಗ ಇಸ್ರಾಯೇಲ್ಯರು ಐಗುಪ್ತದೇಶದಿಂದ ಹೊರಡುವದನ್ನು ಕುರಿತು ನಂಬಿಕೆಯಿಂದಲೇ ಮಾತಾಡಿ ತನ್ನ ಶವವನ್ನು ತಕ್ಕೊಂಡು ಹೋಗುವ ವಿಷಯದಲ್ಲಿ ಅಪ್ಪಣೆ ಕೊಟ್ಟನು.**

**ವಚನಗಳು 17-19. ಅಬ್ರಹಾಮನ** ಪರಿಶೋಧನೆಗಳೆಲ್ಲಾ ಆತನು ಇಸಾಕನನ್ನು ಒಂದು ಯಜ್ಞವಾಗಿ **ಸಮರ್ಪಿಸುವದ**[ದರ] ಮುಂದೆ ಮಹತ್ವಹೀನವಾಗಿದ್ದವು.[46] ಆತನಿಗೆ ತನ್ನ ಸ್ವಂತ ಮನೆಯನ್ನು ತೊರೆದು, ತಿಳಿಯದ ದೇಶಗಳಿಗೆ ಪ್ರಯಾಣಿಸುವಂತೆ, ಮತ್ತು ಇಸ್ಮಾಯೇಲನನ್ನು ಹಾಗೂ ಆತನ ತಾಯಿಯನ್ನು ಸ್ವಲ್ಪವೇ ಸ್ವಲ್ಪ ರೊಟ್ಟಿ ಮತ್ತು ನೀರಿನೊಂದಿಗೆ ಹೊರಕ್ಕೆ ಕಳುಹಿಸಿ ಬಿಡುವಂತೆ ಹೇಳಲಾಯಿತು. ಹೇಗೂ, ಇಸಾಕನನ್ನು ಯಜ್ಞವೇದಿಯ ಮೇಲೆ ಇಡುವಂತೆ ಆತನಿಗೆ ಹೇಳಿದಾಗ, ಆತನು ಸರ್ವೋಚ್ಛವಾದ **ಪರಿಶೋಧನೆ** (ಪರೀಕ್ಷೆ) ಯನ್ನು ಎದುರಿಸಿದನು.

ಈ ಆಜ್ಞೆಯನ್ನು ಕೇಳಿದಾಗ ಅಬ್ರಹಾಮನು ಅನೇಕ ತಾರ್ಕಿಕವಾದ ಕಾರಣಗಳನ್ನು ಕೊಟ್ಟಿರಬಹುದಿತ್ತು: "ತಂದೆಯೇ, ಇದು ನಿನ್ನ ಗುಣಸ್ವಭಾವದೊಂದಿಗೆ ಸಾಮಂಜಸ್ಯವಿಲ್ಲದಂತೆ ತೋರುತ್ತದೆ; ಇದು ನಿನ್ನ ವಾಗ್ದಾನಗಳಿಗೆ ತದ್ವಿರುದ್ಧವಾಗುವಂತೆ ಕಾಣಿಸುತ್ತದೆ." ಹೇಗೂ, ಯಾವ ಮಾನಸಿಕ ಆಕ್ಷೇಪಣೆಗಳಿಗೂ ಆತನ ನಂಬಿಕೆಯನ್ನು ಸೋಲಿಸುವದಕ್ಕಾಗಲಿಲ್ಲ, ಆದ್ದರಿಂದ ಅಬ್ರಹಾಮನು ಯೋಚಿಸುವದಕ್ಕೆ ಬಹಳಷ್ಟು ಸಮಯಾವಕಾಶವುಳ್ಳವನಾಗಿ ಎರಡು ದಿನಗಳ ಕಾಲ ಸುಮಾರು ನಾಲ್ವತ್ತು ಮೈಲುಗಳಷ್ಟು ದೂರ ಪ್ರಯಾಣಿಸಿದ್ದನು. ಆತನು ನಿದ್ರೆಯಿಲ್ಲದೆ ರಾತ್ರಿಗಳನ್ನು ಕಳೆದನು ಎಂಬುದರಲ್ಲಿ ಸಂಶಯವಿಲ್ಲ, ಆದರೆ ಆತನು ತನ್ನ ಆತ್ಮವೇ ಆಗಿರುವವನಂತಿದ್ದ ಅತ್ಯಂಥ ಪ್ರಿಯನಾದವನವನ್ನು ಯಜ್ಞವಾಗಿ ಸಮರ್ಪಿಸುವದಕ್ಕೆ ಈಗಲೂ ಮುಂದಾಗಲಿದ್ದನು. ಅಬ್ರಹಾಮನು ಈ ಮಾನವ ಯಜ್ಞವನ್ನು ಮಾಡುವ ಕೃತ್ಯದಲ್ಲಿಯೂ ವಿಧೇಯನಾಗುವನೆಂಬುದನ್ನು ದೇವರು ಕಂಡಾಗ, ಆತನ ಸಂಗಡ ತನ್ನ

**ವಾಗ್ದಾನ**ವನ್ನು ನವೀಕರಿಸಿಕೊಂಡನು (ಆದಿಕಾಂಡ 22:11-18).

17ನೇ ವಚನದಲ್ಲಿ ಬಳಸಲಾದ ಗ್ರೀಕ್ ಕಾಲರೂಪವು ದೇವದೂತನು ಆತನನ್ನು ತಡೆಯುವ ಹೊತ್ತಿಗೆ ಆತನು ಈಗಾಗಲೇ ಇಸಾಕನನ್ನು ಸಮರ್ಪಿಸುವ ಪ್ರಕ್ರಿಯೆಯಲ್ಲಿದ್ದನು ಎಂಬುದನ್ನು ಸೂಚಿಸುತ್ತದೆ.[47] ಆತನು ಇಸಾಕನನ್ನು "ಸಮರ್ಪಿಸುವದಕ್ಕಿದ್ದನು." ಅಬ್ರಹಾಮನ ನಂಬಿಕೆಯ ಬಲದಲ್ಲಿ ಯಾವ ಸಂಶಯವೂ ಇರುವದಿಲ್ಲ.

ಇಸಾಕನು ದೇವರ ವಾಗ್ದಾನಗಳ ಭರಿಸಲಾಗದಂತಹ ಭಾಗವಾಗಿದ್ದರಿಂದ, ಯಜ್ಞವನ್ನು ಸಮರ್ಪಿಸಿದ ಬಳಿಕ ದೇವರು ಇಸಾಕನನ್ನು ಪುನರುತ್ಥಾನಗೊಳಿಸುವನೆಂದು ಅಬ್ರಹಾಮನು ಮುಕ್ತಾಯಕ್ಕೆ ಬಂದಿದ್ದನು (ವ. 19). ದೇವರು ಜೀವ ಮತ್ತು ಮರಣ ಎರಡರ ಮೇಲೆಯೂ ನಿಯಂತ್ರಣ ಹೊಂದಿದ್ದಾನೆಂದು ಆತನಿಗೆ ಗೊತ್ತಿತ್ತು. ಲೇಖಕನು ಇಸಾಕನನ್ನು ಸಮರ್ಪಿಸುವದರ ನೈತಿಕ ಪ್ರಶ್ನೆಯ ಬಗ್ಗೆ ಚರ್ಚಿಸಲಿಲ್ಲ. ದೇವರು ಅಂಥ ಯಜ್ಞವನ್ನು ಅಂಗೀಕರಿಸಿಕೊಂಡು ಆಗಲೂ ತನ್ನ ಪ್ರಾಮಾಣಿಕತೆಯನ್ನು ಕಾಪಾಡಿಕೊಳ್ಳಬಹುದಾದ ಏಕೈಕ ದಾರಿ ಇದೊಂದೇ ಆಗಿತ್ತೆಂಬುದಾಗಿ ಅಬ್ರಹಾಮನು ತರ್ಕಿಸಿರುವಂತೆ ತೋರುತ್ತದೆ.[48]

ಈ ಸತ್ಯವು ಆದಿಕಾಂಡ 22:5ರಲ್ಲಿ ಅಬ್ರಹಾಮನ ನುಡಿಗಳಿಂದ ಪರೋಕ್ಷವಾಗಿ ಸೂಚಿತವಾಗಬಹುದಾಗಿದೆ: "ನಾನು ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ." ದೇವರು ಈ ಮುಂಚೆ ಯಾರಾದರೊಬ್ಬರನ್ನು ಸತ್ತವರೊಳಗಿಂದ ಎಬ್ಬಿಸಿದ್ದರ ಬಗ್ಗೆ ಲಿಖಿತ ದಾಖಲೆಯು ಇರದ ಹೊರತು, ಆತನಿಗೆ ತನ್ನ ಆಶಾವಾದವನ್ನು ಆಧಾರಗೊಳಿಸುವದಕ್ಕೆ ಇದಕ್ಕೂ ಮುಂಚೆ ಸಂಭವಿಸಿದ ಯಾವ ಘಟನೆಯೂ ಆತನ ಮುಂದಿರಲಿಲ್ಲ. ಅಬ್ರಹಾಮನಿಗಾದರೋ, ಆತನಿಗಿದ್ದ ಗಮನಾರ್ಹವಾದ ನಂಬಿಕೆಯ ಕಾರಣದಿಂದ ಪುನರುತ್ಥಾನವು ಸಾಧ್ಯವಿತ್ತು.

ಅಬ್ರಹಾಮನು ಇದನ್ನು ದೇವರ ಕಳಕಳಿಗೆ ಬಿಟ್ಟ ವಿಚಾರ, ಹೊರತು ಅಬ್ರಹಾಮನದಲ್ಲ, ಆತನೇ ತನ್ನ ವಾಗ್ದಾನ ಮತ್ತು ಆತನ ಆಜ್ಞೆಯ ನಡುವೆ ಸಂಧಾನ ಮಾಡಬೇಕಿತ್ತು ಎಂಬದಾಗಿ ಕಂಡಿದ್ದನೆಂದು ತೋರುತ್ತದೆ ಎಂಬದಾಗಿ F. F. Bruceನು ಗಮನಕ್ಕೆ ತರುತ್ತಾನೆ.[49] ಅದು ಹಾಗಿರುವದಾದಲ್ಲಿ (ಮತ್ತು ಅದು ಸ್ವಲ್ಪ ಮಟ್ಟಿಗೆ ಅತಿರೇಕವೆನಿಸುತ್ತದೆ), ಇದು ಇನ್ನಷ್ಟು ಹೆಚ್ಚಾಗಿ ಒಂದು ನಂಬಿಕೆಯ ಆಶ್ಚರ್ಯಕರವಾದ ಕ್ರಿಯೆಯಾಗುತ್ತದೆ. ಆತನು ಪೂರ್ತಿಯಾಗಿ ತರ್ಕ ಮಾಡಿದ್ದರೆ, ಆತನು ಹಾಗೆ ಮಾಡಿರುವಂತೆ ತೋರುತ್ತದೆ, ಆತನು ಹೀಗೆ ಯೋಚಿಸಿರುತ್ತಿದ್ದನು, "ದೇವರು ನನಗೆ ಮತ್ತು ಸಾರಳಿಗೆ ನಮ್ಮ ಸ್ವಂತ ಮಗನು ಹುಟ್ಟುವನೆಂದು ವಾಗ್ದಾನ ಮಾಡಿದ್ದಾನೆ. ಆತನ ಜೀವವೇ ಮಾನವ ದೃಷ್ಟಿಯಿಂದ ನೋಡಿದರೆ ಗರ್ಭಧರಿಸುವದಕ್ಕೆ ಅಸಾಧ್ಯವಾಗಿತ್ತು, ಆದರೆ ದೇವರು ಗರ್ಭಧರಿಸುವಂತೆ ನಮಗೆ ಶಕ್ತಿಯನ್ನು ಕೊಟ್ಟನು; ಆದದರಿಂದ, ಆತನು ಅವನನ್ನು ಪುನಃ ನನಗೆ ಹಿಂದಿರುಗಿಸಬಲ್ಲನು." ಅಬ್ರಹಾಮನು ಏನೇ ಯೋಚಿಸುತ್ತಿದ್ದರೂ ಸರಿಯೇ, ನಮಗೆ ಇಷ್ಟು ಮಾತ್ರ ಹೇಳಲ್ಪಟ್ಟಿದೆ: ಆಜ್ಞೆಯು ಕೊಡಲ್ಪಟ್ಟಾಗ, ಅಬ್ರಹಾಮನು ತಕ್ಷಣವೇ ವಿಧೇಯನಾಗುವದಕ್ಕೆ ಮುಂದಾದನು.

ದೇವರು ಅಬ್ರಹಾಮನಿಗೆ ತನ್ನ ಮಗನನ್ನು ಯಜ್ಞವಾಗಿ ಸಮರ್ಪಿಸುವಂತೆ ಕೇಳುವದರಲ್ಲಿ ಹೇಗೆ ಒದಗಿಸುವನು? ಅಬ್ರಹಾಮನು **ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥನಾಗಿದ್ದಾನೆಂದು ತಿಳುಕೊಂಡನು** (ವ. 19), ಯಾಕೆಂದರೆ ದೇವರಿಗೆ ಎಲ್ಲವೂ ಸಾಧ್ಯವಿದೆ (ಮತ್ತಾಯ 19:26; ಮಾರ್ಕ 10:27; ಲೂಕ 18:27). ವಾಸ್ತವದಲ್ಲಿ, ಅವಶ್ಯವಾದಲ್ಲಿ, ಆತನು ಕಲ್ಲುಗಳಿಂದ ಸಹ ಮಕ್ಕಳನ್ನು ಎಬ್ಬಿಸಬಲ್ಲನು (ನೋಡಿರಿ ಲೂಕ 3:8). ಅಬ್ರಹಾಮನು ದೇವರ ಆಶೀರ್ವಾದಗಳ ಬಗ್ಗೆ ಈ ಮುಂಚೆ ಕಲಿತುಕೊಂಡ ಕಾರ್ಯಗಳ ಮೇಲೆ ಮಾತ್ರವೇ ತನ್ನ

ನಂಬಿಕೆಯನ್ನು ಆಧಾರಗೊಳಿಸಿದ್ದರೆ, ಮತ್ತು ಬೇರೊಂದು ಪುನರುತ್ಥಾನದ ಕುರಿತ ಯಾವದೇ ತಿಳುವಳಿಕೆಯ ಮೇಲೆ ಆಧಾರಗೊಳಿಸಿರಲಿಲ್ಲವಾದರೆ, ಖಂಡಿತವಾಗಿಯೂ ಅದೊಂದು ಮಹಾನ್ ನಂಬಿಕೆಯೇ ಸರಿ.[50]

ಮೋರಿಯ ಪರ್ವತದ ಮೇಲೆ ನಡೆದ ಈ ಘಟನೆಯು ಎಂತಹ ಅಸಹಜವಾದ ಸಂಗತಿಯಾಗಿತ್ತೆಂದರೆ ಆದಿ ಕ್ರೈಸ್ತರು ಇಸಾಕನನ್ನು ಕ್ರಿಸ್ತನಿಗೆ ಹೋಲಿಕೆ ಮಾಡುತ್ತಿದ್ದರು.[51] 19ನೇನ ವಚನವು ಒಂದು ಸಹಜವಾದ **ಉಪಮಾನದಂತೆ** (παραβολή, *parabolē*) ಎಂಬ ಮಾತನ್ನು ಹೊಂದಿದೆ. ಇಸಾಕನು, ಒಂದು ಸಂಕೇತದಲ್ಲಿ ದೇವರ ಕುಮಾರನಂತಿದ್ದನು, ಆತನನ್ನು ಮರಣದಿಂದ ತಪ್ಪಿಸಲಾಗಿರಲಿಲ್ಲ ಆದರೆ "ಸತ್ತವರೊಳಗಿಂದ ಎಬ್ಬಿಸಲ್ಪ" ಡಲಿದ್ದನು (ರೋಮಾ 6:4, 9). ಹೇಗೂ, ಈ ಕಥನವು ಎಲ್ಲಾ ನೀತಿವಂತರಿಗಾಗಿ ಪುನರುತ್ಥಾನಕ್ಕೆ ಒಂದು ಮಾದರಿ, ಅಥವಾ ಪೂರ್ವಛಾಯೆ ಸಹ ಆಗಿರಬಲ್ಲದು.[52] ಯೇಸು ಯೋಹಾನ 8:56ರಲ್ಲಿ ತನ್ನ ಕುರಿತ ಈ ವೈಶಿಷ್ಟ್ಯವಾದ ಪ್ರಾತಿನಿಧ್ಯವನ್ನು ಕುರಿತು ಉಲ್ಲೇಖಿಸುತ್ತಿದ್ದಾನೆಂದು ಕೆಲವರು ಯೋಚಿಸುತ್ತಾರೆ. ಇಸಾಕನು ಯಜ್ಞವಾಗಿ ಸಮರ್ಪಿಸಲ್ಪಟ್ಟಿದ್ದು ಮತ್ತು ಸತ್ತವರೊಳಗಿಂದ ಹಿಂದಕ್ಕೆ ಪಡೆದುಕೊಳ್ಳಲ್ಪಟ್ಟಿದ್ದು ಒಂದು ಸಾಂಕೇತಿಕ ಅರ್ಥದಲ್ಲಾಗಿತ್ತು. ಅಬ್ರಹಾಮನು ಇಸಾಕನನ್ನು ಸತ್ತಂತೆಯೇ ಎಂದು ಪರಿಗಣಿಸಿದ್ದನು; ಆದದರಿಂದ, ಆತನ ಪಾಲಿಗಾದರೋ ಅದೊಂದು ಪುನರುತ್ಥಾನವೇ ಆಗಿತ್ತು.

**ಏಕಪುತ್ರನು** (ವ. 17, 18) ಎಂಬುದರ ಅನುವಾದಿತ ಪದವು ಯೋಹಾನ 3:16ರಲ್ಲಿ ಬಳಸಿರುವ ಅದೇ ಪದದಿಂದ (μονογενής, *monogenēs*) ದಿಂದ ಬಂದದ್ದಾಗಿದೆ. ಅಲ್ಲಿ ಅರ್ಥವು ಮತ್ತು ಉತ್ತಮವಾದ ಅನುವಾದವು "ಏಕಮಾತ್ರ ಪುತ್ರನು" ಅಥವಾ "ವಿಶಿಷ್ಟ ಮಗನು" ಎಂದಾಗಿರಬಲ್ಲದಾಗಿದೆ. ಯಜ್ಞವನ್ನು ಸಮರ್ಪಿಸುವ ವೇಳೆಯಲ್ಲಿ ಇಸಾಕನು ಅಬ್ರಹಾಮನಿಗೆ ಏಕೈಕ ಮಗನಾಗಿರಲಿಲ್ಲ, ಆದರೆ ಆತನು ಖಂಡಿತವಾಗಿಯೂ "ವಿಶಿಷ್ಟ ಮಗನಾಗಿದ್ದನು."

**ವಚನ 20.** ಮೂಲಪಿತೃತ್ವದ ಆಶೀರ್ವಾದವನ್ನು ತನ್ನ ತಂದೆಯಿಂದ ಪಡೆದುಕೊಂಡಿದ್ದ **ಇಸಾಕನು**, ಅದೇ ರೀತಿಯಲ್ಲಿಯೇ ತನ್ನ ಪುತ್ರರನ್ನು **ಆಶೀರ್ವದಿಸುವದಕ್ಕೆ** ಅಧಿಕಾರ ಕೊಡಲ್ಪಟ್ಟಿದ್ದನು. ಆದದರಿಂದ, ಆತನು ಪ್ರೇರಣೆಯಿಂದ ದೇವರ ಚಿತ್ತವನ್ನೇ ಮಾತಾಡಿದನು.

ಇಸಾಕನು **ಯಾಕೋಬನನ್ನೂ ಏಸಾವನನ್ನೂ** ಆಶೀರ್ವದಿಸುವ ಕಥೆಯು ಆದಿಕಾಂಡ 27:26-40ರಲ್ಲಿ ಸಿಕ್ಕುತ್ತದೆ. ವಂಚಿಸಲ್ಪಟ್ಟವನಾಗಿ ಆತನು ತಿಳಿಯದೆ ಯಾಕೋಬನನ್ನು ಆಶೀರ್ವದಿಸಿದನು. ಹೇಗೂ, ದೇವರು ಅದನ್ನು ರದ್ದುಗೊಳಿಸಿ ಸರಿಯಾದ ಪುತ್ರನನ್ನು ಆಶೀರ್ವದಿಸಿದನೆಂದು ಆತನು ನಂಬಿದ್ದನು, ಮತ್ತು ಆದ್ದರಿಂದಲೇ ಆತನು ಅನಂತರದಲ್ಲಿ ಆತನು ಬದಲಿಸದಿರುವದರಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಇದು ಕುತಂತ್ರದಿಂದ ಸಂಭವಿಸಿರುವಂತೆ ಕಂಡಿದ್ದಾಗ್ಯೂ ದೇವರು ತನ್ನ ಚಿತ್ತದ ವ್ಯಾಪ್ತಿಯೊಳಗೆ ಅದನ್ನು ಅನುಮತಿಸಿರುತ್ತಾನೆಂದು ಇಸಾಕನು ನಂಬಿರಬಹುದಾಗಿದೆ. ನಿಶ್ಚಯವಾಗಿಯೂ, ಆತನು "ಅದೃಷ್ಟ" ದಲ್ಲಿ ನಂಬಿಕೆಯಿಡಲಿಲ್ಲ. ಬದಲಾಗಿ, ತನ್ನ ಪುತ್ರರಿಗೆ ಸಮೃದ್ಧಿಯ ಆಶೀರ್ವಾದಗಳನ್ನು ನುಡಿಯುವ ವೇಳೆ ಅವರಿಗಾಗಿರುವ ದೇವರ ಚಿತ್ತವನ್ನೇ ಮಾತಾಡುತ್ತಿದ್ದೇನೆಂದು ಆತನಿಗೆ ಗೊತ್ತಿತ್ತು. ಬಹುಶಃ ಆತನು – ಜನರು ಯಾವಾಗಲೂ ಊಹಿಸಿಕೊಳ್ಳುವಂತೆ – ಇಬ್ಬರೊಳಗೆ ಹಿರಿಯನು, ಹೆಚ್ಚು ಬಲಿಷ್ಠವಾದ, ಮತ್ತು ಹೆಚ್ಚು ಪರಿಶ್ರಮಶಾಲಿ ಆಗಿರುವವನು ದೇವರ ಆಯ್ಕೆಯಾಗುವನೆಂದು ಊಹಿಸಿಕೊಳ್ಳುವದರಲ್ಲಿ ತಪ್ಪು ನಿರ್ಣಯಕ್ಕೆ ಬಂದಿದ್ದನಷ್ಟೆ. ಹೇಬೆಲನು ಕಾಯಿನನಿಗಿಂತ ಬಲಹೀನನಾಗಿದ್ದನು; ಯಾಕೋಬನು ಏಸಾವನಿಗಿಂತ ಬಲಹೀನನಾಗಿದ್ದನು; ಮತ್ತು ದಾವೀದನು, ಅಭಿಷೇಕಿಸಲ್ಪಡುವ ಸಮಯದಲ್ಲಿ,

ತನ್ನೆಲ್ಲಾ ಅಣ್ಣಂದಿರಿಗಿಂತಲೂ ಬಲಹೀನನೂ ಚಿಕ್ಕವನೂ ಆಗಿದ್ದನು. ದೇವರು "ಶಾರೀರಿಕ ಸಂಬಂಧದಲ್ಲಿ ಅಲ್ಲ ಆದರೆ ನಂಬಿಕೆಯ ಸಂಬಂಧದಲ್ಲಿಯೇ ಆರಿಸಿಕೊಂಡನು."[53]

ಆರಂಭದಲ್ಲಿ, ಒಂದಾದರ ಮೇಲೊಂದರಂತೆ ನಡೆದ ಘಟನೆಗಳು ಏಸಾವನ ಸಂತತಿಯವರು (ಎದೋಮ್ಯರು) ಹೆಚ್ಚು ಆಶೀರ್ವದಿಸಲ್ಪಟ್ಟವರಂತೆ ಕಂಡರು, ಆದರೆ ಸೌಲ ಮತ್ತು ದಾವೀದನು ಕ್ರಮೇಣದಲ್ಲಿ ಅವರನ್ನು ಜಯಿಸಿಕೊಂಡರು (1 ಸಮುವೇಲ 14:47; 2 ಸಮುವೇಲ 8:14). ಅಂತಿಮವಾಗಿ, ಕ್ರಿ.ಪೂ. 135-106ರಲ್ಲಿ ಇಸ್ರಾಯೇಲಿನಿಂದ ಆಳ್ವಿಕೆ ಮಾಡಿದ John Hyrcanusನು, ಮೆಕ್ಕಬ್ಬಿಯರ ಕಾಲಾವಧಿಯಲ್ಲಿ ಎದೋಮ್ಯರನ್ನು ಜಯಿಸಿ ಅವರನ್ನು ಸುನ್ನತಿ ಮಾಡಿಸಿಕೊಳ್ಳುವಂತೆ ಒತ್ತಾಯಿಸಿ ಯೆಹೂದಿ ದೇಶದ ಜನಾಂಗದ ಭಾಗವಾಗಿ ಮಾಡಿದನು.[54] ಇದು ನಮ್ಮ ಮನಸ್ಸುಗಳಲ್ಲಿ "ದೇವರ ಅಪರಿಮಿತ ಜ್ಞಾನ, ಎಲ್ಲವನ್ನೂ ಮೀರಿ ನಿಲ್ಲುವ ಸಾರ್ವಭೌಮತೆ ಮತ್ತು ಆತ್ಯಾಶ್ಚರ್ಯಕರವಾದ ಕರುಣೆಯ" ಛಾಪು ಮೂಡಿಸುತ್ತದೆ.[55]

**ವಚನ 21. ಯಾಕೋಬನು** ತನ್ನ ಜೀವನದ ಆರಂಭದಲ್ಲಿ ತಾನಿಷ್ಟ ಪಟ್ಟದ್ದನ್ನು ಪಡಕೊಳ್ಳುವದಕ್ಕೆ ತನ್ನ ಸ್ವಂತ ತಂತ್ರಗಳ ಮೇಲೆ ಅವಲಂಭಿತನಾಗಿದ್ದನು. ಆತನು ದೇವರಲ್ಲಿ ಸಂಪೂರ್ಣವಾಗಿ ವಿಶ್ವಾಸವಿಡುವದಕ್ಕೆ ತೊಳಲಾಡುತ್ತಿದ್ದನು. ಈ ವಚನವು ಆತನ ನಂಬಿಕೆಯು ಪರಿಪಕ್ವದಲ್ಲಿರುವದನ್ನು ಪ್ರತಿಬಿಂಬಿಸುತ್ತದೆ.

ಮೂಲಪಿತೃಗಳು ಮರಣಿಸುವದಕ್ಕೆ ಸ್ವಲ್ಪ ಮುಂಚೆ ತಮ್ಮ ಮಕ್ಕಳಿಗೆ ಆಶೀರ್ವಾದಗಳನ್ನು ಕೊಡುತ್ತಿದ್ದರು. ಇವುಗಳು ದೇವರಿಂದ ಬಂದ ಪ್ರಕಟನೆಗಳಾಗಿರುತ್ತಿದ್ದವು ಮತ್ತು ಆ ಕಾರಣದಿಂದ ನಂಬಿಕೆಯ ಮೂಲಕ ಕೊಡಲ್ಪಟ್ಟವುಗಳಾಗಿದ್ದವು. ಆಶೀರ್ವಾದವು ಹಿರಿಯನನ್ನು ನಿರ್ಲಕ್ಷಿಸಬಹುದಿತ್ತು – ಈ ಪ್ರಕರಣದಲ್ಲಿ, ರೂಬೇನ – ಮತ್ತು ಹೆಚ್ಚಾದ ನಂಬಿಕೆಯುಳ್ಳವನಿಗೆ ಕೊಡಲ್ಪಡುತ್ತಿತ್ತು. **ಯೋಸೇಫ**[ನ] **ಮಕ್ಕಳಿಬ್ಬರನ್ನು** ಆಶೀರ್ವದಿಸಿದ್ದು ಯೋಸೇಫನಿಗೆ ತನ್ನ ಅಣ್ಣಂದಿರಿಗಿಂತ ಮೇಲಿನವನೆಂಬ ಸನ್ಮಾನವನ್ನು ಕೊಟ್ಟಿತು, ಅದು ಬಹಳ ವರ್ಷಗಳ ಹಿಂದೆಯೇ, ಆತನು ಅವರಿಗೆ ತನ್ನ ಕನಸುಗಳ ಕುರಿತು ಹೇಳಿದ ವೇಳೆಯೇ ಪರೋಕ್ಷವಾಗಿ ಸೂಚಿಸಲ್ಪಟ್ಟಿತ್ತು (ಆದಿಕಾಂಡ 37:5-11). ವಾಸ್ತವದಲ್ಲಿ, ಯಾಕೋಬನು ಯೋಸೇಫನ ಇಬ್ಬರು ಮಕ್ಕಳನ್ನು ತನ್ನ ಪುತ್ರರನ್ನಾಗಿ ಸ್ವೀಕಾರ ಮಾಡಿಕೊಂಡಿದ್ದನು ಮತ್ತು ಅವರಿಬ್ಬರನ್ನೂ ಆಶೀರ್ವದಿಸಿದನು, ಅವರಿಂದ ಬರುವ ಎರಡು ಕುಲಗಳ ಮೂಲಕವಾಗಿ ಯೋಸೇಫನಿಗೆ ಎರಡಷ್ಟು ಆಶೀರ್ವಾದವನ್ನು ಕೊಟ್ಟನು.

ಮನಸ್ಸೆ ಮತ್ತು ಎಫ್ರಾಯೀಮ ಯೋಸೇಫನ ಪುತ್ರರಾಗಿದ್ದರು, ಎರಡನೆಯವನು ಕಿರಿಯವನಾಗಿದ್ದನು. ಯಾಕೋಬನು ಅವರನ್ನು ಆಶೀರ್ವದಿಸುವ ವೇಳೆ ಬೇಕೆಂದೇ ತನ್ನ ಕೈಗಳನ್ನು ಬದಲಿಸಿದನು, ಪ್ರವಾದನಾತ್ಮಕವಾಗಿ ಆತನ ಹಿರಿಯ ಸಹೋದರನಿಗಿಂತಲೂ ಎಫ್ರಾಯೀಮನಿಗೆ ಹೆಚ್ಚಿನ ಆಶೀರ್ವಾದವನ್ನು ಕೊಟ್ಟನು (ಆದಿಕಾಂಡ 48:5-20). ಎಫ್ರಾಯೀಮನು ಅವರೆಡು ಕುಲಗಳಲ್ಲಿ ಶ್ರೇಷ್ಠನಾದನು; ವಾಸ್ತವದಲ್ಲಿ, ಪ್ರವಾದಿಗಳು ಅನೇಕ ಸಾರಿ ಉತ್ತರ ದಿಕ್ಕಿನಲ್ಲಿದ್ದ ಇಡೀ ರಾಜ್ಯವನ್ನು "ಎಫ್ರಾಯೀಮ" ಎಂದು ಕರೆಯುತ್ತಿದ್ದರು (ನೋಡಿರಿ **ಹೋಶೇಯ** 11:1-3, 8, 9). ಯಾಕೋಬನು ತನ್ನ ಪುತ್ರರನ್ನು **ನಂಬಿಕೆಯಿಂದಲೇ** ಆಶೀರ್ವದಿಸಿದನು ಯಾಕೆಂದರೆ ಇಸ್ರಾಯೇಲ್ ಜನರಿಗೆ ದೇವರು ಕಾನಾನ್ ದೇಶವನ್ನು ಕೊಡುತ್ತೇನೆಂದು ಮಾಡಿದ ವಾಗ್ದಾನದಲ್ಲಿ ಆತನು ಭರವಸ ಹೊಂದಿದ್ದನು. ನಂತರದಲ್ಲಿ, ಆತನು ಪ್ರತಿಯೊಬ್ಬ ಮಗನ ಸಮೃದ್ಧಿಯ ಬಗ್ಗೆ ಮುಂತಿಳಿಸಿದನು (ಆದಿಕಾಂಡ 49).

ಅವರಿಗೆ ಎಂಥ ಶ್ರೇಷ್ಠವಾದ ಪಾರಂಪರ್ಯವು ಕೊಡಲ್ಪಟ್ಟಿತ್ತು! ಯಾಕೋಬನ ಮಕ್ಕಳು

ತಮ್ಮ ಭವಿಷ್ಯವನ್ನು ಮುಂತಿಳಿಸಿದ್ದ ಪ್ರವಾದನೆಗಳನ್ನು ನೆನಪಿಸಿಕೊಳ್ಳುವದಕ್ಕೆ ಶಕ್ತರಾಗಿದ್ದರು. ಇಸ್ರಾಯೇಲ್ಯರು ನಿಜವಾಗಿಯೂ ದೈವ ವಿಧಿಯುಳ್ಳ ಜನರಾಗಿದ್ದರು. ದೇವರ ಆದುಕೊಂಡ ಜನಾಂಗವೆಂಬ ಅವರ ಸ್ಥಾನಮಾನವು ಅವರಿಗೆ ಒಂದಿಷ್ಟು ಸಮರ್ಪಕವಾದ ಹೆಮ್ಮೆಯನ್ನು ತಂದಿತ್ತು, ಆದಾಗ್ಯೂ ಅದು ಮುಂದೆ ಯೆಹೂದಿ ದುರಹಂಕಾರದ ಮಟ್ಟಕ್ಕೆ ಇಳಿದು ಹೋಗಿರಬಹುದಾಗಿದೆ.

ಯಾಕೋಬನು **ತನ್ನ ಕೋಲಿನ ಮೇಲೆ ಬಾಗಿಕೊಂಡು ದೇವರಿಗೆ ನಮಸ್ಕರಿಸಿದನು** (ಆರಾಧಿಸಿದನು). ಈ ವಚನವು ಮತ್ತೊಂದಾವರ್ತಿ LXXನ್ನು ಅನುಸರಿಸುತ್ತದೆ, ಆದರೆ Masoretic (ಇಬ್ರಿಯ ಬೈಬಲ್ ಟೀಕೆ ಟಿಪ್ಪಣಿಯ ಗ್ರಂಥ) ವಾಕ್ಯವು ಒಂದು ವ್ಯಂಜನವನ್ನು ಹೊಂದಿದ್ದು ಅದು "ಹಾಸಿಗೆ" ಎಂದು ಸೂಚಿಸುತ್ತದೆ.[56] ಲ್ಯಾಟಿನ್ Vulgate ಓದುವದಾದರೆ ಯಾಕೋಬನು "ತನ್ನ ಕೋಲಿನ ತುದಿಯನ್ನು ನಮಸ್ಕರಿಸಿದನು" ಎಂದು, ಅಂದರೆ, ತನ್ನ ಕೋಲಿಗೆ ಒಂದು ಪ್ರತಿಮೆಯೆಂಬಂತೆ ಬಾಗಿ ನಮಸ್ಕರಿಸಿದನು ಎಂದು ಸೂಚಿಸುತ್ತದೆ. "ಗ್ರೀಕ್ ವಾಕ್ಯವು ಯಾವದನ್ನು ಆರಾಧಿಸಿದನೆಂಬುದನ್ನು ಸೂಚಿಸುವದಿಲ್ಲ, ಆದರೆ ಆರಾಧನೆಯ ಭಂಗಿಯನ್ನು ಸೂಚಿಸುತ್ತದೆ."[57] ಯಾಕೋಬನು ಒಬ್ಬ ವೃದ್ಧನಾಗಿ, ತನ್ನ ಕೋಲಿನ ಮೇಲೆ ಬಾಗಿಕೊಂಡು, ಬಹುಶಃ ತನ್ನ ಹಾಸಿಗೆಯ ಮೇಲೆ ಇದ್ದುಕೊಂಡವನಾಗಿ ದೇವರ ಪ್ರವಾದನಾತ್ಮಕ ಚಿತ್ತವನ್ನು ಅವರವರಿಗೆ ತಿಳಿಸಿರಬಹುದಾಗಿದೆಯಷ್ಟೆ.

**ವಚನ 22.** ಈ ನಂಬಿಕೆಯ ಮಾತು ಆದಿಕಾಂಡ 50:24, 25ರಲ್ಲಿ ಅತಿ ಸ್ಪಷ್ಟವಾದ ರೀತಿಯಲ್ಲಿ ವ್ಯಕ್ತಪಡಿಸಲಾಗಿರುತ್ತದೆ. **ಯೋಸೇಫ**ನು ಕಾನಾನ್ ದೇಶವನ್ನು ದೇವರು ತನ್ನ ಜನರಿಗೆ ಉಡುಗೋರೆಯಾಗಿ ಕೊಡುವನೆಂಬುದಾಗಿ ದೇವರ ವಾಗ್ದಾನಗಳಲ್ಲಿ ಪೂರ್ಣ ಭರವಸವುಳ್ಳವನಾಗಿದ್ದನು. ಯೋಸೇಫನು ಐಗುಪ್ತದಲ್ಲಿ ಹೊಂದಿದ್ದ ಅತ್ಯಂಥ ದೊಡ್ಡ ಸಮೃದ್ಧಿಯು ವಾಗ್ದಾನ ದೇಶದ ಕುರಿತಾದ ದೇವರ ವಾಗ್ದಾನಗಳನ್ನು ಪಡೆದುಕೊಳ್ಳುವ ಆತನ ಬಯಕೆಯನ್ನು ಯಾವ ವಿಧದಲ್ಲಿಯೂ ಕುಗ್ಗಿಸಲಿಲ್ಲ. ಆತನು ತನ್ನೆಲ್ಲಾ ಸಂಕಷ್ಟಗಳ ನಡುವೆ ತನ್ನ ನಂಬಿಗಸ್ತಿಕೆಯನ್ನು ಕಾಪಾಡಿಕೊಂಡನು, ಯಾಕೆಂದರೆ "ದೇವರು ಅವನ ಸಂಗಡ ಇದ್ದನು" (ಅಪೊಸ್ತಲರ ಕೃತ್ಯಗಳು 7:9, 10). ಆತನು ಹದಿನೇಳನೆಯ ವಯಸ್ಸಿನಿಂದ ಮೊದಲ್ಗೊಂಡು ಐಗುಪ್ತ ದೇಶದಲ್ಲಿ ತನ್ನ ಜೀವಿತಕಾಲವನ್ನು ಕಳೆದಿದ್ದನಾದರೂ, ಅದು ಆತನ ಸ್ವಂತ ಮನೆಯಲ್ಲ ಎಂಬುದನ್ನು ಆತನು ಬಲ್ಲವನಾಗಿದ್ದನು. ಆತನ ತಂದೆಯು ಅವನಿಗೆ ಉತ್ತಮವಾಗಿ ಕಲಿಸಿದ್ದನು, ಆದ್ದರಿಂದ ಆತನು ಮತ್ತೊಂದು ನಿವಾಸಕ್ಕಾಗಿ ಹುಡುಕಾಡುತ್ತಿದ್ದನು. ಇಸ್ರಾಯೇಲ್ಯರು ಐಗುಪ್ತದಲ್ಲಿ ದಾಸರಾಗುವದಕ್ಕೆ ಬಹಳ ಕಾಲದ ಮುಂಚೆ ಜನರು ಕಾನಾನ್ ದೇಶದಲ್ಲಿ ತನ್ನನ್ನು ಸೇವಿಸುವರೆಂದು ದೇವರು ವಾಗ್ದಾನ ಮಾಡಿದ್ದಾನೆಂದು ಆತನು ಬಲ್ಲವನಾಗಿದ್ದನು (ಆದಿಕಾಂಡ 15:13-16).

ಯೋಸೇಫನು ನಂಬಿಕೆಯಿಂದಲೇ **ಐಗುಪ್ತದೇಶದಿಂದ ಹೊರಡುವದನ್ನು** (ಐಗುಪ್ತದಿಂದ "ನಿರ್ಗಮನ" [AB]; ಆದಿಕಾಂಡ 50:24, 25) ಪ್ರಸ್ತಾಪಿಸಿದನು. ಆತನು ತನ್ನ ಜನರಿಗೆ ಅವರು ವಾಗ್ದಾನ ದೇಶವನ್ನು ಹೊಂದಿಕೊಳ್ಳುವದಕ್ಕೆ ಹೋಗುವಾ ("ಹೋಗುವದಾದರೆ" ಎಂದಲ್ಲ) ತನ್ನ ಶವವನ್ನು ಜೊತೆಯಲ್ಲಿ ತಕ್ಕೊಂಡು ಹೋಗುವಂತೆ ಹೇಳಿದನು. ಸಮಯ ಬಂದಾಗ ಆತನ **ಶವ**ವನ್ನು (ಮೂಳೆಗಳನ್ನು) ಕಾನಾನ್ ದೇಶದಲ್ಲಿ ಹೂಣಿಡುವಂತಾಗಲು ಆತನ ಶರೀರವನ್ನು ಸುಗಂಧ ದ್ರವ್ಯಗಳಿಂದ ಸಂರಕ್ಷಿಸಿಡಲಾಯಿತು (ವಿಮೋಚನಕಾಂಡ 13:19). ಯೆಹೋಶುವ 24:32ರ ಪ್ರಕಾರವಾಗಿ, ಯೋಸೇಫನ ಮೂಳೆಗಳನ್ನು ಕೊನೆಗೂ ಶೆಕೆಮ್ ಎಂಬಲ್ಲಿ ಸಮಾಧಿ ಮಾಡಲಾಯಿತು. ಈ ಉದಾಹರಣೆಯು "ನಿರೀಕ್ಷಿಸುವವಗಳ ವಿಷಯವಾಗಿ

ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ" ಎಂಬುದನ್ನು ಸಹ ತೋರಿಸುತ್ತದೆ (11:1). ಯೋಸೇಫನು ಆ ಮಹಾನ್ ಘಟನೆಗಾಗಿ ಎದುರುನೋಡಿದನು, ಅದು ಒಂದೂವರೆ ಶತಮಾನದ ನಂತರದಲ್ಲಿ ಸಂಭವಿಸಿತು.

ಐಗುಪ್ತದಿಂದ ಹೊರಡೋಣವು ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (ನೋಡಿರಿ 1 ಕೊರಿಂಥ 10:1, 2). ಇದು ನಿಜವಾಗಿಯೂ ಸಂಭವಿಸಿತೆಂಬುದನ್ನು ಸಂಶಯಿಸುವವರು ಇದು ಯೆಹೂದಿ ಇತಿಹಾಸದಲ್ಲಿ ಇದು ಒಂದು ಕೇಂದ್ರಬಿಂದುವಾದ ಕಾರ್ಯವಾಗಿರುತ್ತದೆಂಬುದನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು. "ಹೊರಡೋಣ" ಅಥವಾ "ನಿರ್ಗಮನ" ಎಂಬುದಕ್ಕಿರುವ ಪದವು ಹೊಸ ಒಡಂಬಡಿಕೆಯಲ್ಲಿ ವಿರಳವಾಗಿರುತ್ತದೆ. ಅದು ಬೇರೊಂದು ಕಡೆಯಲ್ಲಿ ಲೂಕ 9:31ರಲ್ಲಿ, ಯೇಸುವಿನ ಮರಣದ ಬಗ್ಗೆ, ಮತ್ತು 2 ಪೇತ್ರ 1:15ರಲ್ಲಿ, ಪೇತ್ರನ ಮರಣದ ವಿಷಯವಾಗಿ ಮಾತ್ರವೇ ಬಳಸಲ್ಪಟ್ಟಿದೆ. ಹೊಸ ಒಡಂಬಡಿಕೆಯ ನಂಬಿಕೆಯ ಪ್ರಮುಖ ಯೋಚನೆಯು ಕೇವಲ "ಹೊರಗೆ ಹೋಗುವದು" ಮಾತ್ರವೇ ಅಲ್ಲ, ಆದರೆ ನಿಜವಾಗಿಯೂ ಒಂದು "ವಿಜಯೋತ್ಸಾಹದ ವಿಮೋಚನೆ" ಆಗಿರುತ್ತದೆ.[58]

**11:23-29**

**[23]ಮೋಶೆ ಹುಟ್ಟಿದಾಗ ಅವನ ತಂದೆ ತಾಯಿಗಳು ಕೂಸು ಸುಂದರವಾಗಿದೆ ಎಂದು ನೋಡಿ ಅರಸನ ಅಪ್ಪಣೆಗೆ ಭಯಪಡದೆ ನಂಬಿಕೆಯಿಂದಲೇ ಅವನನ್ನು ಮೂರು ತಿಂಗಳು ಬಚ್ಚಿಟ್ಟರು. [24]ಮೋಶೆಯು ದೊಡ್ಡವನಾದ ಮೇಲೆ ಫರೋಹನ ಕುಮಾರ್ತೆಯ ಮಗನೆನಿಸಿಕೊಳ್ಳುವದು ಬೇಡವೆಂದದ್ದು ನಂಬಿಕೆಯಿಂದಲೇ. [25]ಸ್ವಲ್ಪಕಾಲ ಪಾಪಭೋಗಗಳನ್ನನುಭವಿಸುವದಕ್ಕಿಂತ ದೇವರ ಜನರೊಂದಿಗೆ ಕಷ್ಟವನ್ನನುಭವಿಸುವದೇ ಒಳ್ಳೇದೆಂದು ತೀರ್ಮಾನಿಸಿಕೊಂಡನು. [26]ಐಗುಪ್ತದೇಶದ ಸರ್ವೈಶ್ವರ್ಯಕ್ಕಿಂತ ಕ್ರಿಸ್ತನ ನಿಮಿತ್ತ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆಣಿಸಿಕೊಂಡನು; ಯಾಕೆಂದರೆ ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು. [27]ಅವನು ಅರಸನ ರೌದ್ರಕ್ಕೆ ಭಯಪಡದೆ ಐಗುಪ್ತದೇಶವನ್ನು ಬಿಟ್ಟುಹೋದದ್ದು ನಂಬಿಕೆಯಿಂದಲೇ. ಅವನು ಅದೃಶ್ಯನಾಗಿರುವಾತನನ್ನು ದೃಷ್ಟಿಸುವವನೋ ಎಂಬಂತೆ ದೃಢಚಿತ್ತನಾಗಿದ್ದನು. [28]ಚೊಚ್ಚಲಮಕ್ಕಳನ್ನು ಸಂಹರಿಸುವವನು ಇಸ್ರಾಯೇಲ್ಯರನ್ನು ಮುಟ್ಟದಂತೆ ಅವನು ಪಸ್ಕವೆಂಬ ಊಟವನ್ನೂ ರಕ್ತಪ್ರೋಕ್ಷಣಾಚಾರವನ್ನೂ ನೇಮಿಸಿದ್ದು ನಂಬಿಕೆಯಿಂದಲೇ.**

**[29]ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ಒಣಭೂಮಿಯನ್ನು ದಾಟುವಂತೆ ದಾಟಿದರು; ಐಗುಪ್ತದೇಶದವರು ಅದನ್ನು ದಾಟುವದಕ್ಕೆ ಪ್ರಯತ್ನಿಸಿ ಮುಳುಗಿಹೋದರು.**

ಅಬ್ರಹಾಮನ ಬಳಿಕ, ಮೋಶೆಯು ಹಳೆಯ ಒಡಂಬಡಿಕೆಯಲ್ಲಿ ನಂಬಿಕೆಯ ಅತ್ಯಂತ ಶ್ರೇಷ್ಠ ಮನುಷ್ಯನಾಗಿ ನಿಲ್ಲುತ್ತಾನೆ. ಮೋಶೆಯ ಕಥೆಯು "ಗ್ರೀಕ್ ನಾಟಕವೊಂದರ ಪ್ರಭಾವಗೊಳಿಸುವ ವಿಧದಲ್ಲಿ ಹೇಳಲ್ಪಟ್ಟಿರುತ್ತದೆ."[59] ಮೋಶೆಯ ಜೀವನದ ಕಥನದಲ್ಲಿ ನಂಬಿಕೆಯ ಉದಾಹರಣೆಯು ಮೊದಲು ಪ್ರಸ್ತಾಪಿಲ್ಪಡುವದು ಆತನ ಹೆತ್ತವರಾದ ಅಮ್ರಾಮನು ಮತ್ತು ಯೋಕೆಬೆದಳರ ನಂಬಿಕೆಯಾಗಿದೆ (ಅವರ ಹೆಸರುಗಳು ವಿಮೋಚನಕಾಂಡ 6:20ರಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತವೆ). ಅವರ ನಂಬಿಕೆಯು ನಿಜಕ್ಕೂ ಧೈರ್ಯಶಾಲಿಯಾಗಿತ್ತು ಮತ್ತು ಫರೋಹನ ರಾಜಾಜ್ಞೆಯ ವಿರುದ್ಧವಾಗಿ ಹೋಗುವಂತೆ ಅವರನ್ನು ಶಕ್ತಗೊಳಿಸಿತು.

**ವಚನ 23.** ಹಳೆಯ ಒಡಂಬಡಿಕೆಯು **ಮೋಶೆಯ** ತಾಯಿಯು **ನಂಬಿಕೆಯಿಂದ** ಮಾಡಿದ

ಕಾರ್ಯದ ಮೇಲೆ ಮುಖ್ಯ ಗಮನವನ್ನು ಕೊಡುತ್ತದೆ (ವಿಮೋಚನಕಾಂಡ 2:1-10), ಆದರೆ ಆತನ ತಂದೆಯು ಸಹ ಖಂಡಿತವಾಗಿಯೂ ಒಬ್ಬ ನಂಬಿಕೆಯುಳ್ಳ ಮನುಷ್ಯನಾಗಿದ್ದನು.[60] ಆತನ **ತಂದೆತಾಯಿಗಳು** ಒಟ್ಟಾಗಿ ಆತನನ್ನು ಬಚ್ಚಿಟ್ಟರು.

ಅವರ ಮಗನು ವಿಶೇಷವಾದವನಾಗಿದ್ದು ಆತನ ಜೀವಿತದಲ್ಲಿ ಒಂದು ದೈವಿಕ ಉದ್ದೇಶವು ಇರುತ್ತದೆಂಬುದಾಗಿ ದೇವರು ಅಮ್ರಾಮನು ಮತ್ತು ಯೋಕೆಬೆದಳಿಗೆ ಪ್ರಕಟಗೊಳಿಸಿರಬಹುದು. ಇಬ್ರಿಯರಾಗಿ, ಅವರಿಗೆ ತಮ್ಮ ಜನರ ಬಳಿಗೆ ಒಬ್ಬ ವಿಮೋಚಕನು ಕಳುಹಿಸಲ್ಪಡುವನೆಂಬ ಕುರಿತು ಸ್ವಲ್ಪ ತಿಳುವಳಿಕೆಯನ್ನು ಹೊಂದಿರಬಹುದಾಗಿದೆ. ತಂದೆತಾಯಿಗಳಾಗಿ, ಅವರು ತಮ್ಮ ಮಗುವು ಕೊಲ್ಲಲ್ಪಡುವಂತೆ ಅವಕಾಶ ಕೊಡುವದು ದೇವರ ಚಿತ್ತಕ್ಕೆ ವಿರುದ್ಧವಾದದ್ದು ಎಂದು ಬಲ್ಲವರಾಗಿದ್ದರು, ಮತ್ತು ಅವರು ಆತನನ್ನು ತಪ್ಪಿಸಿ ಕಾಪಾಡಬೇಕೆಂದು ನಿರ್ಧರಿಸಿಕೊಂಡಿದ್ದರು. ನಮ್ಮ ವಾಕ್ಯಭಾಗವು ಪ್ರಾಥಮಿಕವಾಗಿ ಆತನು "ದಿವ್ಯಸುಂದರನಾಗಿದ್ದನು" ಎಂಬುದನ್ನು ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 7:20).

ಅವರು ಅರಸನು ಹೊರಡಿಸಿದ್ದ ಶಾಸನಕ್ಕೆ ಹೆದರಿದ್ದರೆ, ಮೋಶೆಯ ಹೆತ್ತವರು ಆತನನ್ನು ಐಗುಪ್ತರ ವಶಕ್ಕೆ ಒಪ್ಪಿಸಿರುತ್ತಿದ್ದರು. ಹೇಗೂ, ಅವರು ತಮ್ಮ ಹಸುಕೂಸನ್ನು ಮರಣಿಸಲು ಬಿಡುವಂತೆ ತೋರಿಸಿ ಕೊಡುವಂತಹ ವಿಗ್ರಹಾರಾಧಕ ಜನಾಂಗದ ತಂದೆತಾಯಿಗಳಂತಿರಲಿಲ್ಲ. ಬದಲಾಗಿ, ಅವರು ತಮ್ಮ ಪುತ್ರನನ್ನು ಒಂದು ಚಿಕ್ಕ ತೇಲುವಂತಹ ಚೀಲದಲ್ಲಿಟ್ಟರು. ಇದು ದೇವರಲ್ಲಿ ಮತ್ತು ಆತನ ಒದಗಿಸುವಿಕೆಯಲ್ಲಿ ವಿಶ್ವಾಸವಿಡುವಂತಹ ಕ್ರಿಯೆಯಾಗಿತ್ತು. ಅವರು ಆ ವಿಧದಲ್ಲಿ ನಡೆದುಕೊಂಡರು ಯಾಕೆಂದರೆ **ಕೂಸು ಸುಂದರವಾಗಿತ್ತು** (ನೋಡಿರಿ ವಿಮೋಚನಕಾಂಡ 2:2) ಮತ್ತು ಅವರು **ಅರಸನ ಅಪ್ಪಣೆಗೆ ಭಯಪಡದೆ** ಇದ್ದರು. ಅವರಲ್ಲಿ ಭಯವು ಇಲ್ಲದೆ ಇರುವದು ಅವರು ಫರೋಹನಿಗೆ ಭಯಪಡುವದಕ್ಕಿಂತ ಹೆಚ್ಚಾಗಿ ದೇವರನ್ನು ಸನ್ಮಾನಿಸಿದರು ಮತ್ತು ಆತನಲ್ಲಿ ಹೆಚ್ಚು ವಿಶ್ವಾಸವಿಟ್ಟಿದ್ದರು ಎಂಬುದನ್ನು ಸೂಚಿಸುತ್ತದೆ.

ಯೆಹೂದಿ ದಂತಕಥೆಯು ಮೋಶೆಯ ಸೌಂದರ್ಯವನ್ನು ಮತ್ತು ಜ್ಞಾನವನ್ನು ಹೆಚ್ಚುಕಡಿಮೆ ನಂಬುವದಕ್ಕಾಗದಷ್ಟರ ಮಟ್ಟಿಗೆ ಅಧಿಕವಾಗಿ ಕೊಂಡಾಡಿರುತ್ತದೆ. Philo ಹೀಗೆ ಬರೆದನು, "ಆತನು ಹುಟ್ಟಿದ ತಕ್ಷಣವೇ [ಆತನು] ಸಹಜಕ್ಕಿಂತಲೂ ಅಧಿಕವಾದ ಸುಂದರ ಹಾಗೂ ಉದಾತ್ತವಾದ ರೂಪದಲ್ಲಿ ತೋರ್ಪಟ್ಟನು."[61] "ಸೌಂದರ್ಯ"ದ ಯೋಚನೆಯು ಆತನು ಸಾಮಾನ್ಯವಾದ ಮಗುವಾಗಿರಲಿಲ್ಲ ಎಂಬುದನ್ನು ತೋರಿಸುವದಾಗಿರಬಹುದಷ್ಟೆ. ಆತನಲ್ಲಿರುವ ಯಾವದೋ ಒಂದು ಆತನು ಮಹಾನ್ ಕಾರ್ಯಕ್ಕಾಗಿ ನೇಮಿಸಲ್ಪಟ್ಟಿದ್ದಾನೆಂದು ಸೂಚಿಸುವದಾಗಿತ್ತು, ಆದರೆ ಅದ್ಕಕಿಂತ ಹೆಚ್ಚಿನ ಯಾವದೇ ಆಗಲಿ ಊಹಾಪೋಹ ಆಗುತ್ತದೆ. ಮೋಶೆಯು ಕಲಿಕೆಯ ಎಲ್ಲಾ ಶಾಖೆಗಳಲ್ಲಿಯೂ ಪರಿಣಿತನೆಂದು ಚಿತ್ರಿಸಲ್ಪಟ್ಟಿದ್ದಾನೆ.[62] Josephusನು ಐಗುತ್ಯದ ಸೈನ್ಯದ ಸೇನಾಧಿಪತಿಯಾಗಿ ಆತನು ಐಥಿಯೋಪ್ಯರ ವಿರುದ್ಧ ಮುನ್ನಡೆಸಿದ ಒಂದು ದಂಡಯಾತ್ರೆಯ ಕುರಿತು ಹೇಳುತ್ತಾನೆ.[63] ಗ್ರೀಕ್ ಸಂಸ್ಕೃತಿಯ ಹಿನ್ನಲೆಯ ಯೆಹೂದಿ ಲೇಖಕನಾದ Eupolemusನು ಆತನಿಗೆ ಅಕ್ಷರಮಾಲೆಯ ಆವಿಷ್ಕಾರಕನು ಎಂದು ಹೆಸರಿಟ್ಟನು.[64]

ಅಮ್ರಾಮನು ಮತ್ತು ಯೋಕೆಬೆದಳು ಈ ವಿಧವಾಗಿ ಚಕಿತಗೊಂಡಿದ್ದರೋ, "ನೀರಿನ ಸೆಳೆತವು ನಮ್ಮ ಮಗುವನ್ನು ಸಮುದ್ರಕ್ಕೆ ಎಳೆದೊಯ್ದರೆ ಹೇಗೆ? ಗಾಳಿಯು ಅಲೆಗಳನ್ನು ಎಬ್ಬಿಸಿ ತೊಟ್ಟಿಯನ್ನು ಮುಳುಗಿಸಿದರೆ ಹೇಗೆ?" ಅವರು ನಂಬಿಕೆಯಲ್ಲಿ ಕ್ರಿಯೆ ಮಾಡಿದ್ದರಿಂದ, ಅಂಥ ಸಾಧ್ಯತೆಗಳು ಅವರಿಗೆ ಕಳವಳ ಉಂಟು ಮಾಡಿರುವಂತೆ ಕಾಣುವದಿಲ್ಲ. ಯೇಸುವಿನ ಬರೋಣದ ಕಾಲದಲ್ಲಿ ಅವರ ಸಂತತಿಯವರು ಎದುರುನೋಡುತ್ತಿದ್ದ ರೀತಿಯಲ್ಲಿಯೇ ಈ

ಕಾಲದಲ್ಲಿನ ಇಸ್ರಾಯೇಲ್ಯರು ಒಬ್ಬ ರಕ್ಷಕನಿಗಾಗಿ ಅತ್ಯಾಸಕ್ತಿಯುಳ್ಳ ಬಯಕೆಯಿಂದ ಎದುರು ನೋಡುತ್ತಿದ್ದಿರಬಹುದಾಗಿದೆ. ಪ್ರಾರ್ಥನೆಯಲ್ಲಿ ಅವರ ಮೊರೆಗಳು ಆಲಿಸಲ್ಪಟ್ಟವು ಮತ್ತು ಉತ್ತರಿಸಲ್ಪಟ್ಟವು (ವಿಮೋಚನಕಾಂಡ 3:9).

ಮೋಶೆಯ ತಂದೆ ತಾಯಿಗಳ ಕುರಿತಾದ ಈ ಕ್ಲುಪ್ತವಾದ ಉಲ್ಲೇಖನದಲ್ಲಿ ಅವರು ದೇವರಲ್ಲಿ ಇಟ್ಟಿದ್ದ ಬಲವಾದ ಮತ್ತು ಸ್ಥಿರವಾದ ನಂಬಿಕೆಯನ್ನು ಕಾಣುತ್ತೇವೆ. ಇದು ದೇವರಿಂದ ಒದಗಿಸಲ್ಪಟ್ಟ ಸಾಧ್ಯತೆಗಳನ್ನು ಕಂಡಂತಹ ನಂಬಿಕೆಯಾಗಿತ್ತು, ಅರಸನ ಶಾಸನವಿದ್ದಾಗ್ಯೂ ಕಾರ್ಯಪ್ರವೃತ್ತವಾದಂತಹ, ಮತ್ತು ದೇವರ ಒದಗಿಸುವಿಕೆಯಲ್ಲಿ ವಿಶ್ವಾಸವಿಟ್ಟಂತಹ ಒಂದು ನಂಬಿಕೆಯಾಗಿತ್ತು.

ಮೋಶೆಯ ತಂದೆತಾಯಿಗಳ ನಂಬಿಕೆಯು ಆತನು ಬೆಳೆದಂತೆ ಆತನ ನಂಬಿಕೆಯಾಯಿತು. ವಾಕ್ಯಭಾಗವು ಮೋಶೆಯ ನಂಬಿಕೆಯ ಐದು ಸಂದರ್ಭಗಳನ್ನು ಪ್ರಸ್ತಾಪಿಸುತ್ತದೆ.

**ವಚನ 24.** ಮೋಶೆಯ ಆಗ ಪರಿಚಿತವಿದ್ದಂಥಹ ಅತ್ಯಂಥ ಮಹಾನ್ ದೇಶದ ರಾಜಕುಮಾರನಾಗಿ ಜೀವಿಸುವದಕ್ಕೆ ಆಯ್ಕೆ ಮಾಡಿಕೊಳ್ಳಬಹುದಿತ್ತು, ಆದರೆ ಆತನು ಅದನ್ನು ಆರಿಸಿಕೊಳ್ಳಲಿಲ್ಲ. **ಮೋಶೆಯು ದೊಡ್ಡವನಾದ ಮೇಲೆ ಫರೋಹನ ಕುಮಾರ್ತೆಯ ಮಗನೆನಿಸಿಕೊಳ್ಳುವದು ಬೇಡವೆಂದದ್ದು ನಂಬಿಕೆಯಿಂದಲೇ.** "ಬೇಡವೆಂದದ್ದು" ಎಂಬುದಕ್ಕೆ ಗ್ರೀಕ್ ಪದವು ಅನಿಶ್ಚಿತಭೂತಕಾಲ ರೂಪದಲ್ಲಿದ್ದು ಐಗುಪ್ತದೇಶವನ್ನು ತಿರಸ್ಕರಿಸುವ ತೀರ್ಮಾನವನ್ನು ಮಾಡಿಕೊಳ್ಳುವ ನಿರ್ದಿಷ್ಟವಾದ ಕ್ರಿಯೆಯನ್ನು ಸೂಚಿಸುತ್ತದೆ.

ಮೋಶೆಯು ಈ ನಿರ್ಧಾರವನ್ನು ಮಾಡಿಕೊಳ್ಳುವ ಮೂಲಕ ಆತನು ನಿಖರವಾಗಿ ಏನನ್ನು ನಿರಾಕರಿಸುತ್ತಿದ್ದನು? ಮೋಶೆಯು ಫರೋಹನಾದ Thutmose Iನ ಏಕೈಕ ಕುಮಾರ್ತೆಯಾಗಿದ್ದ Hatshepsutಳ ದತ್ತುಪುತ್ರನಾಗಿದ್ದನು,[65] ಮತ್ತು ಆಕೆಯು ದೀರ್ಘಕಾಲದಿಂದ ಮದುವೆಯಾಗಿದ್ದಾಗ್ಯೂ ಆಕೆಗೆ ಸ್ವಂತ ಮಗುವು ಇರಲಿಲ್ಲ. ಮೋಶೆಯು ಫರೋಹನ ಮನೆಯಲ್ಲಿ ಉಳಿದುಕೊಂಡಿದ್ದರೆ ಐಗುಪ್ತದೇಶದ ಕಿರೀಟವೇ ಆತನಿಗೆ ಬಂದಿರಬಹುದಾದ ಸಾಧ್ಯತೆಯು ಇತ್ತು.

**ವಚನ 25.** ಐಗುಪ್ತದಿಂದ ಓಡಿ ಹೋಗುವ ನಿರ್ಧಾರವನ್ನು ತಕ್ಕಷ್ಟು ಯೋಚನೆಯನ್ನು ಮಾಡದೆಯೇ ತೆಗೆದುಕೊಂಡಿರಲಿಲ್ಲ, ಆದರೆ ಅದು ಮಾರ್ಪಡಿಸಲಾಗದಂತಹ ತೀರ್ಮಾನವಾಗಿತ್ತು. ಫರೋಹನ ಮನೆಯಲ್ಲಿ ತನಗಿದ್ದ ಸ್ಥಾನವನ್ನು ತ್ಯಜಿಸುವದರಲ್ಲಿ, ಮೋಶೆಯು **ದೇವರ ಜನರೊಂದಿಗೆ ಕಷ್ಟವನ್ನನುಭವಿಸುವದಕ್ಕೆ** ಆರಿಸಿಕೊಂಡನು. ಮೋಶೆಯ ದಿನದಲ್ಲಿ ಗುಲಾಮರನ್ನು ನಿಂದನೆಯಿಂದ ನಡಿಸಿಕೊಳ್ಳುವ ರೀತಿಯು ಘೋರವಾಗಿತ್ತು. ಯೇಸುವಿನ ರೀತಿಯಲ್ಲಿಯೇ, ಮೋಶೆಯು ತನ್ನ ಜನರೊಳಗಿನ ಬಡವರು ಹಾಗೂ ಕಷ್ಟಗಳನ್ನು ಅನುಭವಿಸುತ್ತಿದ್ದವರ ಕುರಿತು ಕನಿಕರವನ್ನು ಹೊಂದಿರಬಹುದಾಗಿದೆ.

ಈ ನಿರ್ಧಾರವನ್ನು ಮಾಡಿಕೊಳ್ಳುವ ಮೂಲಕ, ಮೋಶೆಯು ಐಗುಪ್ತ ಐಶ್ವರ್ಯವನ್ನು "ದೇವರ ಅಭಿಷೀಕ್ತನ ಮೇಲೆ ಬಿದ್ದಿರುವ ಕಲೆಗೆ" (NEB) ಹೋಲಿಸುತ್ತಾನೆ. ಇದು ಇಸ್ರಾಯೇಲ್ ಜನರು "ದೇವರ ಅಭಿಷೀಕ್ತರು" ಆಗಿದ್ದರು ಎಂಬುದನ್ನು ಸೂಚಿಸುತ್ತದೆ, ಆದರೆ ಇಲ್ಲಿ ಆಗಲಿ ಅಥವಾ ಇಬ್ರಿಯರಿಗೆ ಪತ್ರಿಕೆಯೊಳಗೆ ಬೇರೆ ಎಲ್ಲಿಯೇ ಆಗಲಿ, ಕ್ರಿಸ್ತನಿಗೋಸ್ಕರ ಹೊರತು ಪಡಿಸಿ *christos* ಎಂಬ ಪದವು ಬಳಸಲ್ಪಟ್ಟಿಲ್ಲ. ಈ ಪದವು "ಆರಿಸಿಕೊಂಡ ಜನಾಂಗ" ಸೂಚಿಸುವದಾದರೆ, ಮೋಶೆಯು ಅವರೊಂದಿಗೆ ಕಷ್ಟವನ್ನನುಭವಿಸುವದಕ್ಕೆ ಆರಿಸಿಕೊಂಡನೆಂದು ಅರ್ಥವಾಗುತ್ತದೆ. ಆತನು ನಂತರದ ಶತಮಾನಗಳಲ್ಲಿ ದೇವರ ದೈವಿಕವಾಗಿ ನೇಮಿಸಲ್ಪಟ್ಟ (ಅಥವಾ "ಅಭಿಷೇಕಿಸಲ್ಪಡುವ") ಇತರ ಸಂದೇಶಕರಂತೆಯೇ

ಬಾಧೆಯನ್ನನುಭವಿಸಲಿದ್ದನು. ಆತನು "ಕ್ರಿಸ್ತನ" ಜೊತೆಯಲ್ಲಿ ಕೂಡಿಕೊಂಡನು ಎಂಬುದು ಉತ್ತಮವಾದ ಅನುವಾದವಾಗಿ ಕಾಣಿಸುತ್ತದೆ. ಮೆಸ್ಸೀಯನ ಬಾಧೆಯು ಅವಮಾನದ ಪರಾಕಾಷ್ಠೆಯನ್ನು ತಲುಪುವದಾಗಿತ್ತು. ಕ್ರಿಸ್ತನನ್ನು ಅಂಟಿಕೊಂಡಿದ್ದ ಕಳಂಕದ ನಿಮಿತ್ತವಾಗಿ ಎಡವುವ ಅಪಾಯದಲ್ಲಿದ್ದ ಯೆಹೂದಿ ಕ್ರೈಸ್ತರು ದೇವರ ಧ್ಯೇಯಕ್ಕಾಗಿ ಮೋಶೆಯು ಹೊಂದಿದ್ದ ನಿಷ್ಠೆಯ ಬಗ್ಗೆ ಓದುವದರಿಂದ ಬಹುವಾಗಿ ಪ್ರೋತ್ಸಾಹ ಹೊಂದಲಿದ್ದರು.

**ಸ್ವಲ್ಪಕಾಲ ಪಾಪಭೋಗಗಳ** ಆಮೀಷಕ್ಕೆ ಬಲಿಯಾಗುವದು ಸುಲಭವಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ಒಬ್ಬನು "ಪಾಪದಿಂದ ಮೋಸಹೋಗಿ ಕಠಿಣ" ಆಗಬಹುದಾಗಿದೆ (ಇಬ್ರಿಯ 3:13). ಮೋಶೆಯು ಐಗುಪ್ತದೇಶದ ನಾಯಕತ್ವವನ್ನು ವಹಿಸಿಕೊಳ್ಳುವ ಇಲ್ಲವೆ ಇಸ್ರಾಯೇಲ್ಯರ ನಾಯಕತ್ವ ವಹಿಸಿಕೊಳ್ಳುವಿಕೆ ನಡುವೆ ಆಯ್ಕೆಯನ್ನು ಮಾಡಿಕೊಳ್ಳಬೇಕಿತ್ತು, ಮತ್ತು ಆತನು ಎರಡನೆಯದ್ದನ್ನು ಆರಿಸಿಕೊಂಡನು. ಆತನು ಹೀಗೆ ತರ್ಕಿಸಿರಬಹುದಿತ್ತು, "ಈ ದೇಶದಲ್ಲಿ ಯೋಸೇಫನು ಅಧಿಕಾರಕ್ಕೆ ಏರಿದನು ಮತ್ತು ತಾನು ಸಾಯುವ ತನಕ ಇಲ್ಲಿಯೇ ಉಳಿದನು. ಆತನು ದೇವರಿಗೆ ಮತ್ತು ತನ್ನ ಜನರಿಗೆ ಉತ್ತಮವಾದ ಸೇವೆಯನ್ನು ಮಾಡಿದನಾದ್ದರಿಂದ, ನಾನೇಕೆ ಅದನ್ನೇ ಮಾಡಬಾರದು?" ಹೇಗೂ ಮೋಶೆಯು ಆ ವಿಧದಲ್ಲಿ ಯೋಚಿಸಿದ್ದಾದರೆ, ಆತನು ನಂಬಿಕೆಯ ಕಾರಣದಿಂದಾಗಿ ಅದನ್ನು ತನ್ನ ಮನಸ್ಸಿನಿಂದ ಹೊರಗೆ ದೊಬ್ಬಿದನೆಂದು ಕಾಣಿಸುತ್ತದೆ. ಆತನು ತಾತ್ಕಾಲಿಕ ಐಶ್ವರ್ಯ ಹಾಗೂ ಅನೈತಿಕ ಜೀವನದಿಂದ ಕೂಡಿದ್ದ ಐಗುಪ್ತವನ್ನು ಸಾಕಷ್ಟು ನೋಡಿದ್ದನು.

**ವಚನ 26.** ಮೋಶೆಯು ದೇವರ ಕಾರ್ಯಗಳನ್ನು **ಐಗುಪ್ತದೇಶದ ಸರ್ವೈಶ್ವರ್ಯಕ್ಕಿಂತ**[66] ಎಷ್ಟೋ ಹೆಚ್ಚು ಬೆಲೆಯುಳ್ಳವುಗಳೆಂದು ಪರಿಗಣಿಸಿದನು. ಐಗುಪ್ತದೇಶದ ಐಶ್ವರ್ಯವು ದಂತಕಥೆಯಾಗಿರುತ್ತದೆ. 1922ರಲ್ಲಿ Howard Carter ಮತ್ತು Lord Carnarvonರು ಆರು ವರ್ಷಗಳ ಕಾಲ ಅಗೆದ ತರುವಾಯ ಅರಸನಾದ Tutankhamenನ ಸಮಾಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಐಶ್ವರ್ಯವನ್ನು ಕಂಡು ಹಿಡಿದರು. ಸಮಾಧಿಯು ಹೆಚ್ಚುಕಡಿಮೆ 3,500 ವರ್ಷಗಳ ಕಾಲ ಭದ್ರಪಡಿಸಿ ಇಡಲ್ಪಟ್ಟಿತ್ತು. ಅಂತಿಮವಾಗಿ, ಈ ವಿರಳವಾದ ಶೋಧಕಾರ್ಯವು ಯುವ ಅರಸನ ಶಿಲೆಗಳಿಂದ ಮಾಡಿದ ಶವಪೆಟ್ಟಿಗೆಯಲ್ಲಿನ ಚಿನ್ನದ ವೈಭವವನ್ನು ಮತ್ತು ಹೇಳುವದಕ್ಕಾಗದಷ್ಟು ಸಂಖ್ಯೆಯಲ್ಲಿದ್ದ ಇನ್ನು ಅನೇಕ ವಸ್ತುಗಳನ್ನು ಬಯಲುಗೊಳಿಸಿತು. ಸಮಾಧಿಯೊಳಗಿಂದ ಹೊರ ತೆಗೆದಿರುವ ಚಿನ್ನದ ಮುಖವಾಡವು ಪ್ರಪಂಚದ ಅತ್ಯಂಥ ಸುಂದರವಾದ ನಿಕ್ಷೇಪಗಳಲ್ಲೊಂದಾಗಿದೆ. ಬಾಲಕನಾದ ಅರಸನ ದೇಹವು ಎರಡು ಬೃಹತ್ ಕಲ್ಲಿನ ಶವಪೆಟ್ಟಿಗೆಯೊಳಗೆ ಸಿಕ್ಕಿತು, ಅವುಗಳು ಒಂದರೊಳಗೆ ಒಂದರಂತೆ ಇದ್ದವು, ಎರಡೂ ಗಟ್ಟಿಯಾದ ಬಂಗಾರದಿಂದ ಮಾಡಲ್ಪಟ್ಟಿದ್ದವು! ಆತನು ಪ್ರಸಿದ್ಧವಾಗಿ ಕರೆಯಲ್ಪಡುತ್ತಿದ್ದ ರೀತಿಯಲ್ಲಿ, ಈ ಅರಸನಾದ Tutನು ತಾನು ಸ್ವತಃ ಅಷ್ಟೇನೂ ಮಹತ್ವಪೂರ್ಣನಾಗಿರಲಿಲ್ಲ, ತನ್ನ ಹದಿನೆಂಟು ಅಥವಾ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಸತ್ತಿದ್ದನು; ಆದರೆ ಆತನ ಸಮಾಧಿಯು ಪ್ರಾಚೀನ ಐಗುಪ್ತದ ಐಶ್ವರ್ಯವನ್ನು ಒಂದು ಬಲವಾದ ವಿಧದಲ್ಲಿ ದೃಷ್ಟಾಂತ ಪಡಿಸಿತ್ತು.

ಮೋಶೆ ಮತ್ತು ಅರಸನಾದ Tutನು ಕೇವಲ ಒಂದು ನೂರು ವರ್ಷಗಳ ಅಂತರದಲ್ಲಿ ಬದುಕಿದ್ದರು. Tutನು ತನ್ನ ಐಶ್ವರ್ಯದ ಜ್ಞಾಪಕದಲ್ಲಿ ಜೀವಿಸುತ್ತಾನೆ; ಮೋಶೆಯು ಸದಾಕಾಲವೂ ದೇವರ ಹಾಗೂ ವಿಶ್ವಾಸಿಗಳ ನೆನಪಿನಲ್ಲಿ ಉಳಿದಿರುತ್ತಾನೆ. ಮೋಶೆಯು ದೀನರಾದ ಇಸ್ರಾಯೇಲ್ಯರ ಪಕ್ಷವನ್ನು ಆರಿಸಿಕೊಂಡನು ಯಾಕೆಂದರೆ ಅದು ದೇವರ ಪಕ್ಷವಾಗಿತ್ತು. ಅರಸನಾದ Tutನ ಜೀವಿತವು ಖ್ಯಾತಿ ಮತ್ತು ಐಶ್ವರ್ಯವು ಕೇವಲ ಒಂದು ಕಾಲಕ್ಕೆ ಮಾತ್ರವೇ ಉಳಿದಿರುತ್ತದೆ ಎಂಬುದನ್ನು ಘೋಷಿಸುತ್ತದೆ. ಐಗುಪ್ತದ ಐಶ್ವರ್ಯ ಮತ್ತು ಅಧಿಕಾರಗಳು

ಮುರಿದು ಬಿದ್ದವು, ಆದರೆ ದೇವರ ಐಶ್ವರ್ಯ ಮತ್ತು ಅಧಿಕಾರವು ಸದಾಕಾಲವೂ ಇರುವವು. ಭೂಲೋಕದ ಐಶ್ವರ್ಯಕ್ಕಾಗಿ ಅಭಿಲಾಷಿಸುವದು ವ್ಯಸನವಾಗಬಲ್ಲದು ಮತ್ತು ನಾಶಕರವಾಗಬಲ್ಲದು. ಮೋಶೆಯು ದಬ್ಬಾಳಿಕೆಗೊಳಗಾಗಿದ್ದ ಜನರ ಗತಿಯಲ್ಲಿ ಪಾಲುಗಾರನಾಗುವದಕ್ಕೆ ಆರಿಸಿಕೊಂಡನು ಮತ್ತು ಅವರ ಕಷ್ಟಗಳಲ್ಲಿ ಪೂರ್ಣವಾಗಿ ಅವರೊಳಗೆ ಒಬ್ಬನಂತಾದನು.

**ಕ್ರಿಸ್ತನ ನಿಮಿತ್ತ ಉಂಟಾಗುವ ನಿಂದೆ** ಎಂಬುದರ ಅರ್ಥವು ಕ್ರಿಸ್ತನು ತನ್ನ ಸ್ವಂತ ವ್ಯಕ್ತಿಯಲ್ಲಿ ಅನುಭವಿಸಬೇಕಾದ ಅದೇ ವಿಧವಾದ ನಿಂದೆ ಎಂಬ ಅರ್ಥವನ್ನು ಕೊಡುತ್ತದೆ (ನೋಡಿರಿ 13:13). ಸ್ವಲ್ಪ ಮಟ್ಟಿಗೆ ಪ್ರತಿಯೊಬ್ಬ ದೇವಮನುಷ್ಯನೂ ಅದನ್ನು ಅನುಭವಿಸಬೇಕಾಗಿರುತ್ತದೆ (2 ತಿಮೊಥೆ 3:12). ಇಬ್ರಿಯರಿಗೆ ಪತ್ರಿಕೆಯನ್ನು ಸ್ವೀಕರಿಸಿಕೊಂಡ ಕ್ರೈಸ್ತರು ಕ್ರಿಸ್ತನಿಗೆ ನಿಷ್ಠೆ ಹೊಂದಿರುವದರ ನಿಮಿತ್ತವಾಗಿ ಕಷ್ಟವನ್ನನುಭವಿಸಬೇಕಾಗಿದ್ದರಿಂದ ಮೋಶೆಯ ಉದಾಹರಣೆಯು ಅವರಿಗೆ ಬಹಳವಾದ ಮಹತ್ವಪೂರ್ಣತೆಯನ್ನು ಹೊಂದಿರಬಹುದಾಗಿದೆ.

ಮೋಶೆಯು ಮಾಡಿದ ಕೆಲವೇ ಕ್ರಿಸ್ತನ ಕಡೆಗೆ ನಡಿಸುವದಾಗಿತ್ತು ಮತ್ತು ಬೆರಳು ತೋರುವದಾಗಿತ್ತು. ಇದು ಕ್ರಿಸ್ತನ ಕೆಲಸಕ್ಕೆ ಸಂಬಂಧಿಸಿದ ಯಾವದೋ ಒಂದು ರೀತಿಯ ಪ್ರಕಟನೆಯನ್ನು ಮೋಶೆಯು ಪಡಕೊಂಡಿದ್ದನೆಂಬುದನ್ನು ಸೂಚಿಸುತ್ತದೆ. ಸವಾಲನ್ನು ಸ್ವೀಕರಿಸಿಕೊಳ್ಳುವ ಮೂಲಕ ಆತನು ತನ್ನನ್ನು ದೇವರ ಜನರೊಂದಿಗೆ ಗುರುತಿಸಿಕೊಳ್ಳುತ್ತಾನೆ, ಆದರೆ ಹೆಚ್ಚು ನಿರ್ದಿಷ್ಟವಾಗಿ ಕ್ರಿಸ್ತನು ಅನಂತರದಲ್ಲಿ ಅನುಭವಿಸಲಿದ್ದ ಅವಮಾನದೊಂದಿಗೆ ಗುರುತಿಸಿಕೊಂಡನು.[67] ಈ ಅರ್ಥದಲ್ಲಿಯೇ ಆತನು "ಕ್ರಿಸ್ತನ ನಿಮಿತ್ತವಾದ ನಿಂದೆ" ಯನ್ನು ಅಷ್ಟೊಂದು ಅಮೂಲ್ಯವೆಂದೆಣಿಸಿರಬಹುದಾಗಿದೆ. ಆತನಿಗೆ ಆ ವೇಳೆಯಲ್ಲಿ ತಿಳಿದಿರಲಿಲ್ಲವಾದಲ್ಲಿ, ಅನಂತರದಲ್ಲಿ ತಾನು ಬರಲಿದ್ದ ಮೆಸ್ಸೀಯನ ರೀತಿಯಲ್ಲಿದ್ದನೆಂಬುದರ ಬಗ್ಗೆ ತಿಳುಕೊಂಡಿರಬಹುದಾಗಿದೆ (ಧರ್ಮೋಪದೇಶಕಾಂಡ 18:15-18). ಅಬ್ರಹಾಮನಿಗೆ ಕ್ರಿಸ್ತನ ಕುರಿತು ಗೊತ್ತಿರುವದಾದರೆ (ಯೋಹಾನ 8:56), ನಿಶ್ಚಯವಾಗಿಯೂ ಮೋಶೆಯು ಸಹ ಮೆಸ್ಸೀಯನ ಬಗ್ಗೆ ತಿಳಿದಿದ್ದನು. ಬಹುಶಃ, ಪೌಲನ ರೀತಿಯಲ್ಲಿಯೇ, ಬೇರೆಯವರು ಲಾಭವೆಂದು ಎಣಿಸುವಂತವುಗಳನ್ನು ಆತನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದನು (ಫಿಲಿಪ್ಪಿ 3:7-10). ನಾವು ಮೋಶೆಗೆ ತಿಳಿದುಕೊಂಡಿದ್ದನ್ನು ಮತ್ತು ಯೋಬನು ಕಂಡದ್ದನ್ನು ಕಲಿತುಕೊಳ್ಳಬೇಕು: "ದುಷ್ಟನ ಉತ್ಸಾಹಧ್ವನಿಯು ಅಲ್ಪಕಾಲದ್ದು, ಭ್ರಷ್ಟನ ಉಲ್ಲಾಸವು ಕ್ಷಣಿಕವಾದದ್ದು" (ಯೋಬನು 20:5).

ಮೋಶೆಯ ತೀರ್ಮಾನಕ್ಕಿದ್ದ ಸ್ಫೂರ್ತಿಯನ್ನು ಕಾಣುತ್ತೇವೆ: **ಯಾಕೆಂದರೆ ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು.** "ಪ್ರತಿಫಲ" ಎಂಬುದಕ್ಕಿರುವ ಗ್ರೀಕ್ ಪದವು μισθαποδοσία (*misthapodosia*) ಎಂಬದರಿಂದ ಬಂದಿದ್ದು, ಅದು 2:2 ಮತ್ತು 10:35ರಲ್ಲಿ ಸಹ ಸಿಕ್ಕುತ್ತದೆ. ಅದು ಇಬ್ರಿಯರಿಗೆ ಪತ್ರಿಕೆಯಲ್ಲಿ ಒಂದು ಪ್ರಾಮುಖ್ಯವಾದ ಯೋಚನೆಯನ್ನು ಪ್ರತಿಬಿಂಬಿಸುವದಾಗಿದ್ದು, "ಪ್ರತಿಫಲ" ಅಥವಾ "ಶಿಕ್ಷೆ" ಎಂಬ ಅರ್ಥವನ್ನು ಕೊಡುತ್ತದೆ. KJVಯಲ್ಲಿ "ಪ್ರತಿಫಲದ ಪರಿಹಾರ" ಎಂದಿರುತ್ತದೆ.

ಆತನು ಈ ಆಯ್ಕೆಗಳನ್ನು ನೋಡಿದಾಗ, ಮೋಶೆಯು ಭೂಲೋಕದ ಐಶ್ವರ್ಯಗಳಿಗಿಂತಲೂ ಭವಿಷ್ಯದಲ್ಲಿ ಸಿಕ್ಕುವ ಪ್ರತಿಫಲವನ್ನು ಹೆಚ್ಚು ಶ್ರೇಷ್ಠವಾಗಿ ಕಂಡನು ಮತ್ತು ಅದು ಐಗುಪ್ತದ ಐಶ್ವರ್ಯ ಹಾಗೂ ಅಧಿಕಾರವನ್ನು ತಿರಸ್ಕರಿಸುವದರಿಂದ ಆತನ ದಾರಿಯಲ್ಲಿ ಎದುರಾಗುವ ಎಲ್ಲಾ ತಾತ್ಕಾಲಿಕವಾದ ಅಪಾಯಗಳನ್ನು ಮತ್ತು ನಿಂದನೆಗಳನ್ನು ಅಧಿಕವಾಗಿಯೇ ಸರಿದೂಗಿಸುವದೆಂದು ನಂಬಿದನು. ಆತನು ಐಗುಪ್ತದೇಶದವನ್ನು ಕೊಲ್ಲುವದಕ್ಕೆ ಮುಂಚೆಯೇ ಈ ತೀರ್ಮಾನವನ್ನು ಮಾಡಿರಬಹುದಾಗಿದೆ.

**ವಚನ 27. ಅರಸನ ರೌದ್ರಕ್ಕೆ ಭಯಪಡದೆ** ಎಂಬುದು ವಿಮೋಚನಕಾಂಡ 2:11-15ಕ್ಕೆ ವಿರುದ್ಧವಾಗಿರುವಂತೆ ತೋರುತ್ತದೆ, ಅದು ಮೋಶೆಯು ಐಗುಪ್ತನನ್ನು ಕೊಂದ ಬಳಿಕ ಭಯಪಟ್ಟವನಾಗಿ ಓಡಿ ಹೋದನೆಂದು ಹೇಳುತ್ತದೆ. ಆತನು ಐಗುಪ್ತಕ್ಕಿಂತಲೂ ದೇವರ ಸೇವೆಯನ್ನು ಮಾಡುವ ಆತನ ನಿರ್ಧಾರದ ಬಗ್ಗೆ ಯಾವದೇ ಭಯವನ್ನು ಹೊಂದಿರಲಿಲ್ಲವಾದಾಗ್ಯೂ, ತನ್ನ ವೈಯಕ್ತಿಕ ಸುರಕ್ಷತೆಯ ವಿಷಯದಲ್ಲಿ ಭಯ ಪಟ್ಟಿರಬಹುದು.[68] "ಒಪ್ಪಿಕೊಳ್ಳುವದಾದರೆ, ಆತನು ಹೆದರಿದ್ದನು, ಆದರೆ ಆತನು ಐಗುಪ್ತದೇಶವನ್ನು ಬಿಟ್ಟಿದ್ದಕ್ಕೆ ಕಾರಣವು ಅದಾಗಿರಲಿಲ್ಲ; ಆತನು ಐಗುಪ್ತದೇಶವನ್ನು ತೊರೆದದ್ದು ನಂಬಿಕೆಯ ಕ್ರಿಯೆಯಾಗಿತ್ತು."[69] ಆತನನ್ನು ಎಲ್ಲಿದ್ದರೂ ಹುಡುಕಬಲ್ಲ ಮತ್ತು ಕೊಲ್ಲುವದಕ್ಕೆ ಶಕ್ತನಾಗಿದ್ದ ನಿರಂಕುಶ ಪ್ರಭುವಿನ ಕೋಪದಿಂದ ತಪ್ಪಿಸಿಕೊಂಡು ಓಡಿ ಹೋಗುವದಕ್ಕೆ ಬಹಳ ಧೈರ್ಯದ ಅಗತ್ಯವಿತ್ತು; ಆದರೆ ಆತನ ಧೈರ್ಯಕ್ಕಿಂತಲೂ ಆತನ ನಂಬಿಕೆಯು ಹೆಚ್ಚು ಮಹತ್ವಪೂರ್ಣವಾಗಿರುತ್ತದೆ. ಆತನು ನಂಬಿಕೆಯಿಂದ ಕಾರ್ಯ ಮಾಡಿದ್ದರಿಂದ ದೇವರು ಆತನನ್ನು ಕಾಪಾಡಿದನು. "ಮೋಶೆಯು ಐಗುಪ್ತದೇಶವನ್ನು ತೊರೆದು ಬಂದಾಗ, ಸ್ವದೇಶವಿಲ್ಲದೆ ಭೂಮಿಯಲ್ಲಿ ಸುತ್ತಾಡಿದ ತನ್ನ ಪೂರ್ವಿಕರ ವರ್ಗವನ್ನು ಸೇರಿಕೊಂಡನು."[70] ಈ ಹೊತ್ತಿಗಾಗಲೇ, ಇಸ್ರಾಯೇಲಿನ ದೇವರಲ್ಲಿಟ್ಟಿದ್ದ ಆತನ ನಂಬಿಕೆಯು ಪೂರ್ಣವಾಗಿ ಅಭಿವೃದ್ಧಿಗೊಂಡಿತ್ತು ಮತ್ತು ಆತನ ಭಯವು ಮರೆಯಾಗಿ ಹೋಗಿತ್ತು.

ಮೋಶೆಯು ಮೊದಲ ಬಾರಿಗೆ ನಿರ್ಗಮಿಸಿದ ವೇಳೆ ಅರಸನಿಗೆ ಭಯಪಡಲಿಲ್ಲ ಎಂದು ತೋರಿಸುವದಕ್ಕೆ ನೀಡಲಾಗುವ ವಾದಗಳು ಹುನ್ನಾರದಂತೆ ತೋರುತ್ತವೆ. ಹೇಗೂ, ವಾಕ್ಯಭಾಗವು ಹೇಳುವ ಪ್ರಕಾರ, ಆತನು ಹೊರಟು ಹೋಗುವದು ಒಂದು ನಂಬಿಕೆಯ ಕ್ರಿಯೆಯಾಗಿದ್ದಲ್ಲಿ, ಆತನಿಗಾಗಿ ದೇವರು ಇಟ್ಟಿದ್ದ ಯೋಜನೆಯಲ್ಲಿ ನಂಬಿಕೆಯಿಟ್ಟದ್ದರಿಂದ ಅಲ್ಲಿಂದ ಹೊರಟು ಹೋದನು ಎಂದಾಗಿರುತ್ತದೆ. ಅಲ್ಲಿ ಯಾವದೆ ಭಯವು ಇದ್ದಿದ್ದರೂ ಅದು ದೇವರ ಸೇವೆ ಮಾಡಬೇಕೆಂಬ ಆತನ ಬಯಕೆಯ ಮುಂದೆ ಅಷ್ಟೇನೂ ಮಹತ್ವಪೂರ್ಣವಾಗಿರಲಿಲ್ಲ.

ಮೋಶೆಯ ಭಯದ ಕುರಿತಾಗಿರುವ ವಿವಾದದ ವಿಷಯದಲ್ಲಿ ಮುಂದಿಡಲಾಗುವ ಇನ್ನೊಂದು ಪರ್ಯಾಯ ಅಭಿಪ್ರಾಯವೆಂದರೆ ಮೋಶೆಯು ಐಗುಪ್ತದೇಶವನ್ನು ಎರಡು ಸಂದರ್ಭಗಳಲ್ಲಿ ತೊರೆದು ಹೋದನೆಂಬುದನ್ನು ಒಪ್ಪಿಕೊಳ್ಳುವದೇ ಆಗಿರುತ್ತದೆ. ಆತನು ಒಂದು ಸಾರಿ ಫರೋಹನಿಗೆ ಹೆದರಿ ಬಿಟ್ಟು ಹೋದನು (ವಿಮೋಚನಕಾಂಡ 2), ಆದರೆ ಇನ್ನೊಂದು ಸಾರಿಯೆಂದರೆ ಅದು ಇಸ್ರಾಯೇಲ್ಯರನ್ನು ಐಗುಪ್ತದೇಶದೊಳಗಿಂದ ಹೊರಗೆ ನಡಿಸಿಕೊಂಡು ಹೋದಾಗ ಆಗಿರುತ್ತದೆ (ವಿಮೋಚನಕಾಂಡ 13). ಇಬ್ರಿಯ 11ರಲ್ಲಿನ ಕಥನದಲ್ಲಿರುವ ಹೊರಡೋಣಕ್ಕೆ ಸಂಬಂಧ ಹೊಂದಿರುವ ಘಟನೆಗಳನ್ನು ಕಾಲಾನುಕ್ರಮದ ಪ್ರಕಾರ ಪಟ್ಟಿ ಮಾಡಿರುವದಾದರೆ, 27ನೇ ವಚನದಲ್ಲಿನ ಹೊರಡೋಣವು ಮಿದ್ಯಾನ್ ದೇಶದ ಕಡೆಗೆ ಆಗಿತ್ತು ಹೊರತು ಕಾನಾನ್ ದೇಶದ ಕಡೆಗಲ್ಲ.[71] ಹೇಗೂ, ಈ ವಚನವು ಇಸ್ರಾಯೇಲ್ಯರು ಐಗುಪ್ತದಿಂದ ಹೊರಡುವದನ್ನು ಸೂಚಿಸುತ್ತಿರುವ ಸಾಧ್ಯತೆಯು ಅಧಿಕವಾಗಿರುತ್ತದೆ.[72]

ತಾನು ಫರೋಹನ ಮುಂದೆ ಹೋಗುವದಕ್ಕೆ ಸಾಕಾದವನಲ್ಲ (ವಿಮೋಚನಕಾಂಡ 4:10) ಹೇಳಿಕೊಂಡನಾದರೂ, ಮೋಶೆಯು ಶೀಗ್ರವೇ ನ್ಯಾಯಲಯದ ಸಂಭಾಷಣೆಯ ಕಲೆಯನ್ನು ಪುನಃ ಗಳಿಸಿಕೊಂಡವನಾಗಿ ಅದನ್ನು ಬಳಸುವದಕ್ಕೆ ಧೈರ್ಯವನ್ನು ತಂದುಕೊಂಡನು. ಬಹುಶಃ ಆತನು ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಕಳೆದಂತಹ ವೇಳೆಯಲ್ಲಿ ತಾನು ರಾಜವಂಶಸ್ಥನಾಗಿ ಕಲಿತ ಕುಶಲತೆಗಳನ್ನು ಮರೆತು ಹೋಗಿದ್ದನೆಂದು ತೋರುತ್ತದೆ, ಆದರೆ ಶೀಘ್ರದಲ್ಲಿಯೇ ಫರೋಹನನ ಮುಂದೆ ಅಂಜಿಕೆಯಿಲ್ಲದವನಾದನು (ವಿಮೋಚನಕಾಂಡ 5-12).

ಖಂಡಿತವಾಗಿಯೂ ಆತನು ಎರಡನೆಯ ಸಂದರ್ಭದಲ್ಲಿ, ಫರೋಹನಿಗೆ ಭಯಪಡದೆ **ಐಗುಪ್ತದೇಶವನ್ನು ಬಿಟ್ಟುಹೋದದ್ದು ನಂಬಿಕೆಯಿಂದಲೇ** ಆಗಿತ್ತು. ಆತನು ಕೆಂಪು ಸಮುದ್ರವನ್ನು ದಾಟಿ ದೇವರನ್ನು ಆರಾಧಿಸುವದಕ್ಕೆ ಅರಣ್ಯವನ್ನು ಪ್ರವೇಶಿಸಿದನು.

ಇಸ್ರಾಯೇಲ್ಯರು ಐಗುಪ್ತದೇಶದಿಂದ ಹೊರಟ ಸಮಯದಲ್ಲಿ ಅರಸನು ರೌದ್ರಗೊಂಡ ಬಗ್ಗೆ ಹಳೆಯ ಒಡಂಬಡಿಕೆಯು ಪ್ರಸ್ತಾಪಿಸುವದಿಲ್ಲ, ಆದರೆ ದಾಸರು ಹೊರಟ ಮೇಲೆ ಅವರನ್ನು ಬೆನ್ನಟ್ಟಿದ್ದು ಅವರು ಅರಸನ ಇಷ್ಟಗಳನ್ನು ಉಲ್ಲಂಘಿಸಿ ಹೊರಟ್ಟಿದ್ದರು ಎಂಬುದನ್ನು ಸೂಚಿಸುತ್ತದೆ (ವಿಮೋಚನಕಾಂಡ 14:5-9). ಈ ಸಂದರ್ಭದಲ್ಲಿ ಸಹ ಮೋಶೆಯು **ದೃಢಚಿತ್ತನಾಗಿದ್ದನು**. ಆತನು ಜನರನ್ನು ನಡಿಸುವವನಾಗಿ ನಂಬಿಕೆಯಲ್ಲಿ "ದೃಢಚಿತ್ತನಾಗಿದ್ದನು." ಕೆಲವು ಸಂದರ್ಭಗಳಲ್ಲಿ ದೇವರೊಂದಿಗಿನ ತನ್ನ ಒಳ್ಳೇ ಬಾಂಧವ್ಯದಲ್ಲಿ ಆತನು ಹೆಚ್ಚುಕಡಿಮೆ ಏಕಾಂಗಿಯಾಗಿದ್ದನು.

ಆತನು ದೃಢಚಿತ್ತನಾಗಿದ್ದದ್ದಕ್ಕೆ ಒಂದು ಕಾರಣವು ಆತನು **ಅದೃಶ್ಯನಾಗಿರುವಾತನನ್ನು ದೃಷ್ಟಿಸುವೇ** ಆಗಿತ್ತು. ತತ್ಪರಿಣಾಮವಾಗಿ, ಉರಿಯುವ ಪೋದೆಯ ಅನುಭವದ ವೇಳೇ, ಮೋಶೆಯು ದೇವರನ್ನು "ದೃಷ್ಟಿಸಿದನು" (ವಿಮೋಚನಕಾಂಡ 3:2-6). ವಿಮೋಚನಕಾಂಡವು ಅನೇಕ ಸಾರಿ ಮೋಶೆಯು ಒಬ್ಬ ಮಿತ್ರನಾಗಿ, "ಮುಖಾಮುಖಿಯಾಗಿ" ದೇವರ ಸಂಗಡ ಹೊಂದಿದ್ದ ವಿಶೇಷ ಸಂಬಂಧದ ಕುರಿತು ಪ್ರಸ್ತಾಪಿಸುತ್ತದೆ (33:11; ನೋಡಿರಿ ಅರಣ್ಯಕಾಂಡ 12:7, 8).

ಮೋಶೆಯು ನಂದಿಸಲಾಗದ ಆದಾಗ್ಯೂ ಸುಡದಂತಹ ಅಗ್ನಿಯಲ್ಲಿ ಕಂಡದ್ದು "ಕರ್ತನ ದೂತನನ್ನು" ಆಗಿದೆ (ವಿಮೋಚನಕಾಂಡ 3:2). ಹಾಗಾದರೆ ಆತನು ನೋಡಿದ್ದು ದೇವರ ತೋರ್ಪಡಿಸಿಕೊಳ್ಳುವಿಕೆ ಆಗಿತ್ತು ಮತ್ತು ಸ್ವತಃ ದೇವರನ್ನೇ ಅಲ್ಲ. ಹೇಗೂ, ಆತನು ದೇವರನ್ನು ನೋಡಬಾರದೆಂದು ತನ್ನ ಮುಖವನ್ನು ಮುಚ್ಚಿಕೊಂಡನು ಎಂದು ವಾಕ್ಯಭಾಗವು ಹೇಳುತ್ತದೆ (ವಿಮೋಚನಕಾಂಡ 3:6). ಮೋಶೆಯು ದೇವತ್ವದ ವಿಶೇಷ ಪ್ರಕಟಪಡಿಸಿಕೊಳ್ಳುವಿಕೆಯನ್ನು ನೋಡುವದಕ್ಕೆ ಅನುಮತಿಸಲ್ಪಟ್ಟಿದ್ದನೆಂಬುದು ಸ್ಪಷ್ಟವಾಗುತ್ತದೆ, ಆದರೆ ಸ್ವತಃ ದೇವರ "ಮುಖವನ್ನು" ನೋಡುವದಕ್ಕೆ ಅನುಮತಿಯಿರಲಿಲ್ಲ. ಅಪೊಸ್ತಲನಾದ ಯೋಹಾನನು ಮೋಶೆಯ ಅನುಭವದ ಬಗ್ಗೆ ಬಲ್ಲವನಾಗಿ ಹೀಗೆ ಬರೆಯುತ್ತಾನೆ, "ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು" (ಯೋಹಾನ 1:18). ಮೋಶೆಯು ಕಂಡದ್ದು ದೇವರ "ಹಿಂಭಾಗವನ್ನು" ಆಗಿದೆ (ವಿಮೋಚನಕಾಂಡ 33:20-23), "ದೈವಿಕ ಮಹಿಮೆಯ ನಂತರದ ಪ್ರಕಾಶವಾಗಿದೆ ಎಂದು ಹೇಳಬಹುದು."[73] ಈ ಅಭಿಪ್ರಾಯವನ್ನು ರಾತ್ರಿಯಲ್ಲಿ ಜೆಟ್ ವಿಮಾನದ ಯಂತ್ರಗಳಿಂದ ಬರುವ ಬೆಂಕಿಯ ಕಿಡಿಗಳಿಗೆ ಹೋಲಿಸಬಹುದು. ಒಬ್ಬನು ಬೆಂಕಿಯನ್ನು ಕಾಣುತ್ತಾನೆ, ಆದರೆ ವಿಮಾನವನ್ನು ನಿಜವಾಗಿಯೂ ಚಲಿಸುವಂತೆ ಮಾಡುವ ಯಂತ್ರದೊಳಗಿನ ಶಕ್ತಿಯನ್ನು ಕಾಣುವದಿಲ್ಲ. ದೇವರನ್ನು ಬಣ್ಣಿಸುವದಕ್ಕೆ ಯಾವ ಸಾದೃಶ್ಯವೂ ಸಾಕಾದದ್ದಾಗುವದಿಲ್ಲ, ಆದರೆ ಈ ಯೋಚನೆಯು ಸಹಾಯಕರವಾಗಿರುತ್ತದೆ.

ಇನ್ನೊಂದು ಸಾಧ್ಯತೆಯು ಏನೆಂದರೆ 27ನೇ ವಚನವು ಮೋಶೆಗೆ ಆದ ಉರಿಯುವ ಪೋದೆಯ ಅನುಭವದ ಬಗ್ಗೆ ಏನನ್ನೂ ಪ್ರಸ್ತಾಪಿಸುವದಿಲ್ಲ. ಲೇಖಕನು ಕೇವಲ ಮೋಶೆಯು "ನಂಬಿಕೆಯಿಂದ" ನೋಡಿದ್ದನ್ನು ಕುರಿತು ಯೋಚಿಸುತ್ತಿದ್ದಿರಬಹುದಾಗಿದೆ, ಅದು "ಕಣ್ಣಿಗೆ ಕಾಣಿರುವವಗಳನ್ನು ನಿಜವೆಂದು ತಿಳುಕೊಳ್ಳುವದು" ಆಗಿರುತ್ತದೆ (11:1).

**ವಚನಗಳು 28, 29.** ಮೋಶೆಯು ಇಬ್ರಿಯರನ್ನು ಪಸ್ಕವನ್ನು ಆಚರಿಸುವಂತೆ ನಡಿಸಿದಾಗ ದೇವರ ಚಿತ್ತಕ್ಕನುಗುಣವಾಗಿ ನಡಕೊಂಡನು (ವ. 28). ಆತನು ಬಹಳಷ್ಟು ಮಟ್ಟಿಗೆ ಬರಲಿರುವ

ಪ್ರಳಯದ ಕುರಿತು ಎಚ್ಚರಿಸಲ್ಪಟ್ಟ ಬಳಿಕದ ನೋಹನ ಹಾಗಿದ್ದನು; ಅಂದರೆ, ಪ್ರತಿಯೊಬ್ಬನು ಬರಲಿರುವದರ ಯಾವದೇ ಶಾರೀರಿಕ ಸೂಚನೆಯನ್ನು ಕಾಣದಿದ್ದಾಗ್ಯೂ ದೇವರ ಆಜ್ಞೆಗೆ ಸಾಮರಸ್ಯದಲ್ಲಿ ಪೂರ್ಣವಾಗಿ ಪ್ರತಿಕ್ರಿಯಿಸಿದನು. **ಅವನು** [ಮೋಶೆಯು] **ಪಸ್ಕವೆಂಬ ಊಟವನ್ನು ನೇಮಿಸಿದ್ದು ನಂಬಿಕೆಯಿಂದಲೇ**, ಅಥವಾ "ಪ್ರತಿಷ್ಠಾಪಿಸಿದನು" (ನನ್ನಲ್ಲಿರುವ ASV ತರ್ಜುಮೆಯ ಪ್ರತಿಯಲ್ಲಿರುವ ಅಡಿಟಿಪ್ಪಣಿಯು ಹೇಳುವ ಪ್ರಕಾರ). "ನೇಮಿಸಿದನು" (ಆಚರಿಸಿದ್ದು) ಎಂಬ ಪದವು ποιέω (*poieō*, "ಮಾಡು" ಅಥವಾ "ನಡಿಸು"), ಇದು ಈ ಸನ್ನಿವೇಶದಲ್ಲಿ "ಪ್ರತಿಷ್ಠಾಪಿಸು" ಎಂಬ "ಅರ್ಥವನ್ನು ಕೊಡಬಲ್ಲದು."[74] ಕ್ರಿಯಾಪದವು ಸಂಪೂರ್ಣವಾಚಿ ಕಾಲದಲ್ಲಿರುತ್ತದೆ, ಅದು ಪಸ್ಕವು ಆರಂಭಗೊಂಡಿತ್ತು ಮತ್ತು ಅಂದಿನಿಂದ ನಿರಂತರವಾಗಿ, ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಕಾಲದ ವರೆಗೂ ಆಚರಿಸಲ್ಪಡುತ್ತಿದೆ ಎಂಬರ್ಥವನ್ನು ಕೊಡಬಲ್ಲದು.

ಪಸ್ಕದ ಸಮರ್ಪಣೆಯು ಮಾನವ ತರ್ಕದಿಂದಾಗಿ ಬರಲಿಲ್ಲ. ಕುರಿಯನ್ನು ಕೊಯ್ಯುವದು, ಅದರ **ರಕ್ತಪ್ರೋಕ್ಷಣ** ಮಾಡುವದು, ಮತ್ತು ಅದರ ಮಾಂಸವನ್ನು ತಿನ್ನುವದು ಇಸ್ರಾಯೇಲ್ಯರ ಚೊಚ್ಚಲ ಮಕ್ಕಳನ್ನು ಕೊಲ್ಲದೆ ಉಳಿಸುವದರೊಂದಿಗೆ ಯಾವದೇ ಸ್ಪಷ್ಟವಾಗಿರುವ ಸಂಬಂಧವನ್ನು ಹೊಂದುವದಿಲ್ಲ. ಮೋಶೆಯು ದೇವರ ಆಜ್ಞೆಗಳನ್ನು ಯಥಾರೀತಿಯಲ್ಲಿಯೇ ನಂಬಿದನಷ್ಟೆ. ಆತನು ಜನರಿಗೆ ಏನು ಮಾಡಬೇಕೆಂದು ಹೇಳಿದನು, ಮತ್ತು ವಿಧೇಯತೆಯುಳ್ಳ ನಂಬಿಕೆಯ ಕಾರಣದಿಂದಾಗಿ **ಚೊಚ್ಚಲಮಕ್ಕಳು** ರಕ್ಷಿಸಲ್ಪಟ್ಟರು. ಪಸ್ಕವು ಕ್ರಿಸ್ತನ ಯಜ್ಞಕ್ಕೆ ಮಾದರಿ ಆಗಿರುತ್ತದೆ, ಆತನು ನಮ್ಮ "ಪಸ್ಕ" ಎಂದು ಕರೆಯಲ್ಪಟ್ಟಿದ್ದಾನೆ (ವ. 28; 1 ಕೊರಿಂಥ 5:7).

"ಸಂಹಾರದೂತನು" ಹಳೆಯ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಯಾವ "ದೇವದೂತನು" ಸಹ ವಿಮೋಚನಕಾಂಡ 12:11-14ರಲ್ಲಿ ಹಾಗೆ ಕರೆಯಲ್ಪಟ್ಟಿಲ್ಲ; ಅಲ್ಲಿ ಸಂಹಾರಕನು ದೇವರೇ ಆಗಿರಬಹುದೆಂದು ಕಾಣಿಸುತ್ತದೆ. 13ನೇ ವಚನವು ಹೀಗೆ ಹೇಳುತ್ತದೆ, ". . . ರಕ್ತವನ್ನು . . . ಕಂಡು ನಿಮಗೆ ಯಾವ ನಷ್ಟವನ್ನೂ ಮಾಡದೆ ಮುಂದಕ್ಕೆ ದಾಟಿ ಹೋಗುವೆನು." ವಿಮೋಚನಕಾಂಡ 12:23ನೇ ವಚನವು ದೇವರಲ್ಲದ ಒಬ್ಬ "ಸಂಹಾರಕ"ನನ್ನು ಸೂಚಿಸುತ್ತದೆ. ಹೇಗೂ, ದೇವದೂತರು ತಾನು ಹೇಳುವದನ್ನು ಮಾಡುವಂತಹ ಯಾವದನ್ನೇ ಆಗಲಿ ದೇವರು ಮಾಡಬಲ್ಲನೆಂದು ಹೇಳಲಾಗುತ್ತದೆ (ನೋಡಿರಿ ಆದಿಕಾಂಡ 22:15-18). ಏಗುಪ್ತಕ್ಕೆ ಮರಣವು ಬಂದರೆ, ಇಸ್ರಾಯೇಲ್ಯರು ಪರಿಪೂರ್ಣವಾದ ಸುರಕ್ಷತೆಯಲ್ಲಿ ಊಟವನ್ನು ಮಾಡುತ್ತಿದ್ದರು. ಇಸ್ರಾಯೇಲ್ಯರು ಉಳಿಸಲ್ಪಟ್ಟಿದ್ದು **ನಂಬಿಕೆಯಿಂದಲೇ** ಆಗಿತ್ತು (ವಚನಗಳು 28, 29).

ಹೆಚ್ಚುಕಡಿಮೆ ಜನರು ಊಟವನ್ನು ಮುಗಿಸಿದ ತಕ್ಷಣವೇ, ಹೊರಟು ಹೋಗುವಂತೆ ಫರೋಹನನಿಂದ ಆಜ್ಞೆಯು ಬಂದಿತು (ವಿಮೋಚನಕಾಂಡ 12:29-32). ಶೀಘ್ರದಲ್ಲಿ, ಜನರು **ಕೆಂಪುಸಮುದ್ರ**ವನ್ನು ತಲುಪಿದರು (ವ. 29), ಅದು ಇಬ್ರಿಯ ಭಾಷೆಯಲ್ಲಿ ಅಕ್ಷರಶಃ "ಆಪು ಹುಲ್ಲುಗಳ ಸಮುದ್ರ" ಎಂದಾಗಿರುತ್ತದೆ. LXXನಲ್ಲಿ ಪದಗಳನ್ನು "ಕೆಂಪು ಸಮುದ್ರ" ಎಂದು ಬದಲಾಯಿಸಲಾಯಿತು.[75] ಫರೋಹನ ಸೈನ್ಯವು ಇಸ್ರಾಯೇಲ್ಯರ ಹತ್ತಿರಕ್ಕೆ ಬಂದಾಗ, ಅವರ ವಿನಾಶವು ಸನ್ನಿಹಿತವಾಗಿದೆ ಎಂಬಂತೆ ಕಂಡಿತು — ಆಗ ಕರ್ತನು ಮತ್ತೊಂದು ಸಾರಿ ತನ್ನ ರಕ್ಷಣೆಯನ್ನು ಒದಗಿಸಿದನು (ವಿಮೋಚನಕಾಂಡ 14:10-14).

ದೇವರು ಸಮುದ್ರತಳವನ್ನು **ಒಣಭೂಮಿಯನ್ನಾಗಿ** ಮಾಡಿದನು (ವಿಮೋಚನಕಾಂಡ 14:16). ಜನರ ನಂಬಿಕೆಯು ದುರ್ಬಲವಾಗಿದ್ದಿರಬಹುದಾದರೂ, ಅವರು ಆಗಲೂ ಒಣಭೂಮಿಯ ಮೇಲೆ ನಡೆದು ಸಾಗಿದರು. ದೇವರು ಮುನ್ನಡೆಯುವಂತೆ ಆಜ್ಞೆಯನ್ನು ಕೊಟ್ಟಿದ್ದರಿಂದ ಅವರು ನಂಬಿಕೆಯಿಂದ ನಡೆಯುವದಕ್ಕೆ ಸಾಧ್ಯವಾಗಿತ್ತು. ನಂಬಿಕೆಯಿಂದ ಮತ್ತು **ದಾಟುವದರ** ಮೂಲಕ,

ಅವರು ಕರ್ತನ ವಿಮೋಚನೆಯನ್ನು ಅರಿತುಕೊಳ್ಳುವವರಾದರು. ಅವರು ಆ ದಿನದಲ್ಲಿ ನಂಬಿಕೆಯಿಂದ ವಿಮೋಚಿಸಲ್ಪಟ್ಟರು ಮತ್ತು ರಕ್ಷಿಸಲ್ಪಟ್ಟರೆಂಬುದನ್ನು ಗಮನಿಸಿರಿ, ಅದೇ ವೇಳೆಯಲ್ಲಿ, ಪ್ರತಿಯೊಬ್ಬ **ಐಗುಪ್ತದೇಶದ** ಸೈನಿಕನು **ಮುಳುಗಿಹೋದರು** (ವಿಮೋಚನಕಾಂಡ 14:28, 30). ಐಗುಪ್ತವು ಕೇವಲ ನೋಡಿ ನಡೆಯಿತು; ಅವರು ಸಮುದ್ರವು ತೆರೆಯಲ್ಪಡುವದನ್ನು ಕಾಣುವದಕ್ಕೆ ಶಕ್ತರಾಗಿದ್ದರು. ದುರಹಂಕಾರದಿಂದ, ಅವರು ದೇವರಿಂದ ಅಪ್ಪಣೆಯನ್ನು ಹೊಂದದೆಯೇ ಮುನ್ನಡೆದರು; ಹೀಗೆ ಅವರಿಗೆ ನಡೆದುಕೊಳ್ಳಲು ನಿಜವಾದ "ನಂಬಿಕೆ" ಇರಲಿಲ್ಲ. ಸ್ವಭಾವಿಕವಾದ ಫಲಿತವು ನಿರೀಕ್ಷಿಸಿದ್ದೇ ಆಗಿತ್ತು: ಅವರೆಲ್ಲರೂ ಮುಳುಗಿ ಹೋದರು.

## ಇಸ್ರಾಯೇಲಿನ ಮತ್ತು ರಹಾಬಳ ನಂಬಿಕೆ (11:30, 31)

**[30]ನಂಬಿಕೆಯಿಂದಲೇ ಅವರು ಏಳು ದಿವಸಗಳ ತನಕ ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು. [31]ನಂಬಿಕೆಯಿಂದಲೇ ರಹಾಬಳೆಂಬ ಸೂಳೆಯು ಗೂಢಚಾರರನ್ನು ಸಮಾಧಾನವಾಗಿ ಸೇರಿಸಿಕೊಂಡು ನಂಬದವರೊಂದಿಗೆ ನಾಶವಾಗಲಿಲ್ಲ.**

**ವಚನ 30.** ಇಸ್ರಾಯೇಲ್ಯರ **ನಂಬಿಕೆ**ಯು ವಾಗ್ದಾನ ದೇಶವನ್ನು ಜಯಿಸಿಕೊಳ್ಳುವ ದರೊಂದಿಗೆ ಸಂಬಂಧಿಸಿರುವ ಮಹಾನ್ ಅನುಭವದಲ್ಲಿ ಪುನರ್ದೃಢೀಕರಿಸಲ್ಪಟ್ಟಿದೆ. ಈ ಘಟನಾವಳಿಯು ದೇವರು ಆಜ್ಞಾಪಿಸಿದ್ದನ್ನು ಮಾಡುವದಕ್ಕಾಗಿ ಒಟ್ಟಾಗಿ ಕೈಜೋಡಿ ಸುವದಾಗಿ ಇಸ್ರಾಯೇಲ್ಯ ಜನಾಂಗವನ್ನು ಚಿತ್ರಿಸುತ್ತದೆ.

ಶೈಲಿಯ ದೃಷ್ಟಿಕೋನದಿಂದ, 11:29-38ರ ವಾಕ್ಯಭಾಗವು ಇಬ್ರಿಯರಿಗೆ ಪತ್ರಿಕೆಯಲ್ಲಿಯೇ ಅತ್ಯಂಥ ಸುಂದರವಾದ ಮತ್ತು ಮನಕಲುಕುವ ವಾಕ್ಯಭಾಗವೆಂದು ಗಮನಿಸಲ್ಪಟ್ಟಿದೆ. ಅದು "ಒಬ್ಬನನ್ನು ಯಾವಾಗಲೂ ಮುನ್ನಡೆಯುವಂತೆ ಮಾಡುವ, ಹಿಂದಕ್ಕೆ ಸಾಗುವ ಐಷರಾಮಕ್ಕೆ ಎಂದಿಗೂ ಅನುಮತಿಯನ್ನು ಕೊಡದ"[76] ನಂಬಿಕೆಯನ್ನು ತೋರಿಸುತ್ತದೆ.

29ನೇ ವಚನದ ಮೇಲೆ ಇನ್ನಷ್ಟು ಸೇರಿಸುವದಾದರೆ, ನಮ್ಮ ವಾಕ್ಯಭಾಗವು ಒಂದು ದೊಡ್ಡ ತದ್ವಿರುದ್ಧತೆಯನ್ನು ಮುಂದಿಡುತ್ತದೆ. ಇಸ್ರಾಯೇಲ್ಯರು ಸಮುದ್ರವನ್ನು ದಾಟಿದ್ದರು ಮತ್ತು ರಕ್ಷಿಸಲ್ಪಟ್ಟರು, ಅದೇ ವೇಳೆಯಲ್ಲಿ ಐಗುಪ್ತರು ಮುಳುಗಿ ಹೋದರು ಎಂಬುದನ್ನು ಲೇಖಕನು ಈಗಷ್ಟೆ ಗಮನಕ್ಕೆ ತಂದಿದ್ದನು. ಈ ಘಟನೆಯು ಒಂದು ರಾಷ್ಟ್ರೀಯ ವೀರಚರಿತೆ ಆಯಿತು; ಅದು ವರ್ಷಗಳ ನಂತರದಲ್ಲಿ ಕೀರ್ತನೆಗಾರನಿಂದ ನೆನಪಿನಲ್ಲುಳಿಯುವಂತೆ ಮಾಡಲ್ಪಟ್ಟಿತು (78:13; 135:8, 9; 136:10-15).

ಎರಡನೆಯ ವಿರುದ್ಧ ಹೋಲಿಕೆಯು ನಂಬಿಕೆಯಿಂದ ಎರಿಕೋ ಪಟ್ಟಣವನ್ನು **ಸುತ್ತಿದ** ನೀತಿವಂತರು ಮತ್ತು ಅದರೊಳಗೆ ನಾಶಗೊಂಡ ಅವಿಶ್ವಾಸಿಗಳ ನಡುವೆ ಆಗಿದೆ (ವಚನಗಳು 30, 31). ಚದುರಿಸಲ್ಪಟ್ಟ ರಕ್ತವು ಹೇಗೆ ಚೊಚ್ಚಲ ಮಕ್ಕಳನ್ನು ರಕ್ಷಿಸುವದಕ್ಕಾಗುವದಿಲ್ಲವೋ ಹಾಗೆಯೇ ಶಿಸ್ತಿನಿಂದ ನಡೆಯುವದರಿಂದಾಗಲಿ ಮತ್ತು ಘೋಷಣೆ ಕೂಗುವದರಿಂದಾಗಲಿ ಭದ್ರವಾದ ಕೋಟೆಯ ಗೋಡೆಗಳು ಬೀಳುವದಿಲ್ಲ. ಹೇಗೂ, ನಂಬಿಕೆಯಿಂದ ಇಸ್ರಾಯೇಲ್ಯರು ದೇವರ ಆಜ್ಞೆಗಳಿಗೆ ವಿಧೇಯರಾದರು, ಮತ್ತು ತಾನು ವಾಗ್ದಾನ ಮಾಡಿದಂತೆಯೇ ಅವರನ್ನು ಆಶೀರ್ವದಿಸಿದನು.

ನಂಬಿಕೆಯಿಂದಲೇ **ಎರಿಕೋ ಪಟ್ಟಣದ ಗೋಡೆಗಳು ಬಿದ್ದವು** – ಅದೊಂದು ವಿಧೇಯತೆಯುಳ್ಳ ನಂಬಿಕೆ. ಇಸ್ರಾಯೇಲ್ಯರ ಜನಸಮೂಹಗಳು ಎಷ್ಟೇ ಶಿಸ್ತಿನಿಂದ ಸಂಚರಿಸಿದರು ಅಂಥ ಗೋಡೆಗಳು ಬೀಳುವಂತೆ ಮಾಡಿರಲಿಕ್ಕೆ ಸಾಧ್ಯವಿರಲಿಲ್ಲ. ಸೇತುವೆಯನ್ನು

ದಾಟುವ ಸೈನಿಕರು ಲಯಬದ್ಧತೆಯನ್ನು ಸೃಷ್ಟಿಸಿ ಸೇತುವೆಯನ್ನು ಅಲುಗಾಡಿಸಿ ಬೀಳುವಂತೆ ಮಾಡುವದರಿಂದ ತಡೆಯುವದಕ್ಕೆ ತಮ್ಮ ಹೆಜ್ಜೆಗಳನ್ನು ಮುರಿಯಬೇಕೆಂಬುದು ಸತ್ಯವೇ, ಆದರೆ ಗೋಡೆಯ ಸುತ್ತ ಸಂಚರಿಸುವರಿಂದಾಗಲಿ ಅಥವಾ ತುಳಿದಾಡುವದಿಂದಾಗಲಿ ಅವುಗಳು ಬೀಳುವದಿಲ್ಲ (ಯೆಹೋಶುವ 6).

ಅಪೊಸ್ತಲರ ಕೃತ್ಯಗಳು 21:38ರಲ್ಲಿ ಪ್ರಸ್ತಾಪಿಸಲಾಗಿರುವ ಒಬ್ಬ ಐಗುಪ್ತದೇಶದ ಬಂಡಾಯಗಾರನು ತನ್ನ ಮಾತಿನ ಮೇಲೆ ಐಗುಪ್ತದ ಗೋಡೆಗಳು ಕುಸಿದು ಬೀಳುವವು ಎಂದು ಹೇಳಿಕೊಂಡಿದ್ದನು, ಆದರೆ ಅವುಗಳು ಬೀಳಲಿಲ್ಲ.[77] ಇಸ್ರಾಯೇಲ್ಯರ ಜನರು **ಏಳು ದಿವಸಗಳ ತನಕ** ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿ ಘೋಷಣೆಗಳನ್ನು ಕೂಗಿದ ಬಳಿಕ ಗೋಡೆಗಳನ್ನು ಬೀಳುವಂತೆ ಮಾಡಿದ್ದು ಸೈನಿಕರ ತೀವಿಯುವ ದಿಮ್ಮೆಗಳಿಂದಾಗಿ ಅಲ್ಲ, ಆದರೆ ದೇವರಲ್ಲಿಟ್ಟಿದ್ದ ನಂಬಿಕೆಯಿಂದಲೇ ಆಗಿದೆ (ಯೆಹೋಶುವ 6:1-5, 12-20). ಅವರು ಏಳು ದಿನಗಳ ಕಾಲ ಸುತ್ತುತ್ತಿರುವ ವೇಳೆ ಅಲ್ಲಿನ ನಿವಾಸಿಗಳು ಅವರನ್ನು ಅಪಹಾಸ್ಯ ಮಾಡುವಾಗ ಏನಾಗಿರಬಹುದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವದಾದರೆ ಅವರ ನಂಬಿಕೆಯು ದೊಡ್ಡದಾಗಿ ಕಾಣಲ್ಪಡುತ್ತದೆ. ಎರಿಕೋ ಪಟ್ಟಣವನ್ನು ಜಯಿಸಿಕೊಂಡಿದ್ದು ದುಷ್ಟ ವಿಗ್ರಹಾರಾಧಕ ಜನಾಂಗದವರ ದುಷ್ಟತ್ವವು ಪೂರ್ತಿಯಾದಾಗ ಅವರಿಂದ ವಾಗ್ದಾನದೇಶವನ್ನು ವಶಪಡಿಸಿಕೊಳ್ಳುವದಕ್ಕೆ ದೇವರ ಅನುಮೋದನೆಯ ಮುದ್ರೆಯು ಬಿದ್ದಿತು (ಆದಿಕಾಂಡ 15:13-16).

ಎರಿಕೋವನ್ನು ಜಯಿಸಿಕೊಂಡಿದ್ದು ಇಡೀ ಪಾಳಯಕ್ಕೆ ಬಹಳಷ್ಟು ಪ್ರೋತ್ಸಾಹವನ್ನು ನೀಡರಬಹುದಾಗಿದೆ. ಇಸ್ರಾಯೇಲ್ಯರಿಗೆ ದೈವಿಕ ಸಹಾಯವು ಇಲ್ಲದೆ ಹೋಗಿದ್ದರೆ ಬೃಹತ್ ಗೋಡೆಗಳು ಮತ್ತು ಶಕ್ತಿಶಾಲಿ ಯುದ್ಧವೀರರಿಂದ ಕೂಡಿದ್ದ ಎರಿಕೋ ಅವರಿಗೊಂದು ಪ್ರಬಲ ಎದುರಾಳಿಯಾಗಬಹುದಿತ್ತು.[78] ಕಾನಾನಿನ ಒಳ ಕಣಿವೆಗಳನ್ನು ಗೆದ್ದುಕೊಳ್ಳಬೇಕಾದರೆ ಮೊದಲು ಎರಿಕೋವಿನ ಹೊರಠಾಣೆಯನ್ನು ಸದೆಬಡಿಯುವ ಅಗತ್ಯವಿತ್ತು. ಗೋಡೆಗಳು ಬಿದ್ದು ಹೋಗುವದರೊಂದಿಗೆ, ಇಸ್ರಾಯೇಲ್ಯರಿಗೆ ಶೀಘ್ರವೇ ಒಳಗೆ ನುಗ್ಗಿ ಇಡೀ ದೇಶವನ್ನು ವಶಪಡಿಸಿಕೊಳ್ಳುವದಕ್ಕೆ ಸಾಕಷ್ಟು ನಂಬಿಕೆಯು ಇದ್ದಿರಬಹುದಾಗಿದೆ.

**ವಚನ 31. ರಹಾಬಳೆಂಬ ಸೂಳೆಯು** ಇಸ್ರಾಯೇಲಿನ **ಗೂಢಚಾರ**ರಿಗೆ ತನ್ನ **ನಂಬಿಕೆಯನ್ನು** ಅರಿಕೆ ಮಾಡಿದಳು. ಆ ನಂಬಿಕೆಯು ಕೇವಲ ಮತ್ತೊಬ್ಬರಿಂದ ಕೇಳಿದ ಮಾಹಿತಿಯಿಂದಾಗಿ ಬಂದಿತ್ತು, ಆದರೆ ಆಕೆಯು ದೇವರೊಬ್ಬನೇ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ದೇವರು" ಎಂಬುದನ್ನು ನಂಬಿದ್ದಳು (ಯೆಹೋಶುವ 2:8-11; 6:22-25). ಆ ಹೇಳಿಕೆಯು ಎರಿಕೋ ಪಟ್ಟಣದ ಜನರಿಂದ ನಂಬಲ್ಪಟ್ಟಿರುವಂತಹ ಎಲ್ಲದಕ್ಕೂ ವಿರುದ್ಧವಾಗಿತ್ತು. ಆಕೆಯ ನಂಬಿಕೆಯು ಗೂಢಚಾರರನ್ನು ಕಾಪಾಡುವಂತೆ ಮತ್ತು ಅವರು ಹೊರಟು ಹೋಗಿದ್ದಾರೆಂದು ಸುಳ್ಳು ಹೇಳುವ ಹಾಗೆ ಮಾಡಿತ್ತು; ಅದರಿಂದ ಆಕೆಯ ಕುಟುಂಬವು ಸಂರಕ್ಷಣೆಯನ್ನು ತಂದಿತು ಮತ್ತು ಆಕೆಯನ್ನು ರಕ್ಷಣೆಗೆ ನಡಿಸಿತು. ಎರಿಕೋವಿನವರ ಅವಿಧೇಯತೆಯು ಅವರನ್ನು ಕಿತ್ತೆಸೆಯಲ್ಪಡುವಂತೆ ಮಾಡಿತು. ಆಕೆಯ ಜೀವನವು ಆ ನಂಬಿಕೆಯಿಂದ ಮಾರ್ಪಟ್ಟಿತು, ಅದು, ವಿಧೇಯತೆಯ ಜೊತೆಯಲ್ಲಿ, ಆಕೆಯನ್ನು ನೀತಿವಂತಳೆಂದು ನಿರ್ಣಯಿಸಲ್ಪಡುವಂತೆ ನಡಿಸಿತು (ಯಾಕೋಬ 2:25). ರಾಹಾಬಳು ಬಳಿಕ ಸಲ್ಮೋನನ ಹೆಂಡತಿಯಾದಳು ಮತ್ತು ಬೋವಜನ ತಾಯಿಯಾದಳು, ಆತನು ಓಬೇದನ ತಂದೆಯಾಗಿದ್ದನು, ಓಬೇದನು ಇಷಯನ ತಂದೆಯಾಗಿದ್ದನು. ಆದದರಿಂದ ಆಕೆಯು ದಾವೀದನ ಮುತ್ತಜ್ಜಿಯಾಗಿದ್ದಾಳೆ, ಮತ್ತು ಅಂತಿಮವಾಗಿ ಮೆಸ್ಸೀಯನ ಪೂರ್ವಿಕರಲ್ಲೊಬ್ಬಳಾದಳು (ಮತ್ತಾಯ 1:5, 6). ದೇವರು

ಇಸ್ರಾಯೇಲ್ಯರೊಂದಿಗೆ ಇದ್ದಾನೆ ಎಂಬ ವರದಿಯನ್ನು ಎರಿಕೋವಿನ ಉಳಿದ ಜನರು ನಂಬಲಿಲ್ಲ; ಅದರ ಫಲಿತವಾಗಿ ಅವರು ನಾಶವಾದರು.

## ನಂಬಿಕೆಯ ವಿಜಯಿಶಾಲಿ ವೀರರು ಮತ್ತು ಕಷ್ಟವನ್ನನುಭವಿಸುವ ವೀರರು (11:32-38)

**[32]ಇನ್ನೂ ಏನು ಹೇಳಬೇಕು? ಗಿಡಿಯೋನ್ ಬಾರಾಕ್ ಸಂಸೋನ್ ಎಫ್ಥ ದಾವೀದ್ ಸಮುವೇಲ್ ಎಂಬುವರ ವೃತ್ತಾಂತವನ್ನೂ ಪ್ರವಾದಿಗಳ ವೃತ್ತಾಂತವನ್ನೂ ವಿವರವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು. [33]ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನಮಾಡಿಕೊಂಡರು; ನೀತಿಯನ್ನು ನಡಿಸಿದರು; ವಾಗ್ದಾನಗಳನ್ನು ಪಡಕೊಂಡರು; ಸಿಂಹಗಳ ಬಾಯಿ ಕಟ್ಟಿದರು; [34]ಬೆಂಕಿಯ ಬಲವನ್ನು ಆರಿಸಿದರು; ಕತ್ತಿಯ ಬಾಯಿಗೆ ತಪ್ಪಿಸಿಕೊಂಡರು; ನಿರ್ಬಲರಾಗಿದ್ದು ಬಲಿಷ್ಠರಾದರು; ಯುದ್ಧದಲ್ಲಿ ಪರಾಕ್ರಮಶಾಲಿಗ ಳಾದರು; ಪರರ ದಂಡುಗಳನ್ನು ಓಡಿಸಿಬಿಟ್ಟರು. [35]ಸ್ತ್ರೀಯರು ಸತ್ತು ಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರಿಗಿ ಹೊಂದಿದರು. ಕೆಲವರು ತಾವು ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ ಶ್ರೇಷ್ಠಪುನರುತ್ಥಾನವನ್ನು ಹೊಂದುವದಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ ಮುರಿಸಿಕೊಂಡು ಸತ್ತರು. [36]ಬೇರೆ ಕೆಲವರು ಅಪಹಾಸ್ಯ ಕೊರಡೆಯ ಪೆಟ್ಟು ಬೇಡಿ ಸೆರೆಮನೆ ಇವುಗಳನ್ನು ಅನುಭವಿಸಿದರು. [37]ಕೆಲವರನ್ನು ಜನರು ಕಲ್ಲೆಸೆದು ಕೊಂದರು; ಕೆಲವರನ್ನು ಗರಗಸದಿಂದ ಕೊಯ್ದು ಕೊಂದರು; ದೇವದ್ರೋಹಿಗಳಾಗಿ ಪ್ರಾಣವನ್ನು ಉಳಿಸಿಕೊಳ್ಳಿರೆಂದು ಕೆಲವರನ್ನು ಪ್ರೇರೇಪಿಸಿದರು; ಕೆಲವರನ್ನು ಕತ್ತಿಯಿಂದ ಕೊಂದರು. ಕೆಲವರು ಕೊರತೆ ಹಿಂಸೆ ಬಾಧೆ ಇವುಗಳನ್ನು ಅನುಭವಿಸುವವರಾಗಿದ್ದು ಕುರಿ ಮೇಕೆಗಳ ಚರ್ಮಗಳನ್ನು ಉಟ್ಟುಕೊಂಡವರಾಗಿ ತಿರುಗಾಡಿದರು. [38]ಇಂಥವರಿಗೆ ಈ ಲೋಕವು ಯೋಗ್ಯಸ್ಥಳವಲ್ಲ; ಅವರು ತಮ್ಮ ದೇಶದ ಕಾಡು ಬೆಟ್ಟ ಗವಿ ಕುಣಿಗಳಲ್ಲಿ ಅಲೆಯುವವರಾಗಿದ್ದರು.**

32ನೇ ವಚನದಿಂದ ಆರಂಭಿಸಿ, ಹಳೆಯ ಒಡಂಬಡಿಕೆಯ ವೀರರು ಮೂರು ಗುಂಪುಗಳಾಗಿ ಮುಂದಿಡಲ್ಪಟ್ಟಿದ್ದಾರೆ. ಮೊದಲನೆಯ ಗುಂಪು ಯುದ್ಧ ಹೋರಾಟಗಳಲ್ಲಿ ಜಯಗಳಿಸಿದ ಅಥವಾ ಗಂಭೀರವಾದ ಅಪಾಯಗಳಿಂದ ಬಿಡಿಸಲ್ಪಟ್ಟವರನ್ನು ಹೆಸರಿಸುತ್ತದೆ (ವಚನಗಳು 32-34). ಎರಡನೆಯದು ಬಾಧೆಗಳನ್ನನುಭವಿಸುವ ವೀರರಿಗೆ ಸಂಬಂಧಿಸಿರುತ್ತದೆ (ವಚನಗಳು 35-38). ಮೂರನೆಯದು, ಒಂದು ಮುಕ್ತಾಯದ ಹೇಳಿಕೆಯಾಗಿದ್ದು (ವಚನಗಳು 39, 40), ಯುಗಗಳಲ್ಲಿನ ಎಲ್ಲಾ ನಂಬಿಗಸ್ತರನ್ನು ಒಂದಾಗಿ ಜೋಡಿಸುತ್ತದೆ.[79] ಕ್ರಿಸ್ತನ ಸಭೆಯಿಲ್ಲದೆ, ಇವರಲ್ಲಿ ಯಾರೊಬ್ಬನೂ "ಸಿದ್ಧಿಗೆ ಬರುವದಿಲ್ಲ." ಅವರಿಗಾಗಿ ಮತ್ತು ನಮಗಾಗಿ ಜಯವು ನಮ್ಮ ಕರ್ತನಾದ ಕ್ರಿಸ್ತನ ಮೂಲಕ ಸಾಧಿಸಲ್ಪಟ್ಟಿತು.

**ವಚನ 32.** ಭಕ್ತಿವಂತರು ರಾಜ್ಯಗಳನ್ನು ಗೆದ್ದುಕೊಂಡರು, ಅದೇ ವೇಳೆಯಲ್ಲಿ, ಅದರ ಸೂಚ್ಯಾರ್ಥದಿಂದ ನಾವು ಊಹಿಸಿಕೊಳ್ಳುವದೇನೆಂದರೆ ಅನೀತಿವಂತರು ಸೋಲಿಸ ಲ್ಪಟ್ಟರು ಮತ್ತು ನಾಶಗೊಂಡರು ಎಂಬದೆ (ವಚನಗಳು 32-38). ಇಲ್ಲಿ ಪ್ರತಿನಿಧಿಸಲ್ಪಟ್ಟಿರುವ ಇಬ್ರಿಯರ ಇತಿಹಾಸದ ಪ್ರತಿಯೊಂದು ಘಟನಾವಳಿಗಳಿಂದಲೂ ಮಹಾನ್ ಪಾಠಗಳು ಸಿಕ್ಕುತ್ತವೆ. ಈ ವಾಕ್ಯಭಾಗವು ಇಸ್ರಾಯೇಲಿನ ಯಾವದೇ ಮಗುವು ಪಠಿಸುತ್ತಿದ್ದ ಒಂದು ಶ್ರೇಷ್ಠವಾದ ದೇಶಾಭಿಮಾನದ ಭಾಷಣದ ಭಾಗವಾಗಿರಬಹುದಾಗಿದೆ.

ಲೇಖಕನು ಒಬ್ಬ ಪ್ರಸಂಗಿಯಿಂದ ಬಳಸಲ್ಪಡಬಹುದಾದ ಮಾತುಗಳನ್ನು ಆಯ್ಕೆ

ಮಾಡಿಕೊಂಡು ಹೀಗೆ ಹೇಳುತ್ತಾನೆ, **ಇನ್ನೂ ಏನು ಹೇಳಬೇಕು?** ಮತ್ತು ನನಗೆ ಸಮಯ ಸಾಲದು. ಬರೆಯುವದರಲ್ಲಿ, ಸ್ಥಳಾವಕಾಶವೇ ತಡೆಯಾಗುತ್ತದೆ ಹೊರತು ಸಮಯವಲ್ಲ. ಇಲ್ಲಿ, ನಾವು ಸಮಯದ ಕೊರತೆಯಿದ್ದ ಒಂದು ಪ್ರಸಂಗದ ಬಗ್ಗೆ ಮಾತಾಡುತ್ತಿದ್ದೇವೆಂದು ತೋರುತ್ತದೆ.

ಬೈಬಲಿನಲ್ಲಿ ನಂಬಿಕೆಯ ಅದ್ಭುತವಾದ ಉದಾಹರಣೆಗಳು ತುಂಬಿರುತ್ತವೆ – ಬಹಳಷ್ಟು ಇರುತ್ತವೆ, ವಾಸ್ತವದಲ್ಲಿ, ತನಗೆ ಲಭ್ಯವಿರುವ ಎಲ್ಲವನ್ನೂ ಲೇಖಕನು ಬಳಸಿಕೊಳ್ಳುವದಕ್ಕಾಗಲಿಲ್ಲ, ಅಲ್ಲದೆ ಆತನು ಹಾಗೆ ಮಾಡುವ ಅಗತ್ಯವೂ ಇಲ್ಲ. ಮುಂದೆ ಬರುವಂಥವುಗಳು ಪತ್ರಿಕೆಯನ್ನು ಸ್ವೀಕರಿಸಿಕೊಂಡ ಪ್ರತಿಯೊಬ್ಬನಿಗೆ ಪರಿಚಿತವಿರಬೇಕಾಗಿದ್ದ ಹೆಸರುಗಳು ಮತ್ತು ಕೃತ್ಯಗಳ ಪಟ್ಟಿಯಾಗಿರುತ್ತದೆ. ಕೆಲವೊಂದು ವರ್ಣನೆಗಳು ಶಾಸ್ತ್ರಗಳಲ್ಲಿ ಪ್ರಸ್ತಾಪಿಸಲ್ಪಡದ ಕೆಲವು ಜನರನ್ನು ಸೂಚಿಸಬಹುದಾಗಿದೆ. ಈ ವಾಕ್ಯಭಾಗದ ಆಧಾರದಲ್ಲಿ, ನಾವು ಅವರೊಂದಿಗೆ ನಿತ್ಯತ್ವದಲ್ಲಿ ಪರಿಚಯ ಮಾಡಿಕೊಳ್ಳುವ ತನಕ ಅಮೂಲ್ಯವೆಂದು ಕಾಪಾಡಿಕೊಳ್ಳಬೇಕು. ಲೇಖಕನು ಉದ್ದಟತನದಂತಾಗಲು ಇಷ್ಟಪಡದ ಕಾರಣ, ಆತನು ತನ್ನ ಪಟ್ಟಿಯಿಂದ ಅನಾವಶ್ಯಕವಾದ ವಿವರಗಳನ್ನು ಕೈ ಬಿಟ್ಟನು.

ನ್ಯಾಯಸ್ಥಾಪಕರು ಮತ್ತು 1 ಹಾಗೂ 2 ಸಮುವೇಲ ಪುಸ್ತಕಗಳಿಂದ ಆರು ನಿರ್ದಿಷ್ಟವಾದ ಹೆಸರುಗಳು ಪ್ರಸ್ತಾಪಿಸಲ್ಪಟ್ಟಿರುತ್ತವೆ. ಇವುಗಳನ್ನು ಮೂರರಂತೆ ವಿಭಾಗಿಸಬಹುದು, ಪ್ರತಿಯೊಂದು ಗುಂಪಿನಲ್ಲಿರುವ ವ್ಯಕ್ತಿಗಳು ಕಾಲಾನುಕ್ರಮದಲ್ಲಿ ಹಿಮ್ಮುಖವಾಗಿ ಪ್ರತಿನಿಧಿಸುತ್ತಾರೆ: **ಬಾರಾಕ್‌ನು ಗಿಡಿಯೋನನಿಗೆ** ಮುಂಚೆ ಇಸ್ರಾಯೇಲನ್ನು ನಡಿಸಿದ್ದನು, **ಎಫ್ಥನು ಸಂಸೋಸನಿಗೆ** ಮುಂಚೆ ಇದ್ದವನು, ಮತ್ತು **ಸಮುವೇಲ**[ನು] **ದಾವೀದ**ನನ್ನು ಅಭಿಷೇಕಿಸಿದಾಗ ಆತನ ಸೇವೆಯು ಮುಕ್ತಾಯಕ್ಕೆ ಬರುತ್ತಲಿತ್ತು. ಈ ಹೆಸರುಗಳು ಮೂರು ಪ್ರಾಮುಖ್ಯವಾದ ವಿಭಾಗಗಳನ್ನು ಪ್ರತಿನಿಧಿಸುತ್ತವೆ: ನ್ಯಾಯಸ್ಥಾಪಕರು, ಒಬ್ಬ ಅರಸನು, ಮತ್ತು ಒಬ್ಬ **ಪ್ರವಾದಿ**.

ಮೊದಲು ಹೆಸರಿಸಲ್ಪಟ್ಟವನು ಗಿಡಿಯೋನ್ ಆಗಿದ್ದಾನೆ (ನ್ಯಾಯಸ್ಥಾಪಕರು 6:11-8:32), ಈತನು ಐದನೆಯ ನ್ಯಾಯಸ್ಥಾಪಕನು ಮತ್ತು ಮಿದ್ಯಾನ್ಯರನ್ನು ಸೋಲಿಸಿದನು. ಗಿಡಿಯೋನನ ಕೇವಲ ಮೂನ್ನೂರು ಜನರ ಸೈನ್ಯವು ವೈರಿಯ ಸೈನ್ಯದ ಸಂಖ್ಯೆಗಿಂತ ಬಹಳವಾಗಿ ಕಡಿಮೆಯಾಗಿತ್ತು, ಕನಿಷ್ಠ 135,000 ಮಿದ್ಯಾನ್ಯ ಸೈನ್ಯವನ್ನು ಎದುರಿಸುವದಾಗಿತ್ತು (ನೋಡಿರಿ ನ್ಯಾಯಸ್ಥಾಪಕರು 7:6; 8:10).

ಬಾರಾಕ್ (ನ್ಯಾಯಸ್ಥಾಪಕರು 4:1-5:31) ಮತ್ತು ಆತನ ಹತ್ತು ಸಾವಿರ ಪುರುಷರು ಕಾನಾನ್ಯರನ್ನು ಸೋಲಿಸಿದರು, ಈ ಕಾನಾನ್ಯರು ಒಂಭತ್ತು ನೂರು ಲೋಹದ ರಥಗಳನ್ನು ಮತ್ತು ಇಸ್ರಾಯೇಲ್ಯರಿಗಿಂತಲೂ ಅತ್ಯಂಥ ದೊಡ್ಡದಾದ ಸೇನೆಯನ್ನು ಹೊಂದಿದ್ದರು. ಕಾನಾನ್ಯರ ಸೇನಾಧಿಪತಿಯಾಗಿದ್ದ ಸೀಸೆರನು ಆ ಸಮಯದಲ್ಲಿ ಕೊಲ್ಲಲ್ಪಟ್ಟನು – ಆದರೆ ಸೇನಾಧಿಪತಿಯಾದ ಬಾರಾಕ್ನ ಕೈಗಳಲ್ಲಿ ಕೊಲ್ಲಲ್ಪಡಲಿಲ್ಲ, ಯಾಕೆಂದರೆ ಈತನು ಇಸ್ರಾಯೇಲಿನ ನಾಲ್ಕನೆಯ ನ್ಯಾಯಸ್ಥಾಪಕಳಾಗಿದ್ದ ಪ್ರವಾದಿನಿಯಾದ ದೆಬೋರಾಳ ಸಲಹೆಯನ್ನು ಆತನು ಅನುಸರಿಸಿರಲಿಲ್ಲ. ಬದಲಾಗಿ, ಸೀಸೆರನು ಒಬ್ಬ ಸ್ತ್ರೀಯಿಂದ ಕೊಲ್ಲಲ್ಪಟ್ಟನು (ನ್ಯಾಯಸ್ಥಾಪಕರು 4:8, 9, 21). ಯುದ್ಧದಲ್ಲಿ ದೆಬೋರಳನ್ನು ಜೊತೆಯಾಗಿ ಕರಕೊಂಡು ಹೋಗಬೇಕೆಂಬ ಬಾರಾಕ್ನ ಬಯಕೆಯು ಆಕೆಯನ್ನು ನಡಿಸಿದ ದೇವರಲ್ಲಿ ಆತನು ನಂಬಿಕೆ ಹೊಂದಿದ್ದನೆಂಬುದನ್ನು ನಿಶ್ಚಯವಾಗಿಯೂ ತೋರ್ಪಡಿಸುತ್ತದೆ, ಆದರೆ ಆತನ ನಂಬಿಕೆಯು ಇರಬೇಕಾಗಿದ್ದಷ್ಟು ಬಲವಾಗಿ ಇರಲಿಲ್ಲ. ವಿಜಯದ ಮಾನವು ಆತನಿಗೆ ಸಿಕ್ಕುವದಾಗಿರಲಿಲ್ಲವಾದರೂ, ಆಗಲೂ ಆತನು ದೇವರ ಹಾಗೂ ಇಸ್ರಾಯೇಲಿನ ಮಹಿಮೆಗಾಗಿ ಸೈನ್ಯವನ್ನು ಮುನ್ನಡೆಸಿದನು.[80]

ಸಂಸೋನ (ನ್ಯಾಯಸ್ಥಾಪಕರು 13:24-16:31), ಈತನು ಹದಿಮೂರನೆಯ ನ್ಯಾಯಸ್ಥಾಪಕನಾಗಿದ್ದು, ಜನ್ಮದಿಂದಲೇ ಒಬ್ಬ ನಾಜೀರನು (ದೇವರಿಗೆ ಪ್ರತಿಷ್ಠಿತನು) ಆಗಿದ್ದನು ಮತ್ತು ಬಹಳಷ್ಟು ಫಿಲಿಷ್ಟಿಯರನ್ನು ಕೊಂದನು. ಸಂಸೋನನು ಒಬ್ಬ ಪಾಪಿಯಾಗಿದ್ದನು, ಆದರೆ ಆತನ ಪಾಪಗಳಿಗಾಗಿ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಅವನನ್ನು ಪ್ರಶಂಸಿರುವದಿಲ್ಲ. ಸಂಸೋನನ ಅತ್ಯಂಥ ದೊಡ್ಡ ಬಲಹೀನತೆಯು ಭಕ್ತಿಹೀನ ಸ್ತ್ರೀಯರ ಮೋಹಕ್ಕೊಳಗಾಗುವದಾಗಿತ್ತು. ಆತನು ಶಕ್ತಿಯ ಪುನರುಜ್ಜೀವನದಿಂದ ಆಶೀರ್ವದಿಸಲ್ಪಟ್ಟನು ಆದರೆ ತಾನು ಕೊಂದ ಫಿಲಿಷ್ಟಿಯರ ಜೊತೆಯಲ್ಲಿ ತನ್ನ ಪ್ರಾಣವನ್ನು ಕಳಕೊಂಡನು. ಆತನು ದೇವರಲ್ಲಿ ಹೊಂದಿದ್ದ ನಂಬಿಕೆಯು ಒಂದು ಅಂತಿಮವಾದ ಶಕ್ತಿಯ ಪ್ರದರ್ಶನವನ್ನು ಮಾಡುವಂತೆ ಶಕ್ತಗೊಳಿಸಿತು.

ಎಫ್ಥ (ಯೆಪ್ತಾಹ; ನ್ಯಾಯಸ್ಥಾಪಕರು 11:1-12:7), ಒಂಭತ್ತನೆಯ ನ್ಯಾಯಸ್ಥಾಪಕನು, ಈತನು (ಸಂಸೋನನಂತೆ) ಪರಿಪೂರ್ಣನಂತೂ ಆಗಿರಲಿಲ್ಲ. ಆತನು ತನ್ನ ಮಗಳ ವಿಷಯವಾಗಿ ಒರಟಾದ ಹರಕೆಯನ್ನು ಮಾಡಿದನು, ಆದರೆ ಆತನು ಅದನ್ನು ಕಾಪಾಡಿಕೊಳ್ಳುವದರಲ್ಲಿ ತನ್ನ ಮಾತಿಗೆ ನಂಬಿಗಸ್ತನಾಗಿದ್ದನು. ಅವಸರಪಟ್ಟು ನುಡಿದಿದ್ದಾಗ್ಯೂ, ಆತನ ಹರಕೆಯು ನಂಬಿಕೆಯಲ್ಲಿಯೇ ಮಾಡಲಾಗಿತ್ತು. ತಾನು ತನ್ನ ಹರಕೆಯನ್ನು ದೇವರಿಗೆ ಮಾಡಿದ್ದೇನೆಂದು ನಂಬಿದ್ದನೆಂಬುದು ಸ್ಪಷ್ಟವಾಗುತ್ತದೆ ಮತ್ತು ಅದರಿಂದ ಹಿಂದಕ್ಕೆ ಹೋಗಲು ಸಾಧ್ಯವಿರಲಿಲ್ಲ. ಆತನ ಮಗಳು ಒಂದು ಯಜ್ಞವಾಗಿ ಸಮರ್ಪಿಸಲ್ಪಟ್ಟಳೋ ಅಥವಾ ಒಂದು ಸನ್ಯಾಸಿ ಜೀವನಕ್ಕೆ ಸಮರ್ಪಿಸಿಕೊಂಡಳೋ (ಹೀಗೆ "[ತನ್ನ] ಕನ್ಯಾವಸ್ಥೆಗೋಸ್ಕರ ಗೋಳಾಡಿದಳು"; ನ್ಯಾಯಸ್ಥಾಪಕರು 11:37) ಎಂಬುದು ಒಂದು ವಿವಾದದ ವಿಷಯವಾಗಿ ಉಳಿದಿರುತ್ತದೆ. ಒಬ್ಬ ಕಾನೂನುಬಾಹಿರವಾಗಿ ಹುಟ್ಟಿದವನಾಗಿ ಯಪ್ತಾಹನಿಗೆ ಯಾವ ಬಾಧ್ಯತೆಯೂ ಇರಲಿಲ್ಲ, ಆದರೆ ಆತನ ಮಗಳು ಅವನಿಗೆ ಒಬ್ಬ ಬಾಧ್ಯಸ್ಥನನ್ನು ಒದಗಿಸಿದ್ದಲ್ಲಿ ಆತನಿಗೊಂದು ಶಾಶ್ವತವಾದ ಸಂತತಿಯನ್ನು ಸಂಪಾದಿಸಿಕೊಂಡಿರುತ್ತಿದ್ದನು. ಈ ಕಾರಣಕ್ಕಾಗಿ ಆಕೆಯ ನಿರಂತರವಾದ ಕನ್ಯಾವಸ್ಥೆಯು ಇನ್ನೂ ಹೆಚ್ಚು ಗೋಳಾಡತಕ್ಕದ್ದಾಗಿದೆ. ಇಸ್ರಾಯೇಲ್ಯರು ಆ ಕಾಲದಲ್ಲಿ ಅರಸನೊಬ್ಬನನ್ನು ಹೊಂದದೆ ಇರುವಂತೆ ನಿರ್ಧರಿಸುವ ಹಾಗೆ ದೇವರು ಒಂದು ಪರಿಸ್ಥಿತಿಯನ್ನು ವ್ಯವಸ್ಥೆಗೊಳಿರಬಹುದಾಗಿದೆ. ಯೆಪ್ತಾಹನು ಅಮ್ಮೋನಿಯರನ್ನು ಸೋಲಿಸಿದನು ಮತ್ತು ಇಸ್ರಾಯೇಲ್ಯರಿಗೆ ಸಮಾಧಾನವನ್ನು ತಂದನು, ಅದನ್ನು ಆತನ ಉತ್ತರಾಧಿಕಾರಿಗಳು ಸ್ವಲ್ಪ ಕಾಲ ಅನುಭವಿಸಿದರು.

ದಾವೀದ (1 ಸಮುವೇಲ 16-2 ಸಮುವೇಲ 24), ಇಸ್ರಾಯೇಲ್ಯರ ಎರಡನೆಯ ಅರಸನು, ಬೈಬಲಿನ ಅನೇಕ ವಾಚಕರಿಗೆ ಚಿರಪರಿಚಿತವಾದ ಕಥೆಯನ್ನು ಬಿಟ್ಟು ಹೋದನು. ಆತನು ನ್ಯಾಯದಿಂದ ಆಳ್ವಿಕೆ ಮಾಡುವದರಲ್ಲಿ ಶ್ರದ್ಧೆಯಿಂದಿದ್ದನು ಮತ್ತು ಕರ್ತನ ನ್ಯಾಯಕ್ಕಾಗಿ ತನ್ನ ಅಂತಿಮ ಹಾಡಿನಲ್ಲಿ ಆತನನ್ನು ಸ್ತುತಿಸುವವನಾಗಿ, ದೇವರು ಮನುಷ್ಯರ ಮೇಲೆ "ನೀತಿಯಿಂದ" ಆಳುವದರಲ್ಲಿ ಸಂತೋಷಿಸುತ್ತಾನೆ ಎಂದು ಹೇಳುತ್ತಾನೆ (2 ಸಮುವೇಲ 23:2-7). ಕ್ರಿಸ್ತನ ಬರೋಣಕ್ಕೆ ಸಂಕೇತವಾಗಿರುವವನು ದಾವೀದನೇ ಆಗಿದ್ದನು. ಆತನ ಮಹಾನ್ ನಂಬಿಕೆಯು ಪ್ರವಾದನಾತ್ಮಕ ಕೀರ್ತನೆಗಳಿಂದ ಸೂಚಿಸಲ್ಪಟ್ಟಿರುತ್ತದೆ; ತನ್ನ ಜೀವನ ಮತ್ತು ಬರಹಗಳಲ್ಲಿ ಆತನ ಮೊಮ್ಮಗನಾದ ಯೇಸುವಿನ ಮರಣ ಹಾಗೂ ಪುನರುತ್ಥಾನಗಳಲ್ಲಿ ನೆರವೇರಿಸಿದ ಕಾರ್ಯಗಳ ಪೂರ್ವಛಾಯೆಗಳನ್ನು ನಾವು ಕಾಣುತ್ತೇವೆ. "ದಾವೀದನಿಗೆ ಖಂಡಿತವಾಗಿ ವಾಗ್ದಾನಮಾಡಿದ ಕೃಪಾವರಗಳನ್ನು" (ಯೆಶಾಯ 55:3, 4) ಎಂಬುದು ಕ್ರಿಸ್ತನ ಪುನರುತ್ಥಾನವನ್ನು ಎದುರುನೋಡುತ್ತದೆ (ಅಪೊಸ್ತಲರ ಕೃತ್ಯಗಳು 13:32-35). ಯಾವದೇ

ಲಯವಾಗುವ ಮನುಷ್ಯನು ಇಲ್ಲಿ ಪಟ್ಟಿ ಮಾಡುವಂತೆ ಅರ್ಹನಾಗಿರುವದಾದರೆ, ದಾವೀದನು ಇಲ್ಲಿ ಪಟ್ಟಿ ಮಾಡಲ್ಪಡತಕ್ಕವನಾಗುವದಕ್ಕೆ ಆತನ ಅನೈತಿಕ ದುರ್ಬಲತೆಯನ್ನು ಆತನ ನಂಬಿಕೆಯು ಹೆಚ್ಚು ಸರಿದೂಗಿಸುವದಾಗಿದೆ.

ಸಮುವೇಲನು (1 ಸಮುವೇಲ 2:21-25:1) ಇಸ್ರಾಯೇಲ್ಯರ ಹದಿನೈದನೆಯ ಹಾಗೂ ಕೊನೆಯ ನ್ಯಾಯಸ್ಥಾಪಕನಾಗಿದ್ದನು, ಆದರೆ ಆತನು ಒಬ್ಬ ಪ್ರವಾದಿ ಸಹ ಆಗಿದ್ದನು. ಆತನೊಬ್ಬ ಒಳ್ಳೇ ಮನುಷ್ಯನಾಗಿದ್ದನು, ಆದರೆ ಈತನು ತನಗೆ ಮುಂಚೆ ಇದ್ದ ಎಲೀಯ ರೀತಿಯಲ್ಲಿ ತನ್ನ ಪುತ್ರರನ್ನು ಶಿಕ್ಷಿತರನ್ನಾಗಿಸಲು ಅಥವಾ ನಿಯಂತ್ರಣದಲ್ಲಿಟ್ಟುಕೊಳ್ಳಲು ಅಶಕ್ತನಾದನು (1 ಸಮುವೇಲ 3:12, 13; 8:1-7). ಇವರಿಬ್ಬರಲ್ಲಿ ಯಾವನಿಗೂ ಮರಣದ ಬಳಿಕ ಅವನ ಮಕ್ಕಳಲ್ಲಿ ಒಬ್ಬನು ಉತ್ತರಾಧಿಕಾರಿಯಾಗಲಿಲ್ಲ. ಮಂಜೂಷವು ಫಿಲಿಷ್ಟಿಯರ ಬಳಿಯಲ್ಲಿ ಇದ್ದಾಗ ದೇವರು ತಮ್ಮ ಸಂಗಡ ಇದ್ದಾನೆಂದು ಇಸ್ರಾಯೇಲ್ಯರಿಗೆ ಜ್ಞಾಪಕ ಪಡಿಸಿದವನು ಸಮುವೇಲನೇ ಆಗಿದ್ದನು. ಮಂಜೂಷವು ಹಿಂದಿರುಗಿ ಬಂದಾಗ, "ಜನರ ನಂಬಿಕೆಯು ದೇವರ ಬದಲಾಗಿ ಮಂಜೂಷದ ಮೇಲೆ ಪುನಃ ಮರಳಬಾರದೆಂದು ಸಮುವೇಲನು ಅದನ್ನು ತಿಳಿಯದ ಸ್ಥಳದಲ್ಲಿ ಇಟ್ಟನು."[81] ಆತನು ತನ್ನ ಪುತ್ರರ ಮೇಲಿನ ಪ್ರಭಾವದ ವಿಷಯವನ್ನು ಹೊರತು ಪಡಿಸಿದರೆ ಆತನು ಎಲ್ಲಾ ವಿಧದಲ್ಲಿಯೂ ನಂಬಿಗಸ್ತನಾಗಿದ್ದನು.

ಪಟ್ಟಿಯಲ್ಲಿ ಹೆಸರಿಸಲ್ಪಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯೂ ಶಾಸ್ತ್ರಗಳಲ್ಲಿ ದಾಖಲಿಸಲ್ಪಟ್ಟಿರುವ ಒಂದಿಲ್ಲಾ ಒಂದು ಆತ್ಮೀಕ ನ್ಯೂನ್ಯತೆಯನ್ನು ಹೊಂದಿದ್ದನು ಎಂಬುದನ್ನು ಗಮನಿಸಿರಿ. ಅವರು ತಮ್ಮ ಜನರಿಗೆ ಜಯ, ಸಮಾಧಾನ, ಮತ್ತು ನ್ಯಾಯಗಳನ್ನು ಒದಗಿಸಿ ಕೊಟ್ಟರಾದರೂ, ಈ ನಂಬಿಕೆಯ ವೀರರು ಪಾಪ ಮಾಡಿದ ಅಪರಾಧಕ್ಕೊಳಗಾಗಿದ್ದರು:

> ಅವರು ಸಾಮಾನ್ಯರಾದ ಪುರುಷರು ಮತ್ತು ಸ್ತ್ರೀಯರಾಗಿದ್ದು ಅವರ ಮೂಲಕ ದೇವರು ತನ್ನ ಉದ್ದೇಶಗಳನ್ನು ನೆರವೇರಿಸಿದನು ಆದರೆ ಪ್ರತಿಯೊಬ್ಬರೂ ಬಲಹೀನತೆಗಳನ್ನು ಹೊಂದಿದ್ದರು. ನೋಹನು ಕುಡುಕನಾದನು, ಅಬ್ರಹಾಮನು ತನ್ನ ಹೆಂಡತಿಯ ವಿಷಯದಲ್ಲಿ ಸುಳ್ಳಾಡಿದನು, ಸಾರಳು ಹಾಗರಳೊಂದಿಗೆ ಒರಟಾಗಿ ನಡಕೊಂಡಳು [ಮತ್ತು ಆಕೆಯನ್ನು ಹೊರಕ್ಕೆ ಅಟ್ಟಿದಳು], ಇಸಾಕನು ತನ್ನ ಹೆಂಡತಿಯ ಕುರಿತು ಸುಳ್ಳು ಹೇಳಿದನು, ಯಾಕೋಬನು ತನ್ನ ತಂದೆಯನ್ನು ವಂಚಿಸಿದನು, ಯೋಸೇಫನು ತನ್ನ ಯೌವನಪ್ರಾಯದಲ್ಲಿ ಚಾಡಿ ಹೇಳುವವನಾಗಿದ್ದನು, ಮೋಶೆಯು ಒಬ್ಬ ಐಗುಪ್ತನನ್ನು ಕೊಲೆ ಮಾಡಿದನು ಮತ್ತು ಮೆರೀಬಾ ಎಂಬ ಸ್ಥಳದಲ್ಲಿ ದೇವರಿಗೆ ಅವಿಧೇಯನಾದನು, ಇಸ್ರಾಯೇಲವು ಅನೇಕ ವಿಧವಾದ ಕೆಟ್ಟತನಲ್ಲಿ ತೊಡಗಿಸಿಕೊಂಡಿತು, ರಹಾಬ ಮತ್ತು ಸಂಸೋನ ಇಬ್ಬರೂ ಹಾದರವನ್ನು ಮಾಡಿದ ಅಪರಾಧಿಗಳಾಗಿದ್ದರು, ಬಾರಾಕ್‌ನು ದೆಬೋರಳ ಸಹಾಯವಿಲ್ಲದೆ ಯುದ್ಧಕ್ಕೆ ಹೋಗುವದಕ್ಕೆ ನಿರಾಕರಿಸಿದನು, ಯೆಪ್ತಾಹನು ತನ್ನ ಜೀವನದ ಸ್ವಲ್ಪ ಕಾಲ ಲೂಟಿಕೋರನಾಗಿದ್ದನು ಮತ್ತು ಮೂರ್ಖ ಹರಕೆಯನ್ನು ಮಾಡಿದನು, ದಾವೀದನು ಬತ್ಷೇಬಳೊಂದಿಗೆ ವ್ಯಭಿಚಾರ ಮಾಡಿದನು ಮತ್ತು ಸಮುವೇಲನು ಕರ್ತನ ಕೆಲಸಕ್ಕಾಗಿ ತನ್ನ ಪುತ್ರರನ್ನು ಕಳಕೊಂಡನು.[82]

ಈ ಪಾಪಗಳು ಕೇವಲ ದೇವರ ಕೃಪೆಯನ್ನು ಇನ್ನಷ್ಟು ಹೆಚ್ಚಾಗಿ ತೋರ್ಪಡಿಸುತ್ತವೆ. ಅವರ ವಿಫಲತೆಗಳ ಹೊರತಾಗಿಯೂ ಅವರಲ್ಲಿದ್ದ ನಂಬಿಕೆಯ ನಿಮಿತ್ತದಿಂದ ಆತನು ಅವರನ್ನು ಮಹಾನ್ ವೀರರನ್ನಾಗಿ ಮಾಡಿದನು.

**ವಚನಗಳು 33, 34.** ಇಬ್ರಿಯರ ಇತಿಹಾಸದಲ್ಲಿ ನಿರ್ದಿಷ್ಟವಾದ ವ್ಯಕ್ತಿಗಳನ್ನು ಹೆಸರಿಸುವದರ ಜೊತೆಯಲ್ಲಿ, ಲೇಖಕನು ಮಹಾನ್ ಕಾರ್ಯಗಳನ್ನು ನಡಿಸಿದ್ದ ಇನ್ನು ಕೆಲವರ ಹೆಸರುಗಳನ್ನು

ಹೇಳುತ್ತಾನೆ. ಪಟ್ಟಿ ಮಾಡಲ್ಪಟ್ಟಿರುವ ಒಂಭತ್ತು ಸಾಧನೆಗಳು ಮೂರು ಗುಂಪುಗಳಲ್ಲಿ ಬೀಳುತ್ತವೆ. ಮೊದಲನೆಯ ಗುಂಪು ರಾಜ್ಯಗಳನ್ನು ಗೆದ್ದುಕೊಳ್ಳುವಿಗೆ, ನ್ಯಾಯ ಸ್ಥಾಪಿಸುವಿಕೆ, ಮತ್ತು ವಾಗ್ದಾನಗಳನ್ನ ಬಾಧ್ಯವಾಗಿ ಹೊಂದುವಿಕೆಗಳಿಗೆ ಸೇರಿದ ಸಾಧನೆಗಳೊಂದಿಗೆ ಸಂಬಂಧಿಸಿರುತ್ತದೆ. ಅನ್ಯ ರಾಜ್ಯಗಳನ್ನು ಸೋಲಿಸುವಿಕೆಯು ಅನೇಕ ಸಾರಿ ಇಸ್ರಾಯೇಲ್ಯರು ಒಂದು ಅಲ್ಪ ಶಕ್ತಿಯಾಗಿದ್ದು ನಂಬಿಕೆಯಿಂದ ಯುದ್ಧಕ್ಕೆ ಹೋದ ಸಂದರ್ಭದಲ್ಲಿ ಸಾಧಿಸಲ್ಪಟ್ಟದ್ದಾಗಿರುತ್ತದೆ. ಈ ನಂಬಿಕೆಯ ವ್ಯಕ್ತಿಗಳು ನೀತಿಯನ್ನು ಆರಿಸಿಕೊಂಡರು ಯಾಕೆಂದರೆ ಅದು ಅವರ ದೇವರ ಸ್ವಭಾವವನ್ನು ಪ್ರತಿಬಿಂಬಿಸುವದಾಗಿತ್ತು (ವಚನಗಳು 33, 34).

ಎರಡನೆಯ ಗುಂಪು ತಾಳ್ಮೆಯಿಂದ ಸಹಿಸಿಕೊಳ್ಳುವಿಕೆಗೆ ಸಂಬಧಿಸಿದೆ (ವಚನಗಳು 35, 36). ದೇವರ ನಂಬಿಗಸ್ತರಾದ ಹಿಂಬಾಲಕರು ದೊಡ್ಡ ಪ್ರಮಾಣದಲ್ಲಿ ಹಿಂಸೆಯನ್ನು ಎದುರಿಸಿದರು, ಆದಾಗ್ಯೂ ಅವರು ಜಯಿಸಿದರು. ಮೂರನೆಯ ಗುಂಪು ಅದೇ ರೀತಿಯಲ್ಲಿ ಬಹಳವಾದ ಕಷ್ಟಾನುಭವನ್ನು ಸಹಿಸಿಕೊಂಡದ್ದಾಗಿ ಬಣ್ಣಿಸಲ್ಪಟ್ಟಿದೆ, ಆದರೆ ಅವರು ಅತ್ಯಾಶ್ಚರ್ಯವಾದ ಬಿಡುಗಡೆಯನ್ನು ಸಹ ಅನುಭವಿಸಿದರು (ವಚನಗಳು 37, 38).[83]

ಈ ವ್ಯಕ್ತಿಗಳಿಗೆ ಮತ್ತು ಇತರರಿಗೆ ಸಂಬಂಧಿಸಿ ಹೇಳಲಾಗಿರುವ ವಿವಿಧ ಚಟುವಟಿಕೆಗಳು ಅತ್ಯಂಥ ಮಹತ್ವವುಳ್ಳವುಗಳಾಗಿವೆ, ಯಾಕೆಂದರೆ ಅವುಗಳು **ನಂಬಿಕೆಯ ಮೂಲಕ** ಮಾಡಲ್ಪಟ್ಟವು (ವ. 33).[84] ಕೆಲವು ವ್ಯಕ್ತಿಗಳು **ರಾಜ್ಯಗಳನ್ನು ಸ್ವಾಧೀನಪಡಿಸಿಕೊಂಡರು**. ಅಂಥ ವಿಜಯಗಳು ಈಗಾಗಲೇ ಲೇಖಕನು ಹೆಸರಿಸಿರುವ ಕೆಲವರಿಂದ ಗಳಿಸಲ್ಪಟ್ಟವು – ಗಿಡಿಯೋನ್, ಬಾರಾಕ್, ಯೆಪ್ತಾಹ (ಎಫ್‌ಥ) ಮತ್ತು ಸಂಸೋನ. ಇನ್ನು ಕೆಲವರು **ನೀತಿಯನ್ನು ನಡಿಸಿದರು**. ಇದು ಸಮುವೇಲ (1 ಸಮುವೇಲ 12:1–5) ಮತ್ತು ದಾವೀದರಂತಹ ಸಾರ್ವಜನಿಕ ಅಧಿಕಾರಿಗಳಿಂದ ಅನುಸರಿಸಲಾದ ನ್ಯಾಯವಂತಿಕೆಯನ್ನು ಸೂಚಿಸಬಹುದಾಗಿದೆ, ಅವರು "ಎಲ್ಲಾ ಪ್ರಜೆಗಳಿಗೂ ಧರ್ಮತಪ್ಪದೆ ನ್ಯಾಯತೀರಿಸುತ್ತಿದ್ದರು" (2 ಸಮುವೇಲ 8:15).

**ವಾಗ್ದಾನಗಳನ್ನು ಪಡಕೊಂಡರು** ಎಂಬುದು ಬಹುಶಃ ಅವರ ಜೀವಿತಗಳಲ್ಲಿ ದೇವರ ಕೆಲವೊಂದು ವಾಗ್ದಾನಗಳು ನೆರವೇರಿದವು ಎಂದರ್ಥವಾಗಿರುತ್ತದೆ. ಇಬ್ರಿಯ 11:13, 39 ವಚನಗಳು ಧರ್ಮಶಾಸ್ತ್ರದ ಅಡಿಯಲ್ಲಿದ್ದವರು "ವಾಗ್ದಾನದ ಫಲಗಳನ್ನು ಹೊಂದದೆ" ಮೃತರಾದರೆಂದು ನಮಗೆ ಹೇಳುತ್ತವೆ; ಹೇಗೂ ಇಲ್ಲಿ ಯಾವದೇ ವಿರುದ್ಧತೆಯು ಇರುವದಿಲ್ಲ. ಈ ಎರಡು ವಚನಗಳು ಬೇರೆ ವಾಗ್ದಾನಗಳನ್ನು ಸೂಚಿಸುತ್ತವೆ, ಅವುಗಳಲ್ಲಿ ಕ್ರಿಸ್ತನಲ್ಲಿ ನಮಗೆ ವಾಗ್ದಾನ ಮಾಡಲಾಗಿರುವ ಅಂತಿಮ ಆಶೀರ್ವಾದಗಳು ಸೇರಿರುತ್ತವೆ. ನಂಬಿಕೆಯ ಪುರುಷರು ಮತ್ತು ಸ್ತ್ರೀಯರು ಖಂಡಿತವಾಗಿಯೂ ಹಳೆಯ ಒಡಂಬಡಿಕೆಯಲ್ಲಿನ ಇತರ ರೀತಿಯ "ವಾಗ್ದಾನಗಳನ್ನು ಪಡಕೊಂಡರು." ಯೆಹೋಶುವನ ಕೆಳಗೆ ಜನರು ಕಾನಾನ್ ದೇಶವನ್ನು ಪಡೆದುಕೊಂಡಾಗ ಮತ್ತು ದೇವರು ಅವರಿಗೆ ವಾಗ್ದಾನ ಮಾಡಿದ್ದ ಎಲ್ಲಾ "ದೇಶವನ್ನು" ಹೊಂದಿಕೊಂಡಾಗ ದೇವರ ವಾಕ್ಯವು ನೆರವೇರಿತು (ಯೆಹೋಶುವ 21:43). ಸನ್ಹೇರೀಬನು ಸಂಕಲ್ಪಿಸಿದ್ದ ಆಕ್ರಮಣ ಮತ್ತು ನಾಶನದಿಂದ ಯೆರೂಸಲೇಮ್ ಬಿಡಿಸಲ್ಪಡುವದನ್ನು ಯೆಶಾಯನು ಕಂಡನು (2 ಅರಸು 19). ದಾನಿಯೇಲನು ಬಾಬಿಲೋನಿನ ಸೆರೆವಾಸವು ಅಂತ್ಯಗೊಳ್ಳುವದನ್ನು ಕಂಡನು (ದಾನಿಯೇಲ 9). ನಂಬಿಗಸ್ತರು ಮೆಸ್ಸೀಯನನ್ನು ನೋಡುವ ತನಕ ಜೀವಂತವಾಗಿರಲಿಲ್ಲವಾದರೂ ಅವರು ಮೆಸ್ಸೀಯನ ಕುರಿತಾದ ದೇವರ ವಾಗ್ದಾನಗಳನ್ನು ನಂಬಿದರು. ದೇವರ ವಾಗ್ದಾನಗಳ ಅಂತಿಮ ನೆರವೇರಿಕೆಯು, "ಶ್ರೇಷ್ಠಪುನರುತ್ಥಾನ" ದೊಂದಿಗೆ 11:35ರಲ್ಲಿ ಕಂಡು ಬರುತ್ತದೆ.

ಅಲ್ಲದೆ ಇಲ್ಲಿ **ಸಿಂಹಗಳ ಬಾಯಿ ಕಟ್ಟಿದ** ವ್ಯಕ್ತಿಗಳು ಸಹ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಇದರಲ್ಲಿ ಸಂಸೋನ (ನ್ಯಾಯಸ್ಥಾಪಕರು 14:6, ಆತನ ಕಥೆಯು 13ರಿಂದ 16 ಅಧ್ಯಾಯಗಳಲ್ಲಿ ಹೇಳಲ್ಪಟ್ಟಿದೆ) ಮತ್ತು ದಾವೀದ (1 ಸಮುವೇಲ 17:34, 35). ವಿಶೇಷವಾಗಿ, ನಾವು ದಾನಿಯೇಲನ ಕುರಿತು ಯೋಚಿಸುತ್ತೇವೆ. ಆ ಪ್ರಕರಣದಲ್ಲಿ, ದೇವರು ದಾನಿಯೇಲನನ್ನು ಉಳಿಸುವಂತೆ ಒಬ್ಬ ದೇವದೂತನನ್ನು ಕಳುಹಿಸುವಂತೆ ಮಾಡಿದ್ದು ಸ್ಪಷ್ಟವಾಗಿ ದಾನಿಯೇಲನ ನಂಬಿಕೆಯೇ ಆಗಿತ್ತು (ದಾನಿಯೇಲ 6:22).

ಕೆಲವು ನಂಬಿಗಸ್ತರಿಗಾಗಿ, ದೇವರು **ಬೆಂಕಿಯ ಬಲವನ್ನು ಆರಿಸಿದರು** (ವ. 34). ಇದು ಖಂಡಿತವಾಗಿಯೂ ದಾನಿಯೇಲ 3ನೇ ಅಧ್ಯಾಯದಲ್ಲಿನ ಶದ್ರಕ್, ಮೆಶೇಕ್, ಮತ್ತು ಅಬೇದ್‌ನೆಗೋ ಇವರ ಪ್ರಕರಣಕ್ಕೆ ಅನ್ವಯವಾಗುತ್ತದೆ. ಅವರ ನಂಬಿಕೆಯು ಎಷ್ಟೊಂದು ದೊಡ್ಡದಾಗಿತ್ತೆಂದರೆ, ದೇವರು ಅವರನ್ನು ಬಿಡುಗಡೆಗೊಳಿಸದೆ ಇರುವದಕ್ಕೆ ನಿರ್ಧರಿಸಬಹುದೆಂದು ಬಲ್ಲವರಾಗಿದ್ದಾಗ್ಯೂ, ಅವರು ಒಂದು ವಿಗ್ರಹದ ಪಾದಕ್ಕೆ ಆರಾಧಿಸುವದರ ಮೂಲಕ ಆತನನ್ನು ಅಲ್ಲಗಳೆಯಲು ಸಿದ್ಧರಿರಲಿಲ್ಲ. ನಮಗೆ ಏನೂ ತಿಳಿಯದ ಇದೇ ರೀತಿಯಲ್ಲಿರುವ ಅನೇಕ ಘಟನೆಗಳು ಸಂಭವಿಸಿರುವ ಸಾಧ್ಯತೆಯಿರುತ್ತದೆ.

ವಿವಿಧ ವೀರರು **ಕತ್ತಿಯ ಬಾಯಿಂದ ತಪ್ಪಿಸಿಕೊಂಡರು**. ಹಳೆಯ ಒಡಂಬಡಿಕೆಯಲ್ಲಿ ಮರಣದಿಂದ ತಪ್ಪಿಸಿಕೊಂಡಿರುವಿಕೆಯಲ್ಲಿ ದಾವೀದನು ಗೋಲ್ಯಾತನ ಮೇಲೆ ಜಯ ಸಾಧಿಸಿದ್ದು ಮತ್ತು ಆತನು ಸೌಲನಿಂದ ಪಲಾಯನ ಮಾಡಿದ್ದು ಸೇರಿರುತ್ತವೆ (1 ಸಮುವೇಲ 18:10, 11; 19:10). ಎಲೀಯನು ಈಜಬೇಲಳಿಂದ ಶಿರಚ್ಛೇಧ ಮಾಡಲ್ಪಡುವದರಿಂದ ತಪ್ಪಿಸಿಕೊಂಡನು (1 ಅರಸು 19:1-6), ಮತ್ತು 2 ಅರಸು 6:18ರಲ್ಲಿ ಸಿರಿಯಾದವರು (ಆರಾಮ್ಯರು) ಕುರುಡುಗೊಳಿಸಲ್ಪಟ್ಟಾಗ ಎಲೀಷನು (2 ಅರಸು 6:14-23, 31-33) ಈಜಬೇಲಳ ಮಗನಾದ ಯೆಹೋರಾಮನಿಂದ ತಪ್ಪಿಸಲ್ಪಟ್ಟನು. ಲೇಖಕನು ರಾಣಿಯಾದ ಎಸ್ತೇರಳ ಮತ್ತು ಎಸ್ತೇರಳು 4:13, 14ರಲ್ಲಿ ದೇವರ ಅನುಗ್ರಹದಿಂದ ರಕ್ಷಿಸಲ್ಪಟ್ಟ ಯೆಹೂದ್ಯರನ್ನು ಕುರಿತು ಸಹ ಯೋಚಿಸುತ್ತಿದ್ದಿರಬಹುದಾಗಿದೆ.

ಕೆಲವರು **ನಿರ್ಬಲರಾಗಿದ್ದು ಬಲಿಷ್ಠರಾದರು; ಯುದ್ಧದಲ್ಲಿ ಪರಾಕ್ರಮಶಾಲಿಗಳಾದರು; ಪರರ ದಂಡುಗಳನ್ನು ಓಡಿಸಿಬಿಟ್ಟರು.** ಈ ಬಣ್ಣನೆಯು ಆರಸನಾದ ಆಹಾಬನಿಗೆ ಅನ್ವಯವಾಗಬಹುದು, ಆತನ ಸೈನ್ಯವು "ಆಡುಮರಿಗಳ ಎರಡು ಹಿಂಡುಗಳಂತಿದ್ದವು" ಮತ್ತು ಹಾಗಿದ್ದರೂ ಬಲಿಷ್ಠ ಅರಾಮ್ಯರನ್ನು ಸೋಲಿಸಿದರು (1 ಅರಸು 20:27). ಬಲಿಷ್ಠಗೊಳಿಸಲ್ಪಟ್ಟ ನಿರ್ಬಲರಲ್ಲಿ ದಾವೀದನು ಒಬ್ಬನಾಗಿದ್ದನು (1 ಸಮುವೇಲ 17:49-51), ಅದೇ ರೀತಿಯಲ್ಲಿ ಬಾರಾಕ್ ಸಹ ಆಗಿದ್ದನು (ನ್ಯಾಯಸ್ಥಾಪಕರು 4:14). ಅಲ್ಲದೆ ಸ್ವಲ್ಪ ಕಾಲ ನಿರ್ಬಲನಾಗಿದ್ದ ಬಳಿಕ ವಿಗ್ರಹಾರಾಧಕ ಜನಾಂಗದ ದೇವಾಲಯವನ್ನು ಮತ್ತು ಫಿಲಿಷ್ಟಿಯರನ್ನು ನಾಶಗೊಳಿಸುವಂತೆ ಬಲಿಷ್ಠಗೊಳಿಸಲ್ಪಟ್ಟ ಸಂಸೋನನ ಬಗ್ಗೆ ನಾವು ಯೋಚಿಸಬಹುದು (ನ್ಯಾಯಸ್ಥಾಪಕರು 16:19-30).

ಈ ಉಲ್ಲೇಖನಗಳೊಳಗೆ ಶಾಸ್ತ್ರಗಳಲ್ಲಿ ದಾಖಲಿಸಲ್ಪಡದೆ ಇರುವ ಘಟನೆಗಳು ಸಹ ಸೇರಿರಬಹುದಾಗಿದೆ. ಕ್ರಿ.ಪೂ. ಎರಡನೆಯ ಶತಮಾನದಲ್ಲಿ, Judas Maccabeus ಎಂಬವನು ಸಿರಿಯಾದ ಬಲಿಷ್ಠ ಸೇನೆಗಳನ್ನು ಓಡುವಂತೆ ಮಾಡಿದನು ಮತ್ತು ಯೆಹೂದ್ಯರ ಮೇಲಿದ್ದ ದಬ್ಬಾಳಿಕೆಯ ನೊಗವನ್ನು ಕಿತ್ತೇಸೆದನು. Antiochus Epiphanesನ ಆಡಳಿತದ ಕೆಳಗೆ ಸಿರಿಯಾವು (ಆರಾಮ) ಎಲ್ಲಾ ಯೆಹೂದ್ಯರನ್ನು ಗ್ರೀಕ್ ಸಂಸ್ಕೃತಿ ಮತ್ತು ಧರ್ಮವನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸುವದಕ್ಕೆ ಪ್ರಯತ್ನಿಸಿತು. Judas Maccabeusನು ಚಿಕ್ಕ

ಸೈನ್ಯವನ್ನು ಮಾತ್ರ ಇಟ್ಟುಕೊಂಡು ಸಿರಿಯಾದ ಮೇಲೆ ಮಹಾನ್ ಗೆಲುವು ಸಾಧಿಸಿದನು. ಇದು ಬೈಬಲಿನಲ್ಲಿ ಹೇಳಲಾಗಿರುವ ವಿವರಣೆ ಅಲ್ಲದಿದ್ದಾಗ್ಯೂ,[85] ಇದು ಖಂಡಿತವಾಗಿಯೂ ಇಸ್ರಾಯೇಲ್ಯರಿಗೆಲ್ಲಾ ಚಿರಪರಿಚಿತವಾಗಿದ್ದು, ಅವರು ಆ ಬಿಡುಗಡೆಯಲ್ಲಿ ಬಹಳ ಹೆಮ್ಮೆ ಪಟ್ಟುಕೊಳ್ಳುವವರಾಗಿದ್ದರು.

ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲಾ ವ್ಯಕ್ತಿಗಳು ಮರಣದ ತನಕವೂ ನಂಬಿಗಸ್ತರಾಗಿದ್ದರು ಮತ್ತು "ಒಳ್ಳೇ ಹೆಸರನ್ನು ಸಂಪಾದಿಸಿಕೊಂಡರು" (ವ. 39). ಅವರು ದೇವರಲ್ಲಿಟ್ಟಿದ್ದ ವಿಶ್ವಾಸದ ಕಾರಣದಿಂದ ಆತ್ಮೀಕ ವಿಧದಲ್ಲಿ ಬಲಗೊಳಿಸಲ್ಪಟ್ಟರು – ಮತ್ತು ಕೆಲವು ಪ್ರಕರಣಗಳಲ್ಲಿ ಶಾರೀರಿಕವಾಗಿ ಸಹ ಬಲಗೊಳಿಸಲ್ಪಟ್ಟರು.

**ವಚನ 35.** ಈ ವಚನವು ಕಥೆಯ ಬೇರೆ ಎಲ್ಲಾ ಬದಿಗಳ ಬಗ್ಗೆ ಹೇಳಲಾರಂಭಿಸುತ್ತದೆ: ಕೆಲವರು ತಮ್ಮ ನಂಬಿಕೆಯ ಹೊರತಾಗಿಯೂ ಬಹಳವಾಗಿ ಬಾಧೆಯನ್ನನುಭವಿಸಿದರು. ಹೇಗೂ, ದೇವರು ತನ್ನ ಜ್ಞಾನದಲ್ಲಿ, ನೀತಿವಂತರು ಪುನರುತ್ಥಾನಗೊಳ್ಳುವದನ್ನು ಎದುರುನೋಡಬಲ್ಲರೆಂಬುದಕ್ಕೆ ಪುರಾವೆಯನ್ನು ಒದಗಿಸಿದನು. ಕೆಲವು ಪ್ರಕರಣಗಳಲ್ಲಿ, **ಸತ್ತವರು** ಜೀವಿತರಾಗಿ ಎಬ್ಬಿಸಲ್ಪಟ್ಟರು. ಅಂಥ ಎರಡು ಅದ್ಭುತಗಳು ಎಲೀಯನಿಂದ (1 ಅರಸು 17:17-24) ಎಲೀಷನಿಂದ ಮಾಡಲ್ಪಟ್ಟವು (2 ಅರಸು 4:18-37). ಪುನಃ ಜೀವಿತರಾಗಿ ಎಬ್ಬಿಸಲ್ಪಟ್ಟ ಮಕ್ಕಳ ಗೋಳಾಡುವ ತಾಯಿಯರ ನಂಬಿಕೆಯು ಇಲ್ಲದೆ, ಈ **ಪುನರುತ್ಥಾನ**[ಗಳು] ಬಹುಶಃ ಸಂಭವಿಸಿರುತ್ತಿರಲಿಲ್ಲ. ಹೊಸ ಒಡಂಬಡಿಕೆಯಲ್ಲಿ, ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಎಲ್ಲಾ ಘಟನೆಗಳಲ್ಲಿಯೂ ಹೇಗೋ ಒಂದು ವಿಧದಲ್ಲಿ **ಸ್ತ್ರೀಯರು** ಸಂಬಂಧವನ್ನು ಹೊಂದಿರುತ್ತಾರೆ. ಲೂಕ 7:11-17ರಲ್ಲಿ, ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನು ನಾಯಿನ ಊರಿನ ಒಬ್ಬ ವಿಧವೆಯ ಮಗನಾಗಿದ್ದನು. ಮಾರ್ಕ 5:22-24, 35-42 ಯಾಯೀರನ ಮಗಳು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಳು (ಅಲ್ಲದೆ ಮತ್ತಾಯ 9:18, 19, 24, 25; ಲೂಕ 8:41, 42, 49-56 ಸಹ ನೋಡಿರಿ). ಯೋಹಾನ 11:1-44ರಲ್ಲಿ ಲಾಜರನು ಸತ್ತವರೊಳಗಿಂದ ಎಬ್ಬಿಸಲ್ಪಡುವ ವೇಳೆ ಮಾರ್ಥಳು ಮತ್ತು ಮರಿಯಳು ಯೇಸುವಿನ ಜೊತೆಯಲ್ಲಿದ್ದರು – ಹಳೆಯ ಒಡಂಬಡಿಕೆಯಲ್ಲಿ ಮರಣಾನಂತರದ ಜೀವನದ ಬಗ್ಗೆ ಅಷ್ಟೇನೂ ಹೇಳಲ್ಪಟ್ಟಿರುವದಿಲ್ಲವಾದರೂ, ಯೆಹೂದ್ಯರಲ್ಲಿ ಅನೇಕರು ಅದರಲ್ಲಿ ನಂಬಿದ್ದರು. ಅನೇಕ ವೇದ ಪಂಡಿತರು ಕಾಣದಿರುವದನ್ನು ಸಾಮಾನ್ಯ ಜನರು ಕಂಡರು.

ವಾಕ್ಯಭಾಗದಲ್ಲಿ ಪ್ರಸ್ತಾಪಿಸಲ್ಪಟ್ಟ ಇತರರು **ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ . . . ಬಿಡುಗಡೆ ಬೇಡವೆಂದರು**. ಇಲ್ಲಿ ಬಳಸಲಾಗಿರುವ ಪದವು (τυμπανίζω, *tumpanizō*, "ಡೋಲು") ಸಾಮಾನ್ಯವಾಗಿ ಹಿಗ್ಗಿಸಲ್ಪಟ್ಟ ಪ್ರಾಣಿ ಚರ್ಮದಿಂದ ಮಾಡಲ್ಪಟ್ಟ ಒಂದು ಡೋಲನ್ನು ಸೂಚಿಸುತ್ತದೆ, ಆದರೆ ಯಾತನೆ ಪಡಿಸುವ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿಯನ್ನು ಹಿಗ್ಗಿಸಿ ಕಟ್ಟಿದ ಒಂದು ಚಕ್ರವನ್ನು ಸೂಚಿಸುತ್ತದೆ ಮತ್ತು ಆತನನ್ನು ಹೊಡೆಯಲಾಗುತ್ತದೆ, ಅನೇಕ ಸಾರಿ ಸಾಯುವ ತನಕ ಹೊಡೆಯಲಾಗುತ್ತದೆ. ಯೆಹೂದಿ ಶಾಸ್ತ್ರಿಗಳಲ್ಲೊಬ್ಬನಾಗ ಎಲೀಯಾಜರನಿಗೆ ಇದೇ ಸಂಭವಿಸಿತು, ಆತನು Maccabeanನ ದಿನಗಳಲ್ಲಿ ಧರ್ಮಶಾಸ್ತ್ರಕ್ಕೆ ವಿರುದ್ಧವಾದ ಆಹಾರವನ್ನು ರುಚಿಸುವದಕ್ಕಿಂತಲೂ ಹೊಡೆಯಲ್ಪಟ್ಟು ಸಾಯುವದಕ್ಕೆ ತನ್ನನ್ನು ಅನುಮತಿಸಿಕೊಂಡನು. ಅದು ಸಾಮಾನ್ಯವಾಗಿ ಇಲ್ಲಿ ಸೂಚಿಸಲ್ಪಟ್ಟಿರುವ ಘಟನೆಯೆಂದು ಪರಿಗಣಿಸಲ್ಪಟ್ಟಿರುತ್ತದೆ.[86] ಅಲ್ಲದೆ ಈ ಅಂತರ್‌ಒಡಂಬಡಿಕೆಯ ವೇಳೆಯಲ್ಲಿ, ಏಳು ಸಹೋದರರು ಕಡಿಯಲ್ಪಟ್ಟು ಮರಣವನ್ನು ಹೊಂದುವದನ್ನು ಅಂಗೀಕರಿಸಿಕೊಂಡರು ಯಾಕೆಂದರೆ ಅವರು ಒಂದು ಪುನರುತ್ಥಾನದಲ್ಲಿ ದೃಢನಿಶ್ಚಯವುಳ್ಳ ನಿರೀಕ್ಷೆಯನ್ನು ಹೊಂದಿದ್ದರು.[87]

ಈ ಜನರು ಕೇವಲ ತಮ್ಮ ನಂಬಿಕೆಯನ್ನು ತ್ಯಜಿಸಬಿಡಬೇಕಿತ್ತಷ್ಟೆ ಮತ್ತು ಆತನು ಹಿಂಸೆಯು ನಿಂತು ಹೋಗಿರುತ್ತಿತ್ತು; ಆದರೆ ಅದು ಭಕ್ತಿಯುಳ್ಳ ಜನರಿಗೆ ಭರಿಸಲಾಗದಂತಹ ದೊಡ್ಡ ಬೆಲೆಯಾಗಿತ್ತು. ಅವರು **ಶ್ರೇಷ್ಠಪುನರುತ್ಥಾನವನ್ನು ಹೊಂದಬೇಕೆಂದು** ಬಯಸಿದ್ದರು. ಈ "ಶ್ರೇಷ್ಠಪುನರುತ್ಥಾನ" ಯಾವದಾಗಿತ್ತು? ಅವರು ಸತ್ತವರೆಲ್ಲರಿಗೂ ಪುನರುತ್ಥಾನವಾಗುವದೆಂದು ನಂಬಿದ್ದರೋ ಮತ್ತು ತಮ್ಮ ಭೂಲೋಕದ ಜೀವಿತ ಗಳಿಗೋಸ್ಕರ ಬಿಡುಗಡೆ ಮಾಡಲ್ಪಡುವಕ್ಕೆ ಬದಲಾಗಿ ದೇವರ ಸಂಗಡ ನಿತ್ಯತ್ವವನ್ನು ಪ್ರವೇಶಿಸುವದಕ್ಕೆ ಇಷ್ಟಪಟ್ಟರೋ? ಬಹುಶಃ ಹಾಗೆಯೇ ಇರಬಹುದು. ಈ ಪ್ರಕರಣಗ್ರಂಥದಲ್ಲಿ ಸಂಬೋಧಿಸಿ ಹೇಳಲಾಗಿರುವ ಇಬ್ರಿಯ ಕ್ರೈಸ್ತರು ಅದಕ್ಕೆ ತದ್ವಿರುದ್ಧವಾಗಿ ತಮ್ಮ ನಂಬಿಕೆಗೋಸ್ಕರ ಬಾಧೆಯನ್ನನುಭವಿಸುವದಕ್ಕೆ ಮನಸ್ಸಿಲ್ಲದ ವರಾಗಿದ್ದರು ಎಂಬ ಸೂಚ್ಯಾರ್ಥವನ್ನು ನಾವು ಕಾಣಬಹುದಾಗಿದೆ.

**ವಚನ 36.** ಯೇಸುವಿಗೆ ಸಂಭವಿಸಿದ ರೀತಿಯಲ್ಲಿಯೇ, **ಅಪಹಾಸ್ಯ**ಗಳು ಕೆಲವು ಸಾರಿ ದೇವರ ಜನರಿಗೆ ಸಂಭವಿಸುತ್ತವೆ (ಮತ್ತಾಯ 27:41-44; ಮಾರ್ಕ 15:31, 32; ಲೂಕ 23:35-39). ಯೆರೆಮೀಯನು ತನಗೆ ಸಾರ್ವಜನಿಕರಿಂದ ಮತ್ತು ಆತನ ಸ್ವಂತ ಕುಟುಂಬದಿಂದ ಅಪಹಾಸ್ಯಗಳು ಬಂದವು ಎಂಬುದಾಗಿ ದೂರುತ್ತಾನೆ, ಮತ್ತು ದೇವರ ಹೆಸರಿನಲ್ಲಿ ಮಾತಾಡುವದನ್ನು ಬಿಟ್ಟು ಬಿಡುವಂತೆ ನಿಸ್ಸಂಶಯವಾಗಿ ಈ ಅಪಹಾಸ್ಯವೇ ಕಾರಣವಾಗಿತ್ತು (ಯೆರೆಮೀಯ 20:7-10). ಅನಂತರ, ಆತನು ಹೊಡೆಯಲ್ಪಟ್ಟು ಸೆರೆಮನೆಗೆ ಹಾಕಲ್ಪಟ್ಟನು (ಯೆರೆಮೀಯ 37:15). ಬಳಿಕ ಆತನನ್ನು ಕೆಸರಿನ ಬಾವಿಯಲ್ಲಿ ಹಾಕಲಾಯಿತು, ಅಲ್ಲಿಂದಲೇ ಆತನು ಎಬೆದ್ಮೆಲೆಕನೆಂಬ ಕೂಷ್ಯನಿಂದ ರಕ್ಷಿಸಲ್ಪಟ್ಟನು (ಯೆರೆಮೀಯ 38:6-13). ಸಂಪ್ರದಾಯದ ಪ್ರಕಾರವಾಗಿ, ಯೆರೆಮೀಯನು ಐಗುಪ್ತದಲ್ಲಿದ್ದ ಯೆಹೂದ್ಯರಿಂದ ಕಲ್ಲೆಸೆಯಲ್ಪಟ್ಟನು (ವ. 37). ಯೆಹೋಯಾದನ ಮಗನಾದ ಜೆಕರ್ಯನು ಯೆಹೂದದ ಅರಸನಾದ ಯೆಹೋವಾಷನಿಂದ ಮರಣಕ್ಕೆ ಒಳಪಡಿಸಲ್ಪಟ್ಟನು (2 ಪೂರ್ವಕಾಲವೃತ್ತಾಂತ 24:20-22). ಕರ್ತನು ಸ್ವತಃ ಮತ್ತಾಯ 23:37ರಲ್ಲಿ ಈ ವಿಧವಾದ ನಡೆಸಿಕೊಳ್ಳುವಿಕೆಯ ಬಗ್ಗೆ ಪರೋಕ್ಷವಾಗಿ ಸೂಚಿಸುತ್ತಾನೆ. ಮೇಲ್ನೋಟಕ್ಕೆ ಕಾಣುವಂತೆ, ಇಬ್ರಿಯ ಕ್ರೈಸ್ತರಲ್ಲಿ ಕೆಲವರು ಈ ವಿಧವಾದ ನಿಂದನೆಗೆ ಗುರಿಯಾಗಿದ್ದರು (ಇಬ್ರಿಯ 10:33; 13:13).

**ಕೊರಡೆಯ ಪೆಟ್ಟು**ಗಳನ್ನು ಹಲವಾರು ಚಾಟಿಗಳಿಂದ ಜೋಡಿಸಲ್ಪಟ್ಟಿದ್ದ ಕಟ್ಟಿಗೆಯ ಹಿಡಿಕೆಯನ್ನು ಬಳಸಿ ನೀಡಲಾಗುತ್ತಿತ್ತು; ಹೊಡೆತ ತಿನ್ನುವವನ ಬೆನ್ನನ್ನು ಸೀಳುವಂತೆ ಮಾಡುವದಕ್ಕೆ ಲೋಹದ ತುಂಡುಗಳನ್ನು ಅಥವಾ ಸೀಸದ ಗುಂಡುಗಳನ್ನು ಅವುಗಳಿಗೆ ಸೇರಿಸಲಾಗಿರುತ್ತಿತ್ತು. ಕೆಲವು ಸಾರಿ ದೇಹದೊಳಗಿನ ಅಂಗಗಳು ಗೋಚರಿಸುತ್ತಿದ್ದವು, ಮತ್ತು ಕೊರಡೆಗಳಿಂದ ಹೊಡೆಯಲ್ಪಟ್ಟವರಲ್ಲಿ ಕೆಲವರು ಅದರಿಂದ ಮರಣಿಸುತ್ತಿದ್ದರು. ತರಬೇತುಗೊಂಡಿದ್ದ ಕೊರಡೆ ಪೆಟ್ಟು ಕೊಡುವವರು ಯಾತನೆಪಡುವನಿಗೆ ಶಿಲುಬೆಯನ್ನು ಸ್ವಲ್ಪ ದೂರದ ತನಕ ಹೊತ್ತುಕೊಂಡು ಹೋಗುವದಕ್ಕೆ ಶಕ್ತನಾಗುವ ರೀತಿಯಲ್ಲಿ ತಮ್ಮ ಕಡೇ ಹೊಡೆತಗಳನ್ನು ಮಿತಗೊಳಿಸುವದರಲ್ಲಿ ನಿಪುಣರಾಗಿರುತ್ತಿದ್ದರು.[88]

**ಬೇಡಿ ಸೆರೆಮನೆ** ಇವುಗಳನ್ನು ಧಾರ್ಮಿಕ ಹಗೆತನಕ್ಕೆ ಗುರಿಯಾದ ದುರ್ದೈವಿಗಳ ವಿರುದ್ಧ ಬಳಸಲಾಗುತ್ತಿದ್ದ ಸಾಮಾನ್ಯವಾದ ಕಾರ್ಯಗಳಾಗಿದ್ದವು (ಯೆರೆಮೀಯ, ಯೆರೆಮೀಯ 37:4-21; ಹನಾನಿ, 2 ಪೂರ್ವಕಾಲವೃತ್ತಾಂತ 16:7-10). ಕರ್ತನ ಸಂದೇಶವನ್ನು ಮಾತಾಡಿದ್ದಕ್ಕಾಗಿ ಸೆರೆಮನೆಗೆ ಹಾಕಲ್ಪಟ್ಟ ಅನೇಕರಲ್ಲಿ ಪ್ರವಾದಿಯಾದ ಮೀಕಾಯೆಹು ಒಬ್ಬನಾಗಿದ್ದನು (1 ಅರಸು 22:26, 27).

**ವಚನ 37. ಕೆಲವರನ್ನು ಜನರು ಕಲ್ಲೆಸೆದು ಕೊಂದರು** ಎಂಬುದು ಹಳೆಯ ಒಡಂಬಡಿಕೆಯ

ಕಾಲದಿಂದ ಇದ್ದ ಅಧಿಕೃತ ಮರಣ ದಂಡನೆಯ ವಿಧವನ್ನು ಪ್ರತಿಬಿಂಬಿಸುತ್ತದೆ (ಯಾಜಕಕಾಂಡ 20:27; ಧರ್ಮೋಪದೇಶಕಾಂಡ 21:21; ಯೋಹಾನ 8:3-5). ಯೇಸು ಯೆರೂಸಲೇಮಿಗಾಗಿ ಕಣ್ಣೀರಿಟ್ಟನು ಮತ್ತು ಕಲ್ಲೆಸೆದು ಕೊಲ್ಲಲ್ಪಟ್ಟ ಪ್ರವಾದಿಗಳನ್ನು ಉಲ್ಲೇಖ ಮಾಡುತ್ತಾನೆ (ಮತ್ತಾಯ 23:37; ಲೂಕ 13:34). ಸ್ತೇಫನನು ಯೇಸುವನ್ನು ಅನುಸರಿಸಿದ ಮೊದಲ ರಕ್ತಸಾಕ್ಷಿಯಾಗಿದ್ದು, ಹೊಸ ಒಡಂಬಡಿಕೆಯ ಕಾಲದಲ್ಲಿ ಆ ವಿಧವಾಗಿ ಮರಣಿಸಿದನು (ಅಪೊಸ್ತಲರ ಕೃತ್ಯಗಳು 7:58, 59).

ಕೆಲವರನ್ನು **ಗರಗಸದಿಂದ ಕೊಯ್ದು ಕೊಂದರು**. ಇದರ ಬಗ್ಗೆ ಹಳೆಯ ಒಡಂಬಡಿಕೆಯಲ್ಲಿ ಅಥವಾ Apocryphaದಲ್ಲಿ (ಪ್ರೇರಿತವಲ್ಲದ ಪುಸ್ತಕಗಳಲ್ಲಿ) ಉಲ್ಲೇಖವಿರುವದಿಲ್ಲ; ಆದರೆ ಒಂದು ಚಿರಪರಿಚಿತವಾದ ಸಂಪ್ರದಾಯದ ಪ್ರಕಾರವಾಗಿ, ಮನಸ್ಸೆಯ ಆಳ್ವಿಕೆಯ ಕಾಲದಲ್ಲಿ ಇದು ಯೆಶಾಯನಿಗೆ ಸಂಭವಿಸಿತು. ಅನಂತರದಲ್ಲಿ ಪಶ್ಚಾತ್ತಾಪದ ಪ್ರಾರ್ಥನೆಯ ನಿಮಿತ್ತವಾಗಿ ಮನಸ್ಸೆಯು ದೇವರಿಂದ ಕ್ಷಮಿಸಲ್ಪಟ್ಟನು ಮತ್ತು ಆತನ ಸಿಂಹಾಸನವು ಪುನಃ ಆತನಿಗೆ ಕೊಡಲ್ಪಟ್ಟಿತು ಎಂಬುದನ್ನು ನಾವು ಗಮನಿಸಬಹುದು (2 ಪೂರ್ವಕಾಲವೃತ್ತಾಂತ 33:9-13). ಆತನು ಅಂಥ ಭಯಂಕರವಾಗಿ ಅಪರಾಧವನ್ನು ಮಾಡಿದ್ದನು ಆದರೆ ನಂತರ ಕ್ಷಮಿಸಲ್ಪಟ್ಟನು ಎಂದು ಹೇಳುವದು ದೇವರ ಮಹಾನ್ ಕರುಣೆಯನ್ನು ದೃಷ್ಟಾಂತಪಡಿಸುತ್ತದೆ.

**ಕೆಲವರು ಶೋಧನೆಗೊಳಪಡಿಸಲ್ಪಟ್ಟರು** (ದೇವದ್ರೋಹಿಗಳಾಗಿ ಪ್ರಾಣವನ್ನು ಉಳಿಸಿಕೊಳ್ಳಿರೆಂದು ಕೆಲವರನ್ನು ಪ್ರೇರೇಪಿಸಿದರು) ಎಂಬುದು ಈ ಜನರಿಗೆ ಯಾತನೆಯಿಂದ ತಪ್ಪಿಸಿಕೊಳ್ಳುವದಕ್ಕೆ ಅವಕಾಶ ಕೊಡಲ್ಪಟ್ಟಿತು ಆದರೆ ಅವರು ಅದನ್ನು ನಿರಾಕರಿಸಿದರು ಎಂಬ ಅರ್ಥವನ್ನು ಕೊಡುತ್ತದೆ. ದೇವರಲ್ಲಿ ನಂಬಿಕೆಯಿಡುವದು ಇಲ್ಲಿ ಆಶೀರ್ವಾದಕರ ಜೀವನದ ಖಾತ್ರಿಯನ್ನು ಕೊಡುವದಿಲ್ಲ, ಆದರೆ ಒಂದು ಅಂತಿಮವಾದ "ಪ್ರತಿಫಲದ ಬಹುಮಾನವನ್ನು" ಕೊಡುವದಾಗಿ ಖಾತ್ರಿ ನೀಡುತ್ತದೆ (ಇಬ್ರಿಯ 11:26; KJV). "ಶೋಧನೆ ಮಾಡಲ್ಪಟ್ಟರು" ಎಂಬ ಪದವು ಕೆಲ ಹಸ್ತಪ್ರತಿಗಳಲ್ಲಿ ಇದು ಇರುವದಿಲ್ಲ ಎಂಬ ಆಧಾರದಲ್ಲಿ RSVಯಲ್ಲಿ ಕೈ ಬಿಡಲ್ಪಟ್ಟಿದೆ. ಇದನ್ನು ಒಳಗೊಂಡಿರುವ ಹಸ್ತಪ್ರತಿಗಳಲ್ಲಿ ಅದು ನಕಲುಗಾರನ ತಪ್ಪಿನಿಂದ ಸೇರ್ಪಡೆಗೊಂಡಿರುತ್ತದೆ. "ಶೋಧನೆ ಮಾಡಲ್ಪಟ್ಟರು" ಎಂಬುದಕ್ಕಿರುವ ಪದವು πειράζω (*peirazō*) ಎಂದಾಗಿದ್ದರೆ, "ಗರಗಸದಿಂದ ಕೊಯ್ದು" ಎಂಬುದು ಅದೇ ರೀತಿಯ πρίζω (*prizō*) ಎಂಬ ಪದದಿಂದಲೇ ಅನುವಾದಿಸಲ್ಪಟ್ಟಿರುತ್ತದೆ.[89]

ಇನ್ನು **ಕೆಲವರನ್ನು ಕತ್ತಿಯಿಂದ ಕೊಂದರು**. ಇಷ್ಟೊಂದು ಯುಗಗಳಿಂದಲೂ ಕೆಟ್ಟದ್ದಾಗಿ ನಡಿಸಿಕೊಳ್ಳಲ್ಪಟ್ಟಿರುವ ನಂಬಿಗಸ್ತರ ಸಂಖ್ಯೆಯು ದೇವರಿಗೆ ಮಾತ್ರವೇ ಗೊತ್ತಿರಬಲ್ಲದು. ಇಷ್ಟೊಂದು ವರ್ಷಗಳಿಂದಲೂ ಅಸಂಖ್ಯಾತ ಜನರು ತಮ್ಮ ನಂಬಿಕೆಯ ಕಾರಣದಿಂದ ಮರಣಿಸಿರುತ್ತಾರೆ. ಈ ದಿನ ಸಹ, ವಿಶ್ವದ ಕೆಲವು ಪ್ರಾಂತ್ಯಗಳಲ್ಲಿನ ಕ್ರೈಸ್ತರು ನಿರಂತರವಾಗಿ ಅಪಾಯವನ್ನು ಎದುರಿಸುತ್ತಾರೆ ಮತ್ತು ತಾವು ಕ್ರಿಸ್ತನಿಗೆ ಹೊಂದಿರುವ ನಿಷ್ಠೆಯ ಕಾರಣದಿಂದ ಮರಣದ ಬೆದರಿಕೆಯನ್ನು ಎದುರಿಸುತ್ತಾರೆ. ಅವರಿಗೆ, ಇಬ್ರಿಯ 11ನೇ ಅಧ್ಯಾಯವು ನಂಬಿಗಸ್ತರಾಗಿ ಉಳಿಯುವಂತೆ ಆದರಣೆಯನ್ನು, ಬಲವನ್ನು, ಮತ್ತು ಪ್ರೋತ್ಸಾಹವನ್ನು ಒದಗಿಸುತ್ತದೆ.

ಆಹಾಬನ ಆಳ್ವಿಕೆಯಲ್ಲಿ, ಅನೇಕರು ಕೊಲ್ಲಲ್ಪಟ್ಟರು (1 ಅರಸು 19:10). ಒಬ್ಬ ಉತ್ತಮ ಯುವ ಅರಸನಾಗಿದ್ದ ಯೊಷೀಯನು ಫರೋಹನೆಕೋ ಎಂಬವನಿಂದ ಹತ್ಯಗೈಯಲ್ಪಟ್ಟನು (2 ಅರಸು 23:29). ಬಹುಶಃ ಲೇಖಕನ ಯೋಚನೆಗಳು ದೋಯೇಗನಿಂದ ಕೊಲ್ಲಲ್ಪಟ್ಟ ಎಂಭತ್ತೈದು ಮಂದಿ ಯಾಜಕರನ್ನು ಒಳಗೊಂಡಿದ್ದವು (1 ಸಮುವೇಲ 22:18). ರಕ್ತಸಾಕ್ಷಿಗಳಾಗಿ ಸತ್ತವರೊಳಗೆ

ಯೆರೆಮೀಯನು ಸಹ ಒಬ್ಬನಾಗಿರಬಹುದಾಗಿದೆ. (ಯೆರೆಮೀಯ 26:14-16 ವಚನಗಳು ಆತನು ತಾನು ಕೊಲ್ಲಲ್ಪಡುವದನ್ನು ನಿರೀಕ್ಷಿಸಿದ್ದನೆಂಬುದನ್ನು ಸೂಚಿಸುತ್ತವೆ.) ಅಷ್ಟುಮಾತ್ರವಲ್ಲದೆ, Maccabeanರ ಬಂಡಾಯದ ವೇಳೆಯಲ್ಲಿ ಸಬ್ಬತ್ ದಿನದಂದು ಹತ್ಯೆಗೈಯಲ್ಪಡುವಂತೆ ತಮ್ಮನ್ನು ಅನುಮತಿಸಿಕೊಂಡ ಯೆಹೂದ್ಯರನ್ನು ಪರಿಗಣಿಸಬಹುದು.[90] ಹಳೆಯ ಒಡಂಬಡಿಕೆಯ ಕ್ಯಾನೋನಿಕರಣದ ಪುಸ್ತಕಗಳಲ್ಲಿ ಕಲ್ಲೆಸೆಯಲ್ಪಡುವಿಕೆಗಳು ಮತ್ತು ಬಾಧೆಗಳು ವರದಿ ಮಾಡಲ್ಪಟ್ಟಿರಬಹುದು, ಆದರೆ ಪ್ರೇರಿತವಲ್ಲದ ಪುಸ್ತಕಗಳಲ್ಲಿ ಅದೇ ರೀತಿಯ ಘಟನೆಗಳು ವರದಿ ಮಾಡಲ್ಪಟ್ಟಿರುತ್ತವೆ. ಆ "ನಿಗೂಢವಾದ" ಪುಸ್ತಕಗಳು ಶಾಸ್ತ್ರಗಳ ಭಾಗವಾಗಿರುವದಿಲ್ಲವಾದರೂ, ಅವುಗಳಲ್ಲಿನ ಕಥೆಗಳು ಯೆಹೂದ್ಯರಿಗೆ ಪರಿಚಿತವಿದ್ದವು.

**ಕುರಿ** ಮತ್ತು **ಮೇಕೆಗಳ ಚರ್ಮಗಳನ್ನು ಉಟ್ಟುಕೊಂಡು** ಎಂಬುದು ಬಡತನ ಮತ್ತು ಸಮಾಜದಿಂದ ತಿರಸ್ಕಾರಕ್ಕೊಳಗಾದವರಲ್ಲಿ ಇರುವದರ ಒಂದು ಗುರುತಾಗಿತ್ತು. ಒಬ್ಬ ಕುರುಬನಾಗಿ, ದಾವೀದನು ಅಸಹ್ಯಕರವೆಂದು, ಕೇವಲ ಕುರಿಗಳನ್ನು ಮೇಯಿಸುವದಕ್ಕೆ ಯೋಗ್ಯನೆಂದು ಪರಿಗಣಿಸಲ್ಪಟ್ಟಿದ್ದನು (1 ಸಮುವೇಲ 17:15, 28, 34-36). ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರಲ್ಲಿ ಅನೇಕರು ಬಡತನದ ವರ್ಗಗಳಿಗೆ ಸೇರಿದವರಾಗಿರುವ ಸಾಧ್ಯತೆಯಿದೆ. ಅವರಿಗೆ ಅನೇಕ ಸಾರಿ ಸಹಾಯದ ಅಗತ್ಯವಿರುತ್ತಿತ್ತು, ಅದನ್ನೇ ಪೌಲನು ಸಂಗ್ರಹಿಸುವದಕ್ಕೆ ಅಪೇಕ್ಷಿಸಿದನು (ರೋಮಾ 15:26; ಗಲಾತ್ಯ 2:10).

"ಕುರಿಚರ್ಮಗಳು" ಎಂಬುದು ಎಲೀಯನನ್ನು ಸಹ ಸೂಚಿಸಬಹುದಾಗಿದೆ, ಆತನನ್ನು ಅವನ ಮನೆಯಿಂದ ಓಡಿಸಲಾಗಿತ್ತು (1 ಅರಸು 17:3-9; 19:3-14; 2 ಅರಸು 1:8). ಆತನ ಹೊದಿಕೆಯು ಒಂದು ಕುರಿಚರ್ಮ ಅಥವಾ ಒಂದು ರೀತಿಯ ಒರಟಾದ, ಉಣ್ಣೆಯ ಚರ್ಮದಿಂದ ಮಾಡಲ್ಪಟ್ಟದ್ದಾಗಿತ್ತು. ಸಾಮಾನ್ಯವಾಗಿ ಪ್ರವಾದಿಗಳು ಒರಟಾದ, ಕೂದಲುಳ್ಳ ಉಡುಪುಗಳನ್ನು ಧರಿಸುತ್ತಿದ್ದರು (ಜೆಕರ್ಯ 13:4). ಅವರು **ತಿರುಗಾಡಿದರು** (ὑστερεω, *hustereō*), ಅದರರ್ಥವು "ಕೊರತೆಯನ್ನನುಭವಿಸುವದು" ಅಥವಾ "ಕೀಳಾಗಿರುವದು." ಅವರು ಸಮಾಜದಿಂದ ಬಹಿಷ್ಕರಿಸಲ್ಪಟ್ಟವರಾಗಿದ್ದರು ಮತ್ತು ಅನಾಗರಿಕವಾದ ರೀತಿಯಲ್ಲಿ ಜೀವಿಸುತ್ತಿದ್ದರು ಎಂಬುದನ್ನು ಸೂಚಿಸುತ್ತದೆ.

**ವಚನ 38. ಇಂಥವರಿಗೆ ಈ ಲೋಕವು ಯೋಗ್ಯಸ್ಥಳವಲ್ಲ** ಎಂಬುದರ ಅರ್ಥವು ದೇವರ ಕೆಲಸಕ್ಕಾಗಿ ಬಾಧೆಗಳನ್ನನುಭವಿಸುವವರು ಸಮಾಜಕ್ಕೆ ಯೋಗ್ಯರಲ್ಲದವರೆಂದು ಎಣಿಸಲ್ಪಟ್ಟಿದ್ದರು, ಆದಾಗ್ಯೂ ವಾಸ್ತವಿಕದಲ್ಲಿ ಸಮಾಜವೇ ಅವರನ್ನು ಹೊಂದಿರುವದಕ್ಕೆ ಅನರ್ಹವಾಗಿತ್ತು ಅಥವಾ "ಅಯೋಗ್ಯ"ವಾಗಿತ್ತು. ಅಂಥ ವ್ಯಕ್ತಿಗಳ ನಂಬಿಕೆಯು ಲೋಕದವರ ಸ್ವತ್ತುಗಳು ಮತ್ತು ಸ್ಥಾನಮಾನದ ಹೊರತಾಗಿಯೂ, ಅವರ ನಂಬಿಕೆಗಿಂತಲೂ ವ್ಯಾಪಕವಾಗಿ ಸರ್ವೋಚ್ಚವಾಗಿತ್ತು. ಲೋಕದವರು ಭಕ್ತಿವಂತರ ಜೊತೆಯಲ್ಲಿ ಹೋಲಿಕೆ ಮಾಡುವದಕ್ಕೆ ಆಗದವರು. ಪ್ರವಾದಿಗಳು ಇಸ್ರಾಯೇಲ್ಯರನ್ನು ರಕ್ಷಿಸುವದಕ್ಕೆ ಬಂದರು, ಆದರೆ ಇಸ್ರಾಯೇಲ್ಯರು ತಮ್ಮನ್ನು ಅಯೋಗ್ಯರೆಂದು ಸಾಭಿತುಪಡಿಸಿಕೊಂಡರು ಮತ್ತು ಅವರನ್ನಾಗಲಿ ಅಥವಾ ಅವರ ಸಂದೇಶವನ್ನಾಗಲಿ ಅಂಗೀಕರಿಸಿಕೊಳ್ಳಲಿಲ್ಲ. ಲೋಕವು ಅತ್ಯಂಥ ಉದಾತ್ತರಾದ ಜನರನ್ನು ಅನೇಕ ಸಾರಿ ತಿರಸ್ಕಾರ ಮಾಡಿರುತ್ತದೆ. ಇಬ್ರಿಯ 11ರಲ್ಲಿ ಹೆಸರಿಸಲ್ಪಟ್ಟಿರುವವರ ಅಥವಾ ಪರೋಕ್ಷವಾಗಿ ಸೂಚಿಸಲ್ಪಟ್ಟಿರುವವರ ಗುಣಸ್ವಭಾವವು ಅವರ ಶ್ರೋತೃಗಳ ಮನಸ್ಸುಗಳಲ್ಲಿರುವ ಅಂಧಕಾರದ ವಿರುದ್ಧವಾಗಿ ಪ್ರಕಾಶಮಾನದಿಂದ ಹೊಳೆಯುತ್ತದೆ.

ಸಮಾಜದ ಲೋಕವನ್ನು ತೊರೆದವರಾಗಿ, ಅವರು **ತಮ್ಮ ದೇಶದ ಕುಣಿ**ಗಳಲ್ಲಿ (ὀπή, *opē*), ಅಂದರೆ **ಗವಿ**ಗಳು ಅಥವಾ ಗುಹೆಗಳಲ್ಲಿ ವಾಸಿಸುವವರಾದರು. ಎಲೀಯನು

ಈಜಬೇಲಳಿಂದ ಪಲಾಯನ ಮಾಡಿ ಸ್ವಲ್ಪ ಕಾಲ ಗುಹೆಯಲ್ಲಿ ವಾಸ ಮಾಡಿದನು (1 ಅರಸು 19:9). ಆಹಾಬನ ಮನೆವಾರ್ತೆಯವನಾದ ಓಬದ್ಯನು ನೂರು ಪ್ರವಾದಿಗಳನ್ನು ಗವಿಗಳಲ್ಲಿ ಅಡಗಿಸಿಟ್ಟು ಈಜಬೇಲಳ ಕೋಪಾಗ್ನಿಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದನು (1 ಅರಸು 18:4, 13). ಬೇರ್ಪಡಿಸಲ್ಪಡುವದು, ಕುಟುಂಬದವರ ಮತ್ತು ಒಂದೇ ವಿಧವಾದ ಧಾರ್ಮಿಕ ನಂಬಿಕೆಯುಳ್ಳವರ ಅನ್ಯೋನ್ಯತೆಯನ್ನು ಕಳಕೊಳ್ಳುವದು ಸ್ವತಃ ಒಂದು ಘೋರವಾದ ಬಾಧೆಯಾಗಬಲ್ಲದು.

## ಎಲ್ಲಾ ನಂಬಿಗಸ್ತರ ಸಾರಾಂಶ (11:39, 40)

**[39]ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; [40]ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು.**

**ವಚನ 39. ಇವರೆಲ್ಲರೂ** ಲೋಕದ ಸ್ವತ್ತುಗಳು ಮತ್ತು ಇಚ್ಛೆಗಳನ್ನು ಅನುಸರಿಸುವದಕ್ಕಿಂತಲೂ ಉತ್ತಮವಾದ ಕಾರ್ಯಗಳನ್ನು ಹೊಂದಿದ್ದರು. **ವಾಗ್ದಾನದ ಫಲವನ್ನು ಹೊಂದಲಿಲ್ಲ** ಎಂಬುದರ ಅರ್ಥವು ಅವರು ಬರಲಿರುವ ಮೆಸ್ಸೀಯನ ನೆರವೇರಿಕೆಯನ್ನು ಹೊಂದಲಿಲ್ಲ. ಹೊಸ ಒಡಂಬಡಿಕೆಯ ಅಡಿಯಲ್ಲಿರಬೇಕಾಗಿದ್ದದನ್ನು ಹಳೆಯ ಒಡಂಬಡಿಕೆಯ ವೀರರು ಪಡೆದುಕೊಳ್ಳಲಿಲ್ಲ. Craig R. Koester ಹೀಗೆ ಗಮನಕ್ಕೆ ತರುತ್ತಾನೆ,

> ಯೇಸು ಸ್ಥಾಪಿಸಿದ ಸರ್ವೋಚ್ಛವಾದ ಒಡಂಬಡಿಕೆಯು ದೇವರನ್ನು ಸರಿಯಾದ ರೀತಿಯಲ್ಲಿ ಸಮೀಪಿಸುವದಕ್ಕೆ ಅಗತ್ಯವಾಗಿರುವ ತೊಳೆಯಲ್ಪಡುವಿಕೆ ಮತ್ತು ಶುದ್ಧೀಕರಿಸಲ್ಪಡು ವಿಕೆಯನ್ನು ಒದಗಿಸುತ್ತದೆ (7:22; 8:6). ಇದರ ಆಧಾರದಲ್ಲಿ ಜನರು ಪರಲೋಕದ ಯೆರೂಸಲೇಮಿನಲ್ಲಿ ದೇವರ ಎಲ್ಲಾ ವಾಗ್ದಾನಗಳ ಸಂಪೂರ್ಣ ನೆರವೇರಿಕೆಯನ್ನು ಎದುರು ನೋಡಬಲ್ಲರು (12:22-24), ಅದು ಅಬ್ರಹಾಮ ಮತ್ತು ಆತನ ಬಾಧ್ಯಸ್ಥರ ಪ್ರಯಾಣವು ಮುಕ್ತಾಯಗೊಳ್ಳುವಂತಹ ಪಟ್ಟಣ ಅದಾಗಿದೆ (11:10, 16).[91]

ಧರ್ಮಶಾಸ್ತ್ರಕ್ಕೆ ನಂಬಿಗಸ್ತರಾಗಿದ್ದವರು ನಮಗೆ ಆತನಲ್ಲಿರುವದನ್ನು ಪಡೆದುಕೊಳ್ಳುವದಕ್ಕಾಗಿ ಕ್ರಿಸ್ತನ ಬರೋಣದ ತನಕ ಮತ್ತು ಆತನ ಪಾಪಪ್ರಾಯಶ್ಚಿತ್ತ ಮಾಡುವಿಕೆಯ ತನಕ ಕಾಯಬೇಕಾಗಿತ್ತು. ಹಳೆಯ ಒಡಂಬಡಿಕೆಯ ವೀರರು ತಾವು ಬದುಕಿರುವ ವೇಳೆಯಲ್ಲಿ ಅಂತಿಮ ವಾಗ್ದಾನದ ಫಲವನ್ನು ಹೊಂದಿಕೊಳ್ಳಲಿಲ್ಲ. ಈಗ ನಾವು ದೈವಿಕವಾಗಿ ನೆರವೇರಿದ ಯುಗದಲ್ಲಿ ಜೀವಿಸುತ್ತೇವೆ. ಇದನ್ನು ದಾಟಿ ಕೇವಲ ಪುನರುತ್ಥಾನವು, ಅದರ ಬಳಿಕ ನಿತ್ಯತ್ವವು ಮಾತ್ರವೇ ಕಾದಿರುತ್ತದೆ. ಹೇಬೆಲನು ಮೊದಲ್ಗೊಂಡು 11ನೇ ಅಧ್ಯಾಯದಲ್ಲಿ ಹೆಸರಿಸಲ್ಪಟ್ಟಿರುವ ಮತ್ತು ಹೆಸರಿಸಲ್ಪಡದವರು ನಂಬಿಗಸ್ತಿಕೆಗಾಗಿ ಒಳ್ಳೇ ಹೆಸರನ್ನು ಹೊಂದಿಕೊಂಡರು; ಸ್ವತಃ ಅದೇ ಒಂದು ಉತ್ತಮವಾದ ಪ್ರತಫಲವಾಗಿತ್ತು. ಇದರ ಅರ್ಥವು ಧರ್ಮಶಾಸ್ತ್ರಕ್ಕೆ ಅಧೀನಪಡಿಸಲ್ಪಟ್ಟಿದ್ದವರೆಲ್ಲರಿಗೂ ಅಂತಿಮ ರಕ್ಷಣೆಯು ಖಾತ್ರಿಪಡಿಸಲ್ಪಟ್ಟಿತ್ತೆಂದು ಆಗಿರುವದಿಲ್ಲ. ಹಳೆಯ ಒಡಂಬಡಿಕೆಯ ಅಡಿಯಲ್ಲಿ ಜೀವಿಸಿದ ಕೆಲವರು ಅನಂತರದಲ್ಲಿ ದಂಡನೆಯ ತೀರ್ಪು ಹೊಂದಿದರು (1 ಕೊರಿಂಥ 10:5).

**ವಚನ 40. ಶ್ರೇಷ್ಠವಾದದ್ದನ್ನು** (ಶ್ರೇಷ್ಠವಾದ ಭಾಗ್ಯವನ್ನು) ಎಂಬುದು ಬಹುಶಃ ತನ್ನೆಲ್ಲಾ ಫಲಗಳುಳ್ಳ ಆಶೀರ್ವಾದಗಳನ್ನೊಳಗೊಂಡಿರುವ ಹೊಸ ಹಾಗೂ ಉತ್ತಮವಾದ

ಒಡಂಬಡಿಕೆಯಾಗಿದೆ. ಧರ್ಮಶಾಸ್ತ್ರದಡಿಯಲ್ಲಿ ಜನರಿಗೆ ನಾವು ಕ್ರಿಸ್ತನನ್ನು ತಿಳಿದಿರುವ ರೀತಿಯಲ್ಲಿ ತಿಳಿದುಕೊಳ್ಳಲು ಅವಕಾಶವಾಗಲಿಲ್ಲ. ನಮಗೆ ಖಂಡಿತವಾಗಿಯೂ ಉತ್ತಮವಾದ ಭರವಸಗಳು, ನಿರೀಕ್ಷೆಗಳು, ಮತ್ತು ವಾಗ್ದಾನಗಳು ಇರುತ್ತವೆ. ನಮಗೆ ಕ್ರಿಸ್ತನಲ್ಲಿರುವ ಎಲ್ಲಾ ನಿರೀಕ್ಷೆಯನ್ನೊಳಗೊಂಡ ಉತ್ತಮವಾದ ರಾಜ್ಯವನ್ನು ಅವರು ಹೊಂದಿಕೊಳ್ಳಲಿಲ್ಲ. ಈ ವಾಕ್ಯಭಾಗವು ಲೇಖಕನ "ಉತ್ತಮವಾದ" ಹೊಸ ಒಡಂಬಡಿಕೆಯೆಂಬ ಪ್ರಮುಖ ಚರ್ಚೆಯಾಂಶಕ್ಕೆ ಹಿಂದಿರುಗುತ್ತದೆ.

**ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು** ಎಂಬುದು ಅಂತಿಮ ಪ್ರತಿಫಲಕ್ಕೋಸ್ಕರ ಎರಡೂ ಒಡಂಬಡಿಕೆಗಳ ಅಡಿಯಲ್ಲಿರುವ ನಂಬಿಗಸ್ತರು ಒಟ್ಟಾಗಿ ಕೂಡಿ ಬರುವರೆಂಬುದನ್ನು ಸೂಚಿಸುತ್ತದೆ. ದೇವರು ವಿಮೋಚಿಸಲ್ಪಟ್ಟವರ ಒಟ್ಟಾರೆ ಸಂಖ್ಯೆಯು ಧರ್ಮಶಾಸ್ತ್ರದಡಿಯಲ್ಲಿ ನಂಬಿಗಸ್ತರಾಗಿದ್ದವರು ಇಲ್ಲದೆ ಪೂರ್ತಿಗೊಳ್ಳುವದಿಲ್ಲ. ನಾವು ನಿಜವಾಗಿಯೂ ಅವರೊಂದಿಗೆ ನಂಬಿಕೆಯಲ್ಲಿ ಒಂದೇ ಜನವಾಗಿದ್ದೇವೆ. ಇಬ್ರಿಯ 12:23ನೇ ವಚನವು ನಾವು "ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ" ಜೊತೆಯಲ್ಲಿ ಕೂಡಿಸಲ್ಪಟ್ಟಿದ್ದೇವೆ ಎಂಬುದನ್ನು ಸೂಚಿಸುತ್ತದೆ, ಅವರು ಸಹ ಈಗಲೂ ಸಭೆಯಲ್ಲಿ ಅಸ್ತಿತ್ವದಲ್ಲಿರುವ ನಂಬಿಗಸ್ತರ ಒಂದು ದೊಡ್ಡ ದೇಹದ ಭಾಗವಾಗಿದ್ದಾರೆ. ನಾವು ಕ್ರಿಸ್ತನಲ್ಲಿ ಹೊಂದಿರುವ ಹೆಚ್ಚು ಅದ್ಭುತವಾದ ಸವಲತ್ತುಗಳ ಬಗ್ಗೆ ಹಳೆಯ ಒಡಂಬಡಿಕೆಯ ದೇವಜನರು ತಿಳಿಯದಿದ್ದಾಗ್ಯೂ ನಂಬಿಗಸ್ತರಾಗಿದ್ದರು. Charles Wesleyಯು ಈ ಸಂಕೀರ್ತನೆಯಲ್ಲಿ ಪದಗಳನ್ನು ಬರೆಯುವಾಗ ಸರಿಯಾದ ಭಾವನೆಯನ್ನು ಹೊಂದಿದ್ದನು:

> ಈಗ ಸಹ ನಂಬಿಕೆಯ ಮೂಲಕ ನಮ್ಮ ಕೈಗಳನ್ನು ಜೋಡಿಸುತ್ತೇವೆ
> ನಮಗಿಂತ ಮುಂಚೆ ಹೋದವರೊಂದಿಗೆ,
> ನಿತ್ಯವಾದ ದಡದ ಮೇಲೆ ರಕ್ತಪ್ರೋಕ್ಷಿತ
> ಪಡೆಗಳನ್ನು ವಂದಿಸುತ್ತೇವೆ.[92]

ನಂಬಿಕೆಯಲ್ಲಿ ನಾವು ನಮಗಿಂತ ಮುಂಚೆ ಹೋದವರ ಸಂಗಡ ಇರುತ್ತೇವೆ. ನಾವು "ನಿತ್ಯತ್ವದ ದಡದಲ್ಲಿ" ಅವರನ್ನು ಗೋಚರವಾಗುವ ರೀತಿಯಲ್ಲಿ ಜೊತೆಗೂಡುವೆವು.

ಅವರು ಯಜ್ಞಗಳನ್ನು ಸಮರ್ಪಿಸಿದಾಗ ದೇವರು ಅವರ ಪಾಪಗಳನ್ನು ದಾಟಿ ಹೋದನಾದರೂ, ಯಾವನೂ ಕ್ರಿಸ್ತನಿಲ್ಲದೆ ನಿಜವಾಗಿಯೂ ರಕ್ಷಣೆ ಹೊಂದಿದವನಲ್ಲ (ವ. 40; ರೋಮಾ 3:25, 26). ಪ್ರಾಚೀನ ಕಾಲದವರು ಆತ್ಮೀಕ ಅರ್ಥವೊಂದರಲ್ಲಿ ಕ್ರಿಸ್ತನೊಂದಿಗೆ ಐಕ್ಯವಾಗಿದ್ದರು, ಅದೇ ರೀತಿಯಲ್ಲಿಯೇ ನಾವು ಸಹ ಆಗಿದ್ದೇವೆ; ಆದಾಗ್ಯೂ ಅವರು ಆತನ ರಕ್ತದ ಶುದ್ಧಮಾಡುವ ಪರಿಣಾಮಕಾರಿತ್ವವಿಲ್ಲದೆ ಅವರು ಪರಿಪೂರ್ಣ ಮಾಡಲ್ಪಡಲಿಲ್ಲ, ಮತ್ತು ಸಾಧ್ಯವಾಗಲಿಲ್ಲ. ಮೂಲಪಿತೃಗಳು "ನಾವಿಲ್ಲದೆ" ಮತ್ತು ಈಗ ದೇವರ ಕೃಪೆಯ ಮೂಲಕ ನಮಗಿರುವ "ಶ್ರೇಷ್ಠವಾದದ್ದು" ಇಲ್ಲದೆ ಪರಿಪೂರ್ಣಗೊಳಿಸಲ್ಪಡಲಿಲ್ಲ ಎಂದು ಸತ್ಯಪೂರ್ವಕವಾಗಿ ಹೇಳಬಹುದಾಗಿದೆ.

ಧರ್ಮಶಾಸ್ತ್ರದಡಿಯಲ್ಲಿ ಜನರು, ಯೇಸುವಿನ ರಾಜ್ಯದ ಸಮೀಪಕ್ಕೆ ಎಂದಿಗೂ ಬರದವರಾಗಿ, ತಮಗೆ ಗೊತ್ತಿರುವದಕ್ಕೆ ನಂಬಿಗಸ್ತರಾಗಿ ಉಳಿದಿರುವದಾದರೆ, ನಾವು ಎಷ್ಟೋ ಹೆಚ್ಚಾಗಿ ನಂಬಿಕೆಯನ್ನು ಹಿಡಿದುಕೊಂಡಿರಬೇಕಲ್ಲವೇ! ಲೇಖಕನು ತನ್ನ ವಾಚಕರನ್ನು – ಮತ್ತು ಇಂದು ನಮ್ಮನ್ನು – ನಮ್ಮ ಕರ್ತನು ಮತ್ತು ರಕ್ಷಕನಿಗೆ ನಿಷ್ಠೆಯಿಂದ ಉಳಿಯುವಂತೆ ಬೇಡಿಕೊಳ್ಳುತ್ತಾನೆ.

# ಹೆಚ್ಚಿನ ಅಧ್ಯಯನಕ್ಕಾಗಿ: ಇಬ್ರಿಯರಿಗೆ ಪತ್ರಿಕೆಯಲ್ಲಿ "ಸಾಕ್ಷಿ"

ಹೊಸ ಒಡಂಬಡಿಕೆಯಲ್ಲಿ "ಸಾಕ್ಷಿ" ಎಂಬುದು μαρτυρέω (*martureō*) ಎಂಬ ಪದದ ರೂಪಗಳಿಂದ ಅನುವಾದಿಸಲ್ಪಟ್ಟಿದೆ. ಒಂದು ಕ್ರಿಯಾಪದವಾಗಿ, ಈ ಪದವು "ಯಾವದೋ ಸಂಭವಿಸುವದನ್ನು ನೋಡುವದು" ಎಂಬ ಆಧುನಿಕ ಅರ್ಥವನ್ನು ಹೊಂದಿರಲಿಲ್ಲ. ನಾಮಪದವು ಸಾರಭೂತವಾಗಿ "ಸಾಕ್ಷಿ ಹೇಳುವವನು" ಅಥವಾ "ಸಾಕ್ಷಿಯಾಗಿರುವವನು" ಎಂಬ ಅರ್ಥವನ್ನು ಹೊಂದಿದೆ. 11:2, 39ರಲ್ಲಿ, "ಒಳ್ಳೇ ಹೆಸರನ್ನು ಹೊಂದಿದರು" ಎಂಬ ಮಾತು *martureō* ಎಂಬ ಪದದಿಂದ ಬಂದದ್ದಾಗಿದೆ. 11:4ರಲ್ಲಿ ಅದೇ ಪದವು "ಸಾಕ್ಷಿ ಹೊಂದಿದನು" ಎಂದು, ಮತ್ತು 5ನೇ ವಚನದಲ್ಲಿ "ಸಾಕ್ಷಿ ಉಂಟು" ಎಂದು ಅನುವಾದಿಸಲ್ಪಟ್ಟಿದೆ. KJV ಮತ್ತು NIV ತರ್ಜುಮೆಗಳು ಆ ಪದವನ್ನು ಅಪೊಸ್ತಲರ ಕೃತ್ಯಗಳು 22:20ರಲ್ಲಿ "ರಕ್ತಸಾಕ್ಷಿ" ಎಂದು ಅನುವಾದಿಸಿರುತ್ತವೆ, ಮತ್ತು ಪ್ರಕಟನೆ 2:13; 17:6ರಲ್ಲಿ KJVಯು ಅದೇ ಅನುವಾದವನ್ನು ನೀಡುತ್ತದೆ. ಈ ಅರ್ಥವನ್ನು ಆದಿ ಕ್ರೈಸ್ತತ್ವದಿಂದ ಅಳವಡಿಸಿಕೊಂಡದ್ದಾಗಿತ್ತು.

ಶಾಸ್ತ್ರಗಳ ಸಾಕ್ಷಿಯು ಯೇಸುವಿನ ಕೃತ್ಯಗಳ ಬಗ್ಗೆ, ಮತ್ತು ವಿಶೇಷವಾಗಿ ಆತನ ಪುನರುತ್ಥಾನದ ಕುರಿತು ಸಾಕ್ಷಿ ಹೇಳುತ್ತದೆ. ಈ ಸಾಕ್ಷಿಯು ನಿತ್ಯಜೀವಕ್ಕೆ ನಡಿಸುವಂತಹ ನಂಬಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ನಮಗೆ ಅಗತ್ಯವಿರುವ ಎಲ್ಲವನ್ನೂ ಒದಗಿಸುತ್ತದೆ.

ಇಬ್ರಿಯ 11ರಲ್ಲಿ ಪ್ರಸ್ತಾಪಿಸಲಾಗಿರುವ ನಂಬಿಕೆಯ ಆಶ್ಚರ್ಯವಾದ ಗುಣಗಳು ಭಾಗಶಃ ಹಳೆಯ ಒಡಂಬಡಿಕೆಯ ವೀರರು ಹೊಂದಿಕೊಂಡ "ಸಾಕ್ಷಿಗೆ" ಸಂಬಂಧಗೊಳಿಸಲ್ಪಡಲು ಅರ್ಹವಾಗಿವೆ. ಹೇಬೆಲ, ಹನೋಕ, ಮತ್ತು ನೋಹ ಇವರು ದೇವರ ದೃಷ್ಟಿಯಲ್ಲಿ ನೀತಿವಂತರೆಂಬ ನಿಶ್ಚಯತ್ವವನ್ನು ಹೊಂದುವಂತಾಗಲು ಆತನಿಂದ ಅಂಥ ಸಾಕ್ಷಿಯನ್ನು (ಅಥವಾ "ಸಾಕ್ಷ್ಯ") ಹೊಂದಿದ್ದರು. ತನ್ನ ವೈಯಕ್ತಿಕ ಜೀವನದಲ್ಲಿ ಸಂಪೂರ್ಣವಾದ ಅರ್ಥದಲ್ಲಿ ನೀತಿವಂತನಾಗಿರದ ಅಬ್ರಹಾಮನು, "ಅದು ವರೆಗೆ ಕಾಣದಿದ್ದ ಸಂಗತಿಗಳ" ವಿಷಯವಾದ ದೈವೋಕ್ತಿಯನ್ನು ಹೊಂದಿದನು (ಅದೇ ರೀತಿ ನೋಹನು ಹೊಂದಿದ್ದನು; 11:7). ಆತನು ಅವುಗಳಲ್ಲಿ ಸಂಪೂರ್ಣವಾಗಿ ನಂಬಿದನು, ಮತ್ತು ಆ ಕಾರಣದಿಂದ ಅವನ ನಂಬಿಕೆಯು "ಆತನಿಗೆ . . . ನೀತಿಯೆಂದು ಗುರುತಿಸಲ್ಪಟ್ಟಿತು," ಅಥವಾ "ಆತನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" (KJV; ಆದಿಕಾಂಡ 15:6).

ಹನೋಕನ ವಿಷಯವಾಗಿ ಇಬ್ರಿಯ 11:5ರಲ್ಲಿ ನೇರವಾದ ಸಾಕ್ಷಿಯು ಅಥವಾ ಸಾಕ್ಷ್ಯವು ಕೊಡಲ್ಪಟ್ಟಿದ್ದು ಹೀಗೆ ಹೇಳುತ್ತದೆ, "ದೇವರಿಗೆ ಮೆಚ್ಚಿಕೆಯಾಗಿದ್ದನೆಂದು." ಒಂದು "ಸಾಕ್ಷಿಯು" ಮಾತಿಲ್ಲದ ಒಂದು ದೈವಿಕ ಕಾರ್ಯದ ಮೂಲಕ ಕೊಡಲ್ಪಡಬಲ್ಲದು, ಆದರೆ ಒಬ್ಬನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟಿದ್ದಾನೆಂಬುದಕ್ಕೆ ಅದನ್ನು ತಿಳಿಸುವ ಸ್ಪಷ್ಟವಾದ ಮಾತುಗಳು ಅಗತ್ಯವಾಗಿರುತ್ತವೆ. ಇಂದು ಅನೇಕರು ಹಂಬಲಿಸುವಂತದ್ದು ಇದನ್ನೇ ಆಗಿದೆ – ಅವರು ದೇವರಿಂದ ಒಂದು ಬಲವಾದ ಸಾಕ್ಷಿಯನ್ನು ಹೊಂದಿದ್ದಾರೆಂಬ "ಭಾವ." ಒಬ್ಬ ವ್ಯಕ್ತಿಗೆ ಕೊಡಲ್ಪಟ್ಟಿರುವ ಒಂದು "ಸಾಕ್ಷಿ" ಅಥವಾ ಸಾಕ್ಷ್ಯವು ಒಂದು ನಿರ್ದಿಷ್ಟವಾದ ಸಂದೇಶವನ್ನು ಸೂಚಿಸುತ್ತದೆ ಹೊರತು ಕೇವಲ ಒಂದು ಭಾವವನ್ನು ಅಲ್ಲ.

# ಅನ್ವಯಿಸುವಿಕೆ

## ನಂಬಿಕೆಯ ಸ್ವಭಾವ (11:1)

ಇಬ್ರಿಯ 11ನೇ ಅಧ್ಯಾಯದಿಂದ ಕಲಿತುಕೊಂಡ ಅರ್ಥನಿರೂಪಣೆಯ ಪ್ರಕಾರವಾಗಿ,

"ನಂಬಿಕೆ" ಯು ಒಂದು ಸಂಪೂರ್ಣ ನಿಶ್ಚಯತ್ವದ ಮೇರೆಗಳನ್ನೊಳಗೊಂಡ ಭರವಸ ಆಗಿರುತ್ತದೆ. ಇದು "ನಿನ್ನಲ್ಲಿ ನಂಬಿಕೆಯುಂಟು, ಆದರೆ ನನ್ನಲ್ಲಿ ವಾಸ್ತವಾಂಶಗಳುಂಟು" ಎಂಬಂತಲ್ಲ. ಕ್ರೈಸ್ತತ್ವವು ನಿಜವಾದ ಐತಿಹಾಸಿಕ ಘಟನೆಗಳನ್ನಾಧರಿಸಿದ ಒಂದು ಧರ್ಮವಾಗಿದೆ, ಅವುಗಳಲ್ಲಿ ಅನೇಕವಾದವುಗಳು ಅದ್ಭುತಕರ ಸ್ವಭಾವವನ್ನು ಹೊಂದಿದ್ದವು. ಐತಿಹಾಸಿಕ ವಾಸ್ತವಾಂಶಗಳು ನಮ್ಮ ನಂಬಿಕೆಗೆ ತಿರುಳನ್ನು ಒದಗಿಸುತ್ತವೆ. ನಂಬಿಕೆಯನ್ನುಂಟು ಮಾಡುವ ಈ ದಾರಿಯನ್ನು ರೋಮಾ 10:17ರಲ್ಲಿ ಪೌಲನು ಪುನದೃಢೀಕರಿಸುತ್ತಾನೆ: "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ." ನಂಬಿಕೆಯು ಗತಕಾಲದ ಘಟನೆಗಳ ಮೇಲೆ ಆಧಾರವಾಗಿದೆ, ಅದು ದೇವರ ವಾಕ್ಯದಲ್ಲಿ ಬರೆದಿಡಲ್ಪಡದೆ ಹೋಗಿದ್ದರೆ ಅದರ ಬಗ್ಗೆ ನಮಗೆ ಅತಿ ಸ್ವಲ್ಪ ಅಥವಾ ಏನೂ ಗೊತ್ತಾಗುತ್ತಿರಲಿಲ್ಲ. ಕ್ರೈಸ್ತನು ಗಟ್ಟಿಯಾದ ನಂಬಿಕೆಯನ್ನು ಹೊಂದಿದವನಾಗಿ ಅಸ್ತವ್ಯಸ್ತತೆಯಿಂದ ಕೂಡಿದ ಲೋಕವನ್ನು ಭರವಸವುಳ್ಳ ಶಾಂತತೆಯಿಂದ ಎದುರಿಸುವಂತಾಗಲು ಆತನಿಗೆ ಶಾಸ್ತ್ರಗಳು ನಂಬಿಕೆಯನ್ನು ಹುಟ್ಟಿಸುವದಕ್ಕೆ ಅಂಥ ಪುರಾವೆಯನ್ನು ಒದಗಿಸುತ್ತವೆ. 11:1ರಲ್ಲಿ NIV ಯು ಹೀಗೆ ಹೇಳುತ್ತದೆ, "ಈಗ ನಂಬಿಕೆಯೋ ನಾವು ನಿರೀಕ್ಷಿಸುವವುಗಳ ಕುರಿತು ನಿಶ್ಚಯತೆಯಿಂದಿರುವದು ಮತ್ತು ನಾವು ನೋಡದಿರುವವುಗಳ ಕುರಿತು ಖಚಿತತೆಯಿಂದಿರುವದು." ನಂಬಿಕೆಯು "ನಾವು ಜಯಶಾಲಿಗಳಾಗುವೆವು" ಎಂಬ ಭರವಸವಾಗಿದೆ. ನಂಬಿಕೆಯು "[ದೇವರು] ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು" ಎಂಬ ದೃಢನಿಶ್ಚಯತೆಯಾಗಿದೆ (ಪ್ರಕಟನೆ 21:4). ಬೈಬಲಾಧಾರಿತ ನಂಬಿಕೆಯು ನಾವು ದೇವರನ್ನು ಪ್ರೀತಿಸುವದಾದರೆ ಆತನು ಎಲ್ಲಾ ಕಾರ್ಯಗಳನ್ನು ಹಿತಕ್ಕಾಗಿ ಅನುಕೂಲ ಮಾಡುತ್ತಾನೆಂಬ ದೃಢವಾದ ವಿಶ್ವಾಸವಾಗಿದೆ (ರೋಮಾ 8:28).

ನಂಬಿಕೆಯು ನಮಗೋಸ್ಕರ ಅದ್ಭುತವಾದ ಸಂಗತಿಗಳನ್ನು ಮಾಡುತ್ತದೆ. ನಮಗೆ ನಂಬಿಕೆಯಿದ್ದರೆ, ನಾವು ಭರವಸವಿಡತಕ್ಕದ್ದು. ನಮಗೆ ನಂಬಿಕೆಯಿದ್ದರೆ, ನಾವು ಪರಲೋಕಕ್ಕೆ ಮನವೊಲಿಸಲ್ಪಡುತ್ತೇವೆ. ನಮಗೆ ನಂಬಿಕೆಯಿದ್ದರೆ, ನಾವು ಪೌಲನ ಜೊತೆಗೂಡಿ, "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದವನಾಗಿದ್ದೇನೆ" ಎಂದು ಹೇಳುವದಕ್ಕೆ ಶಕ್ತರಾಗುತ್ತೇವೆ (2 ತಿಮೊಥೆ 1:12). ನಂಬಿಕೆಯನ್ನು ಹೊಂದಿರುವದರಲ್ಲಿ ಒಂದು ಸಮರ್ಪಣೆಯು ಇರುತ್ತದೆ. ಇಬ್ರಿಯ 11ರಲ್ಲಿ ಪ್ರಸ್ತಾಪಿಸಲಾಗಿರುವ ಪ್ರತಿಯೊಬ್ಬ ನಂಬಿಗಸ್ತನು ಅವನ ಅಥವಾ ಅವಳ ನಂಬಿಕೆಗೋಸ್ಕರ ಏನನ್ನಾದರೂ ಮಾಡಿದರು. ಆ ಸಮರ್ಪಣೆಯ ಕಾರಣದಿಂದ, "ದೇವರು ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೊಳ್ಳಲಿಲ್ಲ" (ವ. 16). ಆ ಸಮರ್ಪಣೆಯ ಕಾರಣದಿಂದ, ನಂಬಿಕೆಯನ್ನು ಹೊಂದಿರುವವನು ಒಬ್ಬ "ಕ್ರೈಸ್ತನು" ಎಂದು ಕರೆಯಿಸಿಕೊಳ್ಳಬಲ್ಲನು, ಅಂದರೆ "ಕ್ರಿಸ್ತನಿಗೆ ಪಾಲುಗಾರನಾಗಿರುವವನು" ಅಥವಾ ಒಬ್ಬ "ಚಿಕ್ಕ ಕ್ರಿಸ್ತನು" ಆಗಿರುವವನು ಎಂದರ್ಥವಾಗಿದೆ.[93]

ಒಬ್ಬನು ತಾನು ನೋಡದಿರುವ ಕಾರ್ಯದ ಕುರಿತು ಹೇಗೆ ನಿಶ್ಚಯತ್ವದಿಂದ ಇರಬಲ್ಲನು? "ನೋಡುವದು ನಂಬುವಂತಿರುತ್ತದೆ" ಎಂಬ ಮಾತು ಇಬ್ರಿಯರಿಗೆ ಪತ್ರಿಕೆಯ ಅಭಿಪ್ರಾಯವಲ್ಲ. ಬದಲಾಗಿ, "ನಂಬುವದು ನೋಡಿದಂತೆ" ಎಂದಾಗಿರುತ್ತದೆ. ನಾವು ಯಾವದನ್ನು ಕಂಡಿಲ್ಲವೋ ಅದರಲ್ಲಿ ನಂಬುತ್ತೇವೆ, ಮತ್ತು ನಂಬಿಕೆಯ ಕಾರಣದಿಂದ ಅದನ್ನು ನೋಡುತ್ತೇವೆಂದು ಹಂಬಲದಿಂದ ನಿರೀಕ್ಷಿಸಿಕೊಂಡಿರುತ್ತೇವೆ. ಹೇಗೂ, ಬೈಬಲಾಧಾರಿತ ನಂಬಿಕೆಯು ಮುಂದಿಡಲ್ಪಟ್ಟಿರುವ ಸತ್ಯದ ಬಗ್ಗೆ ಎಷ್ಟೊಂದು ನಿಶ್ಚಯತ್ವದಿಂದಿರುತ್ತದೆಂದರೆ ಒಬ್ಬನು

ಅವುಗಳನ್ನು ಆಗಲೇ "ನೋಡಿದ್ದಾನೆ." ಮೋಶೆಯು "ಅದೃಶ್ಯವಾದ"ದ್ದನ್ನು ನೋಡುವದಕ್ಕೆ ಶಕ್ತನಾಗಿದ್ದನು (ವ. 27). ಅಬ್ರಹಾಮನು ಒಂದು "ಪಟ್ಟಣವನ್ನು ಎದುರುನೋಡುತ್ತಿದ್ದನು" (ವ. 10) ಯಾಕೆಂದರೆ ಆತನು ಅದು ಇರುತ್ತದೆಂದು ನಂಬಿದನು. ಆತನು ಅದನ್ನು "ನಂಬಿಕೆಯಿಂದಲೇ" "ನೋಡುವದಕ್ಕೆ" ಶಕ್ತನಾಗಿದ್ದನು. ದೇವರು ಆತನೊಂದಿಗೆ ಮಾತಾಡಿದ್ದನಾದ್ದರಿಂದ, ದೇವರು ಒಂದು ಸ್ಥಳದಲ್ಲಿದ್ದಾನೆಂಬ ಅರಿವು ಆತನಿಗಿರಬೇಕಾಗಿತ್ತು; ನಾವು "ಪರಲೋಕ" ಎಂದು ಕರೆಯುವ ಆ ಸ್ಥಳದಲ್ಲಿ ದೇವರು ವಾಸಿಸುತ್ತಾನೆಂದು ಕಲ್ಪಿಸಿಕೊಳ್ಳುವದಕ್ಕೆ ಶಕ್ತನಾಗಿದ್ದನು. ಖಂಡಿತವಾಗಿಯೂ, ಆತನ ನಂಬಿಕೆಯು ಅವನಿಗೆ ತಿಳಿಸಲ್ಪಟ್ಟಿದ್ದ ಪುರಾವೆಯ ಮೂಲಕ ಬಂದದ್ದಾಗಿತ್ತು. ನಾನು ಎಂದಿಗೂ Tokyoಗೆ ಹೋಗಿಲ್ಲ, ಆದರೆ ಆ ಪಟ್ಟಣವು ಇರುತ್ತದೆಂದು ನಾನು ನಂಬುತ್ತೇನೆ. ಅದು ಸುದ್ದಿಗಳಲ್ಲಿ ಇರುತ್ತದೆ, ಮತ್ತು ಅದನ್ನು ನೋಡಿರುವ ಜನರೊಂದಿಗೆ ನಾನು ಮಾತಾಡಿದ್ದೇನೆ. ನನ್ನ ಸೋದರ ಸಂಬಂಧಿಯು ಹಲವಾರು ವರ್ಷಗಳ ಕಾಲ ಜಪಾನಿನಲ್ಲಿ ಮಿಶನರಿಯಾಗಿದ್ದನು. Tokyo ಕುರಿತ ಆತನ ಸಾಕ್ಷಿಯನ್ನು ಅಂಗೀಕರಿಸಿಕೊಳ್ಳುತ್ತೇನೆ ಯಾಕೆಂದರೆ ಆತನ ಪ್ರಾಮಾಣಿ ಕತೆಯಲ್ಲಿ ನನಗೆ ದೃಢನಂಬಿಕೆಯಿದೆ. ಸಾಕ್ಷಿಗಳ ವಿಶ್ವಾಸರ್ಹತೆಯನ್ನು ಅಂಗೀಕರಿಸಿಕೊಳ್ಳು ವವನು ತನಗೆ ಹೇಳಲ್ಪಟ್ಟಿರುವದರಲ್ಲಿ ವಿಶ್ವಾಸಿಸುವವನಾಗಿದ್ದಾನೆ ಮತ್ತು ಅವರಲ್ಲಿ ತಾನು ಇಟ್ಟಿರುವ ಭರವಸದಷ್ಟೇ ಅವುಗಳ ಬಗ್ಗೆ ಖಚಿತತೆಯಿಂದಿರಬಲ್ಲನು. ನಮ್ಮ ಮುಂದೆ ಯಾವದೇ ಭೂಲೋಕದ ಉದ್ದೇಶಗಳಿಲ್ಲದೆ, ತಾವು ನೋಡಿದ ಸತ್ಯದ ಕುರಿತು ಸಾಕ್ಷಿಯನ್ನು ಕೊಟ್ಟದ್ದರ ಕಾರಣದಿಂದಾಗಿ ತಮ್ಮ ಪ್ರಾಣಗಳನ್ನೇ ಅರ್ಪಿಸಿದಂತಹ ವಿಶ್ವಾಸರ್ಹರಾದ ಸಾಕ್ಷಿಗಳಿದ್ದಾರೆ (1 ಯೋಹಾನ 1:1-3).

ನಂಬಿಕೆಯು "ನಾನು ನನ್ನ ರಕ್ಷಣೆಯ ಬಗ್ಗೆ ಯಾವ ಭಾವವನ್ನು ಹೊಂದಿದ್ದೇನೆ" ಎಂಬುದಲ್ಲ; ಬದಲಾಗಿ, ಬೈಬಲಾಧಾರಿತ ನಂಬಿಕೆಯು ನಮಗೆ ವಾಗ್ದಾನ ಮಾಡಲ್ಪಟ್ಟದ್ದರ ಕುರಿತು ನಿಜವಾದ ತಿರುಳನ್ನು ಒದಗಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯಲ್ಲಿ ನಂಬಿಕೆಯ ಭಾವನೆಯಲ್ಲಿ ನಮ್ಮಿಂದ ದೇವರು ಕೇಳುವ ಕ್ರಿಯೆಯು ಸೇರಿರುತ್ತದೆ. "ದೇವರ ಕೆಲಸದ" ಬಗ್ಗೆ, ಅಂದರೆ ಜನರು ಮಾಡಬೇಕೆಂದು ದೇವರು ಬಯಸುವಂಥ ಕೆಲಸದ ಕುರಿತು ಕೇಳಿದಾಗ, ಯೇಸು ಈ ಉತ್ತರವನ್ನು ಕೊಟ್ಟನು: "ದೇವರು ಮೆಚ್ಚುವ ಕೆಲಸ ಯಾವದಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ" (ಯೋಹಾನ 6:29). ನಂಬಿಕೆಯು ನಮ್ಮ ಮನಸ್ಸುಗಳಲ್ಲಿ ಯಾವದನ್ನೋ ಅದ್ಭುತಕರವಾಗಿ ಇಡುವಂತಹ ಒಂದು ಕೆಲಸವಲ್ಲ. ಬದಲಾಗಿ, ನಂಬಿಕೆಗೆ ತಳಹದಿಯಾಗಿ ದೇವರು ಒದಗಿಸುವ ಪುರಾವೆಯಿಂದ ತೆರೆದ ಹೃದಯದಲ್ಲಿ ಉಂಟು ಮಾಡಲ್ಪಡುವಂಥದ್ದಾಗಿದೆ. ಇಂದು, ಅನೇಕ ಸೇವಕರಿಗೆ, "ನಾನು ಹೇಗೆ ನಂಬಿಕೆಯನ್ನು ಹೊಂದುತ್ತೇನೆ?" ಎಂದು ಕೇಳುವಾಗ, ಅವರು ಹೀಗೆ ಪ್ರತ್ಯುತ್ತರ ನೀಡುತ್ತಾರೆ, "ನೀವು ಅದಕ್ಕೋಸ್ಕರ ಕೇಳಿಕೊಳ್ಳಬೇಕಷ್ಟೆ." ಯೇಸುವು ಅದನ್ನು ಕಲಿಸಲಿಲ್ಲ. ತತ್ಪರಿಣಾಮವಾಗಿ ಆತನು ಹೇಳಿದ್ದೇನೆಂದರೆ, "ನಂಬಿಕೆಯು ನೀವು ಮಾಡಬೇಕೆಂದು ದೇವರು ಬಯಸುವ ಕೆಲಸವಾಗಿದೆ. ರಕ್ಷಿಸುವಂತಹ ನಂಬಿಕೆಯನ್ನು ಹೊಂದಿಕೊಳ್ಳಬೇಕಾದರೆ ನೀವು ಮಾಡಬೇಕೆಂದು ದೇವರು ಬಯಸುವ ಬೇರೊಂದು ಕಾರ್ಯವಿರುತ್ತದೆ. ಅದು ನಂಬಿಕೆಯನ್ನು ಹೊಂದಿಕೊಳ್ಳುವದಕ್ಕೆ ಅವಶ್ಯಕವಾದ ಕೆಲಸವನ್ನು ನಡಿಸುವದೇ." (ಓದಿರಿ ಯೋಹಾನ 6:28, 29.)

ನಾವು ಸಂಕಷ್ಟಗಳನ್ನು ಎದುರಿಸುವಾಗ ಮತ್ತು ನಂತರ ದೇವರು ಹೇಗೆ ಅವುಗಳನ್ನು ನಮ್ಮ ಹಿತಕ್ಕಾಗಿ ಅನುಕೂಲಗೊಳಿಸಿದನೆಂಬುದನ್ನು ಕಾಣುವಾಗ, ನಮ್ಮ ನಂಬಿಕೆಯು ಇನ್ನಷ್ಟು ಬಲಗೊಳ್ಳುತ್ತದೆ. ಹೇಗೂ, ನಮ್ಮ ನಂಬಿಕೆಯ ಅಸ್ತಿವಾರವು ದೇವರ ವಾಕ್ಯದಲ್ಲಿ ಭರವಸವನ್ನಿಡುವದೇ ಆಗಿದೆ. ತಮಗೆ ನಂಬಿಕೆಯನ್ನು ಕೊಡುವಂತೆ ಒಂದು ಅಸ್ವಾಭಾವಿಕವಾದ

ಘಟನೆಗೋಸ್ಕರ ಕಾಯುವವರು ಬಹು ದೀರ್ಘಕಾಲದವರೆಗೂ ಕಾಯುವರು.

## ನಂಬಿಕೆಯಿಂದ ನಾವು ಅರ್ಥಮಾಡಿಕೊಳ್ಳುತ್ತೇವೆ (11:3)

ಇಬ್ರಿಯ 2:8ನೇ ವಚನವು "ಆದರೆ . . . ನಾವು ಇನ್ನೂ ಕಾಣುವದಿಲ್ಲ" ಎಂಬ ಪದಗುಚ್ಛವನ್ನು ಬಳಸುತ್ತದೆ; ಆದರೆ 11:3ರಲ್ಲಿ ನಮಗೆ ದೇವರು ಈ ಲೋಕದಲ್ಲಿ ಮಾಡಿರುವಂತದ್ದು "ಕಾಣಿಸುತ್ತದೆ," ಅಥವಾ ಅರ್ಥವಾಗುತ್ತದೆ. ನಾವು ಶಾರೀರಿಕ ಕಣ್ಣುಗಳಿಂದ ನೋಡುವಂಥದ್ದು ಕಷ್ಟ ಮತ್ತು ದುಃಖಗಳಿಂದ ತುಂಬಿರುವ ಲೋಕವಾಗಿದೆ. ಹೇಗೂ, "ನಂಬಿಕೆಯ ಕಣ್ಣುಗಳಿಂದ" ನಾವು ಅಗೋರವಾಗಿರುವದರ ಹಿಂದಿರುವದನ್ನು ಕಾಣಬಲ್ಲೆವು, ಅಲ್ಲಿ ದೇವರು ತನ್ನವರನ್ನು ಕಾಯುತ್ತಿರುತ್ತಾನೆ.

ದುಷ್ಟರ ಕೆಲಸವು ಅಭಿವೃದ್ಧಿಯಾದರೂ,
ಆದಾಗ್ಯೂ ಈ ಸತ್ಯವೊಂದೇ ಬಲಿಷ್ಠ,
ಮತ್ತು, ಆಕೆಯು ಈಗ ಬಹಿಷ್ಕೃತಳಂತೆ ಅಲೆದಾಡಿದರೂ,
ನಾನು ಆಕೆಯ ಸುತ್ತಲು ಕಿಕ್ಕಿರಿದು ಸುಂದರ,
ಎತ್ತರವಾದ ದೇವದೂತರ ಪಡೆಗಳು ಇರುವದನ್ನು ಕಾಣುತ್ತೇನೆ,
ಆಕೆಯನ್ನು ಸಕಲ ಕೆಟ್ಟದ್ದರಿಂದ ಭದ್ರಪಡಿಸುವದಕ್ಕಾಗಿ.

. . . . . . . . . . . . . . . . . . . . . . . . . . . . .
ಸತ್ಯವು ಯಾವಾಗಲೂ ಗಲ್ಲಿನ ಜಗಲಿ ಮೇಲಿರುತ್ತದೆ,
ತಪ್ಪು ಯಾವಾಗಲೂ ಸಿಂಹಾಸನದ ಮೇಲಿರುತ್ತದೆ, –
ಆದಾಗ್ಯೂ ಆ ಗಲ್ಲುಜಗಲಿ ಭವಿಷ್ಯವನ್ನು ಬದಲಾಯಿಸುತ್ತದೆ,
ಮತ್ತು, ಮಂದವಾದ ಅಜ್ಞಾತದ ಹಿಂದೆ,
ದೇವರು ನೆರಳಿನೊಳಗೆ ನಿಂತಿರುತ್ತಾನೆ,
ತನ್ನವರ ಮೇಲೆ ಕಣ್ಣಿಟ್ಟಿರುತ್ತಾನೆ.[94]

ಇದು ನಿಜವೆಂದು ಕ್ರೈಸ್ತರು ಬಲ್ಲವರಾಗಿದ್ದಾರೆ!

## ದೇವರು ಇದ್ದಾನೆಂಬುದನ್ನು ಬೈಬಲ್ ಹೇಗೆ ಸಾಭಿತುಪಡಿಸುವದು? (11:6)

ದೇವರು ಇದ್ದಾನೆಂಬುದನ್ನು ಸಾಭಿತುಪಡಿಸುವದಕ್ಕೆ ಬೈಬಲ್ ವ್ಯವಸ್ಥಿತವಾದ ಪ್ರಯತ್ನವನ್ನು ಮಾಡುವದಿಲ್ಲ. ಈ ವಚನಗಳಲ್ಲಿ ದೇವರ ಚಟುವಟಿಕೆಗಳೆಂಬುದಕ್ಕೆ ಸಿಕ್ಕುವ ಎಲ್ಲಾ ಹೇಳಿಕೊಳ್ಳುವಿಕೆಗಳಲ್ಲಿ, ಸಂದೇಹವಾದಿಗಳಿಗೆ ಆತನ ಅಸ್ತಿತ್ವದ ಕುರಿತು ಮನವರಿಕೆ ಮಾಡಲು ಯಾವ ತರ್ಕವೂ ಕೊಡಲ್ಪಟ್ಟಿರುವದಿಲ್ಲ. ದೇವರು ಇದ್ದಾನೆಂಬುದನ್ನು ನಿರಾಕರಿಸುವವನು ಒಬ್ಬ "ಮೂಢನು" ಎಂದಷ್ಟೆ ಶಾಸ್ತ್ರಗಳು ಹೇಳುತ್ತವೆ (ಕೀರ್ತನೆ 14:1). ಮೊಂಡುತನದಿಂದಲೂ ನಿರಂತರವಾಗಿಯೂ ಆತನನ್ನು ತಿರಸ್ಕರಿಸುವವರ ವಿಷಯದಲ್ಲಿ ದೇವರು ಕ್ರಮೇಣದಲ್ಲಿ ಸುಮ್ಮನಾಗಿ ಬಿಡುತ್ತಾನೆ (ರೋಮಾ 1:18-24). ಬೈಬಲ್ ದೇವರ ಕುರಿತು ಯಾವದೇ ಅನಿಶ್ಚಿತತೆಯಿಂದ ಆರಂಭಗೊಳ್ಳುವದಿಲ್ಲ, ಆದರೆ ಆತನು ಇದ್ದಾನೆ ಮತ್ತು ಸಮಸ್ತವೂ ಆತನಿಂದ ಬಂದವುಗಳೆಂಬ ಖಚಿತತೆಯೊಂದಿಗೆ ಆರಂಭಗೊಳ್ಳುತ್ತದೆ (ಅದಿಕಾಂಡ 1:1-3; ಯೋಹಾನ 1:1-3).

ದೇವರ ಭಾವನೆಯು ಮನಸ್ಸಿನ ತತ್ವಜ್ಞಾನಿಕವಾದ ಗೊತ್ತುಗುರಿಯಿಲ್ಲದ ಸುತ್ತಾಡುವಿಕೆಗಾಗಿ ರಚಿಸಲ್ಪಟ್ಟಿರುವದಿಲ್ಲ. ಆತನು ಲೋಕದ ಶ್ರೇಷ್ಠವಾದ ವಾಸ್ತವಿಕತೆಯಾಗಿದ್ದಾನೆ. ಆತನು ಇದ್ದಾನೆಂದು ನಂಬುವ ಹೊರತು ನಾವು ಆತನ ಸಮೀಪಕ್ಕೆ

ಬರುವದಕ್ಕೂ ಆಗುವದಿಲ್ಲ. ನಂಬಿಕೆ, ಪಶ್ಚಾತ್ತಾಪ, ಅರಿಕೆ, ಮತ್ತು ದೀಕ್ಷಾಸ್ನಾನಗಳ ಮೂಲಕ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಂತೆ ಒಬ್ಬ ವ್ಯಕ್ತಿಯು ಆಮಂತ್ರಿಸಲ್ಪಡುವಾಗ (ಯೊಹಾನ 1:11, 12) ಮತ್ತು ಆತನು ಹಾಗೆ ಮಾಡುವಾಗ, ಆತನು ಕತ್ತಲೆಯೊಳಗೆ ಹೆಜ್ಜೆಯನ್ನಿಡುತ್ತಿಲ್ಲ, ಆದರೆ ಬೆಳಕಿನೊಳಗೆ ಹೆಜ್ಜೆಯನ್ನನು ಇಡುವವನಾಗಿದ್ದಾನೆ. ನಂಬಿಕೆಯು ಕುರುಡಲ್ಲ, ಅದು ಅಜ್ಞಾನದ ಮನಸ್ಸುಗಳಿಂದ ಅಂಗೀಕರಿಸಲ್ಪಡುವಂತಹ ಒಂದು ಮನೋಶಾಸ್ತ್ರೀಕವಾದ ಬುದ್ಧಿವಿಕಲ್ಪವೂ ಅಲ್ಲ. ದೇವರ ಅಸ್ತಿತ್ವವನ್ನು ನಿರಾಕರಿಸುವದು "ತರ್ಕಬಾಹಿರವಾಗಿರುವಷ್ಟೇ ಅನೈತಿಕವೂ ಆಗಿದೆ."[95]

## ಹೇಬೆಲನ ನಂಬಿಕೆ Vs ಕಾಯಿನನ ನಂಬಿಕೆಯ ಕೊರತೆ (11:4)

1966ರಲ್ಲಿನ New York World's Fairನಲ್ಲಿ, ನಾನು ಕ್ರಿಸ್ತನ ಸಭೆಗಳ ಪ್ರದರ್ಶನದಲ್ಲಿ ಕೆಲಸ ಮಾಡಿದನು. ಕೆನಡಾ ದೇಶದ ಒಬ್ಬನು ಅಲ್ಲಿಗೆ ಬಂದನು, ಮತ್ತು ನಾವು ಹಳೆಯ ಒಡಂಬಡಿಕೆ ಮತ್ತು ಅದರ ಅದ್ಭುತಗಳ ಕುರಿತ ಚರ್ಚೆಯಲ್ಲಿ ತೊಡಗಿದೆವು. ಆತನು ಯೋನ ಹಾಗೂ ಸಮುದ್ರ ದೈತ್ಯ ಮೀನನ ಕಥೆಯನ್ನು ತಿರಸ್ಕರಿಸಿದನು. ಆತನು ಯೇಸುವಿನಲ್ಲಿ ಮತ್ತು ಆತನು ಮಾಡಿದ ಉಪದೇಶದಲ್ಲಿ ನಂಬುತ್ತಾನೋ ಎಂದು ಆತನನ್ನು ಕೇಳಿದೆನು, ಅದಕ್ಕೆ ಆತನು ನಂಬುತ್ತೇನೆಂದು ಉತ್ತರಿಸಿದನು. ಆಗ ನಾನು ಯೇಸುವು ಯೋನನ ಕಥೆಯನ್ನು ನಂಬಿದನು ಮತ್ತು ಅದನ್ನು ತನ್ನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನಕ್ಕೆ ಒಂದು ಮಾದರಿಯಾಗಿ ಬಳಿಸಿದನು ಎಂದು ತೋರಿಸಿದೆನು (ಮತ್ತಾಯ 12:38-40). ಹೊಸ ಒಡಂಬಡಿಕೆಯು ನಿರಂತರವಾಗಿ ಹಳೆಯ ಒಡಂಬಡಿಕೆಯನ್ನು ಅದರ ಐತಿಹಾಸಿಕ ಮತ್ತು ಪ್ರವಾದನಾತ್ಮಕ ಹೇಳಿಕೆಗಳಿಗೆ ಪೂರ್ಣ ಮನ್ನಣೆಯನ್ನು ಕೊಡುತ್ತಾ ಉಲ್ಲೇಖಿಸುತ್ತದೆ. ಒಬ್ಬನು ಹಳೆಯ ಒಡಂಬಡಿಕೆಯಿಲ್ಲದೆ ಹೊಸ ಒಡಂಬಡಿಕೆಯಲ್ಲಿ ನಂಬಿಕೆಯನ್ನಿಡಲಾರನು, ಅದೇ ರೀತಿ ಒಬ್ಬನು ಹೊಸ ಒಡಂಬಡಿಕೆಯಿಲ್ಲದೆ ಹಳೆಯ ಒಡಂಬಡಿಕೆಯನ್ನು ನಂಬುದವಕ್ಕೂ ಆಗುವದಿಲ್ಲ. ಹೇಬೆಲನು ಎರಡೂ ಒಡಂಬಡಿಕೆಗಳಲ್ಲಿ ಐತಿಹಾಸಿಕ ವ್ಯಕ್ತಿಯೆಂದು ಮುಂದಿಡಲ್ಪಟ್ಟಿದ್ದಾನೆ (ಮತ್ತಾಯ 23:35; ಲೂಕ 11:51; ಇಬ್ರಿಯ 12:24). ಆತನು ಜೀವಿಸಿದಂತ ಮತ್ತು ಸೋದರನಿಂದ ಕೊಲೆಯಾದ ವಿಶ್ವದ ಪ್ರಥಮ ಮನುಷ್ಯನೆಂಬ ಅರ್ಥವನ್ನು ಈ ಬೈಬಲ್ ಹೇಳಿಕೆಗಳು ಕೊಡುತ್ತವೆಂಬುದನ್ನು ನಾವು ಅಂಗೀಕರಿಸಿಕೊಳ್ಳುತ್ತೇವೆ. ಅಂದಿನಿಂದ ಪ್ರತಿಯೊಂದು ಕೊಲೆಯು, ಒಂದು ಅರ್ಥದಲ್ಲಿ ಅದೇ ಪಾಪವಾಗಿದೆ — ಒಬ್ಬ ಸಹೋದರನ ಅಥವಾ ಸಹೋದರಿಯ ಕೊಲೆ.

ದೇವರು ಹೇಬೆಲನ ನಂಬಿಗಸ್ತಿಕೆಯ ಸಮರ್ಪಣೆಯ ವಿಷಯದವಾಗಿ ಯಾವ ಸಾಕ್ಷಿಯನ್ನು ನೀಡಿದನೋ ನಮಗೆ ತಿಳಿಯದು, ಆದರೆ ಆತನು ಕಾಯಿನನಿಗೆ ಏನೋ ವ್ಯತ್ಯಾಸವಾದದ್ದನ್ನು ಹೇಳಿದನು: "ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು; ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು" (ಆದಿಕಾಂಡ 4:7). ದೇವರು ತನ್ನ ಸಹೋದರನಾದ ಹೇಬೆಲನ ಕಾಣಿಕೆಯನ್ನು ಸ್ವೀಕರಿಸಿಕೊಂಡಿದ್ದಕ್ಕೆ ಕಾಯಿನನು ಹೊಟ್ಟೆಕಿಚ್ಚುಗೊಂಡನು, ಆತನು ಒಂದು ಗಂಭೀರವಾದ ಪಾಪವನ್ನು ಮಾಡುವದರಲ್ಲಿದ್ದಾನೆಂಬುದನ್ನು ಕರ್ತನು ಬಲ್ಲವನಾಗಿದ್ದನು, ಆತನು "ಪಾಪವು ಬಾಗಿಲಲ್ಲಿ ಹೊಂಚಿಕೊಂಡಿರುವದು" ಎಂದು ಎಚ್ಚರಿಸಿದನು (ಆದಿಕಾಂಡ 4:7), ಹೀಗೆ ಪಾಪವನ್ನು ತನ್ನ ಬೇಟೆಯ ಮೇಲೆ ಜಿಗಿಯುವದಕ್ಕೆ ಸಿದ್ಧವಾದ ಸಿಂಹಕ್ಕೆ ಅದನ್ನು ಹೋಲಿಸುತ್ತಾನೆ. ಆಗಲೂ, ತನ್ನ ಪಾಪಭರಿತ ಇಚ್ಛೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಕಾಯಿನನಿಗೆ ಶಕ್ತಿಯು ಇದೆ ಎಂಬದನ್ನು ದೇವರು ಸೂಚಿಸುತ್ತಾನೆ. ನಾವು ದೇವರಲ್ಲಿ ಸರಿಯಾದ

ನಂಬಿಕೆಯನ್ನು ಹೊಂದಿದ್ದರೆ ಪಾಪವನ್ನು ಸ್ವಾಧೀನಪಡಿಸಿಕೊಳ್ಳುವ ಶಕ್ತಿಯು ನಮ್ಮಲ್ಲಿಯೇ ಇರುತ್ತದೆ. ಈ ಮಾತುಗಳು ಮನುಷ್ಯನ ಬೀಳುವಿಕೆಯ ನಂತರದಲ್ಲಿ ನುಡಿದವುಗಳಾಗಿವೆ, ಹಾಗಾದರೆ ಮಾಣವ ಜನಾಂಗವನ್ನು ನೀತಿಯ ದಾರಿಯನ್ನು ಅನುಸರಿಸುವದಕ್ಕೆ ಅಸಮರ್ಥರನ್ನಾಗಿಸಿದ "ಸಂಪೂರ್ಣ ಭ್ರಷ್ಟತೆ"ಯು ಆದಾಮನ ಮಕ್ಕಳಲ್ಲಿರಲಿಲ್ಲ ಎಂದಾಗುತ್ತದೆ. ಇದು ಲೋಕವನ್ನು ಮತ್ತು ಅದರ ಪಾಪವನ್ನು ಜಯಿಸುವಂತಹ ವಿಜಯವಾಗಿದೆ – ನಮ್ಮ ನಂಬಿಕೆ (1 ಯೋಹಾನ 5:4). ಬಹುಶಃ ದೇವರು ಹೇಬೆಲನಿಗೆ ಈ ವಿಧವಾಗಿ ಹೇಳಿರಬೇಕು: "ನೀನು ಯಾವ ನಂಬಿಕೆಯಿಂದ ನಿನ್ನ ಯಜ್ಞವನ್ನು ಸಮರ್ಪಿಸಿದೆಯೋ ಆ ನಂಬಿಕೆಯು ನಿನ್ನ ಹೃದಯದ ಗುಣ ಹಾಗೂ ಪ್ರಾಮಾಣಿಕತೆಯನ್ನು ತೋರ್ಪಡಿಸಿತು. ನೀನು ಉತ್ತಮ ಕೆಲಸ ಮಾಡಿದಿ. ನಂಬಿಕೆಯನ್ನು ಕಾಪಾಡಿಕೋ!"

ದೇವರು ಕಾಯಿನನಿಗೆ ನೀಡಿದ ದಂಡನೆ ಕರುಣೆಯುಳ್ಳದ್ದಾಗಿತ್ತು, ಆದಾಗ್ಯೂ ಅದನ್ನು ಆತನು ಅತ್ಯಂಥ ಕಠೋರವೆಂದು ಭಾವಿಸಿದನು. ನಾವು ಕಲ್ಪಿಸಿಕೊಳ್ಳುವ ರೀತಿಯಲ್ಲಿ ಆರಾಧನೆಯನ್ನು ಮಾಡುವದು ಅತ್ಯಂಥ ಅಪಾಯಕರವೆಂಬುದನ್ನು ಗುರುತಿಸುವಂತೆ ಕಾಯಿನ ಮತ್ತು ಹೇಬೆಲರ ಕಥೆಯು ಕಾರಣವಾಗತಕ್ಕದ್ದು. ಹಳೆಯ ಒಡಂಬಡಿಕೆಯ ಈ ದೃಷ್ಟಾಂತಗಳು ಆರಾಧನೆಯಲ್ಲಿ ಮತ್ತು ನಾವು ಮಾಡು ಎಲ್ಲದರಲ್ಲಿಯೂ ಒಂದು ಶಕ್ತಿಶಾಲಿ ನಂಬಿಕೆಯ ಅಗತ್ಯವಿರುತ್ತದೆಂಬದನ್ನು ತೋರ್ಪಡಿಸುತ್ತವೆ (ಕೊಲೊಸ್ಸೆ 3:17).

## ದೇವರು ಸಾಕ್ಷಿ ನುಡಿಯುತ್ತಾನೆ (11:4)

11:4ರ ಸಾಕ್ಷಿಯನ್ನು ಹೇಬೆಲನಿಗೆ ಯಾರು ನೀಡಿದರು? ದೇವರು ನೀಡಿದನು! ಯಾವ ನ್ಯಾಯಲಯ ಅಥವಾ ಯಾವ ಪ್ರತಿಜ್ಞೆಯ ಅಡಿಯಲ್ಲಿ ಸಾಕ್ಷಿಯು ಕೊಡಲ್ಪಟ್ಟಿತು? ದೇವರ ನ್ಯಾಯಲಯದಲ್ಲಿ ನಾವು ಬೈಬಲಿನ ಮೇಲೆ ಪ್ರಮಾಣ ಮಾಡುತ್ತೇವೆ. "ದೇವರು ಬೈಬಲಿನ *ಮೇಲೆ* ಪ್ರಮಾಣ ಮಾಡಲಿಲ್ಲ. ಆತನು ಬೈಬಲಿನಲ್ಲಿ ಪ್ರಮಾಣಗೊಂಡ ಸಾಕ್ಷಿಯನ್ನು ಕೊಟ್ಟನು, ಸಾಕ್ಷಿಯಾದನು: 'ನಾನು ಈ ಜನರು ಮಾಡಿದ್ದನ್ನು ಕಂಡೆನು, ಮತ್ತು ಅವರು ಸತ್ಯವಾದ ಮತ್ತು ಸರಿಯಾದ ದಾರಿಯಲ್ಲಿದ್ದರೆಂದು ಸಾಕ್ಷಿ ಹೇಳುತ್ತೇನೆ.'"[96]

## ಹೇಬೆಲನು ಮರಣದಲ್ಲಿ ಸಾರುತ್ತಾನೆ (11:4)

ಮರಣವು ಹೇಬೆಲನ ಕಥೆಯನ್ನು ಅಂತ್ಯಗೊಳಿಸಲಿಲ್ಲ, ಅದು ನಮ್ಮ ಜೀವನನ್ನಾಗಲಿ ಅಥವಾ ಪ್ರಭಾವವನ್ನಾಗಲಿ ಸಹ ಅಂತ್ಯಗೊಳಿಸುವದಿಲ್ಲ. ಈ ವಚನದಲ್ಲಿ ಹೇಬೆಲನು ಈಗಲೂ ಏನು ಹೇಳುತ್ತಾನೆಂಬುದರ ಮೇಲೆ ಒತ್ತು ಕೊಡಲಾಗಿರುತ್ತದೆ! ಅನೇಕ ವ್ಯಕ್ತಿಗಳು ಮರಣದ ಬಳಿಕ ಹೆಚ್ಚು ಘನವಾಗಿ ಪರಿಗಣಿಸಲ್ಪಡುತ್ತಾರೆ. ನಾನು ಜನರನ್ನು ಅವರ ಮರಣದ ಬಳಿಕ ಸನ್ಮಾನ ಮಾಡುವದನ್ನು ಕಲಿತುಕೊಂಡಿದ್ದೇನೆ.

ನಮ್ಮ ಕೆಲಸಗಳು ನಮ್ಮ ಹಿಂದೆ ಬರುತ್ತವೆ (ಪ್ರಕಟನೆ 14:13), ಮತ್ತು ನಾವು ನಮ್ಮ ಜೀವಿತಗಳ ವೇಳೆಯಲ್ಲಿ ಸಾರಿದ್ದಕ್ಕಿಂತಲೂ ಹೆಚ್ಚು ಶಬ್ದದೊಂದಿಗೆ ಅವುಗಳು ಸಾರುವವು. ಹೇಬೆಲನನ ರಕ್ತವು ಭೂಮಿಯಿಂದ ಕೂಗುತ್ತದೆ (ಆದಿಕಾಂಡ 4:10). ಇದು ಅತ್ಯಂಥ ಕಾವ್ಯಾತ್ಮಕವಾದ ಭಾಷೆಯಾಗಿರಬಹುದಾದರೂ, ದೇವರು ಕ್ರಮೇಣದಲ್ಲಿ ಈಗಲೂ ನೀತಿವಂತನ ನ್ಯಾಯವನ್ನು ಸ್ಥಾಪಿಸುವನು. ಹೇಬೆಲನ ರಕ್ತವು ದೊಡ್ಡ ಅರ್ಥವನ್ನು ಹೊಂದಿದೆ, ಆದರೆ ಯೇಸುವಿನ ರಕ್ತವು ಹೇಬೆಲನ ರಕ್ತಕ್ಕಿಂತಲೂ ಉತ್ತಮವಾದದ್ದನ್ನು ಮಾತಾಡುತ್ತದೆ (ಇಬ್ರಿಯ 12:24). ಹೇಬೆಲನನ್ನು ಯೇಸುವಿನ ಒಂದು *ಛಾಯೆ* ಎಂಬದಾಗಿ ಕಾಣಬಹುದು. ಆತನ

ರಕ್ತವು ನ್ಯಾಯಕ್ಕಾಗಿ ಕೂಗುತ್ತದೆ; ಆದರೆ ಯೇಸುವಿನ ರಕ್ತವು ಕರುಣೆಗಾಗಿ, ಕ್ಷಮಾಪಣೆ, ಮತ್ತು ಮಾನವ ಪ್ರತೀಕಾರ ಅಂತ್ಯಕ್ಕಾಗಿ ಕೂಗುತ್ತದೆ (ರೋಮಾ 12:17-21).

## ಮರಣಿಸಿದ ಮನುಷ್ಯನು (11:5)

ಹನೋಕನು "ದೇವರಿಗೆ ಮೆಚ್ಚಿಕೆಯಾದವನಾಗಿದ್ದನು" ಎಂಬ ಕಾರಣಕ್ಕೆ ನೀತಿವಂತನೆಂದು ನಾವು ಊಹಿಸಿಕೊಳ್ಳಬಹುದು (ವ. 5). ಹಳೆಯ ಒಡಂಬಡಿಕೆಯಲ್ಲಿ ಮರಣಿಸದೆ ಜೀವಿಸಿದವರು ಕೇವಲ ಇಬ್ಬರು ಮಾತ್ರವೇ: ಹನೋಕ ಮತ್ತು ಎಲೀಯ. ಮರಣದ ಬಾಗಿಲನ ಮೂಲಕ ಹಾಯ್ದು ಹೋಗದೆಯೇ ನಮ್ಮ ತಂದೆಯನ್ನು ಸಂಧಿಸುವದು ಎಂಥ ಒಂದು ಸನ್ಮಾನವಾಗಿರುತ್ತದೆ! ನಮ್ಮಲ್ಲಿ ಅನೇಕರು ಮರಣಕ್ಕೆ ಹೆದರುತ್ತೇವೆ, ಆದರೆ ನಾವು ಅಂಧಕಾರದ ಕಣಿವೆಗಳನ್ನು ದಾಟಬೇಕಾದರೂ ದೇವರ ಸಂಗಡ ಇರುವದಕ್ಕೆ ಬಯಸುತ್ತೇವೆ. ಈ ಇಬ್ಬರು ವ್ಯಕ್ತಿಗಳಿಗೆ ಅಂಥ ಸನ್ಮಾನವನ್ನು ಅನುಗ್ರಹಿಸುವ ಮೂಲಕ ಎಂತಹ ಅದ್ಭುತವಾದ ಪ್ರೀತಿಯನ್ನು ತೋರ್ಪಡಿಸಿದ್ದಾನೆ!

## ನೋಹನು ಬೇರೆ ರೀತಿಯಲ್ಲಿ ನಡೆದುಕೊಂಡಿದ್ದರೆ ಏನಾಗುತ್ತಿತ್ತು? (11:7)

ನೋಹನು ಹೀಗೆ ಹೇಳಿದನೆಂದು ಊಹಿಸಿಕೊಳ್ಳಿರಿ, "ಕರ್ತನೇ, ನಾನು ನಿನ್ನ ಸಂಗಡ ಹೊಂದಿರುವ ವೈಯಕ್ತಿಕ ಸಂಬಂಧದ ಕಾರಣದಿಂದ ನೀನು ನನ್ನನ್ನು ರಕ್ಷಿಸುವಿಯೆಂದು ನಾನು ನಿನ್ನಲ್ಲಿ ಭರವಸವಿಡುತ್ತೇನೆ, ಆದರೆ ನಾನು ನಾವೆಯೊಂದನ್ನು ಕಟ್ಟುವದಕ್ಕಾಗಿ ಅಷ್ಟೊಂದು ದೀರ್ಘಕಾಲ ನಾನು ಕೆಲಸ ಮಾಡುವದಕ್ಕಾಗುವದಿಲ್ಲ." ಆತನು ತನ್ನನ್ನು ಮತ್ತು ತನ್ನ ಕುಟುಂಬವನ್ನು ಪ್ರಳಯದಿಂದ ರಕ್ಷಿಸಿಕೊಂಡಿರುತ್ತಿದ್ದನೋ? ಖಂಡಿತವಾಗಿಯೂ ಇಲ್ಲ. ಮನ್ನಣೆ ಹೊಂದಬೇಕಾದರೆ, ನಂಬಿಕೆಯು ಪ್ರೀತಿಯಲ್ಲಿ ಕೆಲಸ ಮಾಡತಕ್ಕದ್ದು (ಗಲಾತ್ಯ 5:6). ಒಬ್ಬನ ಆರಂಭಿಕ ನಂಬಿಕೆಗೆ ಭಯವು ಸ್ಫೂರ್ತಿಯಾಗಿರಬಲ್ಲದು, ಆದರೆ ಅದು ಮುಂದೆ ಒಂದು ಪರಿಪಕ್ವವುಳ್ಳ ನಂಬಿಕೆಯಾಗಿ ಬೆಳೆಯಬಲ್ಲದು. ಪೌಲನಿಗೆ ಬರಲಿರುವ ನ್ಯಾಯತೀರ್ಪಿನ ಜ್ಞಾನದ ಮೂಲಕವಾಗಿ "ಕರ್ತನ ಭಯವು" ಅರಿತಿದ್ದರಿಂದ ಮನುಷ್ಯನ್ನು ಒಡಂಬಡಿಸಿದನು (2 ಕೊರಿಂಥ 5:10, 11). ಆತನು ಫೇಲಿಕ್ಸನ ವಿಷಯದಲ್ಲಿ ಮಾಡಿದಂತೆಯೇ, ತನ್ನ ಶ್ರೋತೃಗಳಲ್ಲಿ ಕರ್ತನ ಭಯವನ್ನು ಉಂಟು ಮಾಡುವದಕ್ಕೆ ಅಪೇಕ್ಷಿಸಿದನೆಂಬುದು ಆತನ ತಾತ್ಪರ್ಯವಾಗಿರಬೇಕು (ಅಪೊಸ್ತಲರ ಕೃತ್ಯಗಳು 24:25).

ನೋಹನ ನಂಬಿಕೆಯು ದೀಕ್ಷಾಸ್ನಾನದಲ್ಲಿ ನಾವು ತೋರುವ ವಿಧೇಯೆಗೆ ಒಂದು ಸಂಕೇತವಾಗಿದೆ (1 ಪೇತ್ರ 3:20, 21). ನಂಬಿಕೆಯ ಮೂಲಕ ಆತನು ಅಬ್ರಹಾಮನಂತಹ ನೀತಿಯನ್ನು ಸಂಪಾದಿಸಿಕೊಂಡನು (ಆದಿಕಾಂಡ 15:6). ನೋಹನು ಅಕ್ಷರಶಃ "ನಂಬಿಕೆಯಿಂದ ಬದುಕಿದನು"; ಅದನ್ನು ದಾಟಿ, ಆತನು "ನೀತಿವಂತನು" ಎಂದು ಕರೆಯಲ್ಪಟ್ಟನು. ವಾಸ್ತವದಲ್ಲಿ, ಅತ್ಯಂಥ ಘನವಾದ ಮೂರು ಶ್ಲಾಘನೆಗಳನ್ನು ಪಡೆದನು: ಆದಿಕಾಂಡ 6:9 ಹೀಗೆ ಹೇಳುತ್ತದೆ, "ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು."

## ನೋಹನು ನಂಬಿಕೆಯಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳುವವನಾಗಿದ್ದನೋ? (11:7)

"ನೀರಿನ ಒಂದು ದೊಡ್ಡ ಮೂಲದಿಂದ ದೂರವಾಗಿ ಅಂತಹ ಬೃಹತ್ ನಾವೆಯೊಂದನ್ನು ನಿರ್ಮಿಸುವದು ಎಷ್ಟು ಮೂರ್ಖತನ!" ನೋಹನು ಸಮುದಾಯದಲ್ಲಿ ಹಾಸ್ಯದ ವಸ್ತು ಆಗಿರುವ ಸಾಧ್ಯತೆಯಿದೆ. ನಂಬಿಕೆಯ ವ್ಯಕ್ತಿಯೊಂದಿಗೆ ಸಮಾಜವು ಅನೇಕ ಸಾರಿ ಆ ವಿಧದಲ್ಲಿ

ನಡೆದುಕೊಳ್ಳುತ್ತದೆ.

ದೇವರಿಂದ ಒಂದು ಮಾತು ಸರ್ವೋಚ್ಚವಾದ ಅಧಿಕಾರದಿಂದ ಬರುತ್ತದೆಂಬುದನ್ನು ಅರ್ಥಮಾಡಿಕೊಳ್ಳುವವರಿಗೆ ನೋಹನು ಒಂದು ಉದಾಹರಣೆಯಾಗಿದ್ದಾನೆ. ಆತನು ಅದಕ್ಕೆ ಕೂಡಿಸುವದಕ್ಕೆ ಅಥವಾ ತಗ್ಗಿಸುವದಕ್ಕೆ ಧೈರ್ಯಮಾಡಲಿಲ್ಲ. ಶಾಸ್ತ್ರಗಳು ನೋಹನ ವಿಧೇಯತೆಯ ಮೇಲೆ ವಿಶೇಷ ಒತ್ತು ಕೊಡುತ್ತವೆ: "ದೇವರು ಅಪ್ಪಣೆ ಕೊಟ್ಟ ಪ್ರಕಾರವೇ ನೋಹನು ಮಾಡಿದನು" (ಆದಿಕಾಂಡ 6:22).

ನೋಹನು ನಾವೆಯನ್ನು ಮುನ್ನೂರ ಐದು ಮೊಳ ಉದ್ದ ನಿರ್ಮಿಸುವದಕ್ಕೆ ಧೈರ್ಯ ಮಾಡಲಿಲ್ಲ (ನೋಡಿರಿ ಆದಿಕಾಂಡ 6:15). Alabamaದ Montgomeryಯಲ್ಲಿರುವ ಒಂದು ಸೆರೆಮನೆಯಲ್ಲಿ, ನಾನು ನಾವೆ ಹಾಗೂ ಪ್ರಯಳವನ್ನು ಕಲಾತ್ಮಕವಾಗಿ ವರ್ಣಿಸಿದ್ದ ಚಿತ್ರಗಳನ್ನು ಬೈಬಲ್ ವಾಕ್ಯಗಳ ಸಮೇತವಾಗಿ ತೋರಿಸಿದೆನು. ಒಂದು ಹಂತದಲ್ಲಿ ನಾನು ಅಲ್ಲಿನ ವ್ಯಕ್ತಿಗಳನ್ನು ಈ ಪ್ರಶ್ನೆ ಕೇಳಿದೆನು: "ನೋಹನು ಕೇವಲ ಮುನ್ನೂರು ಮೊಳಗಳ ಬದಲಾಗಿ ಮುನ್ನೂರ ಐದು ಮೊಳ ಉದ್ದ ನಿರ್ಮಿಸಿದ್ದರೆ ಏನಾಗುತ್ತಿತ್ತು?" ಒಬ್ಬನು ಮಾತಾಡಿ, "ಅದು ಒಂದು ಬಂಡೆಯಂತೆ ಮುಳುಗಿ ಹೋಗಿರುತ್ತಿತ್ತು!"

ನೋಹನು ನಾವೆಯನ್ನು ನಿರ್ಮಿಸುವದರಲ್ಲಿ ವಿಧೇಯನಾದನು. ಆತನು ನೆಲಕ್ಕೆ ಒಂಧು ಹೆಚ್ಚಿನ ಹಲಗೆಯನ್ನು ಸೇರ್ಪಡೆಗೊಳಿಸಲಿಲ್ಲ. ಆತನು ಕೇವಲ ಹೊರಗೆ ಮಾತ್ರವೇ ರಾಳವನ್ನು (ಮೇಣವನ್ನು) ಹಚ್ಚುವದಕ್ಕೆ ಧೈರ್ಯ ಮಾಡಲಿಲ್ಲ. ದೇವರ ಪ್ರತಿಯೊಂದು ಆಜ್ಞೆಗೂ ಯಥಾಃ ರೀತಿಯೇ ವಿಧೇಯನಾಗುವದರಲ್ಲಿ ಆತನ ನಂಬಿಕೆಯು ತೋರ್ಪಟ್ಟಿತು. ದೇವರು ತನ್ನ ವಾಕ್ಯದಲ್ಲಿ ಕಲಿಸಿರುವದಕ್ಕಿಂತ ಕಡಿಮೆಯಾದದ್ದನ್ನು ನಾವು ಮಾಡುವದಾದರೆ, ಅದು ಅಂಗೀಕಾರರ್ಹ ವಿಧೇಯಯಾಗುವದಿಲ್ಲ. ನಿಜವಾದ ನಂಭಿಕೆಯು ಆಜ್ಞಾಪಿಸಲ್ಪಟ್ಟ ಪ್ರಕಾರವೇ ಸಂಪೂರ್ಣವಾಗಿ ವಿಧೇಯವಾಗುತ್ತದೆ.

ಈ ವಿಧದಲ್ಲಿ ವಿಧೇಯನಾದದ್ದು ನೋಹನನ್ನು ಒಬ್ಬ ನೇಮನಿಷ್ಠೆವಾದಿಯನ್ನಾಗಿ ಮಾಡಿತೋ? ಆತನು ತನ್ನ ನಾವೆಯ ಪ್ರತಿಯೊಂದು ಹಲಗೆಯನ್ನು ಸರಿಹೊಂದಿಸಿ ಜೋಡಿಸುವಾಗೆಲ್ಲಾ ತಾನು ಪ್ರಳಯದಿಂದ ತನ್ನ ರಕ್ಷಣೆಯನ್ನು *ಸಂಪಾದಿಸಿಕೊಳ್ಳುತ್ತಿದ್ದೇನೆ* ಎಂದು ಆತನು ಯೋಚಿಸಿದನೆಂದು ನೀವು ನಂಬುತ್ತೀರಾ? ಕೆಲವರು ದೀಕ್ಷಾಸ್ನಾನದ ಮೂಲಕ ರಕ್ಷಣೆಯನ್ನು ಸಂಪಾದಿಸಿಕೊಳ್ಳುತ್ತಿದ್ದೇವೆ ಎನ್ನುವ ಮಟ್ಟಕ್ಕೆ ದೀಕ್ಷಾಸ್ನಾನವನ್ನು ತಳ್ಳಿಕೊಂಡು ಹೋಗುತ್ತಾರೆಂದು ಹೇಳಿಕೊಳ್ಳುವವರು ಸ್ವತಃ ತೀರ್ಪುಮಾಡುವ ವರಂತಿದ್ದಾರೆ. ದೇವರಿಗೆ ಜಾಗ್ರತೆಯಿಂದ ವಿಧೇಯವಾಗುವದು ಅವಶ್ಯಕವಾಗಿ ನೇಮನಿಷ್ಠೆತನ ಆಗಿರಬೇಕಿಲ್ಲ, ಅದನ್ನು "ಒಂದು ಕಟ್ಟಳೆಗೆ ಕಟ್ಟಳೆಯ ಕಾರಣದಿಂದ ವಿಧೇಯವಾಗುವದು" ಎಂದು ಅರ್ಥನಿರೂಪಣೆ ಮಾಡಹುದು.

ಪ್ರಳಯವು ಬರಲಿದೆ ಎಂಬದಾಗಿ ನೋಹನು ಕೇವಲ ದೇವರ ಮಾತಿನ ಪುರಾವೆಯನ್ನು ಹೊಂದಿದ್ದನು, ಆದರೆ ಅದನ್ನು ನಂಬುವದಕ್ಕೆ ಮತ್ತು ದೇವರು ಹೇಳಿದಂತೆಯೇ ಎಲ್ಲವನ್ನು ಮಾಡುವದಕ್ಕೆ ಅದು ಸಾಕಾಗಿತ್ತು. ನಿಮ್ಮ ವಿಷಯವೇನು? ನೋಹನು ತನ್ನ ಕುಟುಂಬದ ಹೊರತಾಗಿ ಯಾರನ್ನೂ ಪರಿವರ್ತನೆ ಮಾಡಲಿಲ್ಲವಾದ್ದರಿಂದ ಆತನು ತನ್ನ ಸಮುದಾಯವನ್ನು ಸಂಧಿಸುವದರಲ್ಲಿ ವಿಫಲನಾದನೆಂದು ಮೇಲ್ನೋಟಕ್ಕೆ ಕಾಣಿಸುತ್ತದೆ, ಆದರೆ ಆತನು ವಿಫಲತೆಯಾಗಿರಲೇ ಇಲ್ಲ. ಆತನು ಅವರಿಗೆ ಸಾರುವದಕ್ಕೆ ಪ್ರಯತ್ನವನ್ನು ಮಾಡಿದನು (2 ಪೇತ್ರ 2:5). ನಮ್ಮ ಸುತ್ತಲಿರುವ ಜನರು ನಾಶನದಲ್ಲಿಯೇ ಉಳಿಯುವದಕ್ಕೆ ನಿರ್ಧರಿಸಿಕೊಂಡಾಗ್ಯೂ, ನಾವು ದೇವರ ವಾಕ್ಯಕ್ಕೆ ಸತ್ಯವಂತರಾಗಿ ಉಳಿದರೆ ವಿಫಲರಾಗುವದಿಲ್ಲ. "ಪುರುಷರು ಮತ್ತು

ಸ್ತ್ರೀಯರು ಅವರಿಗೆ ನಾವು ಏನು ಹೇಳುತ್ತೇವೆಂಬುದರಿಂದ ಮಾತ್ರವೇ ಪ್ರಭಾವಿಸಲ್ಪಡುವದಿಲ್ಲ, ಆದರೆ ದೇವರು ನಮಗೆ ಏನು ಹೇಳುತ್ತಾನೋ ಅದಕ್ಕೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದರಿಂದ ಪ್ರಭಾವಿಸಲ್ಪಡುತ್ತಾರೆ."[97] ನಾವೆಯ ಬಾಗಲು ಮುಚ್ಚಲ್ಪಟ್ಟು ಮಳೆಯು ಬೀಳಲಾರಂಭಿಸಿದ ನಂತರದಲ್ಲಿ ಅವರಿಗೆ ಪಶ್ಚಾತ್ತಾಪ ಪಡುವದಕ್ಕೆ ಇನ್ನಷ್ಟು ಕಾಲಾವಕಾಶ ಕೊಟ್ಟಿದ್ದರೆ, ನಾವು ಹೀಗೆ ಹೆಚ್ಚಳ ಪಟ್ಟುಕೊಳ್ಳುತ್ತಿದ್ದೆವು, "ನೋಹನು ಎಂಥ ಮಹಾನ್ ಸುವಾರ್ತಿಕನಾಗಿದ್ದನು!" ಹೇಗೂ, ಪಶ್ಚಾತ್ತಾಪ ಪಡುವದಕ್ಕೆ ಇರುವ ದೇವರ ಸಮಯವು ಯಾವಾಗಲೂ ಒಂದು ಅಂತ್ಯವನ್ನು ತಲುಪುತ್ತದೆ, ಮತ್ತು ಆತನು "ಇನ್ನು ಸಮಯವು ಇರುವದಿಲ್ಲ!" ಎಂದು ಹೇಳುವನು. ಈಗಲೇ "ಪ್ರಸನ್ನತೆಯ ಕಾಲ"; ಇದೇ "ರಕ್ಷಣೆಯ ದಿನ" (2 ಕೊರಿಂಥ 6:2).

## ಸಂಕಟಗಳ ಈ ಲೋಕದಲ್ಲಿ ಅಲೆದಾಡುವದು (11:8)

ನಂಬಿಕೆಯ ಪ್ರತಿಯೊಂದು ಪ್ರಯಾಣವು ಒಂದು ಯಾತ್ರೆಯಾಗಿರುತ್ತದೆ. ಕೆಲವರು "ಇಬ್ರಿಯ" ಎಂಬ ಪದದ ಅರ್ಥವು "ದಾಟಿ ಹೋಗು," "ನದಿಯನ್ನು ದಾಟುವದು" ಎಂಬದರಂತೆ ಎಂದು ಯೋಚಿಸುತ್ತಾರೆ. ಅಬ್ರಹಾಮನು ತಿಳಿಯದ ಸ್ಥಳಗಳಿಗೆ ಪ್ರಯಾಣಿಸುವವನಾಗಿ ದೇವರಲ್ಲಿ ತನ್ನ ಭರವಸವನ್ನಿಟ್ಟನು.[98] ಆತನು ಯಾವಾಗಲೂ ವಿಧೇಯತೆಯುಳ್ಳ ನಂಬಿಕೆಯಿಂದ ಮುಂದಕ್ಕೆ ಸಾಗಿದನು (ವ. 8). ಬಹಳಷ್ಟು ಪರದೇಶಸ್ಥರು ಕ್ರಮೇಣದಲ್ಲಿ ತಮ್ಮ ಸ್ವದೇಶಕ್ಕೆ ಹೋಗಲು ಬಯಸುತ್ತಾರೆ, ಆದರೆ ಮೂಲಪಿತೃವು ಬಯಸಲಿಲ್ಲ. ಅದು ಅರಣ್ಯದಲ್ಲಿ ಇಸ್ರಾಯೇಲ್ಯರು ಮಾಡಿದ ಪಾಪವಾಗಿತ್ತು. ಇಸ್ರಾಯೇಲ್ಯರು ತಾವು ಗುಲಾಮರಾಗಿದ್ದ ದೇಶದಲ್ಲಿ ಯಾವಾಗಲೂ ಬಹಿಷ್ಕೃತರತೆ ಇದ್ದಾಗ್ಯೂ, ಅವರು ಆ ದೇಶವನ್ನು ತಮ್ಮ ಸ್ವಂತ ದೇಶವೆಂಬ ಭಾವನೆಯನ್ನು ಬೆಳೆಸಿಕೊಂಡಿದ್ದರು ಮತ್ತು ಅಲ್ಲಿಗೆ ಹಿಂದಿರುಗಲು ಬಯಸಿದ್ದರು. ಅಬ್ರಹಾಮ, ಇಸಾಕ, ಮತ್ತು ಯಾಕೋಬರು ಎಂದಿಗೂ ಆ ರೀತಿಯ ಯೋಚನೆಯನ್ನು ಮಾಡಿರುತ್ತಿರಲಿಲ್ಲ (11:8, 15).

ತಮ್ಮ ಉಳಿದ ದಿನಗಳೆಲ್ಲಾ ಗುಡಾರಗಳಲ್ಲಿಯೇ ವಾಸಿಸಬೇಕೆಂಬ ಭವಿಷ್ಯವನ್ನು ಯೋಚಿಸಿದಾಗ ಸ್ವಂತ ದೇಶವನ್ನು ಬಿಟ್ಟು ಹೋಗುವದು ಅಬ್ರಹಾಮನಿಗೆ ಮತ್ತು ಸಾರಳಿಗೆ ಕಷ್ಟಕರವಾಗಿರಬಹುದು. ಒಂದು ಹೊಸ ದೇಶ ಮತ್ತು ಸಂಸ್ಕೃತಿಯ ಕಡೆಗೆ ಹೊರಟು ಹೋಗುವದು ವಿಶೇಷವಾಗಿ ಸಾರಳಿಗೆ ಹೃದಯ ವೇದನೆಯಾಗಿರಬಲ್ಲದು. ಒಂದು ಸಂತೋಷದ ಮನೆಯನ್ನು ಹೊಂದಿಕೊಳ್ಳುವದಕ್ಕೆ, ಒಬ್ಬ ಹೆಂಡತಿಯು ತನ್ನ ಗಂಡನು ಹೋದಲೆಲ್ಲಾ ಆತನನ್ನು ಹಿಂಬಾಲಿಸುವದಕ್ಕೆ ಮನಸ್ಸುಳ್ಳವಳಾಗಿರತಕ್ಕದ್ದು. ಈ ಪ್ರಕರಣದಲ್ಲಿ, ದೇವರಿಂದ ಒಂದು ನೇರವಾದ ಕರೆ ಬಂದಿತ್ತು; ಅಬ್ರಹಾಮನಿಗೆ ಆ ಕರೆಯನ್ನು ಅನುಸರಿಸುವದನ್ನು ಬಿಟ್ಟು ನಿಜಕ್ಕೂ ಬೇರೆ ಯಾವ ಆಯ್ಕೆಯೂ ಇರಲಿಲ್ಲ. ಅಬ್ರಹಾಮನಿಗೆ ಕಾನಾನಿನಲ್ಲಿ ಸಮಸ್ಯೆಗಳು ಬಂದವು, ಮತ್ತು ಆತನು ಸಮಾಧಿಯ ಸ್ಥಳವನ್ನು ಹೊರತು ಪಡಿಸಿ ಬೇರೆ ಯಾವ ಸ್ವಂತ ಭೂಮಿಯನ್ನೂ ಹೊಂದಿರಲಿಲ್ಲ. ಆತನ ಸಂತತಿಯವರು ಐಗುಪ್ತದೇಶವನ್ನು ಬಿಟ್ಟು ಹೊರಟ ಮೇಲೆ ನಾಲ್ವತ್ತು ವರ್ಷಗಳ ಕಾಲ ಯಾತ್ರಿಗಳಾಗಿದ್ದು ಅಲೆದಾಡಿದರು.

ಮಾನವ ಯೋಚನೆಯ ಪ್ರಕಾರವಾಗಿ, ದೇವರು ಅನೇಕ ಸಾರಿ ತನ್ನ ವಾಗ್ದಾನಗಳನ್ನು ನೆರವೇರಿಸುವದಕ್ಕೆ ದೀರ್ಘಕಾಲವನ್ನು ತೆಗೆದುಕೊಳ್ಳುತ್ತಾನೆ; ಆದರೆ ಆತನು ಯಾವಾಗಲೂ ಅವುಗಳನ್ನು ನೆರವೇರಿಸುತ್ತಾನೆ. ಈ ಲೋಕವು ನಮ್ಮ ಸ್ವಂತ ದೇಶವಲ್ಲ, ಆದ್ದರಿಂದ ನಾವು ಎಲ್ಲಿ ಜೀವಿಸಿದರೂ ಅದರಲ್ಲೇನು ವ್ಯತ್ಯಾಸವನ್ನುಂಟು? ನಾವು ಯಾವಾಗಲೂ ಇಲ್ಲಿ

ಪರದೇಶಿಗಳಾಗಿದ್ದೇವೆ (ಫಿಲಿಪ್ಪಿ 3:20). 8ನೇ ವಚನದಿಂದ ಕಲಿಯಬೇಕಾದ ಪ್ರಾಮುಖ್ಯವಾದ ಸಂಗತಿಯೆಂದರೆ ಅಬ್ರಹಾಮನು ಅದೆಲ್ಲದರ ಮೂಲಕವೂ ದೇವರಲ್ಲಿ ಭರವಸವಿಟ್ಟನು. ಅದೇ ರೀತಿ ನಾವು ಸಹ ಭರವಸವಿಸಬೇಕು. ಆತನು ಕಾನಾನಿಗಿಂತ ಎಷ್ಟೋ ಉತ್ತಮವಾದ ಪಟ್ಟಣವೊಂದನ್ನು ಎದುರುನೋಡುತ್ತಿದ್ದಾನೆಂಬುದನ್ನು ಬಲ್ಲವನಾಗಿದ್ದನು (ವಚನಗಳು 10, 16).

ನಾವು ಎಲ್ಲೇ ಇದ್ದರೂ ಒಂದು ದಿನ ನಿಂತುಕೊಂಡು ಸಂಶಯವಿಲ್ಲದೆ ಹೀಗೆ ದೃಢವಿಶ್ವಾಸದಿಂದ ಹೇಳುವಂಥಹ ಹಂತವನ್ನು ತಲುಪೋಣ, "ನಾನು ದೇವರಲ್ಲಿ ನಂಬುತ್ತೇನೆ. ನಾನು ಆತನ ವಾಗ್ದಾನಗಳಲ್ಲಿ ವಿಶ್ವಾಸವಿಡುತ್ತೇನೆ. ನಾನು ಆತನನ್ನು ಎಂದಿಗೂ ತೊರೆಯುವದಿಲ್ಲ ಆದರೆ ಅಂತ್ಯದ ವರೆಗೂ ಆತನ ಚಿತ್ತವನ್ನು ಅನುಸರಿಸುವೆನು."

## ನಂಬುವದಕ್ಕಿಂತಲೂ ಸಂಶಯಿಸುವದು ಸುಲಭವಾಗಿರುತ್ತದೆ (11:11)

ತಾನು ಒಬ್ಬ ಮಗನನ್ನು ಪಡೆಯಲಿದ್ದಾಳೆಂಬುದನ್ನು ಮೊದಲ ಬಾರಿಗೆ ದೇವದೂತನಿಂದ ಕೇಳಿಸಿಕೊಂಡಾಗ ನಗುವದು ಸಾರಳಿಗೆ ಸಹಜವಾಗಿತ್ತು. ಕಾಲವು ಗತಿಸಿದಂತೆ, ಹೇಗೂ, ಆಕೆಯ ಸಂಶಯವು ನಂಬಿಕೆಯಾಗಿ ಮಾರ್ಪಟ್ಟಿತು. ಇಸಾಕನ ಜನನವು ಹೆಚ್ಚುಕಡಿಮೆ ಒಂದು ಪುನರುತ್ಥಾನದಂತೆಯೇ ಆಗಿತ್ತು, ಯಾಕೆಂದರೆ ಆತನು ಆಕೆಯ ಗರ್ಭದ "ಮೃತ ಸ್ಥಿತಿ"ಯಿಂದ ಬಂದನು. ಎಲ್ಲಾ ಕಾರ್ಯಗಳಲ್ಲಿ, ವಿಷೇಶವಾಗಿ ಆತ್ಮೀಕವಾದವುಗಳಲ್ಲಿ, ನಂಬುವದಕ್ಕಿಂತ ಸಂಶಯಿಸುವದು ಸುಲಭವಾಗಿರುತ್ತದೆ. ಮಗುವು ಸಾರಳ ಗರ್ಭದಲ್ಲಿ ಬೆಳೆಯುತ್ತಿರುವ ವೇಳೆ, ಆಕೆಯು ಇನ್ನು ಸಂಶಯಿಸಲಿಲ್ಲ.

ಸಂಶಯಿಸುವವನು ನಂಬಿಕೆಯಿಡುವದಕ್ಕಿರುವ ಎಲ್ಲಾ ಪುರಾವೆಗಳಿಗೆ ತಕ್ಕಷ್ಟು ಗಮನವನ್ನು ಕೊಡುವದಕ್ಕೆ ವಿಫಲನಾಗುತ್ತಾನೆ. ಬಹುಪಾಲು ಜನರು ಅತಿಯಾಗಿರುವ ಸಂಶಯಗರರ ಸಂಖ್ಯೆಯಲ್ಲಿ ಏಕಾಂಗಿಯಾಗಿ ನಿಲ್ಲುವದಕ್ಕೆ ಸಾಧ್ಯವಿಲ್ಲ; ಆದ್ದರಿಂದ, ಕನಿಷ್ಠ ಹೊರಗಿನ ತೋರಿಕೆಯಲ್ಲಿ, ಅವರು ಬಹುಸಂಖ್ಯಾತರೊಂದಿಗೆ ಹೋಗುವದಕ್ಕೆ ತೀರ್ಮಾನಿಸಿಕೊಳ್ಳುತ್ತಾರೆ.

"ಕಡಿಮೆ ವಿರೋಧವಿರುವ ದಾರಿಯನ್ನು ಅನುಸರಿಸುವದು ನದಿಗಳನ್ನು ಮಹಾನ್ ಆಗಿಸುತ್ತದೆ ಮತ್ತು ಮನುಷ್ಯರನ್ನು ನಿರ್ಗತಿಕರಾಗಿಸುತ್ತದೆ." ಈ ಕಾರಣದಿಂದಲೇ ನೋಹ, ಅಬ್ರಹಾಮ, ಯೋಸೇಫ, ಮತ್ತು ಮೋಶೆಯ ಇವರ ನಂಬಿಕೆಯು ಶಾಸ್ತ್ರಗಳಲ್ಲಿ ಮತ್ತು ದೇವರ ಮನಸ್ಸಿನಲ್ಲಿ ಗಮನಾರ್ಹವಾಗಿ ನಿಲ್ಲುತ್ತದೆ. ನಾವು ಧೈರ್ಯವುಳ್ಳ ನಿರ್ಣಯವನ್ನು ಮಾಡಿಕೊಳ್ಳಲು, ನಮ್ಮ ಹೃದಯಗಳಲ್ಲಿ ಯಾವದು ಸರಿ ಎಂದು ದೃಢಪಡಿಸಿಕೊಳ್ಳಲು ಮತ್ತು ಇಕ್ಕಟ್ಟಾದ ದಾರಿಯನ್ನು ಅನುಸರಿಸುವದಕ್ಕೆ ಮನಸ್ಸುಳ್ಳವರಾಗಿರಬೇಕು. ಬಹುಸಂಖ್ಯಾತರು ನಾಶನಕ್ಕೆ ನಡಿಸುವ ಅಗಲವಾದ ದಾರಿಯಲ್ಲಿ ಸಾಗುತ್ತಾರೆ, ಅದೇ ವೇಳೆಯಲ್ಲಿ ಜೀವಕ್ಕೆ ನಡಿಸುವ ಇಕ್ಕಟ್ಟಾದ ದಾರಿಯನ್ನು ಕೆಲವೇ ಕೆಲವರು ಆರಿಸಿಕೊಳ್ಳುತ್ತಾರೆ (ಮತ್ತಾಯ 7:13, 14).

## ಪ್ರವಾಸಿಗಳು ಮತ್ತು ಸೆರೆಮನೆಗಳು (11:13)

ಒಬ್ಬ ಪರದೇಶದವನಾಗಿರುವದೆಂದರೆ ಅನೇಕ ಸಾರಿ ಸಮಾಜದಿಂದ ಬೇರ್ಪಡಿಸಲ್ಪಡುವದಾಗಿರುತ್ತದೆ. ಕ್ರೈಸ್ತರಾಗಿ, ನಾವು ಹಾಗೆಯೇ ಇರುವೆವು (ನೋಡಿರಿ 1 ಪೇತ್ರ 1:1; 2:11) ಮತ್ತು ಲೋಕದ ಹಗೆತನವನ್ನು ಅನುಭವಿಸುತ್ತೇವೆ. ಅದನ್ನು ಎದುರು ನೋಡಿರಿ! ಆ ಯೋಚನೆಯನ್ನು ರೂಢಿ ಮಾಡಿಕೊಳ್ಳಿರಿ. ಏಕೆ? ಏಕೆಂದರೆ ಲೋಕಕ್ಕೂ ನಮಗೂ ಯಾವದೇ ಏಕಾಭಿಪ್ರಾಯವು ಇರುವದೇ ಇಲ್ಲ, ಅದಲ್ಲಿರುವ ಅಶ್ಲೀಲತೆ, ದೇವರನ್ನು ಶಪಿಸುವಿಕೆ, ಹೊಲೆ

ಮಾಸುವಿಕೆ, ಮತ್ತು ದೇವರನ್ನು ಹಾಗೂ ಆತನ ಚಿತ್ತವನ್ನು ದೂಷಣೆ ಮಾಡುವಿಕೆಗಳು ಲೋಕದಲ್ಲಿರುತ್ತವೆ. ನಾವು ಲೋಕದೊಳಗಿಂದ ಹೊರಕ್ಕೆ ಕರೆಯಲ್ಪಟ್ಟಿದ್ದೇವೆ ಮತ್ತು ಆ ವಾಸ್ತವಾಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಅನುದಿನವೂ ಜೀವಿಸಬೇಕು (ಯೋಹಾನ 15:19; 17:14, 16). ಪ್ರಾಚೀನ ಮೂಲಪಿತೃಗಳು ಅತ್ತಿತ್ತ ಅಲೆದಾಡುತ್ತಿದ್ದರು. ಅವರ ಬಾವಿಗಳಲ್ಲಿ ವೈರಿಗಳು ತುಂಬಿಸಿಕೊಳ್ಳುತ್ತಿದ್ದರು, ಅವರಿಗೆ ಸ್ವಂತವಾದ ಸ್ಥಳವೆಂಬದು ನಿಜಕ್ಕೂ ಇರಲೇ ಇಲ್ಲ. ಒಬ್ಬ ದೇಶೀಯ ನೆಲದಲ್ಲಿ ಹೊರಗಿನವನೆಂಬ ಭಾವನೆಯನ್ನು ಹೊಂದಿರುವದು ಬಹುಪಾಲು ಜನರಿಗೆ ಕಳವಳಕಾರಿಯಾಗಿರುತ್ತದೆ. ವಾಗ್ದಾನದ ದೇಶದಲ್ಲಿ ಸಹ, ಮೂಲಪಿತೃಗಳು ತಮ್ಮ ವಿಷಯದಲ್ಲಿ "ಪರದೇಶದವನೂ ಪ್ರವಾಸಿಯೂ" ಆಗಿದ್ದೇನೆಂದು ಹೇಳಿಕೊಂಡರು (ಆದಿಕಾಂಡ 23:4; 28:4; 47:9). ನಾವು ಎಷ್ಟೋ ಹೆಚ್ಚಾಗಿ ಆ ವಿಧದಲ್ಲಿ ನಮ್ಮ ವಿಷಯವಾಗಿ ಯೋಚಿಸಿಕೊಳ್ಳಬೇಕು ಮತ್ತು ಮಾತಾಡಿಕೊಳ್ಳಬೇಕಲ್ಲವೇ! ಅದು ನಮಗೆ ಹೆಚ್ಚಾಗಿ "ಪರಲೋಕ ಸಾಗುವ"ದರ ಮೇಲೆ ಮುಖ್ಯ ಗಮನವನ್ನು ಇಡುವಂತೆ ಮಾಡುವದು.

ಒಂದು ದೇಶವಿಲ್ಲದ ವ್ಯಕ್ತಿಯಾಗಿರುವದನ್ನು ಬಹುಪಾಲು ಜನರು ಒಂದು ದುರಂಥವೆಂದು ಪರಿಗಣಿಸುತ್ತಾರೆ. ಪಾಸ್‌ಪೋರ್ಟ್‌ಗಳು, ವಿಸಾಗಳು, ಮತ್ತು ಪ್ರಯಾಣ, ವಲಸೆ ಹೋಗುವಿಕೆ, ಮತ್ತು ವಲಸೆ ಬರುವಿಕೆಗೆ ಸಂಬಂಧಿಸಿದ ಇತರ ಎಲ್ಲಾ ಪ್ರಕ್ರಿಯೆಗಳನ್ನು ಎಲ್ಲಾದರೂ ಒಂದು ಕಡೆಯಲ್ಲಿ ಪೌರತ್ವವಿಲ್ಲದೆ ಪೂರ್ತಿಗೊಳಿಸುವದಕ್ಕೆ ಅಸಾಧ್ಯವಾಗಿರುತ್ತದೆ.

ಕ್ರೈಸ್ತನು ಅಂತಹದ್ದೇ ಪರಿಸ್ಥಿಯೊಂದನ್ನು ಎದುರಿಸುತ್ತಾನೆ. ಆದಿ ದೇವಜನರ ಮನೋಭಾವವು ಎರಡನೆಯ ಅಥವಾ ಮೂರನೆಯ ಶತಮಾನದ ದಾಖಲೆಯೊಂದರಲ್ಲಿ ಉತ್ತಮವಾಗಿ ಬಣ್ಣಿಸಲ್ಪಟ್ಟಿದೆ: "ಅವರು ತಮ್ಮ ಸ್ವಂತ ದೇಶಗಳಲ್ಲಿ ವಾಸಿಸುತ್ತಾರೆ, ಆದರೆ ಕೇವಲ ಪ್ರವಾಸಿಗಳಾಗಿ ಮಾತ್ರವೇ; ಅವರು ಪೌರತ್ವವುಳ್ಳವರಾಗಿ ಎಲ್ಲವುಗಳಲ್ಲಿಯೂ ಪಾಲು ಹೊಂದಿರುತ್ತಾರೆ, ಮತ್ತು ಅವರು ಪರದೇಶದವರಂತೆ ಎಲ್ಲಾ ಕಷ್ಟಗಳನ್ನು ಅನುಭವಿಸುತ್ತಾರೆ. ಪ್ರತಿಯೊಂದು ಪರದೇಶವು ಅವರಿಗೆ ಒಂದು ಪಿತೃಭೂಮಿ, ಮತ್ತು ಪ್ರತಿ ಪಿತೃಭೂಮಿಯು ಪರದೇಶವಾಗಿದೆ."[99]

ಈ ವಿರೋಧಾಭಾಸದ ಹೇಳಿಕೆಯು ಒಬ್ಬ ದೇವಮನುಷ್ಯನ ಮನೋಭಾವ ವಾಗಿರತಕ್ಕದ್ದು. ಪೌಲನು ಒಬ್ಬ ರೋಮನ್ ಪೌರತ್ವವುಳ್ಳವನಾಗಿ ತನ್ನ ಪ್ರತಿವಾದವನ್ನು ಮಾಡಿಕೊಳ್ಳಲು ಕೈಸರನಿಗೆ ಮನವಿಯನ್ನು ಸಲ್ಲಿಸಲು ಶಕ್ತನಾಗಿದ್ದನು (ಅಪೊಸ್ತಲರ ಕೃತ್ಯಗಳು 25:10), ಆದರೆ ರಾಷ್ಟ್ರೀಯ ಪರಿಷತ್ತಿನ ಯಾವದೇ ಮತದ ಮೇಲೆ ಪರಿಣಾಮ ಬೀರುವದಕ್ಕೆ ಏನನ್ನು ಮಾಡಲಿಲ್ಲ. ಆತನು ತನ್ನ ಪರಿವರ್ತನೆಗೆ ಮುಂಚೆ "ಪಾಷಂಡಮತವನ್ನು" ನಿರ್ಮೂಲನ ಮಾಡುವದಕ್ಕೆ ಅಂಥ ವಿಧವಾದ ರಾಜಕೀಯ ಪ್ರಯತ್ನದಲ್ಲಿ ಸಕ್ರಿಯನಾಗಿದ್ದನು. ಕ್ರೈಸ್ತರ "ಪಂಥ"ವು, ಆತನ ವಿವೇಚನೆಯ ಪ್ರಕಾರ, ಕಾನೂನು ಮತ್ತು ಸುವ್ಯವಸ್ಥೆಗೆ ಎಷ್ಟೊಂದು ತೊಡಕಾಗಿತ್ತೆಂದರೆ, ಆತನು ಎಲ್ಲೆಲ್ಲಿ ಯೆಹೂದಿ ದೇವಜನರು ಸಿಕ್ಕುತ್ತಾರೋ ಅಲ್ಲೆಲ್ಲಾ ಕ್ರೈಸ್ತರನ್ನು ಬಂಧಿಸುವದಕ್ಕೆ ಕಾನೂನಾತ್ಮಕ ಅಧಿಕಾರವನ್ನು ಪಡೆದುಕೊಂಡನು. ಆತನು ಅವರನ್ನು ಘೋರವಾಗಿ ದಂಡಿಸಿನು, ಮರಣವನ್ನುಂಟು ಮಾಡುವ ಮಟ್ಟಕ್ಕೂ ಹೋದನು (ಅಪೊಸ್ತಲರ ಕೃತ್ಯಗಳು 22:4; 26:10).

## ಇವರೆಲ್ಲರೂ ನಂಬಿಕೆಯಲ್ಲಿ ಮರಣಿಸಿದರು (11:13)

ಕರ್ತನಲ್ಲಿ ಮರಣಿಸುವವರು ಅತ್ಯಂಥ ಧನ್ಯರು (ಪ್ರಕಟನೆ 14:13). ಮರಣವು ಒಂದು ಅಂತಿಮತ್ವವನ್ನು ಹೊಂದಿದ್ದು ಅದು ನಮ್ಮಲ್ಲಿ ಬಹುತೇಕರಿಗೆ ಭಯಂಕರವಾಗಿರುತ್ತದೆ; ನಾವು

ನಮ್ಮ ಪ್ರಿಯರನ್ನು ಬಿಟ್ಟು ಹೋಗುವದಕ್ಕೆ, ಬಹುಶಃ ಶಾಶ್ವತವಾಗಿ ಬಿಟ್ಟು ಹೋಗುವದನ್ನು ನೆನಸಿ ಹೆದರಿ ನಡುಗುತ್ತೇವೆ, ಮತ್ತು ಮರಣಾನಂತರ ಏನಾಗಬಹುದೋ ಎಂದು ಭಯ ಪಡುತ್ತೇವೆ. ನಾವು ಒಂದುಗೂಡಿಸಲ್ಪಟ್ಟಿರುವ ಶಾರೀರಿಕ ದೇಹಗಳು ಬೇರ್ಪಡುವವು ಎಂದು ಬಲ್ಲೆವು; ಮತ್ತು ನಾವು ಆತ್ಮೀಕ ದೇಹಗಳಲ್ಲಿ ಜೀವಿಸುವೆವೆಂದು ಬೈಬಲ್ ಹೇಳುತ್ತದೆಂಬುದು ನಮಗೆ ಗೊತ್ತಿದೆ. ನಮ್ಮನ್ನು ನಿಜವಾದ ವಿಜಯಶಾಲಿಗಳನ್ನಾಗಿ ಮಾಡುವದಕ್ಕೆ ನಮ್ಮ ನಂಬಿಕೆಯು ಮರಣದ ಮೇಲೆ ವಿಜಯ ಹೊಂದುವದು. "ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ!" ಇದು ನಮಗೋಸ್ಕರ ಲೋಕವನ್ನು ಜಯಿಸುವದಾಗಿದೆ (1 ಯೋಹಾನ 5:4). "ಜಯಿಸು" ಎಂಬ ಪದವು νῖκος (*nikos*) ಎಂಬದರಿಂದ ಬಂದದ್ದು, ಅದರಿಂದಲೇ "Nike" ಎಂಬ ವ್ಯಾಪಾರ ಮುದ್ರೆಯ ಹೆಸರು ಬಂದಿರುತ್ತದೆ. ಜೀವನದ ಸಂಕಷ್ಟಗಳನ್ನು ನಂಬಿಕೆಯಿಂದ ಜಯಿಸಲಾಗುತ್ತದೆ. ಮರಣದಲ್ಲಿ ನಾವು ಅಂತಿಮವಾಗಿ ಯಾವದು ಅತ್ಯಂಥ ಅದ್ಭುತವಾದದ್ದೋ ಅದನ್ನು ನೋಡುವೆವು; ಆಗ ಈ ಕಾರ್ಯಗಳು ನಂಬಿಕೆಯು ನಮಗೆ ಸ್ಪಷ್ಟಗೊಳಿಸಿದ್ದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಗೋಚರಿಸುವವು.

## ಸ್ವದೇಶಕ್ಕೆ ಪ್ರಯಾಣಿಸುವ ಪ್ರಲೋಭನೆ (11:13-16)

ಹೆಚ್ಚುಕಡಿಮೆ ಪ್ರತಿಯೊಬ್ಬರೂ ಕಾಲಕ್ರಮೇಣದಲ್ಲಿ ಅತ್ತಿತ್ತ ಸುತ್ತಾಡುವದರಲ್ಲಿ ಬಳಲಿದವರಾಗಿ ತಾನು ತನ್ನ ಉಳಿದ ದಿನವನ್ನೆಲ್ಲಾ ಕಳೆಯುವದಕ್ಕೆ ಒಂದು ಸ್ವಂತ ಸ್ಥಳವನ್ನು ಹುಡುಕುತ್ತಾನೆ. ನಾವೆಲ್ಲರೂ ಒಂದು "ಪಿತೃಭೂಮಿ"ಯನ್ನು ಹುಡುಕಬೇಕು. ಉದ್ಯೋಗ ಮತ್ತು ಅದೃಷ್ಟವನ್ನು ಹುಡುಕುತ್ತಾ ಬೃಹತ್ ಪಟ್ಟಣಗಳಿಗೆ ವಲಸೆ ಹೋಗುವ ಅನೇಕರು ಕ್ರಮೇಣದಲ್ಲಿ ನಿವೃತ್ತಿ ಹೊಂದಿ ತಮ್ಮ ಸ್ವಂತ ಊರುಗಳಿಗೆ ಅಥವಾ ಸ್ವದೇಶಗಳಿಗೆ ಹಿಂದಿರುಗುತ್ತಾರೆ. ಮೂಲಪಿತೃಗಳು ಭೂಲೋಕದ ಮನೆಯನ್ನೇನಾದರೂ ಅಪೇಕ್ಷೆ ಪಟ್ಟಿದ್ದಲ್ಲಿ, ಅವರು ನಿಶ್ಚಯವಾಗಿಯೂ ಊರ್ ದೇಶಕ್ಕೆ ಹಿಂದಿರುಗಿರುತ್ತಿದ್ದರು ಅಥವಾ ಅಬ್ರಹಾಮನು ಸ್ವಲ್ಪ ಕಾಲ ಹೋಗಿದ್ದ ರೀತಿಯಲ್ಲಿಯೇ, ಅವರು ಐಗುಪ್ತದೇಶಕ್ಕೆ ಸಹ ಹೋಗಿರುತ್ತಿದ್ದರು. ಹೇಗೂ, ದೇವರ ವಾಗ್ದಾನಗಳು ಆತನ ಅಗತ್ಯತೆಗಳನ್ನು ಅನುಸರಿಸುವದರ ಮೇಲೆ ಸಂಭವನೀಯವಾಗಿದ್ದವು, ಆದ್ದರಿಂದ ಅವರು ಹಿಂದಿರುಗಿ ಹೋಗುವ ಯಾವ ಇಂಗಿತವನ್ನೂ ಹೊಂದಿರಲಿಲ್ಲ.

ಎಷ್ಟು ಸಾರಿ ನಾವು ನಮ್ಮ ಸಂತೋಷದ ಬಾಲ್ಯ ದಿನಗಳ ಬಗ್ಗೆ ಮಾತಾಡುತ್ತೇವೆ ಮತ್ತು ಸ್ವಂತ ಮನೆಗೆ ಹಿಂದಿರುಗಲು ಬಯಸುತ್ತೇವೆ! ಖಂಡಿತವಾಗಿಯೂ, ಎಂದಿಗೂ ಹಿಂದಿರುಗುವದಕ್ಕಾಗುವದಿಲ್ಲ. ಒಮ್ಮೆ ನಾವು ಬಿಟ್ಟು ಬಂದಿರುವದಾದರೆ, ಅದು ಇನ್ನೆಂದಿಗೂ ಮೊದಲಿನಂತಿರುವದಿಲ್ಲ. ಮೂಲಪಿತೃಗಳು ತಮ್ಮ ಭೂಲೋಕದ ಸ್ವಂತ ನಿವಾಸಗಳ ಬಗ್ಗೆ ಅಷ್ಟಾಗಿ ಗಮನವನ್ನು ನೀಡಿಲಿಲ್ಲ, ವಿಶೇಷವಾಗಿ ತಾವು ಬಿಟ್ಟು ಬಂದಿದ್ದ ದೇಶದ ಬಗ್ಗೆ ಗಮನ ಹರಿಸಲಿಲ್ಲ (ವ. 15). ಅವರ ನಿವಾಸ – ಮತ್ತು ನಮ್ಮ ನಿವಾಸ – ಪರಲೋಕದಲ್ಲಿ ಕಾಯುತ್ತಿದೆ. ಪರಲೋಕವನ್ನು ತನ್ನ ಲಕ್ಷ್ಯವನ್ನಾಗಿ ಮಾಡಿಕೊಳ್ಳುವವರು "ಅತ್ಯಂಥ ಪರಲೋಕ ಮನೋಭಾವವುಳ್ಳವರಾಗಿದ್ದು ಯಾವದೇ ಭೂಲೋಕದಲ್ಲಿ ಯಾವದೇ ಒಳ್ಳೇದಕ್ಕಾಗುವಂಥವರು" ಆಗಿರುವದಿಲ್ಲ; ಬದಲಾಗಿ, ಅವರು ಭೂಮಿಯಲ್ಲಿ ಒಳ್ಳೇದನ್ನು ಮಾಡುವ ಅತ್ಯಂಥ ಸಾಧ್ಯವಿರುವಂಥ ಜನರಾಗಿದ್ದಾರೆ. ಅವರು ಸಮುದಾಯದಲ್ಲಿ ಅಮೂಲ್ಯವಾದ ಜನರಾಗಿದ್ದಾರೆ, ಯಾಕೆಂದರೆ ಅವರು ತಮ್ಮ ಆದ್ಯತೆಗಳನ್ನು ಸರಿಯಾದ ಕ್ರಮದಲ್ಲಿ ಇಟ್ಟುಕೊಂಡವರಾಗಿದ್ದಾರೆ. ದೇವರು ಮೂಲಪಿತೃಗಳ ವಿಷಯದಲ್ಲಿ ಹೆಮ್ಮೆ ಪಟ್ಟನು ಮತ್ತು ಅವರ ದೇವರೆನಿಸಿಕೊಳ್ಳಲು ನಾಚಿಕೊಳ್ಳಲಿಲ್ಲ (ವಿಮೋಚನಕಾಂಡ 3:6). ಆತನು ನಿಮ್ಮ

ದೇವರಾಗಿದ್ದಾನೋ? ಆತನಿಗೆ ನಿಮ್ಮ ಬಗ್ಗೆ ನಾಚಿಕೆಪಡುವದಕ್ಕೆ ಏನಾದರೂ ಕಾರಣವಿರುತ್ತದೋ?

ಈ ಜೀವನದಲ್ಲಿನ ಸಂತೃಪ್ತಿಯು ನಮ್ಮ ಪರಲೋಕದ ನಿವಾಸವನ್ನು ನೋಡಬೇಕೆಂದು ಸ್ವಲ್ಪ ಹಂಬಲವನ್ನು ಹೊಂದಿರುವಂತೆ ಮಾಡುತ್ತದೋ? ನಾನು ಈಗ ನನ್ನ ಮನೆಯನ್ನು ಸಂಪೂರ್ಣವಾಗಿ ಆನಂದಿಸುತ್ತೇನೆ, ಆದರೆ ನನ್ನ ನಿಜವಾದ ಆನಂದವು ನನ್ನ ಕುಟುಂಬದಿಂದ ಸಿಕ್ಕುತ್ತದೆ – ಹೆಂಡತಿ, ಮಕ್ಕಳು, ಮತ್ತು ಮೊಮ್ಮಕ್ಕಳು. ಅವರಿಲ್ಲದೆ, ಮನೆಯು ಮನೆಯಾಗಿರಲಾರದು. ಹೇಗೂ, ನಾನು ವೃದ್ಧನಾಗುತ್ತಾ ಹೋದಂತೆ, ನಾನು ಹೆಚ್ಚೆಚ್ಚಾಗಿ ಪರಲೋಕದ ಕಡೆಗೆ ನೋಡುವವನಾಗಿದ್ದೇನೆ. ನಾವು ವಯಸ್ಸಾದವರು ಮತ್ತು ದೃಢತೆಯಿಂದಿರುವಾಗ, ಪರಲೋಕವು ಎಷ್ಟು ಅದ್ಭುತವಾದದ್ದೆಂಬುದನ್ನು ಹೆಚ್ಚು ಪೂರ್ಣವಾಗಿ ಗ್ರಹಿಸಿಕೊಳ್ಳುತ್ತೇವೆ.

ಪರಲೋಕಕ್ಕಾಗಿ ಬಯಕೆಯು ಹೆಚ್ಚಾಗುವಂತೆ ಮಾಡುವಂತದ್ದು ಯಾವದು? ಅದು ತತ್ಕಾಲಿಕವಾದವುಗಳ ಬದಲಾಗಿ ಪರಲೋಕದವುಗಳ ಹೆಚ್ಚಾದ ಮೌಲ್ಯವನ್ನು ನೋಡುವದಕ್ಕೆ ನಂಬಿಕೆಗೆ ಇರುವ ಸಾಮರ್ಥ್ಯವೇ ಆಗಿದೆ. ಮೂಲಪಿತೃಗಳ ಹಾಗೆ, ನಾವು ಒಂದು "ಉತ್ತಮದೇಶವನ್ನು ಹಾರೈಸುವವರು" ಆಗಿದ್ದೇವೆ, ಅದು ನಿತ್ಯವಾದ ದೇಶವಾಗಿದೆ. ನಂಬಿಕೆಯಿಂದಲೇ ಪರಲೋಕವು ಕಾಣಿಸುವಂಥವುಗಳಿಗಿಂತ ಸರ್ವೋಚ್ಚವಾದದ್ದೆಂಬುದನ್ನು ಕಾಣುತ್ತೇವೆ, ಅದು ನಮಗೆ ಮನೆಯನ್ನು ದಾಟಿ ಬೇರೊಂದನ್ನು ಹುಡುಕುವಂತೆ ಒತ್ತಾಯಿಸುತ್ತದೆ.

ಅಬ್ರಹಾಮನಾಗಲಿ ಬೇರೆ ಯಾವದೇ ಮೂಲಪಿತೃಗಳಾಗಲಿ ಈ ಜೀವನದಲ್ಲಿ ದೇವರ ವಾಗ್ದಾನಗಳ ನೆರವೇರಿಕೆಯನ್ನು ಹೊಂದಿಕೊಳ್ಳಲಿಲ್ಲ. ಅವರು "ವಾಗ್ದಾನದ ಫಲಗಳನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ . . . ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು" (ವ. 13).

## ನಮ್ಮ ವಿಷಯದಲ್ಲಿ ನಾಚಿಕೊಳ್ಳುವವನಲ್ಲ (11:16)

ದೇವರು ತಮ್ಮನ್ನು ತನ್ನವರೆಂದು ಕರೆಯುವದಕ್ಕೆ ನಾಚಿಕೊಳ್ಳುವವನಲ್ಲ ಮತ್ತು ಆತನು ಹಕ್ಕುಬದ್ಧವಾಗಿ "ಅವರ ದೇವರು" ಎಂದು ಕರೆಯಲ್ಪಡಬಹುದು ಎಂಬುದರಲ್ಲಿ ಇಸ್ರಾಯೇಲ್ಯರು ಹೆಮ್ಮೆ ಪಟ್ಟುಕೊಂಡರು. ಹೇಗೂ, ಶತಮಾನಗಳ ನಂತರದಲ್ಲಿ, ಅವರು ಆತನ ಕುಮಾರನಲ್ಲಿ ನಂಬಿಕೆಯನ್ನಿಡಲು ನಿರಾಕರಿಸಿದ್ದಕ್ಕಾಗಿ ನಾಚಿಕೆಗೊಳ್ಳಬೇಕಿತ್ತು. ನಿಮ್ಮ ಮಿತ್ರರು ಅಥವಾ ಜೊತೆಗೆಲಸಗಾರರು ಸಾರ್ವಜನಿಕ ವಿಧದಲ್ಲಿ ದೇವರನ್ನು ತನ್ನವನೆಂದು ಹೇಳಿಕೊಳ್ಳಲು ನಾಚಿಕೆಗೊಳ್ಳುತ್ತಾರೋ? ನಮ್ಮ ಕರ್ತನು ನಮ್ಮೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಮನಸ್ಸುಳ್ಳವನಾಗಿದ್ದನೆಂಬ ಯೋಚನೆಯು ನಮ್ಮ ಆತ್ಮಗಳಿಗೆ ರೋಮಾಂಚನವನ್ನು ಉಂಟು ಮಾಡತಕ್ಕದ್ದು. ನಾವು ಸಹ ಆತನೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಮನಸ್ಸುಳ್ಳವರಾಗಿರತಕ್ಕದ್ದು. ನಿಮಗೆ ಸಾಧ್ಯವಾದ ಕಡೆಗಳಲ್ಲೆಲ್ಲಾ ಮತ್ತು ವ್ಯಕ್ತಿಗಳೊಂದಿಗೆ ಆತನ ಕುರಿತು ಮಾತಾಡಿರಿ. ಬಹಿಷ್ಕರಿಸಲ್ಪಡುವ ಅಥವಾ ಟೀಕೆಗೊಳಗಾಗುವ ಬಗ್ಗೆ ಹೆದರಿಕೆಯು ಕ್ರಿಸ್ತನಿಗಾಗಿರುವ ನಿಮ್ಮ ಉತ್ಸಾಹವನ್ನು ಕುಗ್ಗಿಸುವದಕ್ಕೆ ಅವಕಾಶ ಕೊಡಬೇಡಿರಿ.

## ಅಬ್ರಹಾಮನ ಪರೀಕ್ಷೆ ಮತ್ತು ದೇವರ ಸ್ವಭಾವ (11:17-19)

ದೇವರು ವಾಗ್ದಾನದ ಮಗುವನ್ನು ಕೊಲ್ಲಬೇಕೆಂದು ಕೇಳುವದು ನ್ಯಾಯವೆಂದು ತೋರುತ್ತದೋ? ಮಾನವ ತಿಳುವಳಿಕೆ ಮತ್ತು ತರ್ಕದೊಂದಿಗೆ, ನಮಗಾದರೋ, ಅದು

ನ್ಯಾಯವೆಂದು ತೋರುವದಿಲ್ಲ. ದೇವರು ಇಸಾಕನನ್ನು ಕೊಲ್ಲುವಂತೆ ಅಬ್ರಹಾಮನಿಗೆ ಆಜ್ಞಾಪಿಸಿರಲಾರನು ಯಾಕೆಂದರೆ ಅದು ನೈತಿಕ ಕಟ್ಟಳೆಯ ಉಲ್ಲಂಘನೆಯಾಗಿರುತ್ತಿತ್ತು ಎಂದು Immanuel Kant ಹೇಳುತ್ತಾನೆ.[100] ನಾಸ್ತಿಕರು ಮತ್ತು ಸಂದೇಹವಾದಿಗಳು ದೇವರ ಸ್ವಭಾವದ ಕುರಿತಾದ ತಮ್ಮ ಕಲ್ಪಿತ ಜ್ಞಾನದಲ್ಲಿ ವಿರುದ್ಧತೆಗಳು ಇಲ್ಲದೆ ಕಡೆಗಳಲ್ಲಿ ಅವುಗಳನ್ನು ಹುಡುಕುವದರಲ್ಲಿ ಸಂಭ್ರಮಿಸುತ್ತಾರೆ.

ಈ ಸಮರ್ಪಣೆಯು ಮನುಷ್ಯನ ನಂಬಿಕೆಯ ಸರ್ವೋಚ್ಚ ಪರೀಕ್ಷೆಯಾಗಿದ್ದು, ನಂತರದ ಎಲ್ಲಾ ಪೀಳಿಗೆಗಳಿಗೆ ಒಂದು ಉದಾಹರಣೆಯಾಗಿ ಕೊಡಲ್ಪಟ್ಟಿದೆ. "ವಿಶ್ವಾಸಿಗಳ ಪಿತೃ" ತನ್ನ ನಂಬಿಕೆಯ ಸಾಧ್ಯವಾದ ಅತ್ಯಂಥ ದೊಡ್ಡ ಪರೀಕ್ಷೆಯನ್ನು ಎದುರಿಸಬೇಕಾಗಿತ್ತು. ಈ ವಿಷಯದಲ್ಲಿ ದೇವರ ವಿವೇಚನೆಗೆ ಸವಾಲನ್ನು ಒಡ್ಡುವದು ಅಬ್ರಹಾಮನಿಗೆ ಯೋಚಿಸುವದಕ್ಕಾಗದ ಕಾರ್ಯವಾಗಿತ್ತು; ಅದು ನಮ್ಮ ವಿಷಯದಲ್ಲಿಯೂ ಹಾಗೆಯೇ ಇರತಕ್ಕದ್ದು. ಹೆಚ್ಚು ಬಲಿಷ್ಠವಾದ ನಂಬಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ನಮ್ಮ ಹೃದಯಗಳನ್ನು ಶಕ್ತಗೊಳಿಸಲು ಯಾವದು ಉತ್ತಮವೆಂಬುದನ್ನ ಕರ್ತನು ಮಾತ್ರವೇ ಬಲ್ಲನು. ಈ ಪರೀಕ್ಷೆಯನ್ನು ಎದುರಿಸುವದು ಅಬ್ರಹಾಮನ ನಂಬಿಕೆಯನ್ನು ಅಲುಗಾಡಿಸಲಿಲ್ಲ, ಆದರೆ ಅದನ್ನು ಮುಂದಿನ ಎಲ್ಲಾ ಪರೀಕ್ಷೆಗಳಿಗಾಗಿ ಬಲಗೊಳಿಸಿತು. ಆತನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ನಮಗೆ "ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡಿದುಕೊಂಡವರಾ[ಗುವದಕ್ಕೆ] ಬಲವಾದ ಧೈರ್ಯ" ವನ್ನು ಒದಗಿಸುತ್ತದೆ (6:18). ಅಬ್ರಹಾಮನು ಅವಿಧೇಯನಾಗುವದಕ್ಕಿದ್ದ ಶೋಧನೆಯನ್ನು ಎದುರಿಸಿ ನಿಂತಿರುವದಾದರೆ, ನಾವೇಕೆ ನಿಲ್ಲಲು ಸಾಧ್ಯವಿಲ್ಲ? ದೇವರಿಗೆ ಅಸಾಧ್ಯವಾದದ್ದು ಯಾವದೂ ಇಲ್ಲ.

ಮಾನವ ಬಾಧೆಗಳು ಅನೇಕ ಸಾರಿ ಅಂತ್ಯವಿಲ್ಲದವುಗಳಾಗಿ ಮತ್ತು ನಿಷ್ಪ್ರಯೋಜನಕರವಾಗಿ ಕಾಣಿಸುತ್ತವೆ. ಹೇಗೂ, ನಂಬಿಕೆಯ ದೃಷ್ಟಿಯ ಮೂಲಕವಾಗಿ, ಅದು ಹೇಗೆ ಜನರನ್ನು ದೀನತೆಯಿಂದ ವಿಧೇಯರಾಗುವಂತೆ ನಡಿಸುತ್ತದೆಂಬುದನ್ನು ಕಾಣಬಲ್ಲೆವು (5:8, 9). ಅಲ್ಲದೆ ನಾವೊಂದು ಉತ್ತಮವಾದ ಸ್ಥಿತಿಯನ್ನು ಹೊಂದಿಕೊಳ್ಳುವೆವೆಂಬ ನಮ್ಮ ದೃಢವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುತ್ತದೆ (2 ಕೊರಿಂಥ 4:16–18). ನಾವು ಬಾಧೆಯನ್ನು ಅದಿರನ್ನು ಪರಿಶೋಧಿಸುವ ಬೆಂಕಿಯಂತೆ ಕಾಣಬಹುದು, ಅದು ಅದಿರನ್ನು ಹಿಂದೆಂದಿಗಿಂತಲೂ ಶುದ್ಧ, ಬೆರಕೆಯಿಲ್ಲದ, ಬಲಿಷ್ಠ ಲೋಹವನ್ನಾಗಿ ಮಾರ್ಪಡಿಸುತ್ತದೆ. ಅದೇ ರೀತಿಯಲ್ಲಿಯೇ, ನಾವು ಯಜಮಾನನ ಬಳಕೆಗೆ ಯೋಗ್ಯವಾಗಿ ಮಾಡಲ್ಪಡುತ್ತೇವೆ. ಯೇಸುವನ್ನು ನಮಗೆ ಸಹಾಯ ಮಾಡುವದಕ್ಕೆ ಹೆಚ್ಚು ಪರಿಪೂರ್ಣನಾಗಿ ಅರ್ಹನಾಗುವಂತೆ ಶೋಧಿಸಲ್ಪಟ್ಟನು ಮತ್ತು ಪರೀಕ್ಷಿಸಲ್ಪಟ್ಟನು (ಇಬ್ರಿಯ 2:18).

ಇಬ್ರಿಯರಿಗೆ ಪತ್ರಿಕೆಯ ಲೇಖಕನು ವಸ್ತುತಃ ಹೀಗೆ ಹೇಳುತ್ತಿದ್ದಾನೆ, "ಅಷ್ಟೊಂದು ಬಾಧೆಯನ್ನನುಭವಿಸಿದ ನಿಮ್ಮ ಪೂರ್ವಜರನ್ನು ನೋಡಿರಿ; ಪರೀಕ್ಷೆಗೆ ಒಳಪಡಿಸಲ್ಪಟ್ಟ ಅಬ್ರಹಾಮನನ್ನು ಪರಿಗಣಿಸಿರಿ." ದೇವರು ಆತನಿಗೆ ತನ್ನ ವಾಗ್ದಾನದ ಮಗನನ್ನು ಯಜ್ಞವಾಗಿ ಸಮರ್ಪಿಸೆಂದು ಹೇಳುವದಕ್ಕಿಂತಲೂ ದೊಡ್ಡದಾದ ಪರೀಕ್ಷೆಯು ಇನ್ನಾವದೂ ಇದ್ದಿರಲಾರದು (ಆದಿಕಾಂಡ 22:2).

## ತಂದೆಯ ನಂಬಿಕೆಯು ಮಗನ ನಂಬಿಕೆಯಾಯಿತು (11:20-22)

ಇಸಾಕನು ವೃದ್ಧನಾಗಿದ್ದನು ಮತ್ತು ಆತನ ಕಣ್ಣುಗಳ ದೃಷ್ಟಿಯು ಮಂದವಾಗಿತ್ತು, ಆದರೆ ಆತನು ಸಹ ತನ್ನ ಪುತ್ರರನ್ನು ಆಶೀರ್ವದಿಸುವ ವೇಳೆ ತನ್ನ ತಂದೆಯಾದ ಅಬ್ರಹಾಮನ

ದೃಢವಿಶ್ವಾಸದ ದರ್ಶನ ಹಾಗೂ ನಂಬಿಕೆಯನ್ನು ಉಳಿಸಿಕೊಂಡಿದ್ದನು. ಅದೇ ರೀತಿಯಲ್ಲಿಯೇ, ಯಾಕೋಬನು, ತನ್ನ ಜೀವನದ ಅಂತ್ಯದ ಸಮೀಪಕ್ಕೆ ಬಂದ ಹಾಗೆ, ಎಫ್ರಾಯೀಮ್ ಮತ್ತು ಮನಸ್ಸೆಯ ಬರಲಿರುವ ಶ್ರೇಷ್ಠತೆಯನ್ನು ಘೋಷಿಸಿದನು (ಆದಿಕಾಂಡ 48:1-20). ಯೋಸೇಫನು ನಂಬಿಕೆಯಿಂದ ಭವಿಷ್ಯವನ್ನು ನೋಡುವದಕ್ಕೆ ಶಕ್ತನಾದನು. ಆತನು ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ವಾಗ್ದಾನ ದೇಶಕ್ಕೆ ಹೋಗುವದಕ್ಕೆ ಕಂಡನು, ತನ್ನ ಸ್ವಂತ ಮರಣವನ್ನು, ಮತ್ತು ಆತನ ಮೂಳೆಗಳು ಹೇಗೆ ಐಗುಪ್ತದಿಂದ ತಕ್ಕೊಂಡು ಹೋಗಲ್ಪಟ್ಟು ಕಾನಾನ್ ದೇಶದಲ್ಲಿ ಹೂಣಿಸಲ್ಪಡುವವೆಂಬುದನ್ನು ಮುಂದಾಗಿ ಕಂಡನು (ವ. 22).

ನಾವು ನಮ್ಮ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ನಮ್ಮ ಇತಿಹಾಸವನ್ನು ಕುರಿತು, ಅವರ ಪರಂಪರೆಯನ್ನು ಕುರಿತು ಹೆಚ್ಚಾಗಿ ಹೇಳಬೇಕು. ಅವರ ಸವಲತ್ತುಗಳ ಕೆಳಮಟ್ಟದಲ್ಲಿ ಜೀವಿಸದಂತೆ, ಆದರೆ ಅವುಗಳಿಗೆ ತಕ್ಕಂತೆ ಜೀವಿಸಬೇಕೆಂದು ಅವರಿಗೆ ಕಲಿಸಬೇಕು. ನಾವು ಜೀವನದುದ್ದಕ್ಕೂ ಪ್ರಯಾಣಿಸಿರುವ ವೇಳೆಯಲ್ಲೆಲ್ಲಾ ದೇವರು ಹೇಗೆ ನಮ್ಮನ್ನು ಆಶೀರ್ವದಿಸಿದ್ದಾನೆ ಮತ್ತು ಹೇಗೆ ಅತ್ಯಂಥ ದುಃಖಕರ ಘಟನೆಗಳನ್ನು ಆಶೀರ್ವಾದಗಳಾಗಿ ಮಾರ್ಪಡಿಸಲ್ಪಟ್ಟಿರುತ್ತವೆಂಬುದನ್ನು ಅವರಿಗೆ ಜ್ಞಾಪಿಸಬೇಕು.

ತಂದೆಗಳು ನಮ್ಮ ಜೀವಿತಗಳಲ್ಲಿ ದೇವರ ಒದಗಿಸುವಿಕೆಯನ್ನು ದೃಷ್ಟಾಂತಗೊಳಿಸುವ ಕಥೆಗಳನ್ನು ಓದುವಂತೆ ತಮ್ಮ ಮಕ್ಕಳನ್ನು ಒತ್ತಾಯಿಸಬೇಕು. ನಾವು ಇದನ್ನು ಅವರಿಗೆ ಮಾಡುವದಾದರೆ ಭವಿಷ್ಯಕ್ಕಾಗಿ ಅವರು ಹೆಚ್ಚಾದ ಧೈರ್ಯ ಮತ್ತು ನಂಬಿಕೆಯನ್ನು ಹೊಂದಿಕೊಳ್ಳುವರು.

## ಸಂಕಷ್ಟಗಳಿರುವ ವೇಳೆ ನಂಬಿಕೆ (11:23-27)

ತಾನು ಹುಟ್ಟಿದ ಕ್ಷಣದಿಂದ ಅಪಾಯದಲ್ಲಿದ್ದವನಾಗಿ, ಮೋಶೆಯು ಆತನ ಹೆತ್ತವರ ನಂಬಿಕೆಯ ಕಾರಣದಿಂದ ಉಳಿಸಲ್ಪಟ್ಟನು (ವ. 23). ಬಹುಶಃ ಅಮ್ರಾನ ಮತ್ತು ಯೆಕೋಬೆದಳು ಇಬ್ಬರು ಭಯವಿಲ್ಲದ ಮತ್ತು ನಂಬಿಗಸ್ತರಾಗಿದ್ದ ಸೂಲಗಿತ್ತಿಯರಾದ ಶಿಪ್ರಾ ಮತ್ತು ಪೂಗಾ ಎಂಬುವರನ್ನು ಸಹಾಯವನ್ನು ಕೇಳುವ ಮೂಲಕ ತಮ್ಮ ನಂಬಿಕೆಯನ್ನು ತೋರ್ಪಡಿಸಿದರು (ವಿಮೋಚನಕಾಂಡ 1:15-22). ಅವರು ತಮ್ಮ ಮಗುವಿನ ಜನನವನ್ನು ಮಾಡಿಸುವಂತೆ ಬೇರೆ ಯಾರ ಮೇಲಯೂ ಭರವಸವಿಡುವದಕ್ಕೆ ಶಕ್ತರಾಗಲಿಲ್ಲ.

ಮೋಶೆಯು ತನ್ನ ತಾಯಿ/ದಾದಿಯ ಈ ಮಾತುಗಳನ್ನು ಕಿವಿಯಲ್ಲಿ ಕೇಳಿಸಿಕೊಳ್ಳುವವನಾಗಿ ಪ್ರಾಯಕ್ಕೆ ಬಂದನು: "ನೀನೊಬ್ಬ ಇಬ್ರಿಯನು, ದೇವರಾದುಕೊಂಡ ಜನಾಂಗದವರಲ್ಲೊಬ್ಬನು, ಮತ್ತು ಒಬ್ಬ ಐಗುಪ್ತನಲ್ಲ." ಯೆಕೋಬೆದಳ ನಂಬಿಕೆಯು ಮೋಶೆಯ ನಂಬಿಕೆಯಾಯಿತು. ತನ್ನ ಹೆತ್ತವರು ಆತನಿಗೋಸ್ಕರ ತಮ್ಮ ಪ್ರಾಣಗಳನ್ನೇ ಅಪಾಯಕ್ಕೆ ಗುರಿ ಪಡಿಸಿಕೊಂಡರೆಂಬ ಬಗ್ಗೆ ತಿಳಿದುಕೊಂಡಾಗ ಅದು ಹೇಗೆ ಹಾಗಾಗದಿರುವದಕ್ಕೆ ಹೇಗೆ ಸಾಧ್ಯ? ನಾವು ನಮ್ಮ ಮಕ್ಕಳನ್ನು ಹೇಗೆ ಕೋಮಲತೆಯಿಂದ ಉಣ್ಣಿಸಿದೆವು ಮತ್ತು ಹಾರೈಕೆ ಮಾಡಿದೆವು, ಬಹುಶಃ ರೋಗದಲ್ಲಿದ್ದ, ದೀರ್ಘವಾದ ಅನೇಕ ನಿದ್ದೆಯಿಲ್ಲದ ರಾತ್ರಿಗಳಲ್ಲಿ ಸಹ ಹೇಗೆ ಆರೈಕೆ ಮಾಡಿದೆವು ಎಂಬುದನ್ನು ಅವರಿಗೆ ಜ್ಞಾಪಿಸುವ ಅಗತ್ಯವಿರುತ್ತದೆ. ಈ ಕಥೆಗಳನ್ನು ಹಂಚಿಕೊಳ್ಳುವ ಮೂಲಕ, ನಮ್ಮ ಮಕ್ಕಳು ನಮಗೆ ಎಷ್ಟು ಪ್ರಾಮುಖ್ಯರು ಎಂಬುದನ್ನು ಮತ್ತು ಈ ಲೋಕದಲ್ಲಿ ಅವರ ಅತ್ಯಂಥ ದೊಡ್ಡ ಮಹತ್ವಪೂರ್ಣತೆಯನ್ನು ಅವರಿಗೆ ತೋರಿಸಿ ಕೊಡಬಲ್ಲೆವು.

ನನ್ನ ತಾಯಿಯು ನನಗೆ ನೆನಪಿರುವಷ್ಟು ಚಿಕ್ಕ ವಯಸ್ಸಿನಿಂದಲೇ ನನಗೆ *Hurlbut's Story of the Bible* ಎಂಬ ಪುಸ್ತಕದಿಂದ ಓದಿ ಹೇಳುತ್ತಿದ್ದಳು. ನನಗೆ ಗೊತ್ತಿರುವ

ಎಲ್ಲದಕ್ಕಾಗಿಯೂ, ನನ್ನ ನಂಬಿಕೆಯು ಬೇರೆ ಯಾವದೇ ಕಾರ್ಯಕ್ಕಿಂತಲೂ ಆ ಒಂದೇ ಸಂಗತಿಯಿಂದಲೇ ಆಗಿರುತ್ತದೆಂದು ಹೇಳಬಹುದು. ತಾಯಂದಿರೇ, ನಿನ್ನ ನಂಬಿಕೆ, ಪ್ರೀತಿ, ಮತ್ತು ಆರೈಕೆಗಳನ್ನು ನಿಮ್ಮ ಮಕ್ಕಳು ಕ್ರಿಯೆಯಲ್ಲಿ ನೋಡುವದಾದರೆ ಅವುಗಳು ಅನೇಕ ಪೀಳಿಗೆಗಳ ತನಕವೂ ಸ್ಮರಿಸಲ್ಪಡಬಹುದಾಗಿದೆ.

ಮೋಶೆಯು ಒಬ್ಬ ಪ್ರಾಯಸ್ಥನಾಗಿ ತಾನು ಮಾಡಬೇಕಾದ ಗತಿಯನ್ನು ನಿರ್ಧರಿಸುವ ಪ್ರತಿಯೊಂದು ತೀರ್ಮಾನಗಳಲ್ಲಿ ಅಧಿಕಾರಿಗಳ ವಿರುದ್ಧವಾಗಿ ಸಾಗಿದನು, ಯಾಕೆಂದರೆ ಆತನು ಸರ್ವೋಚ್ಛ ಅಧಿಕಾರಕ್ಕೆ ಅಧೀನಪಡಿಸಿಕೊಂಡಿದ್ದನು. ಆತನು ಗುಲಾಮತನಕ್ಕಾಗಿ ರಾಜತ್ವವನ್ನು ತ್ಯಜಿಸಿದನು, ಅರಮನೆಯ ಸುಖಭೋಗಗಳಿಗಿಂತ ಹಿಂಸೆಯನ್ನನುಭವಿಸಲು, ಒಬ್ಬ ಅಲೆಮಾರಿಯಾಗಿರುವ ಬಡತನಕ್ಕಾಗಿ ಆಶ್ಚರ್ಯವಾದ ಐಶ್ವರ್ಯಗಳನ್ನು ತೊರೆದನು, ಮತ್ತು ತನ್ನ ಜನರು ಹಾಗೂ ದೇವರಿಗೋಸ್ಕರ "ಕ್ರಿಸ್ತನ ನಿಮಿತ್ತದಿಂದ ಉಂಟಾಗುವ ನಿಂದೆ"ಯನ್ನು ಸಹ ಹೊಂದಿಕೊಳ್ಳುವದಕ್ಕೆ ಸಿದ್ಧನಾಗಿದ್ದನು. ನಾವು "ಅದೃಶ್ಯನಾಗಿರುವಾತನನ್ನು ದೃಷ್ಟಿಸುತ್ತೇವೋ" ಎಂಬಂತೆ ಸಹಿಸಿಕೊಳ್ಳುತ್ತೇವೋ? ನಾವು ಕಾಲದ ಆಧಾರದಲ್ಲಿ ಆಯ್ಕೆಗಳನ್ನು ಮಾಡುತ್ತೇವೋ ಅಥವಾ ನಿತ್ಯತ್ವದ ಆಧಾರದಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳುತ್ತೇವೋ? ನಾವು ರಾಜಕೀಯವಾಗಿ ಸಮಯೋಚಿತವನ್ನು ಆರಿಸಿಕೊಳ್ಳುತ್ತೇವೋ ಅಥವಾ ನಮಗೆ ತಿಳಿದಿರುವ ದಾರಿಯು ದೇವರ ದಾರಿಯೋ? ನಾವು "ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದರೆ" ಮತ್ತು ಬರಲಿರುವವನಾದ ಕ್ರಿಸ್ತನನ್ನು ಎದುರು ನೋಡುವದಾದರೆ ಸರಿಯಾದ ಆಯ್ಕೆಗಳನ್ನು ಮಾಡಬಲ್ಲೆವು.

ಮೋಶೆಯು ದೇವರಿಗಾಗಿ ಹೊಂದಿದ್ದ ಗಹನವಾದ ಗೌರವದ ಕಾರಣದಿಂದ ಭಯವನ್ನು ಜಯಿಸಿದನು. ನಂಬಿಕೆಯು ಕೇವಲ ಶಾರೀರಿಕ ವ್ಯಾಧಿ ಅಥವಾ ಕಷ್ಟಗಳನ್ನು ಮಾತ್ರವೇ ನೋಡುವದಿಲ್ಲ. ಅದು ಲೋಕದಲ್ಲಿ ಯಾವ ಕೆಟ್ಟತನವೂ ಇರುವದಿಲ್ಲ – ಯಾವ ಫರೋಹನೂ, ಸೈತಾನನೂ ಇಲ್ಲ – ಎಂಬಂತೆ ನಟಿಸುವದಿಲ್ಲ. ಬದಲಾಗಿ, ಅದು ವಾಸ್ತವಿಕತೆಯನ್ನು ಅಂಗೀಕರಿಸಿಕೊಳ್ಳುತ್ತದೆ ಮತ್ತು ಆಗಲೂ ಹೆಚ್ಚುಕಡಿಮೆ ಊಹಿಸಿಕೊಳ್ಳುವದಕ್ಕೂ ಆಗದಂತಹ ಒಳ್ಳೇ ಕಾರ್ಯಗಳನ್ನು ದೃಷ್ಟಿಸುತ್ತದೆ. ಅದು ಪರಲೋಕದ ಕೋಣೆಗಳನ್ನು ಪ್ರಾರ್ಥನೆಯಲ್ಲಿ ಪ್ರವೇಶಿಸುವ ಸದವಕಾಶವನ್ನು ಮತ್ತು ಅದು ಕೋಮಲನು ಹಾಗೂ ದಯೆಯುಳ್ಳ, ನಮ್ಮ ಅಗತ್ಯತೆಗಳನ್ನೆಲ್ಲಾ ಅರ್ಥಮಾಡಿಕೊಂಡು ಈಗಲೂ ಸಹಾಯವನ್ನು ಒದಗಿಸುವ ದೇವರ ಬಳಿಗೆ ಹೋಗುವದನ್ನು ನೋಡುತ್ತದೆ (ಇಬ್ರಿಯ 4:15, 16). "ಅದೃಶ್ಯನಾಗಿರುವಾತನನ್ನು ದೃಷ್ಟಿಸುವ"ದಕ್ಕಿಂತಲೂ ಹೆಚ್ಚು ಮಹಿಮಕರವಾದದ್ದು ಇನ್ನಾವದೂ ಇರುವದಿಲ್ಲ.

## ಪಾಪದ ಭೋಗಗಳು ಮತ್ತು ತಾರ್ಕಿಕವಾದ ಆಯ್ಕೆಗಳು (11:25, 26)

ಮೇಲ್ನೋಟಕ್ಕೆ ಕಾಣುವ ಪ್ರಕಾರ, ಪಾಪದಲ್ಲಿ ಸುಖವಿರುತ್ತದೆ. ಅದರಲ್ಲಿ ಯಾವದೂ ಇಲ್ಲವೆಂದು ಯಾವನಾದರೂ ಹೇಳಿದರೆ ಆತನು ಒಬ್ಬ ಸುಳ್ಳುಗಾರನಾಗಿರಬೇಕು ಅಥವಾ ಮೂರ್ಖನಾಗಿರಬೇಕು. ಹೇಗೂ, ಪಾಪದ ಸುಖ ಅಥವಾ ಭೋಗವು ಮೋಸಕರವಾಗಿರಬಲ್ಲದು; ಅದು ಆರಂಭದಲ್ಲಿ ಆಕರ್ಷಕವಾಗಿ ಕಾಣಿಸುತ್ತದೆ ಆದರೆ ಅಂತ್ಯದಲ್ಲಿ ಅದು ಕಟುವಾಗಿ ನಿರಾಶೆಯುಂಟು ಮಾಡುವಂಥದ್ದಾಗಿದೆ. ಪಾಪವು ಅಪರಾಧಭಾವನೆಯ ಹೆಚ್ಚುವರಿ ಭಾರದ ಜೊತೆಯಲ್ಲಿ ಹೇಗೆ ದುರ್ಗತಿಗೆ ನಡಿಸಬಲ್ಲದೆಂಬುದಕ್ಕೆ ಅರಸನಾದ ದಾವೀದನ ಕಥೆಯು ಒಂದು ಶಕ್ತಿಶಾಲಿಯಾದ ದೃಷ್ಟಾಂತವಾಗಿರುತ್ತದೆ. ಅರಸನ ಹೊಸ ಹೆಂಡತಿಯಾದ ಬತ್ಷೇಬಳು, ಕಾಲಕ್ರಮೇಣದಲ್ಲಿ ತನ್ನ ಮಗನಾದ ಸೊಲೊಮೋನನು ಸಿಂಹಾಸನವನ್ನು ಹೊಂದುವದನ್ನು ಖಚಿತ ಮಾಡುವದಕ್ಕೆ ಪಿತೂರಿ ಮಾಡುವವಳಾದಳು. ಆಕೆಯು ಮತ್ತು ದಾವೀದನು ಒಟ್ಟಾಗಿ

ಮತ್ತೆಂದೂ ಸಂತೋಷವನ್ನು ಕಂಡರೆಂಬುದು ಸಂಶಯಕರವಾಗಿದೆ, ಅಲ್ಲದೆ ಅವರೂ ಅದಕ್ಕೆ ಯೋಗ್ಯರೂ ಆಗಿರಲಿಲ್ಲ. ಇಸ್ರಾಯೇಲ್ಯರೆಲ್ಲರೂ ಅರಸನ ಪಾಪದ ಬಗ್ಗೆ ಮಾತಾಡಿಕೊಂಡಿರಬೇಕು.

ಬತ್ಷೇಬಳ ಸಂಗಡ ಆತನು ಪಾಪ ಮಾಡಿದ ಬಳಿಕ, ದಾವೀದನ ಆಳ್ವಿಕೆಯು ವಾಸ್ತವಿಕದಲ್ಲಿ ಅಸ್ತವ್ಯಸ್ತಕ್ಕೊಳಗಾಯಿತು. ದಾವೀದ ಮತ್ತು ಬತ್ಷೇಬಳ ವ್ಯಭಿಚಾರದಿಂದ ಗರ್ಭಧರಿಸಲ್ಪಟ್ಟ ಮಗುವು ಹುಟ್ಟಿದ ಸ್ವಲ್ಪದರಲ್ಲಿಯೇ ಮರಣಿಸಿತು. ದಾವೀದನ ಪುತ್ರರಲ್ಲೊಬ್ಬನಾದ ಅಮ್ನೋನನು ತನ್ನ ತಂಗಿಯಾದ ತಾಮರಳನ್ನು ಕೆಡಿಸಿದನು ನಂತರ ಹುಡುಗಿಯ ಒಡಹುಟ್ಟಿದ ಅಣ್ಣನಾದ ಅಬ್ಷಾಲೋಮನು ಅಮ್ನೋನನನ್ನು ಕೊಲ್ಲುವ ಮೂಲಕ ಪ್ರತೀಕಾರ ಮಾಡಿದನು. ಅನಂತರದಲ್ಲಿ, ಅಬ್ಷಾಲೋಮನು ತನ್ನ ತಂದೆಯ ವಿರುದ್ಧ ಬಂಡಾಯವನ್ನು ವಹಿಸಿಕೊಂಡನು ಮತ್ತು ದಾವೀದನ ಅಪ್ಪಣೆಗಳಿಗೆ ವಿರುದ್ಧವಾಗಿ ಆತನು ಕೊಲ್ಲಲ್ಪಟ್ಟನು. ಜನಗಣತಿಯನ್ನು ಮಾಡಬೇಕೆಂದು ಅರಸನು ಹೊರಡಿಸಿದ ಶಾಸನವು ಒಂದು ಭಯಂಕರವಾದ ವಿನಾಶತೆಯಲ್ಲಿ ಫಲಿತಗೊಂಡಿತು, ಅದನ್ನು ಮಾಡಬಾರದೆಂದು ಆತನ ಸೇನಾನಾಯಕನು ಎಷ್ಟೋ ಬೇಡಿಕೊಂಡಿದ್ದನು. ಜೀವನವು ಅಂಥ ಕಥೆಗಳಿಂದ ತುಂಬಿರುತ್ತದೆ. ಪಾಪವು ಎಷ್ಟೋ ಹೆಚ್ಚಾದ ಭೋಗವನ್ನು ಮತ್ತು ಸಂತೋಷವನ್ನು ವಾಗ್ದಾನ ಮಾಡುವಂತೆ ತೋರುತ್ತದೆ, ಆದರೆ ಅದು ವಾಗ್ದಾನ ಮಾಡಲ್ಪಟ್ಟಿರುವದಕ್ಕೆ ವಿರುದ್ಧವಾದದ್ದನ್ನು ಕೊಡುತ್ತದೆ. ಪಾಪವು ಎಂದಿಗೂ ತೃಪ್ತಿ ಅಥವಾ ಸಮಾಧಾನವನ್ನು ತರುವದಿಲ್ಲ. ದೇವರಿಂದ ದೊರಕುವ ಕ್ಷಮಾಪಣೆಯು ಮಾತ್ರವೇ ಅದನ್ನು ಮಾಡಬಲ್ಲದು.

ಒಬ್ಬ ಇಸ್ರಾಯೇಲ್ಯನಾಗಿ ಜೀವಿಸಬೇಕೆಂಬ ಮೋಶೆಯ ಆಯ್ಕೆಯು, ಪ್ರತಿಯೊಂದು ತಾರ್ಕಿಕ ಹಾಗೂ ಭೌತಿಕ ಮಾನದಂಡದ ಪ್ರಕಾರವಾಗಿ, ಒಂದು ಮೂರ್ಖ ನಿರ್ಧಾರವಾಗಿತ್ತು. ಆತನು ಚಿನ್ನ ಮತ್ತು ಬೆಳ್ಳಿಗಳಿಗಿಂತಲೂ ಆತ್ಮೀಕ ಕಾರ್ಯಗಳನ್ನು ಹೆಚ್ಚು ಅಮೂಲ್ಯವೆಂದು ಗುರುತಿಸಿದ್ದರಲ್ಲಿ ಆತನ ನಂಬಿಕೆಯ ಶ್ರೇಷ್ಠತೆಯು ಕಂಡು ಬರುತ್ತದೆ. ಅಬ್ರಹಾಮನು ಗುಡಾರಗಳಲ್ಲಿ ವಾಸಿಸುವಾಗ ಅನುಭವಿಸಿದ್ದಕ್ಕಿಂತಲೂ ಹೆಚ್ಚು ಬಾಧೆಗಳನ್ನು ಈತನು ಅನುಭವಿಸಿದನು, ಆತನ ಸಂಕಷ್ಟಗಳು "ಕ್ರಿಸ್ತನ ನಿಮಿತ್ತದಿಂದ ಉಂಟಾಗುವ ನಿಂದೆ" ಯೊಂದಿಗೆ ಹೋಲಿಕೆ ಮಾಡಲ್ಪಡುವಷ್ಟರ ಮಟ್ಟಿಗೆ ಬಾಧೆಯನ್ನನುಭವಿಸಿದನು (ವ. 26). ನೀವು ಬಹಳವಾಗಿ ಸಮಸ್ಯೆಗೊಳಗಾಗಿ ಬಾಧೆಯನ್ನನುಭವಿಸುವಾಗ, ಕರ್ತನು ಹೇಗೆ ಸಹಿಸಿಕೊಂಡನೆಂಬುದರ ಬಗ್ಗೆ ಧ್ಯಾನಿಸಿರಿ. ಅಂಥ ಯೋಚಿಸುವಿಕೆಯು ನಿಮ್ಮನ್ನು ಆತನ ಹೆಜ್ಜೆ ಜಾಡುಗಳಲ್ಲಿ ನಡೆಯುವಂತೆ ಸಹಾಯ ಮಾಡುವದು. ಮೋಶೆಯು ತನ್ನ ಆಯ್ಕೆಯನ್ನು ಮಾಡಿಕೊಂಡು ಐಗುಪ್ತದಿಂದ ಓಡಿ ಹೋದಾಗ, ಐಗುಪ್ತದೇಶದ ಗಣ್ಯರು ಮೋಶೆಯನ್ನು ಹೇಗೆ ಹಾಸ್ಯ ಮಾಡಿರಬಹುದು – ಕನಿಷ್ಠ ತಾತ್ಕಾಲಿಕವಾಗಿ! ಒಂದು ಧೈರ್ಯಶಾಲಿ ನಂಬಿಕೆಯನ್ನು ಹೊಂದಿದವರಾಗಿರಿ! ನೀವು ಸಹ "ಪ್ರತಿಫಲ"ವನ್ನು ಎದುರು ನೋಡಬಲ್ಲಿರಿ (ವ. 26).

## ಹೇಳಲ್ಪಡದೆ ಇರುವಂಥವುಗಳು (11:27)

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಬಳಸುವದಕ್ಕೆ ವಿಜಯಶಾಲಿ ನಂಬಿಕೆಯ ಇನ್ನೂ ಅನೇಕ ಕಥೆಗಳಿದ್ದವು, ಆದ್ದರಿಂದ ಆತನು ಅವುಗಳ ಬಗ್ಗೆ ಹೇಳುವದರಿಂದ ಹಿಂಜರಿದನು. ಬದಲಾಗಿ, ಆತನು ಕೆಲವೊಂದನ್ನು ಆರಿಸಿಕೊಂಡನು. ಇಬ್ರಿಯರಿಗೆ ಪತ್ರಿಕೆಯಿಂದ ಕೈಬಿಡಲ್ಪಟ್ಟಿರುವ ಒಂದು ಘಟನೆಯೆಂದರೆ ಮೋಶೆಯು ಉರಿಯು ಪೊದೆಯ ಬಳಿಯಲ್ಲಿ ದೇವರನ್ನು ಸಂಧಿಸಿದ್ದು (ವಿಮೋಚನಕಾಂಡ 3). ಮೋಶೆಯು ಉರಿಯುತ್ತಿದ್ದ ಆದರೆ

ಜ್ವಾಲೆಗಳಿಂದ ಸುಡದೆ ಇದ್ದ ಒಂದು ಪೊದೆಯನ್ನು ನೋಡುವ ಗಮನಾರ್ಹವಾದ ಸದವಕಾಶವನ್ನು ಹೊಂದಿದ್ದನು. ಮೋಶೆಯು ಅದೃಶ್ಯವಾದದ್ದನ್ನು ಕಂಡನು ಮತ್ತು ತಾನು ಸರ್ವಶಕ್ತನಿಗೆ ಅಹಿತಕರವಾಗಿ ಅತಿ ಸಮೀಪ ಬಂದಿದ್ದೇನೆಂದು ಅರಿತುಕೊಂಡನು. ನಿಸ್ಸಂಶಯವಾಗಿ ಆತನು ಹೆದರಿದ್ದನು, ಅದೇ ರೀತಿ ಆತನು ಪುನಃ ಸಿನಾಯ್ ಪರ್ವತದಲ್ಲಿನ ಸದ್ದುಗದ್ದಲಗಳಿಂದ ಹೆದರುತ್ತಾನೆ.

ತಾನು ಇಸ್ರಾಯೇಲ್ಯರನ್ನು ದಾಸತ್ವದಿಂದ ರಕ್ಷಿಸುವದಕ್ಕೆ ಅಭಿಷೇಕಿಸಲ್ಪಟ್ಟವನು ಎಂಬುದನ್ನು ತಿಳಿದುಕೊಂಡಾಗ, ಮೋಶೆಯು ಐಗುಪ್ತಕ್ಕೆ ಹಿಂದಿರುಗಬೇಕೆಂಬ ದೇವರ ಕರೆಗೆ ವಿಧೇಯನಾದನು. ಆತನು ಎಷ್ಟೊಂದು ತಾಳ್ಮೆಯಿಂದಿದ್ದನು: ಐಗುಪ್ತದಲ್ಲಿ ದೊಡ್ಡ ಸನ್ಮಾನವನ್ನು ಹೊಂದಿದವನಾಗಿ ನಾಲ್ವತ್ತು ವರ್ಷ, ನಂತರ ದೀನನಾಗಿ ಅರಣ್ಯದಲ್ಲಿ ನಾಲ್ವತ್ತು ವರ್ಷಗಳನ್ನು ಕಳೆದಿದ್ದನು! ದೇವರು ತನ್ನ ಪ್ರಜೆಗಳಲ್ಲಿ ಯಾವಾಗಲೂ ತಾಳ್ಮೆಯುಳ್ಳ ನಂಬಿಕೆಯನ್ನು ಎದುರು ನೋಡುತ್ತಾನೆ. ನಂಬಿಕೆಯಿಂದಲೇ ಮೋಶೆಯು ಐಗುಪ್ತದೇಶದಿಂದ ಓಡಿ ಬಂದಿದ್ದನು, ಮತ್ತು ಹಿಂದಿರುಗುವದಕ್ಕೆ ನಂಬಿಕೆಯಿಂದಲೇ ಆತನು ವಿಧೇಯನಾಗಿದ್ದನು. ಮೋಶೆಯು ಸ್ವಲ್ಪವೂ ನಿರೀಕ್ಷೆಯನ್ನೇ ಮಾಡಿರದ ವೇಳೆ ದೇವರು ಆತನನ್ನು ಆರಿಸಿಕೊಂಡನು; ಆತನು ತನ್ನನ್ನು ಆ ಕೆಲಸಕ್ಕೆ ಅರ್ಹನಲ್ಲವೆಂದು ಪರಿಗಣಿಸಿಕೊಂಡಿದ್ದನು, ನಾಲ್ವತ್ತು ವರ್ಷಗಳ ಮುಂಚೆಯಾಗಿದ್ದರೆ ಆತನು ತನ್ನನ್ನು ಸಂಪೂರ್ಣ ಸಮರ್ಥನೆಂದು ಭಾವಿಸಿಕೊಂಡಿರುತ್ತಿದ್ದನು. ದೇವರು ನಿಜಕ್ಕೂ ಮಹಾನ್ ಕಾರ್ಯಗಳನ್ನು ಅವರ ಮೂಲಕ ಮಾಡುವದಕ್ಕೋಸ್ಕರ ಜನರನ್ನು ಊಹಿಸಲಾಗದ ಕ್ಷಣಗಳಲ್ಲಿಯೇ ಆರಿಸಿಕೊಳ್ಳುತ್ತಾನೆ.

## ಕುರಿಯ ರಕ್ತ ಮತ್ತು ಕೂಸುಗಳನ್ನು ರಕ್ಷಿಸುವಿಕೆ (11:28)

ಮಕ್ಕಳನ್ನು ರಕ್ಷಿಸುವದಕ್ಕೆ ಸಂಬಂಧಪಟ್ಟ ಯಾವದರೊಂದಿಗಾಗಲಿ ಕುರಿಯ ರಕ್ತವು ಹೇಗೆ ಸಂಬಂಧ ಹೊಂದಿರುವದಕ್ಕೆ ಸಾಧ್ಯ? ಯಾವದೇ ನೇರವಾದ, ತಾರ್ಕಿಕ ಕಾರಣವು ಇರುವದಿಲ್ಲ. ಹೇಗೂ, Jephunneh ಎಂಬ ಹೆಸರಿನ ಒಬ್ಬ ಇಬ್ರಿಯನು ಕುರಿಯ ವಧಿಸಿ ಅದರ ರಕ್ತವನ್ನು ತಮ್ಮ ಮನೆಯ ಬಾಗಲುಗಳಿಗೆ ಪ್ರೋಕ್ಷಿಸಬೇಕೆಂಬ ಕುರಿತು ಅರಿತುಕೊಂಡವನಾಗಿ ತನ್ನ ಮನೆಯನ್ನು ಪ್ರವೇಶಿಸದನೆಂದು ಊಹಿಸಿಕೊಳ್ಳಿರಿ. ಆತನು ತನ್ನ ಹೆಂಡತಿಯಾದ ಮಾರಾಳಿಗೆ "ನಾವು ಮುಂದಿನ ಬಾಗಲಿನ ಮೇಲೆಲ್ಲಾ ರಕ್ತವನ್ನು ಎರಚಾಡಬೇಕು" ಎಂದು ಹೇಳುತ್ತಾನೆ. ಅದಕ್ಕೆ ಪ್ರತ್ಯುತ್ತರವಾಗಿ ಅವಳು, "ನನ್ನ ಮನೆಯಲ್ಲಿ ಅಂಥ ಅಸ್ತವ್ಯಸ್ತತೆ ನನಗಿಷ್ಟವಿಲ್ಲ. ನಮ್ಮ ಕೂಸನ್ನು ಉಳಿಸಿಕೊಳ್ಳುವದಕ್ಕಾಗಿ ನಿಶ್ಚಯವಾಗಿಯೂ ನಾವು ಅದಕ್ಕಿಂತ ಉತ್ತಮವಾದ ದಾರಿಯನ್ನು ಹುಡುಕಿಕೊಳ್ಳಬಹುದು. ಅದು ನಮ್ಮ ಮನೆಯ ಅಂದವನ್ನು ಕೇಡಿಸುತ್ತದೆ. ನಮ್ಮನ್ನು ಮತ್ತು ನಮ್ಮ ಪ್ರಿಯರನ್ನು ರಕ್ಷಿಸುವಂತೆ ದೇವರ ಪ್ರೀತಿಯಲ್ಲಿ ನಾವು ಭರವಸವಿಡಬಹುದು. ಅಂತೂ, ಇದಕ್ಕಿಂತ ದೊಡ್ಡದಾದ ತಪ್ಪನ್ನು ಮಾಡಿದ ಬಳಿಕವೂ ಅನೇಕ ಜನರನ್ನು ಆತನು ರಕ್ಷಿಸಿದ್ದಾನಲ್ಲಾ, ಆದ್ದರಿಂದ ಅಂತ ಗಲೀಜನ್ನು ಮಾಡದೆಯೇ ಆತನ ಕರುಣೆಯಲ್ಲಿ ಭರವಸವಿಡೋಣ ಮತ್ತು ಆತನನ್ನು ಪ್ರೀತಿಸುವದನ್ನು ಮುಂದುವರೆಸೋಣ." ತತ್ಪರಿಣಾಮವಾಗಿ, ಅವರು ಆಜ್ಞೆಗೆ ವಿಧೇಯರಾಗುವದಿಲ್ಲ.

ಆ ದೃಶ್ಯಾವಳಿಯಲ್ಲಿ ಏನಾಗಿರಬಹುದು? ಆ ರಾತ್ರಿಯಲ್ಲಿ ಪ್ರತಿಯೊಂದು ನಂಬಿಗಸ್ತರಾದ ಇಬ್ರಿಯ ಕುಟುಂಬವು ರಕ್ತವು ಸ್ಪಷ್ಟವಾಗಿ ಗೋಚರಿಸುವಂತೆ ಮಾಡಿರಬಲ್ಲರೆಂದು ನಾವು ಖಚಿತವಾಗಿ ತಿಳಿಯಬಹುದು.

## ಇಸ್ರಾಯೇಲ್ಯವು ರಕ್ಷಿಸಲ್ಪಟ್ಟಾಗ (11:29)

ವಿಮೋಚನಕಾಂಡ 14:30 ಹೀಗೆ ಹೇಳುತ್ತದೆ, "ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಐಗುಪ್ತ್ಯರ ಕೈಗೆ ತಪ್ಪಿಸಿದನು." ಕೆಲವರು 1 ಕೊರಿಂಥ 10:1, 2ರಲ್ಲಿರುವ ಪೌಲನ ತರ್ಕವನ್ನು ತಳ್ಳಿ ಹಾಕುತ್ತಾರೆ. ಇಸ್ರಾಯೇಲ್ಯರು ಮೋಶೆಯ ಶಿಷ್ಯರಾಗುವದಕ್ಕೆ ಮೇಘದಲ್ಲಿಯೂ ಸಮುದ್ರದಲ್ಲಿಯೂ ಮುಳುಗುವ ಮೂಲಕ, "ದೀಕ್ಷಾಸ್ನಾನ ಮಾಡಿಸಿ ಕೊಂಡರು," ಮತ್ತು ಆ ಸಮಯದಲ್ಲಿ ಅವರು ರಕ್ಷಿಸಲ್ಪಟ್ಟರು ಎಂದು ಆತನು ಹೇಳುತ್ತಾನೆ. ರಕ್ಷಣೆಯು ನೀರಿನ ದೀಕ್ಷಾಸ್ನಾನದ ಮುಂಚೆಯೇ ಬರುತ್ತದೆಂದು ಯೋಚಿಸುವದಕ್ಕೆ ಇಷ್ಟಪಡುವವರು ಐಗುತ್ಯದಲ್ಲಿ ಪಸ್ಕದ ರಕ್ತವನ್ನು ಪ್ರೋಕ್ಷಿಸುವ ಮೂಲಕವೇ ಇಸ್ರಾಯೇಲ್ಯರು "ರಕ್ಷಣೆ ಹೊಂದಿದರೆಂದು" ತರ್ಕಿಸುತ್ತಾರೆ. ಅವರು ವಾದಿಸುವದೇನೆಂದರೆ, "ನಾವು ರಕ್ತದಿಂದ ರಕ್ಷಿಸಲ್ಪಟ್ಟಿದ್ದೇವೆ, ಮತ್ತು ಇಸ್ರಾಯೇಲ್ಯರು ಇನ್ನೂ ಐಗುಪ್ತ್ಯದಲ್ಲಿರುವಾಗಲೇ, 'ಸಮುದ್ರ ನೀರಿನಲ್ಲಿ ಮೇಘದ ಕೆಳಗೆ ದೀಕ್ಷಾಸ್ನಾನವನ್ನು ಹೊಂದುವ ಮುಂಚೆ,' ಪಸ್ಕದ ವೇಳೆಯಲ್ಲಿ ರಕ್ತವನ್ನು ಸಮೀಪಿಸಿದರು" ಎಂಬದೆ. ಅದಕ್ಕೆ ತದ್ವಿರುದ್ಧವಾಗಿ, ನಾವು "ಕ್ರಿಸ್ತನಲ್ಲಿ ದೀಕ್ಷಾಸ್ನಾನ" ಮಾಡಿಸಿಕೊಳ್ಳುವದನ್ನು ಪೌಲನು ಕೆಂಪು ಸಮುದ್ರದ "ದೀಕ್ಷಾಸ್ನಾನದ" ವೇಳೆ ಇಸ್ರಾಯೇಲ್ಯರು ಹೊಂದಿದ ದೀಕ್ಷಾಸ್ನಾನಕ್ಕೆ ಹೋಲಿಕೆ ಮಾಡುತ್ತಾನೆ.

ಇಸ್ರಾಯೇಲ್ಯರು ನೀರಿನ ಮೂಲಕ ದಾಟಿ ಹೋಗುವ ಮುಖಾಂತರವಾಗಿ ರಕ್ಷಿಸಲ್ಪಟ್ಟರು, ಮತ್ತು ನಾವು ಸಹ ಹಾಗೆಯೆ ರಕ್ಷಿಸಲ್ಪಟ್ಟಿದ್ದೇವೆ (ಮಾರ್ಕ 16:16; 1 ಪೇತ್ರ 3:21). ಪಸ್ಕದ ರಕ್ತದ ಮೂಲಕವಾದ ರಕ್ಷಣೆಯು ಚೊಚ್ಚಲ ಮಕ್ಕಳ ಮರಣದಿಂದ ತಪ್ಪಿಸಿಕೊಂಡ ರಕ್ಷಣೆಯಾಗಿತ್ತು, ಹೊರತು ಐಗುಪ್ತ್ಯದ ದಾಸತ್ವದಿಂದ ಸಿಕ್ಕ ರಕ್ಷಣೆಯಾಗಿರಲಿಲ್ಲ. ಆ ದಾಸತ್ವವು ಇಂದು ನಮ್ಮ ದಾಸತ್ವಕ್ಕೆ ಹೆಚ್ಚು ಸ್ಪಷ್ಟವಾದ ಮಾದರಿ ಆಗಿರುತ್ತದೆ; ಆದದರಿಂದ ಕೆಂಪು ಸಮುದ್ರದಲ್ಲಾದ ದೀಕ್ಷಾಸ್ನಾನವು ನಾವು ಕ್ರಿಸ್ತನಲ್ಲಿ ಮಾಡಿಸಿಕೊಳ್ಳುವ ದೀಕ್ಷಾಸ್ನಾನಕ್ಕೆ ಮಾದರಿಯಾಗಿರುತ್ತದೆ, ಅದರ ಮೂಲಕವೇ ರಕ್ಷಣೆಯು ಸಿಕ್ಕುತ್ತದೆ. 1 ಕೊರಿಂಥ 10:1, 2ರಲ್ಲಿ ಅದೇ ಅಂಶವನ್ನು ಪೌಲನು ತಿಳಿಸುತ್ತಿದ್ದಾನೆ (ಗಲಾತ್ಯ 3:26, 27 ಸಹ ನೋಡಿರಿ). ಐಗುಪ್ತ್ಯರು ಮುಳುಗಿ ಹೋದ "ದಿನ"ವೇ ಇಸ್ರಾಯೇಲ್ಯರು "ರಕ್ಷಣೆ" ಹೊಂದಿದ ಸಮಯವೆಂದು ಮೋಶೆಯು ಘೋಷಿಸಿದನು (ವಿಮೋಚನಕಾಂಡ 14:30).

## ದೈವಿಕ ಅಧಿಕಾರ (11:29)

ಸರ್ವಶಕ್ತನಿಂದ ಯಾವದೇ ಆಜ್ಞೆಯು ಕೊಡಲ್ಪಡದಿರುವ ಅಥವಾ ಪರೋಕ್ಷವಾಗಿ ಉಪದೇಶವು ಸೂಚಿಸಲ್ಪಟ್ಟಿರ ಕಡೆಗಳಲ್ಲಿ, ನಾವು ನಂಬಿಕೆಯಿಂದ ಕಾರ್ಯಪ್ರವೃತ್ತರಾಗುವದಕ್ಕೆ ಸಾಧ್ಯವಿಲ್ಲ. ದೇವರು ಕೆಂಪು ಸಮುದ್ರದ ಬಳಿಯಲ್ಲಿ, "ಮುನ್ನಡೆಯಿರಿ" ಎಂದು ಹೇಳಿದಾಗ, ಇಸ್ರಾಯೇಲ್ಯರು ಅದರ ಮೂಲಕ ನಂಬಿಕೆಯಿಂದ ಹಾಯ್ದು ಹೋಗುವದಕ್ಕೆ ಶಕ್ತರಾಗಿದ್ದರು (ವಿಮೋಚನಕಾಂಡ 14:15, 16). ಒಂದು ವೇಳೆ ದೇವರು ನಮಗೆ ಏನಾದರೂ ಕಾರ್ಯವನ್ನು ಮಾಡುವಂತೆ ಹೇಳಿರುವದಾದರೆ, ಉದಾಹರಣೆಗೆ "ಹೋಗಿರಿ, ಸುವಾರ್ತೆ ಸಾರಿರಿ" ಎಂದು ಹೇಳಿದ್ದರೂ, ಹೇಗೆ ಹೋಗಬೇಕೆಂದು ಹೇಳಿರುವದಿಲ್ಲವಾದರೆ, ಪ್ರಯಾಣಕ್ಕೆ ಯಾವ ದಾರಿಯನ್ನು ಆರಿಸಿಕೊಳ್ಳಬೇಕೆಂಬುದು ನಮಗೆ ಬಿಟ್ಟದ್ದು. ಇಸ್ರಾಯೇಲ್ಯರಲ್ಲಿ ಕೆಲವರು ನಡೆದು ಸಾಗಿರಬಹುದು, ಇನ್ನು ಕೆಲವರು ಪ್ರಾಣಿಗಳ ಬೆನ್ನ ಮೇಲೆ ಕುಳಿತು ಸಾಗಿರಬಹುದು ಅಥವಾ, ಚಿಕ್ಕ ಮಕ್ಕಳ ವಿಷಯದಲ್ಲಿ ನೋಡುವದಾದರೆ, ಅವರ ತಾಯಂದಿರುವ ಅವರನ್ನು ಎತ್ತಿಕೊಂಡು ಸಾಗಿರಬಹುದಾಗಿದೆ. ದೇವರು ಯಾವದಾದರೂ ಒಂದು ಕಾರ್ಯವನ್ನು ಹೇಗೆ ಮಾಡಬೇಕೆಂದು

ನಿರ್ದಿಷ್ಟವಾಗಿ ತಿಳಿಸಿರುವ ಕಡೆಗಳಲ್ಲಿ, ನಾವು ಬೇರೊಂದು ದಾರಿಯನ್ನು ಆರಿಸಿಕೊಳ್ಳಬಾರದು. ಅದು ದೈವಿಕ ಅಧಿಕಾರವನ್ನು ಉಲ್ಲಂಘನೆ ಮಾಡಿದಂತಾಗುವದು.

ಹೊಸ ಒಡಂಬಡಿಕೆಯು ಕೆಲವೊಂದು ಕಾರ್ಯಗಳಿಗಾಗಿ ದೇವರ ಅಧಿಕಾರವನ್ನು ಘೋಷಣಾತ್ಮಕ ಹೇಳಿಕೆಗಳು, ಆಜ್ಞೆಗಳು, ಉದಾಹರಣೆಗಳು, ಮತ್ತು ಪರೋಕ್ಷ ಸೂಚನೆಗಳೊಂದಿಗೆ ಕೊಡುತ್ತದೆ. ಇಂದು ಜೀವಿಸುವ ಯಾವ ವ್ಯಕ್ತಿಗೂ ಬೈಬಲಿನ ಯಾವದೇ ಆಜ್ಞೆಯು ನೇರವಾಗಿ ಮತ್ತು ನಿರ್ದಿಷ್ಟವಾಗಿ ಕೊಡಲ್ಪಟ್ಟಿರುವದಿಲ್ಲ. ಇಂದು ಇಂಥಿಂಥ ಆಜ್ಞೆಯು ನಮಗೆ ಅನ್ವಯವಾಗುತ್ತದೋ ಇಲ್ಲವೋ ಎಂಬುದನ್ನು ನಿರ್ಣಯಿಸುವದಕ್ಕೆ ತಾರ್ಕಿಕವಾಗಿ ಸತ್ಯಾಂಶಗಳಿಂದ ತೀರ್ಮಾನಕ್ಕೆ ಬರತಕ್ಕದ್ದು. ಉದಾಹರಣೆಗೆ, ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ “Martel Pace, ನೀನು ನಿನ್ನ ಪಾಪಗಳು ಪರಿಹಾರವಾಗುವದಕ್ಕಾಗಿ ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು” ಎಂದು ಹೇಳುವದಿಲ್ಲ. ಹೇಗೂ, ಅಪೊಸ್ತಲರ ಕೃತ್ಯಗಳು 2:38ನೇ ವಚನದಿಂದ ನಾನು ಈ ತಾರ್ಕಿಕ ಊಹೆಯನ್ನು ಮಾಡಿಕೊಳ್ಳಬಲ್ಲೆನು. ಪಂಚಾಶತ್ತಮ ದಿನದಂದು ಹಾಜರಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಅವನ ಅಥವಾ ಅವಳ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವ ಅಗತ್ಯವಿತ್ತು. ನಾನು ಪಾಪ ಮಾಡಿದ್ದೇನೆ, ಮತ್ತು ನನ್ನ ಪಾಪಕೃತ್ಯಗಳಿಗಾಗಿ ಕ್ಷಮಾಪಣೆಯನ್ನು ಬಯಸುತ್ತೇನೆ. ನನ್ನ ಪಾಪಗಳು ಸರಿಯಾಗಿ ಅವರ ಪಾಪಗಳಂತೆಯೇ ಆಗಿರುವದಿಲ್ಲವಾದಾಗ್ಯೂ, ಆ ದಿನದಲ್ಲಿ ಅವರಿಗೆ ಕ್ಷಮಾಪಣೆಯನ್ನು ಹೊಂದಿಕೊಳ್ಳಬೇಕಾದರೆ ಮಾಡಬೇಕೆಂದು ಆಜ್ಞಾಪಿಸಿದ್ದನ್ನೇ ನಾನು ಮಾಡತಕ್ಕದ್ದು ಎಂಬ ತಾರ್ಕಿಕವಾದ ತೀರ್ಮಾನಕ್ಕೆ ಬರುವದು ನ್ಯಾಯಸಮ್ಮತವಾದದ್ದು.

ದೇವರ ಸಾಮಾನ್ಯ ಅಧಿಕಾರದದೊಳಗೆ ಕ್ರೈಸ್ತರು ಒಂದು ಔಚಿತ್ಯ ವ್ಯಾಪ್ತಿಯನ್ನು ಹೊಂದಿದ್ದಾರೆ. ಉದಾಹರಣೆಗೆ, ಅಪೊಸ್ತಲರ ಆಜ್ಞೆಯು ಕ್ರೈಸ್ತರು ಆರಾಧನೆಗಾಗಿ ಕೂಡಿ ಬರುವದರ ಕುರಿತಾಗಿತ್ತು (ಇಬ್ರಿಯ 10:25), ಆದರೆ ಕೂಟದ ಸ್ಥಳವು ಯಾವ ವಿಧವಾಗಿರಬೇಕೆಂಬುದು ನಿರ್ದಿಷ್ಟವಾಗಿ ಹೆಸರಿಸಲ್ಪಟ್ಟಿಲ್ಲ ಮತ್ತು ಆ ಕಾರಣದಿಂದ ಅದು ನಮಗೆ ಬಿಟ್ಟ ವಿಚಾರವಾಗಿದೆ. ನಾವು ಮಾಡುವ ಆಯ್ಕೆಯು ಔಚಿತ್ಯದ ವಿಷಯವಾಗಿರುತ್ತದೆ.

ಐಗುಪ್ತ್ಯರು ಬಹುಶಃ ಹೀಗೆ ವಾದಿಸಿರಬಹುದು, ಇಸ್ರಾಯೇಲ್ಯರು ಕೆಂಪು ಸಮುದ್ರ ದಾಟುವದನ್ನು ನಾವು ನೋಡಿದ್ದೇವೆ. ಹಾಗೆ ಮಾಡುವಂತೆ “ಇಸ್ರಾಯೇಲ್ಯರಿಗೆ ದೇವರಿಂದ ಅಧಿಕಾರ ಕೊಡಲ್ಪಟ್ಟಿದ್ದಾದರೆ, ನಾವು ಸಹ ಹಾಗೆಯೇ ಮಾಡಬಲ್ಲೆವು.” ಹೇಗೂ, ಆಜ್ಞೆಯು ಐಗುಪ್ತ್ಯರಿಗಾಗಿ ಆಗಿರಲಿಲ್ಲ; ಅದು ಮೇಘಗಳ ಕೆಳಗಿರುವವರಾಗಿ ಸಮುದ್ರವನ್ನು ದಾಟಿ ಹೋಗುವಂತೆ ಇಸ್ರಾಯೇಲ್ಯರಿಗೆ ಮಾತ್ರವೇ ನೀಡಿದ ಆಜ್ಞೆಯಾಗಿತ್ತು. ನಾವು ಹೀಗೆ ಸಹ ಊಹಿಸಿಕೊಳ್ಳಬಹುದು, “ಆರಾಧನೆಯಲ್ಲಿ ಸಂಗೀತವಾದ್ಯಗಳನ್ನು ಬಳಸುವಂತೆ ದಾವೀದನಿಗೆ ಅಧಿಕಾರ ಕೊಡಲ್ಪಟ್ಟಿತ್ತು, ಆದ್ದರಿಂದ ನಾವು ಸಹ ಹಾಗೆಯೇ ಮಾಡುವಂತೆ ಅಧಿಕಾರ ಕೊಡಲ್ಪಟ್ಟಿದ್ದೇವೆ” (2 ಪೂರ್ವಕಾಲವೃತ್ತಾಂತ 29:25). ಹೇಗೂ, ದಾವೀದನಿಗೆ ಮಾಡುವಂತೆ ದೇವರು ಅಧಿಕಾರ ಕೊಟ್ಟಿದ್ದು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಆಗಿರುತ್ತದೆ, ಮತ್ತು ಆ ನಿಯಮಗಳು ಇಂದು ನಮಗೆ ಅನ್ವಯವಾಗುವದಿಲ್ಲ (ರೋಮಾ 7:1-6; 2 ಕೊರಿಂಥ 3:1-11; ಕೊಲೊಸ್ಸೆ 2:14).

## ನಂಬಿಕೆಯು ಕಾರ್ಯ ಮಾಡುವಾಗ, ಕೃಪೆಯು ಪರಿಣಾಮಕಾರಿಯಾಗುವದು (11:30, 31)

ಯೆಹೋಶುವನು “ಸ್ಥಿರಚಿತ್ತನಾಗಿರು, ಧೈರ್ಯದಿಂದಿರು” ಎಂದು ಪ್ರೋತ್ಸಾಹಿ ಸಲ್ಪಟ್ಟನು

(ಯೆಹೋಶುವ 1:9), ಆದರೆ ಬಹಳಷ್ಟು ವಿರೋಧದ ನಡುವೆ ಆತನು ತನ್ನ ಧೈರ್ಯವುಳ್ಳ ವೈರಾಗ್ಯವನ್ನು ಕಾಪಾಡಿಕೊಳ್ಳಬೇಕಿತ್ತು. ಆತನು ಯೋರ್ದಾನ್ ನದಿಯನ್ನು ದಾಟುವದನ್ನು ಮತ್ತು ಯೆರಿಕೋ ಪಟ್ಟಣ ಜಯಿಸಿಕೊಳ್ಳುವದನ್ನು ನಂಬಿಕೆಯಿಂದಲೇ ಮಾಡಿದನು. ಯೆರಿಕೋವಿನ ಗೋಡೆಗಳು ಭೇದಿಸಲ್ಪಡಲಿಕ್ಕಾಗದವುಗಳಾಗಿದ್ದವು, ಆದರೆ ಅವುಗಳನ್ನು ನಂಬಿಕೆಯಲ್ಲಿ ಏಳು ದಿನಗಳ ಕಾಲ ಸುತ್ತುವದರಿಂದಾಗಿ ಅವುಗಳನ್ನು ಕುಸಿದು ಬೀಳುವಂತೆ ಮಾಡಲಾಯಿತು.

ನಾವು ರಕ್ಷಿಸಲ್ಪಟ್ಟ ವೇಳೆ, ಅದು ನಂಬಿಕೆಯ ಮೂಲಕ ಕೃಪೆಯಿಂದಲೇ ಸಾಧಿಸಲ್ಪಟ್ಟಿತು (ಎಫೆಸ 2:8, 9). ಹೇಗೂ, ದೇವರ ಕೃಪೆಯು ಪರಿಣಾಮವನ್ನು ಹೊಂದಬೇಕಾದರೆ, ಅಲ್ಲಿ ಒಂದು ಸಜೀವವಾದ ನಂಬಿಕೆಯಿರತಕ್ಕದ್ದು. ನಂಬಿಕೆಯು ಮಾತ್ರವೇ "ನಿರ್ಜೀವ" ಮತ್ತು "ನಿಷ್ಪ್ರಯೋಜಕ" ಎಂದು ಕರೆಯಲ್ಪಟ್ಟಿದೆ (ಯಾಕೋಬ 2:17, 20).

ನಾವು ಹೀಗೆ ಹೇಳಬಹುದು, "ಅವರು ಯೆರಿಕೋವಿನ ಗೋಡೆಗಳನ್ನು ಏಳು ದಿನಗಳ ಕಾಲ ಸುತ್ತಿದಾಗ ಅವುಗಳು ನಂಬಿಕೆಯ ಮೂಲಕ ಕೃಪೆಯಿಂದಲೇ ಬಿದ್ದು ಹೋದವು." ಅದೇ ರೀತಿಯಲ್ಲಿ, ರಹಾಬಳು ಇಸ್ರಾಯೇಲ್ಯರ ಗೂಢಚಾರರನ್ನು ಕಾಪಾಡುವ ಮೂಲಕ ತನ್ನ ನಂಬಿಕೆಯನ್ನು ತೋರ್ಪಡಿಸಿದಾಗ (ತನಗೆ ಲಭ್ಯವಿದ್ದ ಪುರಾವೆಗೆ ಅನುಗುಣವಾಗಿ), ಅವಳೂ ನಂಬಿಕೆಯ ಮೂಲಕ ಕೃಪೆಯಿಂದಲೇ ನೀತಿವಂತಳೆಂದು ನಿರ್ಣಯಿಸಲ್ಪಟ್ಟಳು, ಅಥವಾ ರಕ್ಷಿಸಲ್ಪಟ್ಟಳು. ಯಾಕೋಬ 2:25ನೇ ವಚನವು ನಮಗೆ ಅದೇ ಸಂಗತಿಯನ್ನು ಕಲಿಸುತ್ತದೆ, ಆಕೆಯು ತನ್ನ ನಂಬಿಕೆಯ ಜೊತೆಯಲ್ಲಿ "ಕ್ರಿಯೆಗಳಿಂದಲೇ ನೀತಿವಂತಳೆಂಬ ನಿರ್ಣಯವನ್ನು ಹೊಂದಿದಳು" ಎಂದು ಹೇಳುತ್ತದೆ. ಒಬ್ಬನು ನಂಬಿಕೆಯಿಂದ ಮಾತ್ರವೇ ನೀತಿವಂತನೆಂಬ ನಿರ್ಣಯವನ್ನು ಹೊಂದುತ್ತಾನೆಂದು ಇಬ್ರಿಯರಿಗೆ ಪತ್ರಿಕೆಯು – ಹೊಸ ಒಡಂಬಡಿಕೆಯ ಯಾವದೇ ಪುಸ್ತಕವಾಗಲಿ ಸಹ – ಕಲಿಸುವದೇ ಇಲ್ಲ. ಯಾಕೋಬನು ಜೊತೆಯ ಮನುಷ್ಯರ ದೃಷ್ಟಿಯಲ್ಲಿ ನೀತಿವಂತರಾಗುವ ಕುರಿತು ಮಾತ್ರವೇ ಮಾತಾಡುತ್ತಿದ್ದಾನೆ ಹೊರತು ಆತ್ಮದ ರಕ್ಷಣೆಯ ವಿಷಯದಲ್ಲಿ ಅಲ್ಲವೆಂದು ಯೋಚಿಸುವವರು ಯಾಕೋಬ 2:14ನ್ನು ಪರಿಗಣಿಸಿರುವದಿಲ್ಲ: "ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆಯು ಇವನನ್ನು *ರಕ್ಷಿಸುವದೋ?*" ಯಾಕೋಬನು ರಕ್ಷಣೆಯ ಕುರಿತು ಮಾತಾಡುತ್ತಿದ್ದಾನೆ, ಹೊರತು ಕೇವಲ ಬೇರೆಯವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯ ಹೊಂದುವ ಕುರಿತಾಗಿ ಅಲ್ಲ.

## ಪರಿಸ್ಥಿತಿಯ ನೈತಿಕತೆ?

ಇಷ್ಟೊಂದು ವರ್ಷಗಳ ವರೆಗಿನ ಕ್ರೈಸ್ತೀಯ ನೈತಿಕತೆ ಅಧ್ಯಯನಗಳಲ್ಲಿ ಐಗುಪ್ತ್ಯದ ಸೂಲಗಿತ್ತಿಯರು (ವಿಮೋಚನಕಾಂಡ 1:15-21) ಮತ್ತು ರಹಾಬಳು ಹೇಳಿದ ಸುಳ್ಳುಗಳನ್ನು ಒಳಗೊಂಡಿರುತ್ತದೆ. ಈ ಪ್ರಕರಣಗಳು ಒಂದು ಪ್ರಶ್ನೆಯನ್ನು ಎಬ್ಬಿಸುತ್ತವೆ, ಯಾಕೆಂದರೆ ಅವೆರಡಕ್ಕೂ ಶಾಸ್ತ್ರಗಳು ಅನುಮೋದನೆಯನ್ನು ನೀಡಿರುತ್ತವೆ. ಒಂದು ದೊಡ್ಡ ದುಷ್ಟತನವನ್ನು ತಡೆಗಟ್ಟುವದಕ್ಕಾಗಿ ಸುಳ್ಳನ್ನು ಹೇಳುವದು ಹಳೆಯ ಒಡಂಬಡಿಕೆಯಲ್ಲಿ ಒಂದು ಪಾಪವೆಂದು ಎಣಿಸಲ್ಪಟ್ಟಿರುವದಿಲ್ಲ. ಐಗುಪ್ತ್ಯದ ಸೂಲಗಿತ್ತಿಯರು ಐಗುಪ್ತ್ಯದಲ್ಲಿನ ಮುಗ್ಧ ಕೂಸುಗಳ ಕೊಲ್ಲುವಿಕೆಯನ್ನು ತಡೆಯುವದಕ್ಕಾಗಿ ಸುಳ್ಳನ್ನು ಹೇಳಿದರು, ಮತ್ತು ರಹಾಬಳು ಯೆರಿಕೋವನ್ನು ಪ್ರವೇಶಿಸಿದ್ದ ಗೂಢಚಾರರನ್ನು ಕಾಪಾಡುವದಕ್ಕೆ ಸುಳ್ಳು ಹೇಳಿದಳು. ಇಬ್ಬರೂ ಜೀವಗಳನ್ನು ಉಳಿಸಿದರು.

ದೇವರು ಹೊಸ ಒಡಂಬಡಿಕೆಯಲ್ಲಿ ವಿಷಯಗಳನ್ನು ಬೇರೆ ವಿಧದಲ್ಲಿ ಕಾಣುತ್ತಾನೆಂದು ವಾದಿಸುವದು ಊಹಾತ್ಮಕವಾಗಿರಬಲ್ಲದು. ರಹಾಬಳು ದೇವಜನರೊಂದಿಗೆ ಗುರುತಿಸಿಕೊಳ್ಳಲು ಬಯಸಿದ್ದಳೆಂಬುದು ಸ್ಪಷ್ಟವಾಗಿರುತ್ತದೆ ಮತ್ತು ತನ್ನ ಯೋಗ್ಯತೆಯನ್ನು ಈ ಕ್ರಿಯೆಯ ಮೂಲಕ ತೋರಿಸಿ ಕೊಟ್ಟಳು. ಅವಳು ತನ್ನ ಪಾಪಮಯ ಜೀವಿತವನ್ನು ದ್ವೇಷಿಸುವ ಹಂತಕ್ಕೆ ಬಂದಿರಬಹುದಾಗಿದೆ ಮತ್ತು ಆಕೆಯು ಗೂಢಚಾರರನ್ನು ಕಾಪಾಡುವ ಹೊತ್ತಿಗೆ ತನ್ನ ದುಷ್ಟ ಜನರ ಬಗ್ಗೆ ಹಗೆತನವನ್ನು ಬೆಳೆಸಿಕೊಂಡಿರಬಹುದು. ಆಕೆಯು ಇಸ್ರಾಯೇಲ್ಯರಲ್ಲಿ ಯಾವದೇ ವ್ಯಕ್ತಿಯು ನಡೆದುಕೊಂಡಿರಬಹುದಾದ ರೀತಿಯಲ್ಲಿಯೇ ನಡಕೊಂಡಳು; ಆದದರಿಂದ, ಹೃದಯ ಮತ್ತು ಜೀವನದಲ್ಲಿ, ಆಕೆಯು ದೇವರ ಜನರೊಂದಿಗೆ ಐಕ್ಯಗೊಂಡಳು.

## ಪಟ್ಟಣಗಳ ನಾಶನ (11:31)

ದೇವರು ಪಟ್ಟಣಗಳು ಮತ್ತು ಜನರನ್ನು ನಾಶಗೊಳಿಸಬೇಕೆಂದು ನೀಡಿದ ಆಜ್ಞೆಯ ವಿಷಯವಾಗಿ ಸಂದೇಹವಾದಿಗಳು ಹಳೆಯ ಒಡಂಬಡಿಕೆಯ ಕಥೆಗಳ "ಅನೈತಿಕತೆಯ" ಮೇಲೆ ಆಕ್ರಮಣ ಮಾಡುತ್ತಾರೆ. ಅವರು ಆಕ್ಷೇಪಣೆಯನ್ನು ವ್ಯಕ್ತ ಪಡಿಸುತ್ತಾ ಹೀಗೆ ಹೇಳುತ್ತಾರೆ, "ಒಬ್ಬ ನೀತಿವಂತನು ಮತ್ತು ಪ್ರೀತಿಯುಳ್ಳ ದೇವರು ಹೇಗೆ ಅಂಥ ಕಾರ್ಯವನ್ನು ಮಾಡುವದಕ್ಕೆ ಸಾಧ್ಯ? ಅದು ಹೊಸ ಒಡಂಬಡಿಕೆಯ ದೇವರಿಗೆ ಸರಿಹೊಂದದಿರುವ ಕಾರ್ಯವಾಗಿ!" ಅಂತಹ ನಾಶನಕ್ಕೆ ಕೊಡಲ್ಪಟ್ಟಿರುವ ಕಾರಣವು ಅವಿಧೇಯತೆಯಾಗಿರುತ್ತದೆ. ಮನುಷ್ಯ ಕಲ್ಪಿತ ಧರ್ಮಗಳಿಗೆ ಸಂಪೂರ್ಣವಾಗಿ ಒಪ್ಪಿಸಿಕೊಂಡಂತಹ ಅತ್ಯಂಥ ಭಯಂಕರವಾದ ಅನೈತಿಕ ನಡವಳಿಕೆಯಲ್ಲಿದ್ದ ಪಟ್ಟಣಗಳ ವಿಚಾರದಲ್ಲಿ ಸಂಪೂರ್ಣ ವಿನಾಶಗೊಳಿಸುವದಕ್ಕಿಂತ ಬೇರೊಂದು ದಾರಿಯಲ್ಲಿ ನಡೆದುಕೊಂಡಿರುವದಕ್ಕೆ ಸಾಧ್ಯವಿರಲಿಲ್ಲ. ಜನರು ದೇವರಿಗೆ ಸಂಪೂರ್ಣ ಅವಿಧೇಯತೆಯಲ್ಲಿದ್ದರು ಮತ್ತು ಹಿಂದಿರುಗಿ ಬರುವದಕ್ಕಾಗದಂಥಹ ಹಂತವನ್ನು ತಲುಪಿದ್ದರು. (ಇಬ್ರಿಯ 6:4-6ರ ಮೇಲಿನ ಚರ್ಚೆಯನ್ನು ಪುನರಾವಲೋಕನ ಮಾಡಿರಿ.) ಅವರ ಪಾಪಗಳ ಸ್ವಭಾವದ ಪ್ರಕಾರವಾಗಿ ಅಂಥ ಪಟ್ಟಣಗಳನ್ನು ವಾಗ್ದಾನ ದೇಶದಿಂದ ನಿರ್ನಾಮಗೊಳಿಸುವದು ಅಗತ್ಯವಾಗಿತ್ತು.

ದೇಶಿಯ ನಿವಾಸಿಗಳ ಅಪರಾಧವು ಪೂರ್ಣಸ್ಥಿತಿಗೆ ಬಂದ ಬಳಿಕ ಇಸ್ರಾಯೇಲ್ಯರು ದೇಶವನ್ನು ಸ್ವಂತವಾಗಿಸಿಕೊಳ್ಳುವರೆಂದು ದೇವರು ವಾಗ್ದಾನ ಮಾಡಿದನು (ಆದಿಕಾಂಡ 15:16). ಅವರು ಕಾನಾನ್ ದೇಶವನ್ನು ಪ್ರವೇಶಿಸಿದಾಗ, ಇಸ್ರಾಯೇಲ್ಯರು ಅಮೋರಿಯರಿಗಿಂತಲೂ ಹೆಚ್ಚು ನೀತಿವಂತರಾಗಿದ್ದರು. ಅವರು ಕಾನಾನ್ಯರನ್ನು ದೇಶದಿಂದ ನಿರ್ನಾಮಗೊಳಿಸುವದನ್ನು ವಿಧೇಯತೆಯಿಂದ ಮಾಡಿದ್ದಲ್ಲಿ, ಅವರಿಗೆ ಅನ್ಯದೇವಾರಾಧಕರ ವಿಗ್ರಹಾರಾಧನೆಯ ಪರಿಚಯವೂ ಆಗುತ್ತಿರಲಿಲ್ಲ. ದೇವರು ಅಪ್ಪಣೆ ಕೊಟ್ಟ ಪ್ರಕಾರವಾಗಿಯೇ ಸರಿಯಾಗಿ ಮಾಡುವದರಲ್ಲಿ ಅವರು ವಿಫಲರಾಗಿದ್ದು ಅನಂತರದಲ್ಲಿ ಅವರನ್ನು ಮತಭ್ರಷ್ಟತೆಗೆ ನಡಿಸಿತ್ತು. ಅವರು ತಮ್ಮ ಸುತ್ತಲಿರುವ ಅನ್ಯದೇವಾರಾಧಕರನ್ನು ಅನುಕರಣೆ ಮಾಡಿದಾಗ, ಇಸ್ರಾಯೇಲ್ಯರು ತಮಗೆ ದೇಶವನ್ನು ಕೊಡುವದಕ್ಕೆ ದೇವರಿಗಿರುವ ಕಾರಣವನ್ನೇ ನಿರ್ಮೂಲಗೊಳಿಸಿದ್ದರು.

ಈ ಅಂಶದ ಕುರಿತು Burton Coffman ಒಂದು ಸುಂದರವಾದ ದೃಷ್ಟಾಂತವನ್ನು ಕೊಡುತ್ತಾನೆ. ರೈಲುಗಳು ಒಂದು ಕಾಲದಲ್ಲಿ Coloradoದಲ್ಲಿನ Moffatt ಸುರಂಗ ಮಾರ್ಗದ ಮೂಲಕ ಅಮೆರಿಕದಲ್ಲಿನ ಭೂಖಂಡದ ವಿಭಾಜಕವನ್ನು ದಾಟಿ ಹೋಗುತ್ತಿದ್ದವು. ಈ ರೈಲುಗಳಿಗೆ ಬೆಟ್ಟವನ್ನು ಏರಿಕೊಂಡು ಮತ್ತು ಇಳಿಜಾರಿನಲ್ಲಿ ಸಾಗಿಕೊಂಡು ಹೋಗುವದರಲ್ಲಿ ಬಹಳ

ಕಷ್ಟವಾಗುತ್ತಿತ್ತು, ಆದ್ದರಿಂದ ಅಲ್ಲಲ್ಲೊ ಪ್ರತಿಯೊಂದು ತಿರುವುಗಳಲ್ಲಿಯೂ ಹಳಿತಪ್ಪಿಸುವ ಸಾಧನಗಳನ್ನು ಅಳವಡಿಸಲಾಗಿರುತ್ತಿತ್ತು. ಅದು ಬೆಟ್ಟದ ಕೆಳಗಿನ ಗ್ರಾಮಗಳನ್ನು ನಾಶಗೊಳಿಸಿದಂತೆ ತಡೆಯುವದಕ್ಕೆ ಓಡಿಹೋದ ರೈಲನ್ನು ಕಾರ್ಯನಿರ್ವಾಹಕನು ಹಳಿ ತಪ್ಪಿಸುತ್ತಿದ್ದನು. ನಿಯಂತ್ರಣವನ್ನು ಮೀರಿರುವ ರೈಲಂತೂ ಹೇಗೂ ನಾಶಗೊಳ್ಳುತ್ತಿತ್ತಷ್ಟೆ.[101] ಅದೇ ರೀತಿಯಲ್ಲಿಯೇ, ಜನರು ಯಾವಾಗ ನಿತ್ಯವಾದ ನಾಶನದೆಡೆಗೆ ಒಲವು ಹೊಂದಿದ್ದಾರೆಂಬುದನ್ನು ದೇವರು ಬಲ್ಲವನಾಗಿದ್ದಾನೆ. ಇಸ್ರಾಯೇಲ್ಯನ್ನು ಕಲುಷಿತಗೊಳಿಸದಂತೆ ತಡೆಯುವದಕ್ಕಾಗಿ, ಆತನು ಕಾನಾನಿನಲ್ಲಿ ನೆಲೆಸಿದ್ದ ಗೋತ್ರಗಳನ್ನು ನಾಶಗೊಳಿಸುವಂತೆ ಆಜ್ಞಾಪಿಸಿದನು.

## ಕೆಲವರು ಅದ್ಭುತಗಳ ಮೂಲಕ, ಇನ್ನು ಕೆಲವರು ಒದಗಿಸಲ್ಪಡುವಿಕೆಯಿಂದ ಸಹಾಯ ಹೊಂದಿದರು (11:32-34)

11:33, 34ರಲ್ಲಿ ಪಟ್ಟಿ ಮಾಡಲಾಗಿರುವ ಕೆಲವು ಕೃತ್ಯಗಳನ್ನು ದೇವರು ಅದ್ಭುತಕರವಾಗಿ ಮಧ್ಯಪ್ರವೇಶಿಸುವ ಮೂಲಕವಾಗಿ ಸಾಧಿಸಲ್ಪಟ್ಟಿದ್ದರೆ, ಇನ್ನು ಕೆಲವು ಆತನು ಒದಗಿಸಲ್ಪಡುವಿಕೆಯ ಕ್ರಿಯೆಯ ಮೂಲಕ ಸಾಧಿಸಲ್ಪಟ್ಟವು. ಉದಾಹರಣೆಗೆ, ಮಿದ್ಯಾನ್ಯರನ್ನು ಜಯಿಸಿದ್ದರಲ್ಲಿ, ಗಿದ್ಯೋನನು ರಾತ್ರಿಯ ವೇಳೆಯಲ್ಲಿ ದಾಳಿ ನಡಿಸಿ, ದೀಪಗಳನ್ನು ಒಡೆದು ವೈರಿಗಳನ್ನು ಹೆದರಿಸಿ ಗೊಂದಲಕ್ಕೀಡು ಮಾಡುವಂತಹ ಮುಂದಾಲೋಚನೆಯಲ್ಲಿ ಬಹಳಷ್ಟು ಜ್ಞಾನವನ್ನು ತೋರ್ಪಡಿಸಿದನು. ಇದಕ್ಕಾಗಿ ಯಾವದೇ ಸ್ವಾಭಾವಿಕ ಶಕ್ತಿಯನ್ನು ಮೀರಿದ ರೀತಿಯಲ್ಲಿ ದೇವರ ಮಧ್ಯಪ್ರವೇಶಿಸುವಿಕೆಯ ಅಗತ್ಯವಿರಲಿಲ್ಲವೆಂದು ತೋರುತ್ತದೆ. ಅಂಥ ಕಾರ್ಯಗಳು ಅದ್ಭುತಗಳಿಲ್ಲದೆ ನಡೆದಿರುತ್ತವೆ. ಗಿದ್ಯೋನನ ಕಥೆಯಲ್ಲಿ ಸಂಭವಿಸಿರುವ ಇತರ ಘಟನೆಗಳು ಅದ್ಭುತಕರವಾಗ ಘಟನೆಗಳೆಂದು ಸ್ಪಷ್ಟವಾಗುತ್ತದೆ (ನ್ಯಾಯಸ್ಥಾಪಕರು 6:36–40). ಗಿದ್ಯೋನನು ಒಣ ಭೂಮಿಯ ಮೇಲಿಲ್ಲದ ಮಂಜನ್ನು ತುಪ್ಪಟದಲ್ಲಿ (ಸ್ಪಂಜಿನಲ್ಲಿ) ಕಂಡಾಗ, ಮತ್ತು ಬಳಿಕ ತುಪ್ಪಟದಲ್ಲಿ ಮಂಜಿಲ್ಲದೆ ಭೂಮಿಯ ಮೇಲೆ ಮಂಜನ್ನು ಕಂಡಾಗ, ಇವುಗಳು ಕೇವಲ ಕಾಕತಾಳೀಯವಾದ ಘಟನೆಗಳಲ್ಲ, ಆದರೆ ಅದ್ಭುತಗಳೇ ಎಂದು ಗಿದ್ಯೋನನು ಅರಿತುಕೊಂಡಿದ್ದನು. ಮಿದ್ಯಾನ್ಯರ ಸೈನಿಕನು ಹೊಂದಿದ ಪ್ರಕಟನೆಯು ಅದ್ಭುತಕರವಾಗಿರತಕ್ಕದ್ದು (ನ್ಯಾಯಸ್ಥಾಪಕರು 7:9–15); ಭವಿಷ್ಯದ ಕುರಿತಾದ ನಿರ್ದಿಷ್ಟವಾದ ತಿಳುವಳಿಕೆಯು ಅಸ್ವಾಭಾವಿಕವಾಗಿ ಕೊಡಲ್ಪಟ್ಟಿರುವ ನೇರವಾದ ಪ್ರಕಟನೆಯಿಂದ ಮಾತ್ರವೇ ಕೊಡಲ್ಪಡತಕ್ಕದ್ದಾಗಿದೆ. ಸೈನಿಕರು ಬರಲಿದ್ದ ಸೋಲಿನ ಕುರಿತು ಸಂಭಾಷಿಸುತ್ತಿರುವದನ್ನು ಗಿದ್ಯೋನನು ಕೇಳಿಸಿಕೊಂಡಿದ್ದು ಅದ್ಭುತವಾಗಿರಲಿಲ್ಲ, ಆದರೆ ಅದೊಂದು ಬಹಳ ಪ್ರಯೋಜನವುಳ್ಳ ಒದಗಿಲ್ಪಡುವಿಕೆಯ ಘಟನೆಯಾಗಿತ್ತು. ಆತನು ಶಿಬಿರದ ಹತ್ತಿರ ಹೋಗದೆಯೆ ಆ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದರೆ (ಕನಿಷ್ಠ ಆಗ ಲಭ್ಯವಿದ್ದ ತಂತ್ರಜ್ಞಾನದ ಮೂಲಕ) ಅದು ಅದ್ಭುತಕರವಾಗಿರುತ್ತಿತ್ತು.

ಕೆಲವು ಸಾರಿ ದೇವರು ಅಗೋಚರವಾದ ದಾರಿಗಳಲ್ಲಿ ಕಾರ್ಯ ಮಾಡಿದ್ದು ಅದ್ಭುತರವೆಂದು ಸ್ಪಷ್ಟಗೊಳ್ಳುತ್ತದೆ. ಸ್ತ್ರೀಯರು ತಮ್ಮ ಸತ್ತವರನ್ನು ಪುನರುತ್ಥಾನದ ಮೂಲಕ ಹಿಂದಕ್ಕೆ ಪಡೆದುಕೊಂಡರು. ಒಬ್ಬನು ತಾನು ಅದ್ಭುತಗಳನ್ನು ಕಂಡಿದ್ದೇನೆಂದು ಹೇಳುವದಾದರೆ, ಆತನಿಗೆ ಅನೇಕ ದಿನಗಳಿಂದ ಸತ್ತಿದ್ದವನೊಬ್ಬನು ಜೀವಂತವಾಗಿ ಎಬ್ಬಿಸಲ್ಪಟ್ಟಿರುವದಕ್ಕೆ ಪುರಾವೆಯೊಂದನ್ನು ಒದಗಿಸುವಂತೆ ಕೇಳಿರಿ. ಯಾವ "ನಂಬಿಕೆಯಿಂದ ಗುಣಪಡಿಸುವವನು" ಸಹ ಒಂದು ಗೀರಿದ ಗಾಯವನ್ನು ಸಹ ತಕ್ಷಣದಲ್ಲೇ ಗುಣಪಡಿಸಲಾರನು, ಮತ್ತು ಖಂಡಿತವಾಗಿಯೂ

ಒಬ್ಬನು ಸತ್ತವರನ್ನು ಜೀವಂತವಾಗಿ ಎಬ್ಬಿಸುವದಕ್ಕೆ ಸಾಧ್ಯವಿಲ್ಲ.

ದೇವರು ಗತಕಾಲದಲ್ಲಿ ತನ್ನ ಜನರಿಗೆ ಪ್ರಯೋಜನಗಳನ್ನು ತರುವದಕ್ಕಾಗಿ ಅದ್ಭುತಕರವಲ್ಲದ ದಾರಿಯಲ್ಲಿ ಕೆಲಸ ಮಾಡಿರುವವದಾದರೆ, ಆತನು ಈ ದಿನದಲ್ಲಿ ಸಹ ಏಕೆ ಅದನ್ನು ಮಾಡುವಕ್ಕಾಗುವದಿಲ್ಲ? ಆತನು ನಮಗೆ ಸ್ವಲ್ಪವೂ ತಿಳಿಯದಂತಹ ದಾರಿಗಳಲ್ಲಿ ತೆರೆಯ ಹಿಂದೆ ಕೆಲಸವನ್ನು ಮಾಡಬಹುದಾಗಿದೆ. ನಾವು ನ್ಯಾಯತೀರ್ಪನ್ನು ದಾಟಿ ಆತನ ಸಮಕ್ಷಮದಲ್ಲಿ ಪ್ರವೇಶಿಸುವ ತನಕವೂ ಆತನು ನಮಗಾಗಿ ಮಾಡಿರುವದನ್ನು ಗ್ರಹಿಸಿಕೊಳ್ಳದೆ ಹೋಗಬಹುದು. ನೀವು ಒಂದು ಅದ್ಭುತವನ್ನು ನೋಡಿದ್ದೇನೆಂದು ಹೇಳಿಕೊಳ್ಳುವದರಲ್ಲಿ ಎಚ್ಚರಿಕೆಯಾಗಿರಿ. ಒಂದು ದೈವಿಕ ಸಂದೇಶ ಅಥವಾ ಸಂದೇಶವಾಹಕನನ್ನು ದೃಢೀಕರಿಸುವದಕ್ಕಾಗಿ ಸೂಚಕಕಾರ್ಯಗಳನು ಮತ್ತು ಮಹತ್ಕಾರ್ಯಗಳು ಕೊಡಲ್ಪಟ್ಟಿರುತ್ತವೆ, ಹೊರತು ಕೇವಲ ನಮ್ಮ ಅನುಕೂಲತೆ ಅಥವಾ ಆಶ್ಚರ್ಯಕ್ಕೋಸ್ಕರ ಕೊಡಲ್ಪಟ್ಟಿರುವದಿಲ್ಲ. ಅದ್ಭುತಗಳು ಹೊಸ ಒಡಂಬಡಿಕೆಯನ್ನು ಪ್ರಕಟಗೊಳಿಸಿದ ಸಂದೇಶದ ಒಂದು ಭಾಗವಾಗಿದ್ದವು. ಹೊಸ ಪ್ರಕಟನೆ ಮತ್ತು ಅದ್ಭುತಗಳು ಜೊತೆ ಜೊತೆಯಾಗಿ ಸಾಗುತ್ತವೆ.

ನಾವು ಇಬ್ರಿಯ 11ನೇ ಅಧ್ಯಾಯದಲ್ಲಿ ಓದುವ ಜನರು ತಮ್ಮ ನಂಬಿಕೆಯಿಂದ ಮಹಾನ್ ಕಾರ್ಯಗಳನ್ನು ಮಾಡಿದರು. ಕೆಲವು ಸಾರಿ ನಾವು ಒಂದು ಬಲವಾದ ನಂಬಿಕೆಯಿಲ್ಲದೆಯೇ ಮಹಾನ್ ಕಾರ್ಯಗಳನ್ನು ಮಾಡುವದಕ್ಕೆ ಪ್ರಯತ್ನಿಸುತ್ತೇವೆ. ಒಂದು ಮಹಾನ್ ನಂಬಿಕೆಯ ಕಡೆಗಿನ ಪ್ರಯಾಣವು ಸುದೀರ್ಘವಾಗಿರಬಹುದು, ಆದ್ದರಿಂದ ಅದನ್ನು ಸಾಧಿಸಿಕೊಳ್ಳಲು ನೀವು ಈಗಲೇ ಅದನ್ನು ಆರಂಭಿಸತಕ್ಕದ್ದು. ಅನುದಿನವೂ ನಂಬಿಕೆಯಿಂದ ಜೀವಿಸುವದು ನಂಬಿಕೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ಹೆಚ್ಚಳವನ್ನು ಉಂಟು ಮಾಡುತ್ತದೆ. ಒಂದು ದಿನ, ನೀವು ಎಚ್ಚರಗೊಂಡಾಗ ನಿಮ್ಮ ನಂಬಿಕೆಯು ಎಷ್ಟೊಂದು ಪ್ರಗತಿಯನ್ನು ಹೊಂದಿರುತ್ತದೆಂಬುದನ್ನು ಕಾಣುವಿರಿ. ನೀವು ಇಷ್ಟೊಂದು ವರ್ಷಗಳಿಂದ ಯಾರೊಂದಿಗೆ ನಡೆಯುತ್ತಿದ್ದಿರೋ ಅ ದೇವರ ಸನ್ನಿಧಿಯಲ್ಲಿರಬೇಕೆಂದು ನೀವು ಬಯಸುವಿರಿ. ಒಳ್ಳೇದಕ್ಕಾಗಿ ನಿಮ್ಮ ಮಹಾನ್ ಪ್ರಭಾವವು ಬೇರೆಯವರ ಮೇಲೆ ಪರಿಣಾಮವನ್ನು ಬೀರುವದು.

## ಇಂಥವರಿಗೆ ಲೋಕವು ಯೋಗ್ಯಸ್ಥಳವಾಗಿರಲಿಲ್ಲ (11:35-40)

ನಂಬಿಕೆಯು ಬೆಳೆಯುತ್ತದೆ: ಕ್ರಿಮಿಕೀಟಗಳಿಂದ ಸುರಕ್ಷಿತವಾಗಿ ಒಂದು ಕಾವುಮನೆಯಲ್ಲಿ ಇರುವದರಿಂದಲ್ಲ, ಆದರೆ ನಿಜವಾದ ಗಂಡಾಂತರಗಳನ್ನು ಎದುರಿಸುತ್ತಾ ಜೀವನದ ಅಗ್ನಿಪರೀಕ್ಷೆಗಳನ್ನು ಎದುರಿಸುವದರಲ್ಲಿಯೇ ಆಗಿದೆ. ಸಂಕಷ್ಟಗಳ ಮಧ್ಯದಲ್ಲಿ ನಾವು ಹೊಂದಿರುವ ನಂಬಿಕೆಯು ಸ್ಥಿರವಾಗಿ ನೆಲೆಗೊಳ್ಳುವಂತಹ ವಿಶ್ವಾಸವಾಗಿ ಮಾರ್ಪಡುತ್ತದೆ. ತಮ್ಮ ನಂಬಿಕೆಗೋಸ್ಕರ ಬಾಧೆಯನ್ನನುಭವಿಸಿದವರು ದಂಡನೆಯಿಂದ ತಪ್ಪಿಸಿಕೊಳ್ಳುವದಕ್ಕೆ "ಬಿಡುಗಡೆಯನ್ನು" ಸ್ವೀಕರಿಸಿಕೊಂಡ ಅಥವಾ ಮೋಶೆಯ ಒಡಂಬಡಿಕೆಯನ್ನು ನಿರಾಕರಿಸುವ ಅಪರಾಧಕ್ಕೊಳಗಾಗಲಿಲ್ಲ. ಕ್ರಿ.ಶ. ಪ್ರಥಮ ಶತಮಾನದ ಅಂತ್ಯದ ಹೊತ್ತಿಗೆ, ಕ್ರೈಸ್ತರು ಅದೇ ರೀತಿಯಲ್ಲಿಯೇ ತಮ್ಮ ಅರಿಕೆಯಲ್ಲಿ ಒಂದು ಪದವನ್ನು ಬದಲಾಯಿಸುವ ಮೂಲಕ, "*Kurios Christos*" ("ಕ್ರಿಸ್ತನು ಕರ್ತನು") ಎಂಬದರಿಂದ "*Kurios Kaisar*" ("ಕೈಸರನು ಕರ್ತನು") ಎಂದು ಹೇಳಿದ್ದರೆ ಬಿಡುಗಡೆ ಪಡೆಯುತ್ತಿದ್ದರು. ಲೋಕವು ಯಾವಾಗಲೂ, "ನಮ್ಮೊಂದಿಗೆ ಸಾಗು, ಮತ್ತು ನಾವು ನಿನಗೆ ತೊಂದರೆ ಕೊಡುವದಿಲ್ಲ. ನೀನು ಭಿನ್ನನಾಗಿರುವದಕ್ಕೆ ಬಯಸಲಾಗದು. ನಮ್ಮ ಹಾಗೆಯೇ ನೀನು ಜೀವಿಸುವದಾದರೆ ನಾವು ನಿನಗೆ ಹಿಂಸೆಯನ್ನು ನೀಡುವದಿಲ್ಲ" ಎಂದು ಹೇಳುತ್ತದೆ.

ಆಮೀಷಕ್ಕೆ ಒಳಗಾಗಿ ಲೋಕದೊಂದಿಗೆ ಜನಪ್ರಿಯರಾಗಬೇಕೆಂಬ ಶೋಧನೆಯು ಎಷ್ಟೊಂದು ಬಲವಾಗಿರುತ್ತದೆ! ಇದು ಯಾವ ಸಭೆಯನ್ನು ಅದು ಇರಬಾರದೆಂದು ಉದ್ದೇಶಿಸಿದ್ದ ರೀತಿಯಾಗಿ ಮಾರ್ಪಡಿಸುವದಕ್ಕೆ ದೊಡ್ಡ ಸ್ಫೂರ್ತಿಯಾಗಿರುತ್ತದೆಂದು ನನಗೆ ಮನವರಿಕೆಯಾಗಿರುತ್ತದೆ. ಇಬ್ರಿಯ ಪತ್ರಿಕೆಯ ಆ ಮಾತುಗಳು ಕ್ರಿಸ್ತನಿಗೆ ತಮ್ಮ ನಿಷ್ಠಾವಂತಿಕೆಯನ್ನು ಕಾಪಾಡಿಕೊಳ್ಳುವಂತೆ ಆದಿಯಲ್ಲಿನ ದೇವಜನರನ್ನು ಬಹಳವಾಗಿ ಪ್ರೋತ್ಸಾಹಿಸಿರಬಹುದಾಗಿದೆ. ಅವರು ಸಹಿಸಿಕೊಂಡರು, ಮತ್ತು ತಮ್ಮ ರಕ್ಷಕನ ಕೆಲಸಕ್ಕಾಗಿ ಅವರ ರಕ್ತವು ಸುರಿಸಲ್ಪಟ್ಟಿತು. ಅವರು "ಶ್ರೇಷ್ಠಪುನರುತ್ಥಾನವನ್ನು ಹೊಂದುವದಕ್ಕೋಸ್ಕರ" ಸಹಿಸಿಕೊಂಡರು (ವ. 35). ಹೆಚ್ಚೆಚ್ಚು ದೇವಜನರು ಹಿಂಸಿಸಲ್ಪಟ್ಟು ಕೊಲ್ಲಲ್ಪಟ್ಟಾಗ, ಇನ್ನೂ ಹೆಚ್ಚು ಸಭೆಗೆ ಸೇರಿಸಲ್ಪಟ್ಟರು. ಅನೇಕ ಜನರು ಯಾವದು ಸರಿಯೋ ಅದಕ್ಕಾಗಿ, ಹಿಂಸೆ ಅನುಭವಿಸಬೇಕಾದಾಗ್ಯೂ, ನಿಲ್ಲುವದಕ್ಕಾಗಿ ಮನಸ್ಸುಳ್ಳವರಾಗಿದ್ದರು. ಕೆಲವರು ಯೇಸುವಿನ ಸಂದೇಶವನ್ನು ಹರಡಿಸುವದಕ್ಕಾಗಿ ತಮ್ಮ ಜೀವಗಳನ್ನು ತ್ಯಾಗ ಮಾಡುವದಕ್ಕೂ ಸಿದ್ಧರಿದ್ದರು.

## ಅನೇಕರು ಶೀಘ್ರದಲ್ಲಿಯೇ ಅದೇ ರೀತಿ ಅನುಭವಿಸಲಿದ್ದರು (11:36-40)

ಕ್ರಿ.ಪೂ. ಎರಡನೆಯ ಶತಮಾನದಲ್ಲಿ Antiochus Epiphanesನ ನಾಯಕತ್ವದಲ್ಲಿ ಸಿರಿಯನ್ನರ ಕೈಗಳಲ್ಲಿ ಅನೇಕ ಯೆಹೂದ್ಯರು ಹತರಾದದ್ದು ಯೆಹೂದಿ ಮತಕ್ಕೆ ಘನವನ್ನುಂಟು ಮಾಡಿತು. ಇತಿಹಾಸದ ಆ ಕಾಲಾವಧಿಯನ್ನು ಸಭಾಮಂದಿರಗಳಲ್ಲಿನ ಆರಾಧನೆಗಳಲ್ಲಿ ವಿಶೇಷವಾಗಿ ಯೆಹೂದ್ಯರು ಸ್ಮರಣೆ ಮಾಡುತ್ತಾರೆ.

"ಬಾಧೆ ಅನುಭವಿಸುವರು" (θλίβω, *thlibō*; ವ. 37) ಬಹಳವಾಗಿ ವೇದನೆ ಅಥವಾ ಸಂಕಷ್ಟವನ್ನು ಅನುಭವಿಸಿದರು. 36ರಿಂದ 40 ವಚನಗಳಲ್ಲಿ ಬಳಸಿರುವ ಪದಗಳು ಯೆಹೂದಿ ಇತಿಹಾಸದಲ್ಲಿನ ಘಟನೆಗಳ ಕಾರಣದಿಂದ ಮಹತ್ವಪೂರ್ಣವಾಗಿರುತ್ತವಾದರೂ, ಸಭೆಯ ವಿರುದ್ಧವಾಗಿ ಅದೇ ರೀತಿಯ ಹಿಂಸೆಯು ಎದ್ದಿತು. ಯೇಸುವಿನ ಮರಣ ಹಾಗೂ ಪುನರುತ್ಥಾನದ ಬಳಿಕ ತಮ್ಮ ನಂಬಿಕೆಯ ನಿಮಿತ್ತವಾಗಿ ಮರಣಿಸಿದವರಿಂದ ಕ್ರೈಸ್ತತ್ವದ ಮುಂಚಿನ ದೇವಜನರ ಗುಣಸ್ವಭಾವವನ್ನು ಬೇರ್ಪಡಿಸುವದಕ್ಕೆ ಸಾಧ್ಯವಿಲ್ಲ. ಅವರೆಲ್ಲರೂ ಒಂದೇ ಅನ್ಯೋನ್ಯತೆಯಲ್ಲಿ ಸೇರಿದವರಾಗಿದ್ದಾರೆ, "ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು" (ವ. 40).

ಕ್ರಿಸ್ತನಿಗೆ ಪರಿವರ್ತನೆಗೊಂಡವರಿಗೆ ಕೆಲವು ಸಾರಿ ಅವರ ಕುಟುಂಬದವರು ತಮಗೂ ಅವರಿಗೂ ಯಾವದೇ ಸಂಬಂಧವನ್ನಿಟ್ಟುಕೊಳ್ಳದೆ ಅವರು ತಮ್ಮ ಪಾಲಕಿಗೆ "ಸತ್ತವರು" ಎಂದು ಹೇಳಲಾಗುತ್ತದೆ. ಅವರ ಹೆಸರುಗಳು ಕುಟುಂಬದ ದಾಖಲೆಗಳಿಂದ ಅಳಿಸಿ ಹಾಕಲ್ಪಡುತ್ತವೆ ಮತ್ತು ಅದಾದ ಬಳಿಕ ಇನ್ನೆಂದಿಗೂ ಪ್ರಸ್ತಾಪಿಸಲ್ಪಡುವದಿಲ್ಲ. ಇನ್ನು ಕೆಲವರು, ತಾವು ತಮ್ಮ ಪ್ರಿಯರಿಂದ ಬಹಿಷ್ಕರಿಸಲ್ಪಡುವೆವು ಎಂಬುದನ್ನು ಅರಿತವರಾಗಿ ತಾವು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಯಸಿದಾಗ್ಯೂ ಮತ್ತು ಮಾಡಿಸಿಕೊಳ್ಳಲೇ ಬೇಕಾದಾಗ್ಯೂ, ದೀಕ್ಷಾಸ್ನಾನ ಮಾಡಿಸಿಕೊಳ್ಳಲು ನಿರಾಕರಿಸುತ್ತಾರೆ. ಯೇಸು ದೀಕ್ಷಾಸ್ನಾನವನ್ನು ನಂಬಿಕೆಯ ಸಾರ್ವಜನಿಕವಾದ ಕ್ರಿಯೆಯೆಂದಾಗಿ ಘೋಷಿಸಿದ್ದಕ್ಕೆ ಅದೇ ಒಂದು ಕಾರಣವೋ?

ಸಂಕಷ್ಟಗಳು ನಮ್ಮ ಆತ್ಮಗಳನ್ನು ಶುದ್ಧಗೊಳಿಸುತ್ತವೆ (ಹೊರತು ಸೈತಾನನು ಪೇತ್ರನಿಗೆ ಮಾಡಲು ಬಯಸಿದ್ದಂತೆ "ಒನೆಯುವದಿಲ್ಲ" ಲೂಕ 22:31–34). ನಮ್ಮ ನಂಬಿಕೆಯು ಬಲವಾಗಿ ಬೆಳೆಯಬೇಕೆಂದರೆ ಅದು ಪರೀಕ್ಷಿಸಲ್ಪಡಬೇಕು (ಯಾಕೋಬ 1:12–15).

ಅಂಥ ಬಾಧೆಯನ್ನನುಭವಿಸುವದಕ್ಕೆ ಸಿಕ್ಕುವ ಪ್ರತಿಫಲವು ದೇವರು ನಮಗೋಸ್ಕರ ಸಿದ್ಧಮಾಡಿರುವ "ಶ್ರೇಷ್ಠವಾದ ಭಾಗ್ಯ" ಆಗಿರುತ್ತದೆ (ವ. 40). ನಾವು "ಜಯಶಾಲಿಗಳಿಗಿಂತ

ಹೆಚ್ಚಿನವರು" (ರೋಮಾ 8:37; NKJV). ನಾವು "ಪ್ರಥಮ ಪುನರುತ್ಥಾನ"ದ (ಪ್ರಕಟನೆ 20:5, 6; ನೋಡಿರಿ 2:10, 11) ಆಶೀರ್ವಾದದ ಕಾರಣದಿಂದ "ಪ್ರಚಂಡ ಜಯಶಾಲಿಗಳು" (NASB). ಪ್ರಕಟನೆಯಲ್ಲಿ ಹೇಳಲ್ಪಟ್ಟಿರುವವರು ಕ್ರೈಸ್ತರಾಗುವ ಮೂಲಕ ಮತ್ತು ರಕ್ತಸಾಕ್ಷಿಗಳಾಗಿ ಮರಣಿಸಬೇಕಾದಾಗ್ಯೂ ನಂಬಿಗಸ್ತರಾಗಿ ಉಳಿಯುವ ಮೂಲಕ "ಪ್ರಥಮ ಪುನರುತ್ಥಾನ"ದಲ್ಲಿ ಪಾಲ್ಗೊಂಡರು. ಈ ವಿಧದಲ್ಲಿ ಜಯಗೊಂಡವರಾಗಿ, ಅವರು "ಎರಡನೆಯ ಮರಣದಿಂದ" ಹಾನಿಗೊಳಗೊಳಗಾಗಲು ಸಾಧ್ಯವಾಗಲಿಲ್ಲ (ಪ್ರಕಟನೆ 21:8). "ಜಯಗೊಳ್ಳುವದು" ಎಂದರೆ ಸಂಕಷ್ಟಗಳನ್ನು ಮತ್ತು ಹಿಂಸೆಗಳನ್ನು ಸಹಿಸಿಕೊಂಡು ನಿಲ್ಲುವದಾಗಿರುತ್ತದೆ, ಅದು ಆತ್ಮೀಕ "ಪುನರುತ್ಥಾನ" ಎಂದು ಬಣ್ಣಿಸಲ್ಪಟ್ಟಿದೆ. "ಪ್ರಥಮ ಪುನರುತ್ಥಾನ"ವು ಕ್ರಿಸ್ತನ ಪುನರಾಗಮನದಲ್ಲಿ ದೇಹದ ಪುನರುತ್ಥಾನವಲ್ಲ, ಆದರೆ ಒಬ್ಬನು ಪರಲೋಕವನ್ನು ತಲುಪುವದಕ್ಕೆ ಮುನ್ನವೇ ಮರಣದ ಮೇಲೆ ಹೊಂದುವ ವಿಜಯವಾಗಿರುತ್ತದೆ.

### ಆ ಆಶ್ಚರ್ಯವಾದ ಪ್ರವಾದಿಗಳು (11:36-40)

ಪ್ರವಾದಿಗಳಿಗೆ ವಹಿಸಿದ ಕೆಲಸವು "ಮುಂತಿಳಿಸುವದು" ಎಂಬುದಕ್ಕಿಂತಲೂ ಅಧಿಕವಾಗಿ ದೇವರಿಗೋಸ್ಕರ "ಮಾತಾಡುವದು" ಆಗಿತ್ತು. ಅವರು ಪಾಪವನ್ನು ಖಂಡನೆ ಮಾಡಿದರು ಮತ್ತು ಜೀವಿಸಬೇಕಾದ ಸರಿಯಾದ ದಾರಿಯನ್ನು, ಪುನರಾತನ ಹಾದಿಗಳ ಪ್ರಕಾರವಾಗಿ ತೋರಿಸಿ ಕೊಟ್ಟರು (ಯೆರೆಮೀಯ 6:16). ಒಂದು ವಿಶೇಷ ಅಗತ್ಯವಿರುವಾಗ ಅವರು ದೇವರಿಂದ ನೇರವಾದ ಸಂದೇಶವನ್ನು ಪಡೆಯುವ ಆಶೀರ್ವಾದ ಹೊಂದಿದ್ದರು. ಕೆಲವರು ಅದ್ಭುತಗಳನ್ನು ನಡಿಸಿದರು ಮತ್ತು ಇನ್ನು ಕೆಲವರು ನಡಿಸಲಿಲ್ಲವಾದರೂ, ಎಲ್ಲರೂ ಪವಿತ್ರಾತ್ಮನಿಂದ ಮಾತಾಡಿದರು.

ಮೊದಲನೆಯ ಪೇತ್ರ 1:10–12 ವಚನಗಳು ತೋರಿಸಿ ಕೊಡುವದೇನೆಂದರೆ ಅವರು ಮಾತಾಡಿದ ಅಥವಾ ಬರೆದಸಂದೇಶಗಳು ಸ್ವತಃ ದೇವರಿಂದ ಪ್ರೇರಿತವಾಗಿದ್ದವು. ಅವರು ತಮ್ಮ ಖಾಸಗಿ ಅಭಿಪ್ರಾಯಗಳನ್ನು ಬೋಧಿಸಲಿಲ್ಲ ಆದರೆ "ಕರ್ತನು ಹೀಗನ್ನುತ್ತಾನೆ" ಎಂದು ಹೇಳಿದರು. ಅಲ್ಲದೆ ದೇವರು ಅವರಿಗೆ ಕೇವಲ ಅವರಿಗೆ ಕೆಲವು ಆಲೋಚನೆಗಳನ್ನು ತಿಳಿಸಿ, "ಈ ಸಂದೇಶವನ್ನು ಜನರಿಗೆ ನೀವು ಯಾವದು ಉತ್ತಮವೆಂದು ಭಾವಿಸುವಿರೋ ಆ ದಾರಿಯಲ್ಲಿ ಕೊಡಿರಿ" ಎಂದು ಹೇಳಲೂ ಇಲ್ಲ. ಬದಲಾಗಿ, ಅವರು ಬೋಧಿಸುವಾಗ ದೇವರ ವಾಕ್ಯಗಳನ್ನೇ ಮಾತಾಡಿದರು. ಅವರು ಬರೆದಾಗ, ದೇವರ ವಾಕ್ಯಗಳನ್ನೇ ಬರೆದರು. ದೇವರು ಪ್ರತಿಯೊಬ್ಬ ಲೇಖಕನ ಪದಗಳನ್ನು ಮತ್ತು ಸಂಭಾಷಣೆಯ ಶೈಲಿಯನ್ನು ಬಳಸಿರಬಹುದಾಗಿದೆ. ಪ್ರವಾದಿಯು ರೂಢಿಯಾಗಿ ಬಳಸುತ್ತಿದ್ದ ಮತ್ತು ಶ್ರೋತೃಗಳು ರೂಢಿಯಾಗಿ ಕೇಳಿಸಿಕೊಳ್ಳುತ್ತಾ ಬಂದಿದ್ದ ಪದಬಳಕೆಯನ್ನು ಬಿಟ್ಟು ಬೇರೊಂದು ರೀತಿಯಲ್ಲಿ ಸಂದೇಶವನ್ನು ಬದಲಾಯಿಸಿಕೊಳ್ಳುವ ಅಗತ್ಯವಾದರೂ ಏನಿತ್ತು? ಮೊದಲನೆಯ ಕೊರಿಂಥ 2:13ನೇ ವಚನವು ದೇವರು ತನ್ನ ತಾತ್ಪರ್ಯವನ್ನು ತಿಳಿಯಪಡಿಸುವದಕ್ಕಾಗಿ ಅವರ ಪದಗಳ ಬಳಕೆಯಲ್ಲಿ "ಆತ್ಮೀಕ ಆಲೋಚನೆಗಳನ್ನು ಆತ್ಮೀಕ ಪದಗಳೊಂದಿಗೆ ಮಿಶ್ರಣಗೊಳಿಸಿದನು" ಎಂಬ ಅಭಿಪ್ರಾಯವನ್ನು ತಿಳಿಸುತ್ತದೆ.

ಒಂದೋ ಶಾಸ್ತ್ರಗಳು ಪೂರ್ಣ ("ಸಮಗ್ರ") ಪ್ರೇರಣೆ ಹೊಂದಿವೆ, ಇಲ್ಲವೇ ನಾವು ಅವುಗಳ ಮೇಲೆ ಅವಲಂಭಿತರಾಗಲು ಸಾಧ್ಯವಿರುವದಿಲ್ಲ, ಎರಡರಲ್ಲಿ ಒಂದು ಆಗಿರುತ್ತದೆ. ದೇವರು "ಮೌಖಿಕವಾಗಿ ಸಮಗ್ರವಾದ ಪ್ರೇರಣೆ"ಯನ್ನು ಒದಗಿಸಲಿಲ್ಲವಾದರೆ, ಆತನು ತಿಳಿಸಲ್ಪಡಬೇಕೆಂದು ಬಯಸಿದ ರೀತಿಯಲ್ಲಿಯೇ ನಮಗೆ ಆತನ ಸಂದೇಶವು ನಮಗಿರುತ್ತದೆಂಬ

ನಿಶ್ಚಯತೆಯನ್ನು ನಾವು ಹೇಗೆ ಹೊಂದಿರಬಲ್ಲೆವು? ಮಾತುಗಳು ಅಗತ್ಯವಾದ ಸಂದೇಶವನ್ನು ಒದಗಿಸಬೇಕಾಗಿತ್ತು.

---

## ಅಡಿಟಿಪ್ಪಣಿಗಳು

[1]Donald A. Hagner, *Encountering the Book of Hebrews: An Exposition,* Encountering Biblical Studies (Grand Rapids, Mich.: Baker Academic, 2002), 142. [2]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 227. [3]Thomas G. Long, *Hebrews,* Interpretation (Louisville: John Knox Press, 1997), 113. [4]Hagner, 143. [5]Long, 113. [6]Ray C. Stedman, *Hebrew*s, The IVP New Testament Commentary Series (Downers Grove, Ill.: InterVarsity Press, 1992), 116-17, n. [7]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 438-39. [8]Hagner, 142. [9]Raymond Brown, *The Message of Hebrews: Christ Above All,* The Bible Speaks Today (Downers Grove, Ill.: Inter-Varsity Press, 1982), 198-99. [10]F. F. Bruce, *The Epistle to the Hebrews,* The New International Commentary on the New Testament (Grand Rapids, Mich.: Wm. B. Eerdmans Publishing Co., 1964), 279.

[11]Marvin R. Vincent, *Word Studies in the New Testament* (Grand Rapids, Mich.: Wm. B. Eerdmans Publishing Co., 1946), 4:509-10. [12]Guthrie, 225. [13]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 193, n. 1. [14]Hughes, 441. [15]Ibid., 438. [16]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 171. [17]James Macknight, *A New Literal Translation, from the Original Greek of All the Apostolical Epistles with a Commentary and Notes* (Edinburgh: by the author, 1795; reprint, Grand Rapids, Mich.: Baker Book House, 1984), 560. [18]Reese, 194. [19]Bruce, *Hebrews*, 279. [20]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 294.

[21]Hewitt, 172. [22]Henry Alford, *The New Testament for English Readers* (Chicago: Moody Press, 1958), 1553. [23]Bruce, *Hebrews*, 281, n. 24. [24]ಈ ಗುಂಪುಗಳ ಪಟ್ಟಿಯನ್ನು Long, 115, 119ರಿಂದ ಆಯ್ದುಕೊಳ್ಳಲಾಗಿದೆ. [25]Stedman, 119. ವಾಕ್ಯದಲ್ಲಿ ಈ "ಕ್ಕಿಂತ" ಎಂಬ ಯೋಚನೆಗಾಗಿ ಲೂಕ 12:23 ನೋಡಿರಿ. [26]Reese, 195, n. 9. [27]Macknight, 560. [28]Hughes, 455. [29]Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 207, n. 10. Λαλέω (*laleō*, "ಮಾತಾಡುತ್ತದೆ") ಎಂಬುದು ಇಬ್ರಿಯರಿಗೆ ಪತ್ರಿಕೆಯಲ್ಲಿ "ಯಾವಾಗಲೂ ಒಂದು ದೈವಿಕ ಮಾತನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ" ಎಂಬುದನ್ನು Lightfootನು ಎತ್ತಿ ತೋರಿಸುತ್ತಾನೆ. ಆದದರಿಂದ ಅದು ಹೇಬೆಲನು "ದೈವಿಕವಾಗಿ ಹೇಳಿದ ಶಾಸ್ತ್ರ"ದ ಮೂಲಕ ಮಾತಾಡುವವನಾಗಿದ್ದಾನೆ. [30]ಹನೋಕನು ದೇವರನ್ನು ಮೆಚ್ಚಿಸಿದ್ದನಾದ್ದರಿಂದ ಇಲ್ಲಿಂದ ಒಯ್ಯಲ್ಪಟ್ಟಿದ್ದನು ಎಂದು ಆದಿಕಾಂಡ 5:24 (LXX) ಸೂಚಿಸುತ್ತದೆ, ಆದರೆ ಬೈಬಲಿನನ ದಾಖಲೆಯ ಸಾಕ್ಷಿಯು ಆತನು ಪರಲೋಕ ಪ್ರವೇಶಿಸಿದ ಮೇಲೆ ಕೊಡಲ್ಪಟ್ಟಿತು. (Bruce, *Hebrews*, 289, n. 52.)

[31]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 302. [32]ಅವುಗಳು "ಬಹಳ ಸಮನಾರ್ಥಕವಾ ಪದಗಳು" ಯಾಕೆಂದರೆ ಇಲ್ಲಿ "ನಂಬಿಕೆ" ಎಂಬುದು ದೇವರ ಚಿತ್ತದೊಂದಿಗೆ ಸಾಮರಸ್ಯದಿಂದ ಜೀವನವನ್ನು ನಡಿಸುವದನ್ನು ಒಳಗೊಂಡಿರುತ್ತದೆ ಎಂದು Reese ಹೇಳುತ್ತಾನೆ. (Reese, 196, n. 11.) ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಅರ್ಥದೊಂದಿಗೆ ಸಮಂಜಸವಾಗಿರುವಂತೆ ತೋರುತ್ತದೆ, ಅದಕ್ಕೆ 11:3 ಹೊರತಾಗಿರುವ ಸಾಧ್ಯತೆಯಿದೆ. [33]Craig R. Koester, *Hebrews*: *A New Translation with Introduction and Commentary*, The Anchor Bible, vol. 36 (New York: Doubleday, 2001), 477. ಈ ಪದವು LXXನೊಳಗೆ 2 Maccabees 8:16 Antiochus Epiphanesನ ವೈರಿ ಸೈನ್ಯದ "ಭಯ" ಎಂಬುದರಕ್ಕೆ

ಸಂಬಂಧಿಸಿದಂತೆ ಬಳಸಲ್ಪಟ್ಟಿದೆ. [34]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 358. [35]ಈ "ವಾಗ್ದಾನ ದೇಶ" ಅಥವಾ "ವಾಗ್ದತ್ತದೇಶ" ಎಂಬ ಪದವು ಬೈಬಲಿನೊಳಗೆ ಇಬ್ರಿಯ 11:9ರಲ್ಲಿ ಮಾತ್ರವೇ ಸಿಕ್ಕುತ್ತದೆ. [36]Koester, 485, 494-97. [37]ದೇವರು ಮುಂಚೆ ಅಬ್ರಹಾಮನಿಗೆ ಇದನ್ನೇ "ಹೇಳಿದ್ದನು" ಎಂಬುದಾಗಿ ಆದಿಕಾಂಡ 12:1-3ರಲ್ಲಿ NIVಯು ಸೂಚಿಸುತ್ತದೆ. [38]Charles Rosenbury Erdman, *The Epistle to the Hebrews: An Exposition* (Philadelphia: Westminster Press, 1934), 113. [39]Robert Milligan, *A Commentary on the Epistle to the Hebrews,* New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 396. [40]Bruce, *Hebrews*, 298-99.

[41]Ibid., 299-301. [42]Reese, 200. ಪೌಲನು ರೋಮಾ 4:19ರಲ್ಲಿ, "ಮೃತಪ್ರಾಯನು" ಎಂಬುದಕ್ಕೆ ಇಲ್ಲಿ ಬಳಸಿರುವಂತೆಯೇ ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಅದೇ ಸಂಪೂರ್ಣ ಕೃದಂತ ಕರ್ಮಣಿಕ್ರಿಯಾರೂಪವನ್ನು ಬಳಸಿರುತ್ತಾನೆ. (Bruce, *Hebrews*, 302.) [43]ಲೇಖಕನು ಈ ಮುಂಚೆ ಬಳಸಿದ πίστει (*pistei*, "ನಂಬಿಕೆಯಿಂದ") ಎಂಬುದನ್ನು ಬಿಟ್ಟು κατά πίστιν (*kata pistin*, "ನಂಬಿಕೆಯಲ್ಲಿ") ಎಂದು ಬಳಸಿದ್ದು ಕೇವಲ "ಸಾಹಿತ್ಯಕವಾದ ವಿವಿಧತೆಗೋಸ್ಕರವಷ್ಟೆ" ಮಾಡಿದ್ದಗಿದೆ ಎಂದು F. F. Bruce ಹೇಳುತ್ತಾನೆ. (Bruce, *Hebrews*, 302, n. 113.) [44]Alexander Nairne, *The Epistle of Priesthood; Studies in the Epistle to the Hebrews* (Edinburgh: T. & T. Clark, 1913), 396. [45]Koester, 498. [46]ಆದಿಕಾಂಡ 22:1-14ರಲ್ಲಿ ಕೊಡಲ್ಪಟ್ಟಿರುವ ಘಟನೆಯ ವಿವರವನ್ನು ಯೆಹೂದ್ಯರು ದೀರ್ಗಕಾಲದಿಂದ "ಇಸಾಕನನ್ನು ಕಟ್ಟುವಿಕೆ" ಎಂದು ಕರೆದಿರುತ್ತಾರೆ. ಇದು "ರಕ್ತಸಾಕ್ಷಿಯ ಮರಣದ ವಿಮೋಚಿಸುವ ಪರಿಣಾಮಕಾರಿತ್ವ"ಕ್ಕೆ ಒಂದು ಶಾಸ್ತ್ರೀಯವಾದ ಉದಾಹರಣೆಯೆಂದು ಪರಿಗಣಿಸಲ್ಪಟ್ಟಿರುತ್ತದೆ. (Bruce, *Hebrews*, 309.) ಬಹುಶಃ ಈ ವಾಕ್ಯಭಾಗವು "ಅಬ್ರಹಾಮನ ಪರೀಕ್ಷಿಸುವಿಕೆ" ಎಂದು ಕರೆಯಲ್ಪಟ್ಟಿರಬೇಕು. ದೇವರು ನಿಜಕ್ಕೂ ಆತನನ್ನು "ಪರೀಕ್ಷಿಸಿದನು," ಅದರರ್ಥವು "ಒಬ್ಬ ವ್ಯಕ್ತಿಯ ಗುಣನಡತೆಯು ತೋರ್ಪಡಿಸಲ್ಪಡುವಂತೆ ಆತನನ್ನು ಒಂದು ಕಠಿಣವಾದ ಪರಿಸ್ಥಿತಿಗೊಳಪಡಿಸುವದು" ಎಂದಾಗಿದೆ. (Koester, 490-91.) [47]Hughes, 482, n. 51. [48]Guthrie, 236. [49]Bruce, *Hebrews*, 311. [50]ಅಂತ್ಯದಲ್ಲಿ, ಯಜ್ಞವನ್ನು ಪೂರ್ತಿಗೊಳಿಸುವಂತೆ ದೇವರು ಅಬ್ರಹಾಮನಿಗೆ ಅನುಮತಿಸಲಿಲ್ಲ. ಬದಲಾಗಿ, ಆತನು ಅದಕ್ಕೋಸ್ಕರ ಒಂದು ಟಗರನ್ನು ಒದಗಿಸಿದನು. ಅದು ಆ ಮುಂಚೆಯೇ ಮುಳ್ಳು ಪೋದೆಯಲ್ಲಿ ಸಿಲುಕಿಕೊಂಡಿತ್ತು ಮತ್ತು ಶಾಂತವಾಗಿ ಕಾಯುತ್ತಲಿತ್ತು. ಅಬ್ರಹಾಮನು ಟಗರನ್ನು ಕಂಡನು ಮತ್ತು ಅದನ್ನು ದೇವರಿಗೆ ಒಂದು ಕಾಣಿಕೆಯಾಗಿ ಉಪಯೋಗಿಸಿದನು. (ನೋಡಿರಿ ಆದಿಕಾಂಡ 22:8, 13, 14.)

[51]*The Epistle of Barnabas* 7:3; Irenaeus *Against Heresies* 4.5.4. [52]Koester, 492. [53]Hughes, 487. [54]Josephus *Antiquities* 15.7.9. [55]Brown, 212. [56]ಇಬ್ರಿಯ ವಾಕ್ಯವು מִטָּה (*mittah*) ವನ್ನು ಬಳಸುತ್ತದೆ, ಅದು "ಹಾಸಿಗೆ" ಎಂದರ್ಥವಾಗಿರುತ್ತದೆ, ಮತ್ತು "ಕೋಲು" ಎಂಬುದು מַטֶּה (*matteh*) ಎಂದಾಗಿರುತ್ತದೆ. ಮೂಲ ಇಬ್ರಿಯದಲ್ಲಿ ಎರಡೂ ಪದಗಳು ಒಂದೇ ಆಗಿರುತ್ತವೆ. ಸ್ವರಾಕ್ಷರಗಳು ಸುಮಾರು ಕ್ರಿ.ಶ. 900 ವೇಳೆ Masoretesರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ. ಅವರುಪದವನ್ನು ತಪ್ಪಾಗಿ ತೋರಿಸಿರಬಹುದಾಗಿದೆ. (Jimmy Allen, *Survey of Hebrews*, 2d ed [Searcy, Ark.: by the author, 1984], 129.) [57]Koester, 493. [58]Guthrie, 238. [59]ತಂದೆತಾಯಿಗಳು ಮಗುವನ್ನು ಬಚ್ಚಿಡುತ್ತಾರೆ, ಆದರೆ ಆತನು ಅರಸನ ಮನೆಯಲ್ಲಿ ಬೆಳೆಯುತ್ತಾನೆ. ಬಳಿಕ ಆತನು ತನ್ನ ಸ್ಥಾನಮಾನವನ್ನು ತ್ಯಜಿಸಿ ಬಾಧೆಯ ಜೀವನವನ್ನು ಆರಿಸಿಕೊಳ್ಳುತ್ತಾನೆ. ವಿನಾಶವು ಬೆದರಿಕೆಯನ್ನೊಡ್ಡುತ್ತದೆ, ಆದರೆ ವೈರಿಗಳು ನಾಶಗೊಳಿಸಲ್ಪಡುತ್ತಾರೆ ಮತ್ತು ಇಸ್ರಾಯೇಲ್ ರಕ್ಷಿಸಲ್ಪಡುತ್ತದೆ. (Koester, 507ರಿಂದ ಆಯ್ದುಕೊಳ್ಳಲ್ಪಟ್ಟಿದ್ದು.) ಗ್ರೀಕ್ ಶೈಲಿಗನುಗುಣವಾಗಿ ಕಥೆಯು ಪರಿಪೂರ್ಣ ಸಮತೋಲನವನ್ನು ಹೊಂದಿದದೆ. [60]LXXವು Bruce, *Hebrews*, 317, n. 171ರಲ್ಲಿ ಗಮನಕ್ಕೆ ತರಲ್ಪಟ್ಟಿರುವ ಪ್ರಕಾರವೇ ತಂದೆತಾಯಿಗಳ ನಂಬಿಕೆಯನ್ನು ಪ್ರಸ್ತಾಪಿಸುತ್ತದೆ.

[61]Philo *Life of Moses, 1* 3.9. [62]Ibid., *1* 3.23-24; Josephus *Antiquities* 2.9.6. [63]Josephus *Antiquities* 2.10. [64]Eupolemus (c. 150 B.C.) ಬರಹಗಳು ತುಣುಕುಗಳಲ್ಲಿ ಸಮೀಕ್ಷೆ ಮಾಡುತ್ತವೆ. ಈ ಹೇಳಿಕೆಯು ಸುವಾರ್ತೆಗಾಗಿನ ಸಿದ್ಧತೆಯ Caesareaದ Eusebiusನ *Preparation for the Gospel* 9.26.1ನಲ್ಲಿ ಸಂರಕ್ಷಿಸಿಡಲ್ಪಟ್ಟಿದೆ. [65]ಇದು Manethoನು (ಅಥವಾ ಐಗುಪ್ತ್ಯದ ಅತ್ಯಂಥ ಮಹಾನ್ ಇತಿಹಾಸಕಾರನಾ Sebennytosನ Manethonನು). ಈ ಪಟ್ಟಿಯ ಬಗ್ಗೆ ವಾದವಿವಾದಗಳಿರುತ್ತವೆ; ಆದರೆ ಅದು ಸರಿ ಆಗಿರುವದಾದಲ್ಲಿ, ಮೋಶೆಯು ಸುಮಾರು ಕ್ರಿ.ಪೂ. 1525ರಲ್ಲಿ ಜನಿಸಿದನು, ಮತ್ತು ಐಗುಪ್ತ್ಯದಿಂದ ಹೊರಡೋಣವು ಕ್ರಿ.ಪೂ. 1446-1447ರಲ್ಲಿ ಸಂಭವಿಸಿತು. Hatshepsutನು Thutmose II ಮತ್ತು Thutmose III ಎಂಬ ಇಬ್ಬರು ಫರೋಹರ ಸಿಂಹಾಸನದ ಹಿಂದಿನ ಶಕ್ತಿಯಾಗಿದ್ದನೆಂಬುದು ಸ್ಪಷ್ಟವಾಗಿರುತ್ತದೆ. Reese, 205-6, n. 36ರಲ್ಲಿ ಒಂದು ಉತ್ತಮವಾದ ಕ್ಲುಪ್ತ ದಾಖಲೆಯು ಕೊಡಲ್ಪಟ್ಟಿರುತ್ತದೆ. [66]"ಸಂಪತ್ತುಗಳು" ಎಂಬ ಪದದ ಮೂಲ ಯೋಚನೆಯು "ಕಣಜಗಳು" (θησαυρός, *thēsauros*) ಎಂದಾಗಿತ್ತು. ಐಗುಪ್ತ್ಯದ ದಾನ್ಯಗಳು ಅತ್ಯಧಿಕವಾದ ಐಶ್ವರ್ಯವನ್ನು ಒದಗಿಸುತ್ತಿದ್ದವು. (Koester, 503.)

ಐಗುಪ್ತವು ಪ್ರಥಮಮ ಶತಮಾನದಲ್ಲಿ ರೋಮಿನ ದಾಸ್ಯದ ಉಗ್ರಾಣವಾಗಿತ್ತು. (Josephus *Wars* 4.10.5.) [67]Hughes, 496-97. [68]Lightfoot, 217. [69]Bruce, *Hebrews*, 322. [70]Koester, 509.

[71]Milligan, 412-13. [72]Westcott, 373; Hughes, 498. [73]F. F. Bruce, *The Books and the Parchments*, rev. ed. (Westwood, N.J.: Fleming H. Revell Co., 1963), 44. [74]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1951), 208. [75]Bruce, *Hebrews*, 325, n. 214. "ಆಪು ಹುಲ್ಲಿನ ಸಮುದ್ರ" ( יַם סוּף, *yam suph*) ಎಂಬುದು ಉತ್ತರಕ್ಕೆ ವಿಸ್ತರಣೆಗೊಂಡಿದ್ದ Suez ಕೊಲ್ಲಿ, ಮತ್ತು Aqaba ಕೊಲ್ಲಿ ಎರಡಕ್ಕೂ ಬಳಸಲಾಗುತ್ತಿದ್ದ ಪದವಾಗಿತ್ತು. ಈ ಕೊಲ್ಲಿಗಳು ಕೆಂಪು ಸಮುದ್ರದ ಭಾಗವಾಗಿದ್ದವು, ಆದ್ದರಿಂದ ಒಬ್ಬನು ಅದನ್ನು ಯಾವ ವಿಧದಲ್ಲಿ ಅನುವಾದಿಸಲು ನಿರ್ಣಯಿಸಿದಾಗ್ಯೂ ಬೈಬಲ್ ಸರಿಯಾಗಿಯೇ ಇರುತ್ತದೆ. (Allen, 132.) [76]Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley (Grand Rapids, Mich.: Zondervan Publishing House, 1986), 1528. [77]Bruce, *Hebrews*, 327, n. 226. [78]Simon J. Kistemaker, *Exposition of the Epistle to the Hebrews,* New Testament Commentary (Grand Rapids, Mich.: Baker Book House, 1984), 347. [79]Koester, 517. [80]Bruce, *Hebrews*, 332.

[81]Ibid., 333. [82]Allen, 133. ನಾನು ಯೋಸೇಫನನ್ನು ಈ ವರ್ಗದಲ್ಲಿ ಸೇರಿಸುವದಕ್ಕಾಗುವದಿಲ್ಲ; ಆತನು ಯುವಕರಲ್ಲಿ ವೈಶಿಷ್ಟ್ಯವಾಗಿರುವ ಉತ್ಸಾಹದಲ್ಲಿ ತನ್ನ ಕನಸುಗಳ ಬಗ್ಗೆ ತನ್ನ ಸಹೋದರರಿಗೆ ತಿಳಿಸಿದ ಕೇವಲ ಹದಿಹರೆಯದ ಹುಡುಗನಾಗಿದ್ದನಷ್ಟೆ. [83]ಈ ವಿಧವಾದ ಪಟ್ಟಿ ಮಾಡುವಿಕೆಯು Guthrie, 243-44ರಿಂದ ಆಯ್ದುಕೊಂಡದ್ದಾಗಿದೆ. [84]ಈ ಮುಂಚೆ, ಇಬ್ರಿಯರಿಗೆ ಪತ್ರಿಕೆಯು ಹೆಚ್ಚು ಕಡಿಮೆ ಎಲ್ಲಾ ಪ್ರಕರಣಗಳಲ್ಲಿ "ನಂಬಿಕೆಯಿಂದಲೇ" ಎಂಬುದನ್ನು ಹೊಂದಿದೆ, ಆದರೆ ಇಲ್ಲಿ "ನಂಬಿಕೆಯ ಮೂಲಕ" ಎಂದು ಹೇಳುತ್ತದೆ. ಈ ವ್ಯತ್ಯಾಸವು NASBಯಲ್ಲಿ ಮಾಡಲ್ಪಟ್ಟಿರುವದಿಲ್ಲ. (Reese, 211, n. 54.) ಹೆಸರಿಸಲ್ಪಟ್ಟಿರುವ ನಾಲ್ವರೊಳಗೆ ಮೂವರ ಮೇಲೆ ಯೆಹೋವನ ಆತ್ಮವು ಇಳಿದು ಬಂದಿತೆಂದು ಹೇಳಲಾಗಿರುತ್ತದೆಂಬುದನ್ನು Bruceನು ಗಮನಕ್ಕೆ ತರುತ್ತಾನೆ (ಗಿದ್ಯೋನ, ನ್ಯಾಯಸ್ಥಾಪಕರು 6:34; ಯೆಪ್ತಾಹ, ನ್ಯಾಯಸ್ಥಾಪಕರು 11:29; ಮತ್ತು ಸಂಸೋನ, ನ್ಯಾಯಸ್ಥಾಪಕರು 13:25), "ಮತ್ತು ಇದು ಅವರ ನಂಬಿಕೆಗೆ ಒಂದು ನಿರ್ಣಾಯಕ ಪುರಾವೆಯೆಂದು ಪರಿಗಣಿಸಲ್ಪಡಬಹುದು" (Bruce, *Hebrews*, 331). [85]ನೋಡಿರಿ 1 Maccabees 3:17-20. [86]2 Maccabees 6:18-28. [87]2 Maccabees 7. [88]Josephus *Wars* 2.21.5; 6.5.3. [89]Hewitt, 187. [90]1 Maccabees 2:38.

[91]Koester, 520. [92]Charles Wesley, "Let Us Join Our Friends Above" (http://gbgmumc.org/Umhistory/wesley/hmns/umh709.stm; Internet; accessed 21 September 2006). [93]Draper, 314. [94]James Russell Lowell (1819-91), "The Present Crisis," *The Complete Poetical Works of James Russell Lowell*, ed. Horace E. Scudder (Boston: Houghton Mifflin Co., 1897), 67. [95]Hughes, 462. [96]Long, 115. [97]Brown, 202. [98]ಒಂದು "ಅನ್ಯದೇಶದಲ್ಲಿ" ನೆಲೆಸುವದೆಂದರೆ ಅಬ್ರಹಾಮನು "ಪರದೇಶದ ನಿವಾಸಿ" ಆಗಿದ್ದನೆಂದರ್ಥವಾಗಿದ್ದು ಆತನು ಆ ದೇಶದಲ್ಲಿ ಅನೇಕ ವರ್ಷಗಳ ತನಕ ಜೀವಿಸಿದ್ದಾಗ್ಯೂ, ಆತನಿಗೆ ಒಬ್ಬ ಪೌರನಾಗಿ ಯಾವದೇ ನಿಜವಾದ ಹಕ್ಕುಗಳಿರಲಿಲ್ಲ. (Koester, 494.) [99]*The Epistle of Mathetes to Diognetus* 5:5. "Mathetes" ಎಂಬುದು ಒಂದು ಸರಿಯಾದ ಅಂಕಿತನಾಮದಂತೆ ತೋರುವದಿಲ್ಲ; ಅಲು ಕೇವಲ "ಒಬ್ಬ ಶಿಷ್ಯನು" ಎಂದರ್ಥವನ್ನು ಕೊಡುತ್ತದೆ. [100]Koester, n. 400.

[101]James Burton Coffman, *Commentary on Hebrews* (Austin, Tex.: Firm Foundation Publishing House, 1971), 295.